

ಮ್ಯಾಸ್ಕಟ್ ಬಿಡುಗಡೆ
ಶ್ರೀನಗರದ ದಲ್ ಸರೋವರದಲ್ಲಿ ಇದೇ 21ರಿಂದ 23ರವರೆಗೆ ನಡೆಯಲಿರುವ ಖೇಲೊ ಇಂಡಿಯಾ ಜಲ ಕ್ರೀಡಾ ಉತ್ಸವದ ಮ್ಯಾಸ್ಕಟ್ ಅನ್ನು ಗುರುವಾರ ಬಿಡುಗಡೆ ಮಾಡಲಾಯಿತು

ಶುಕ್ರವಾರ, ಆಗಸ್ಟ್ 15, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ಶುಕ್ರವಾರ, ಆಗಸ್ಟ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 226 | ಪುಟ 28

prajavani.net prajavani www.prajavani.net



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಬದುಕು... ಬಾವುಟ... ಮೈಸೂರಿನಲ್ಲಿ ಮಹಿಳೆಯೊಬ್ಬರು ಕಂಕುಳಿಗೆ ಮಗುವನ್ನು ಕಟ್ಟಿಕೊಂಡು ಗುರುವಾರ ಪ್ಲಾಸ್ಟಿಕ್ ತ್ರಿವರ್ಣ ಧ್ವಜಗಳ ಮಾರಿದರು

ಸೆನ್ಸೆಕ್ಸ್ 80,597 | ನಿಫ್ಟಿ 24,631 | $/₹ 87.59 | ಚಿನ್ನ (Std. 10g) ₹1,05,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,22,700 (ಬೆಂಗಳೂರು)

‘ಮಂಜುನಾಥನ ಸನ್ನಿಧಿಗೆ ಕೈ ಇಟ್ಟರೆ ಕಷ್ಟ’

ಬೆಂಗಳೂರು: ‘ಧರ್ಮಸ್ಥಳದ ಬಾಹುಬಲಿ ಬೆಟ್ಟದ ಬುಡಕ್ಕೆ ಕೈಹಾಕಿದ್ದೀರಿ. ಮಂಜುನಾಥನ ಸನ್ನಿಧಿಗೆ ಕೈ ಹಾಕಿದರೆ ಸುಮ್ಮನಿರಲು ಸಾಧ್ಯವಿಲ್ಲ. ಆಗ ನಿಮ್ಮ ಬುಡವೇ ಅಲ್ಲಾಡುತ್ತದೆ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. ▶4

ದರ್ಶನ್, ಪವಿತ್ರಾ ಮತ್ತೆ ಜೈಲಿಗೆ

ರೇಣುಕಸ್ವಾಮಿ ಕೊಲೆ ಪ್ರಕರಣ: ಜಾಮೀನು ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ ನಟ ದರ್ಶನ್, ಅವರ ಗೆಳತಿ ಪವಿತ್ರಾಗೌಡ ಸೇರಿ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಆ ಪೈಕಿ ಐವರು ಗುರುವಾರ ರಾತ್ರಿ ಪರಪ್ಪನ ಅಗ್ರಹಾರ ಜೈಲು ಸೇರಿದರು.

ದರ್ಶನ್ ಅವರ ವ್ಯವಸ್ಥಾಪಕ ಆರ್.ನಾಗರಾಜ್, ಕಾರು ಚಾಲಕ ಲಕ್ಷ್ಮಣ್, ಉದ್ಯಮಿ ಪ್ರದೂಷ್ ರಾವ್ ಹಾಗೂ ಚಿತ್ರದುರ್ಗದ ಆಟೊ ಚಾಲಕರಾದ ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಅವರನ್ನೂ ಬಂಧಿಸಲಾಯಿತು.

64ನೇ ಸಿಸಿಎಚ್ ನ್ಯಾಯಾಲಯದ ಕಾರ್ಯ ಕಲಾಪಗಳು ಮುಕ್ತಾಯ ಆಗಿದ್ದರಿಂದ ಕೋರಮಂಗಲದ ಎನ್‌ಜಿವಿಯಲ್ಲಿರುವ ನ್ಯಾಯಾಧೀಶರ ನಿವಾಸದಲ್ಲಿ ಐವರು ಆರೋಪಿಗಳನ್ನು ಗುರುವಾರ ರಾತ್ರಿಯೇ ಹಾಜರುಪಡಿಸಲಾಯಿತು. ಆರೋಪಿಗಳನ್ನು ವಿಚಾರಣೆ ನಡೆಸಿದ ನ್ಯಾಯಾಧೀಶರು, 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ನಂತರ ಭದ್ರತೆಯ ನಡುವೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಐವರನ್ನು ಕರೆದೊಯ್ದು ಬಿಡಲಾಯಿತು. ಜೈಲು ಅಧಿಕಾರಿಗಳು ಆರೋಪಿಗಳ ಹೆಸರು ನಮೂದಿಸಿಕೊಂಡು ವಿಚಾರಣಾಧೀನ ಕೈದಿಗಳ ಬ್ಯಾರಕ್‌ಗೆ ಕಳುಹಿಸಿದರು ಎಂದು ಮೂಲಗಳು ಹೇಳಿವೆ. ▶6



ದರ್ಶನ್



ಪವಿತ್ರಾಗೌಡ

3ನೇ ಬಾರಿಗೆ ‘ಜೈಲು ದರ್ಶನ’

ಪತ್ನಿ ವಿಜಯಲಕ್ಷ್ಮಿ ಅವರಿಗೆ ಥಳಿಸಿದ್ದ ಆರೋಪದಡಿ ದರ್ಶನ್ ಅವರು 2011ರಲ್ಲಿ ಜೈಲಿಗೆ ಹೋಗಿದ್ದರು. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಬಾರಿಗೆ ಜೈಲು ಸೇರಿದ್ದರು. ಈಗ ಜಾಮೀನು ರದ್ದಾಗಿದ್ದರಿಂದಾಗಿ ಮತ್ತೆ ಜೈಲುವಾಸ ಅನುಭವಿಸಲಿದ್ದಾರೆ.

ಶಾಕ್ ಆದೆ: ಡಿಕೆಶಿ

‘ದರ್ಶನ್ ಜಾಮೀನು ರದ್ದಾದ ವಿಷಯ ಕೇಳಿ ಶಾಕ್ ಆಯಿತು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಸದನ ನಡೆಯುವಾಗ ಮುಖ್ಯಮಂತ್ರಿ ಈ ವಿಚಾರವನ್ನು ಹೇಳಿದರು. ನಾನೇನೂ ಮಾಡಲು ಆಗಲ್ಲ. ನ್ಯಾಯಾಲಯ ತೆಗೆದುಕೊಂಡ ನಿರ್ಧಾರದ ಬಗ್ಗೆ ನಾವು ಏನೂ ಮಾತನಾಡಬಾರದು’ ಎಂದರು. ▶6

ವಿಶೇಷ ಆತಿಥ್ಯ ನೀಡಿದರೆ ತಕ್ಷಣ ಅಮಾನತು: ಖಡಕ್ ಎಚ್ಚರಿಕೆ

ನವದೆಹಲಿ: ದರ್ಶನ್ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗೆ ಸಂಬಂಧಿಸಿದಂತೆ ಗುರುವಾರ ತೀರ್ಪು ನೀಡಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರಿದ್ದ ಸುಪ್ರೀಂ ಕೋರ್ಟ್ ಪೀಠ ತೀಕ್ಷ್ಣವಾದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಆ ಅಭಿಪ್ರಾಯಗಳು ಹೀಗಿವೆ:

1 ಆರೋಪಿಗಳು ಎಷ್ಟೇ ಪ್ರಭಾವಿಯಾಗಿದ್ದರೂ ಕಾನೂನಿಗಿಂತ ದೊಡ್ಡವರಲ್ಲ. ಈ ತೀರ್ಪು ನ್ಯಾಯದಾನ ವ್ಯವಸ್ಥೆಗೆ ಒಂದು ಬಲವಾದ ಸಂದೇಶ ನೀಡುತ್ತದೆ. ಆರೋಪಿಗಳಿಗೆ ಜೈಲಿನಲ್ಲಿ ವಿಶೇಷ ಅಥವಾ ಫೈವ್ ಸ್ಟಾರ್ ಆತಿಥ್ಯ ದೊರೆಯುತ್ತಿದೆ ಎಂದು ನಮಗೆ ಗೊತ್ತಾದ ಕ್ಷಣವೇ ಜೈಲು ಅಧೀಕ್ಷಕ ಸೇರಿದಂತೆ ಎಲ್ಲ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು

2 ಆರೋಪಿಯ ವರ್ತನೆ, ಪ್ರಭಾವ, ಜೈಲಿನ ನಿಯಮಗಳ ಉಲ್ಲಂಘನೆ ಹಾಗೂ ಆರೋಪಗಳ ಗಾಂಭೀರ್ಯವು ಅವರು ಜಾಮೀನಿಗೆ ಅರ್ಹವಾಗಿಲ್ಲ ಎಂಬುದನ್ನು ಸೂಚಿಸುತ್ತವೆ

3 ಪ್ರಸ್ತುತ ಪ್ರಕರಣದಲ್ಲಿ ದರ್ಶನ್ (ಎರಡನೇ ಆರೋಪಿ) ಅವರ ಸ್ಥಿತಿಗತಿಯನ್ನು ಗಮನದಲ್ಲಿರಿಸಿಕೊಂಡು ಅವರಿಗೆ ಜಾಮೀನು ಮಂಜೂರು ಮಾಡಿರುವ ಆದೇಶವು ವಿವೇಚನಾ ಅಧಿಕಾರದ ಮತಿಗೆಟ್ಟ ದುರುಪಯೋಗ ಮತ್ತು ಕಾನೂನಾತ್ಮಕವಾಗಿ ಒಪ್ಪಲಾಗದಂತಹದ್ದು ▶6



ಚಿನಕುರುಳಿ ಪ್ರಕಾಶ್ ಶೆಟ್ಟಿ



ಶರಣಬಸವಪ್ಪ ಅಪ್ಪ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿ, ಶರಣಬಸವೇಶ್ವರ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿದ್ದ ಶರಣಬಸವಪ್ಪ ಅಪ್ಪ (90) ಅವರು ಗುರುವಾರ ರಾತ್ರಿ 9.23ಕ್ಕೆ ನಿಧನರಾದರು.

ಅಲ್ಪಕಾಲದ ಅನಾರೋಗ್ಯದಿಂದಾಗಿ ಅಪ್ಪ ಅವರನ್ನು ನಗರದ ಚಿರಾಯು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ರಾತ್ರಿ ಮನೆಗೆ ಕರೆದೊಯ್ದ ಕೆಲ ಹೊತ್ತಿನಲ್ಲಿಯೇ ಮೃತಪಟ್ಟರು ಎಂದು ಶರಣಬಸವೇಶ್ವರ ಸಂಸ್ಥಾನದ ಪ್ರಕಟಣೆ ತಿಳಿಸಿದೆ.

ಅವರಿಗೆ ಪತ್ನಿ ದಾಕ್ಷಾಯಣಿ ಎಸ್.ಅಪ್ಪ, ಪುತ್ರರಾದ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಹಾಗೂ



ಎಂಟು ಪುತ್ರಿಯರು ಇದ್ದಾರೆ.

ಧಾರ್ಮಿಕ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವುದರ ಜೊತೆಗೆ ಶೈಕ್ಷಣಿಕ ಕ್ರಾಂತಿ ಮಾಡಿದ್ದ ಶರಣಬಸವಪ್ಪ ಅವರು ಶರಣಬಸವೇಶ್ವರ ವಿಶ್ವವಿದ್ಯಾಲಯ, ಶರಣಬಸವೇಶ್ವರ ರೆಸಿಡೆನ್ಷಿಯಲ್ ಪಬ್ಲಿಕ್ ಸ್ಕೂಲ್, ಅಪ್ಪ ಪಬ್ಲಿಕ್ ಸ್ಕೂಲ್, ಗೋದುತಾಯಿ ಮಹಿಳಾ ಕಾಲೇಜು, ಎಂಜಿನಿಯರಿಂಗ್, ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜುಗಳನ್ನು ಆರಂಭಿಸಿ ಹೊಸ ಎತ್ತರಕ್ಕೆ ಕೊಂಡೊಯ್ದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಶರಣಬಸವಪ್ಪ ಅಪ್ಪ ಅವರು ನಂತರ ಅದೇ ವಿ.ವಿ.ಯ ಸಿಂಡಿಕೇಟ್ ಸದಸ್ಯರಾಗಿದ್ದರು. ಈ ಸಂದರ್ಭದಲ್ಲಿ ಗುಲಬರ್ಗಾದಲ್ಲಿ ಕವಿವಿಯ ಸ್ನಾತಕೋತ್ತರ ಕೇಂದ್ರ ಆರಂಭಿಸಲು ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ▶6





ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಲಘು ಪ್ರಮಾಣದ ಮಳೆಯಾಗುವ ಸಾಧ್ಯತೆ ಇದೆ.

ಗಿಫ್ಟ್ ಕಾರ್ಡ್, ಶುಲ್ಕ ಮನ್ನಾ ಹೆಸರಿನಲ್ಲಿ ವಂಚನೆ

ಸೈಬರ್ ವಂಚಕರ ಸುಳಿವು ಪತ್ತೆಯೇ ಸವಾಲು, ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಂಡರು

● ಆದಿತ್ಯ ಕೆ.ಎ.



ಬೆಂಗಳೂರು: ಗಿಫ್ಟ್ ಕಾರ್ಡ್ ಕಳುಹಿಸುವ, ಬ್ಯಾಂಕ್ ವಾರ್ಷಿಕ ಶುಲ್ಕ ಮನ್ನಾ ಮಾಡುವ ಹಾಗೂ ಹೂಡಿಕೆಯ ಹೆಸರಿನಲ್ಲಿ ವಂಚನೆ ಪ್ರಕರಣಗಳು ರಾಜಧಾನಿ ಬೆಂಗಳೂರಿನಲ್ಲಿ ಹೆಚ್ಚುತ್ತಿವೆ. ಕಳೆದ 15 ದಿನಗಳಲ್ಲಿ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣಾ ವ್ಯಾಪ್ತಿಯಲ್ಲಿ ಈ ರೀತಿಯ ಹಲವು ಪ್ರಕರಣಗಳು ನಡೆದಿವೆ.

ಖಾಸಗಿ ಕಂಪನಿ ಉದ್ಯೋಗಿ, ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಉದ್ಯಮಿ ವಂಚಕರ ಬಲೆಗೆ ಬಿದ್ದು ₹24 ಲಕ್ಷ ಕಳೆದುಕೊಂಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಯು/ಎಸ್–66(ಸಿ), 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಯು/ಎಸ್ 318(4), 319(2) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಪೊಲೀಸರು ತಿಳಿಸಿದರು.

'ರೈನ್‌ಬೊ ಲೇಔಟ್‌ನ ನಿವಾಸಿ, ದೂರುದಾರ ಜಿ.ಸುರೇಶ್ ಕುಮಾರ್ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪೂರ್ವಾಪರವನ್ನು ಸೈಬರ್ ವಂಚಕ ಪತ್ತೆಹಚ್ಚಿದ್ದ. ಸುರೇಶ್ ಕುಮಾರ್ ಅವರಿಗೆ ಕರೆ ಮಾಡಿ, 'ತಾವು ಕೆಲಸ ಮಾಡುತ್ತಿರುವ ಕಂಪನಿಯ ವ್ಯವಸ್ಥಾಪಕ' ಎಂಬುದಾಗಿ ವಂಚಕ ಪರಿಚಯಿಸಿಕೊಂಡಿದ್ದ. ಗಿಫ್ಟ್ ಕಾರ್ಡ್ ಕಳುಹಿಸುತ್ತಿರುವುದಾಗಿ ನಂಬಿಸಿದ್ದ. ಅದಕ್ಕೆ ಹಣ ಪಾವತಿ ಮಾಡುವಂತೆಯೂ ತಿಳಿಸಿದ್ದ. ವಂಚಕನ ಮಾತು ನಂಬಿದ್ದ ದೂರುದಾರ, ಹಂತಹಂತವಾಗಿ ಸೈಬರ್ ವಂಚಕ ಸೂಚಿಸಿದ್ದ ಖಾತೆಗೆ ₹10 ಲಕ್ಷ ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಅದಾದ ಸ್ವಲ್ಪ ದಿನ ಕಳೆದ ಮೇಲೆ ಕಂಪನಿಯ ವ್ಯವಸ್ಥಾಪಕರಿಗೆ ಕರೆ ಮಾಡಿದ್ದ ದೂರುದಾರ, ಗಿಫ್ಟ್ ಕಾರ್ಡ್ ಖರೀದಿ ಸಂಬಂಧ ವಿಚಾರಿಸಿದ್ದರು. ಅವರು ಯಾವುದೇ ಗಿಫ್ಟ್ ಕಾರ್ಡ್‌ಗಳನ್ನು ಖರೀದಿಸಲು ತಿಳಿಸಿರುವುದಿಲ್ಲವೆಂದು ಹೇಳಿದ್ದರು. ಆಗ ಸುರೇಶ್ ಅವರಿಗೆ ಸೈಬರ್ ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು' ಎಂದು ಸೈಬರ್ ಪೊಲೀಸರು ಹೇಳಿದರು.

ಟೆಕಿಗೆ ₹7.35 ಲಕ್ಷ ವಂಚನೆ: ಕೆ.ಆರ್. ಪುರದ ಮುನೇಶ್ವರ ಬಡಾವಣೆಯಲ್ಲಿ ನೆಲಸಿರುವ ಸಾಫ್ಟ್‌ವೇರ್ ಎಂಜಿನಿಯರ್ ಈಶ್ವರ್ ರೆಡ್ಡಿ ಅವರಿಂದ ಸೈಬರ್ ವಂಚಕರು, ₹7.39 ಲಕ್ಷ ದೋಚಿದ್ದಾರೆ.

ಟೆಕಿ ಈಶ್ವರ್ ರೆಡ್ಡಿ ಅವರನ್ನು ಸೈಬರ್ ವಂಚಕರು '2025–ಯುಟಿಐ ಇನ್ವೆಸ್ಟ್‌ಮೆಂಟ್ ಫ್ರಂಟ್ ಆ್ಯಂಡ್ ಯುಟಿಐ ವಿಐಪಿ 1ಆನ್‌1 202' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದರು. ಕೆಲವು ದಿನಗಳ ನಂತರ ಸಾನ್ಯಾ ಕಪೂರ್ ಹಾಗೂ ಇಮ್ತಿಯಾಜ್ ರೆಹಮಾನ್ ಎಂಬ ಹೆಸರಿನಲ್ಲಿ ಇಬ್ಬರು ಕರೆ ಮಾಡಿದ್ದರು. ಆ್ಯಪ್‌ವೊಂದನ್ನು ಡೌನ್‌ಲೋಡ್ ಮಾಡಿ ನೋಂದಣಿ ಮಾಡಿಕೊಳ್ಳುವಂತೆ ಕೋರಿದ್ದರು. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ, ಹೆಚ್ಚಿನ ಲಾಭ ಬರಲಿದೆ ಎಂದು ನಂಬಿಸಿದ್ದರು. ಆರಂಭದಲ್ಲಿ ದೂರುದಾರರು, ₹30 ಸಾವಿರ ಹೂಡಿಕೆ ಮಾಡಿದ್ದರು. ನಂತರ, ವಿವಿಧ ಬ್ಯಾಂಕ್‌ನ ಆರು ಖಾತೆಗಳಿಂದ ₹7.50 ಲಕ್ಷ ಹೂಡಿಕೆ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ಸೈಬರ್ ವಂಚಕರು, ₹11 ಸಾವಿರ ಲಾಭಾಂಶ ಪಾವತಿಸಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತಷ್ಟು ಹಣ ಹೂಡಿಕೆಗೆ ಒತ್ತಾಯ: 'ಟೆಕಿಗೆ ಮತ್ತೆ ಕರೆ ಮಾಡಿದ್ದ ವಂಚಕರು, ಮತ್ತಷ್ಟು ಹಣ ಹೂಡಿಕೆ ಮಾಡಿದರೆ ಇನ್ನೂ ಹೆಚ್ಚಿನ ಲಾಭಾಂಶ ಬರಲಿದೆ ಎಂಬುದಾಗಿ ನಂಬಿಸಿದ್ದರು. ಬಳಿಕ ಈಶ್ವರ ರೆಡ್ಡಿ ಅವರಿಗೆ ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಜನ್ಮ ದಿನಾಂಕದ ಮಾಹಿತಿ ಪಡೆದು ಮೋಸ

ಮತ್ತೊಂದು ಪ್ರಕರಣದಲ್ಲಿ 41 ವರ್ಷದ ವಿಕಾಸ್‌ಕುಮಾರ್ ಅವರಿಗೆ ಕರೆ ಮಾಡಿದ್ದ ವಂಚಕರು, ಜನ್ಮದಿನಾಂಕದ ಮಾಹಿತಿ ಪಡೆದು ಕ್ರೆಡಿಟ್ ಕಾರ್ಡ್‌ನಿಂದ ₹5.94 ಲಕ್ಷ ಡ್ರಾ ಮಾಡಿಕೊಂಡು ಮೋಸ ಮಾಡಿದ್ದಾರೆ.

'ದೂರುದಾರರು ಹೊಂದಿದ್ದ ಬ್ಯಾಂಕ್ ಖಾತೆಯ ವಾರ್ಷಿಕ ಶುಲ್ಕವಾದ ₹2,900 ಅನ್ನು ಮನ್ನಾ ಮಾಡಲಾಗಿದೆ ಎಂದು ವಾಟ್ಸ್‌ಆ್ಯಪ್ ಸಂದೇಶ ಬಂದಿತ್ತು. ಎಪಿಕೆ ಫೈಲ್ ಅನ್ನು ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದ ಆರೋಪಿ, ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಮನ್ನಾದ ವಿವರಗಳನ್ನು ಪರಿಶೀಲನೆ ಮಾಡುವಂತೆ ಸೂಚಿಸಿದ್ದ. ಅಲ್ಲದೇ ಜನ್ಮದಿನಾಂಕದ ಮಾಹಿತಿಯನ್ನೂ ಪಡೆದುಕೊಂಡಿದ್ದ. ಕೆಲವೇ ಕ್ಷಣಗಳಲ್ಲಿ ದೂರುದಾರರ ಮೂರು ಬ್ಯಾಂಕ್‌ಗಳ ಕ್ರೆಡಿಟ್ ಕಾರ್ಡ್‌ಗಳಿಂದ ₹5.94 ಲಕ್ಷ ಮಾಯ ಆಗಿತ್ತು' ಎಂದು ಸೈಬರ್ ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಕರಣ

'ಸೈಬರ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಪೊಲೀಸರು ಜಾಗೃತಿ ಮೂಡಿಸುತ್ತಿದ್ದಾರೆ. ಆದರೂ, ವಂಚಕರ ಆಮಿಷಕ್ಕೆ ಒಳಗಾಗಿ ಜನರು ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ. ಈ ಸಂಬಂಧ ವೈಟ್‌ಫೀಲ್ಡ್ ವಿಭಾಗದ ವಿವಿಧ ಠಾಣೆಗಳಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿವೆ' ಎಂದು ಮೂಲಗಳು ತಿಳಿಸಿವೆ.


ಸುದ್ದಿ 2 ನಿಮಿಷ

ರಸ್ತೆ ಗುಂಡಿಗಳನ್ನು ಮುಚ್ಚಲು 'ಮೈಕ್ರೊ ಪ್ಲಾನ್'

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಲು 'ಮೈಕ್ರೊ ಪ್ಲಾನ್' ಮಾಡಿಕೊಳ್ಳಲು ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಅಧಿಕಾರಿಗಳೊಂದಿಗೆ ವರ್ಚ್ಯುವಲ್ ಸಭೆ ನಡೆಸಿದ ಅವರು, ಆಯಾ ವಲಯ ವ್ಯಾಪ್ತಿಯಲ್ಲಿ ಸಮಗ್ರವಾಗಿ 'ಮೈಕ್ರೊ ಪ್ಲಾನ್' ರೂಪಿಸಿಕೊಂಡು, ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಆದ್ಯತೆ ಮೇರೆಗೆ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಆಯಾ ವಲಯ ವ್ಯಾಪ್ತಿಯಲ್ಲಿ ಎಂಜಿನಿಯರ್‌ಗಳು ಸ್ಥಳ ಪರಿಶೀಲಿಸಿ ರಸ್ತೆ ಗುಂಡಿಗಳನ್ನು ಗುರುತಿಸಿ ಹಾಟ್ ಮಿಕ್ಸ್, ಕೋಲ್ಡ್ ಮಿಕ್ಸ್, ಇಕೋ ಫಿಕ್ಸ್ ಬಳಸಿಕೊಂಡು ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಬೇಕು ಎಂದರು.

ಸಂಚಾರ ಪೊಲೀಸ್ ವಿಭಾಗದ ವತಿಯಿಂದ 4,500 ರಸ್ತೆ ಗುಂಡಿಗಳನ್ನು ಗುರುತಿಸಲಾಗಿದೆ. ಈ ಪೈಕಿ 3,621 ರಸ್ತೆ ಗುಂಡಿಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಬರಲಿವೆ. ಗುರುತಿಸಲಾಗಿರುವ ಈ ಎಲ್ಲಾ ರಸ್ತೆಗುಂಡಿಗಳನ್ನು ಶೀಘ್ರ ಮುಚ್ಚಬೇಕು ಎಂದರು. ಸಂಚಾರ ಪೊಲೀಸ್ ವಿಭಾಗದಿಂದ ಗುಂಡಿಗಳನ್ನು ಜಿಐಎಸ್ ಮ್ಯಾಪ್ ಮೂಲಕ ಗುರುತಿಸಲಾಗಿದ್ದು, ಆ ಗುಂಡಿಗಳನ್ನು ಮುಚ್ಚಿದ ನಂತರ ಛಾಯಾಚಿತ್ರಗಳನ್ನು ಲಗತ್ತಿಸಲಾಗುವುದು ಎಂದು ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಮಾಹಿತಿ ನೀಡಿದರು.



ಮೆಟ್ರೊ, ಕೆಪಿಟಿಸಿಎಲ್, ಬೆಸ್ಕಾಂ, ಜಲಮಂಡಳಿ, ರಾಷ್ಟ್ರೀಯ ಹೆದ್ದಾರಿ ನಿಗಮ ಸೇರಿದಂತೆ ಇನ್ನಿತರೆ ಇಲಾಖೆಗಳು ರಸ್ತೆಯಲ್ಲಿ ಕಾಮಗಾರಿ ನಡೆಸಿ, ದುರಸ್ತಿ ಕಾರ್ಯ ಕೈಗೊಳ್ಳದಿದ್ದರೆ ಅಂತಹ ಪ್ರದೇಶಗಳನ್ನು ಪಟ್ಟಿ ಮಾಡಿ ನೀಡಬೇಕು ಎಂದು ಮಹೇಶ್ವರ್ ರಾವ್ ಸೂಚಿಸಿದರು.

ವಿದ್ಯುತ್ ಗುತ್ತಿಗೆದಾರರ ಪ್ರತಿಭಟನೆ 20ಕ್ಕೆ

ಬೆಂಗಳೂರು: ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಹಾಗೂ ಕಾಮಗಾರಿ ಪೂರ್ಣಗೊಂಡಿರುವ ಕಟ್ಟಡಗಳಿಗೆ ಕಡ್ಡಾಯಗೊಳಿಸಿರುವ ಸ್ವಾಧೀನಾನುಭವ ಪತ್ರದಿಂದ (ಒಸಿ) ವಿನಾಯಿತಿ ನೀಡುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 20ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾದರರ ಸಂಘ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ. ರಮೇಶ್, 'ಸುಪ್ರೀಂ ಕೋರ್ಟ್‌ನ ಆದೇಶದಂತೆ ಕಳೆದ ಏಪ್ರಿಲ್‌ನಿಂದ ಇದುವರೆಗೂ 8 ಲಕ್ಷ ಮನೆ ಹಾಗೂ ಕೈಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ನೀಡಿಲ್ಲ. ಇದರಿಂದ ಸಮಸ್ಯೆ ಆಗುತ್ತಿದ್ದು, ಆದೇಶವನ್ನು ಕೂಡಲೇ ಹಿಂಪಡೆಯಬೇಕು' ಎಂದರು.

'ಎಸ್ಕಾಂಗಳಲ್ಲಿ ಕರೆದಿರುವ ಬೃಹತ್ ಟೆಂಡರ್‌ಗಳನ್ನು ಸ್ಥಳೀಯ ಗುತ್ತಿಗೆದಾರರಿಗೆ ನೀಡಬೇಕು. ಈ ಬಗ್ಗೆ ಇಂಧನ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಪ್ರಥಮ ದರ್ಜೆ ಗುತ್ತಿಗೆದಾರರ ಪರವಾನಗಿ ಪಡೆಯಲು ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಕಡ್ಡಾಯ ಮಾಡಲಾಗಿದೆ. ಇದರಿಂದ ವಿನಾಯಿತಿ ನೀಡಬೇಕು. ಅನುಭವದ ಆಧಾರದ ಮೇಲೆ ಪ್ರಥಮ ದರ್ಜೆ ಗುತ್ತಿಗೆದಾರರ ಪರವಾನಗಿ ನೀಡಬೇಕು' ಎಂದರು.

ಮಾರಾಟ ಮಾಡಿದ ಶಿಶು ವಾಪಸ್ ಕೊಡಿಸಲು ದೂರು

ಬೆಂಗಳೂರು: ನವಜಾತ ಹೆಣ್ಣು ಶಿಶುವನ್ನು ₹2.50 ಲಕ್ಷಕ್ಕೆ ಮಾರಾಟ ಮಾಡಿ, ಹಣ ಖರ್ಚಾದ ಬಳಿಕ ಮಗುವನ್ನು ವಾಪಸ್ ಕೊಡಿಸುವಂತೆ ಕೋರಿ ಡಿ.ಜೆ ಹಳ್ಳಿ ಪೊಲೀಸ್ ಠಾಣೆಗೆ ಮಹಿಳೆಯೊಬ್ಬರು ದೂರು ನೀಡಿದ್ದಾರೆ.

'ವಿನೋಬಾ ನಗರದ ಎರಡನೇ ಹಂತದ ನಿವಾಸಿ ನಸೀಮಾ ಬಾನು ಅವರು ಆರೋಪಿಗಳಾದ ಅಮುದಾ, ರಮ್ಯಾ ಹಾಗೂ ಕಣ್ಣನ್ ಅವರ ವಿರುದ್ಧ ದೂರು ನೀಡಿದ್ದು, ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ನಸೀಮಾ ಬಾನು ಅವರು 15 ವರ್ಷದ ಹಿಂದೆ ದಸ್ತಗೀರ್‌ರನ್ನು ವಿವಾಹವಾಗಿದ್ದರು. ದಂಪತಿಗೆ ಎರಡು ಗಂಡು, ಎರಡು ಹೆಣ್ಣು ಮಕ್ಕಳಿದ್ದವು. ಶಿವಾಜಿನಗರದ ಘೋಷಾ ಆಸ್ಪತ್ರೆಯಲ್ಲಿ ನಾಲ್ಕನೇ ಮಗುವಿಗೆ ಜನ್ಮ ನೀಡಿದ್ದರು. ಹಣದ ಆಸೆಗೆ ದಂಪತಿ ನವಜಾತ ಹೆಣ್ಣು ಶಿಶುವನ್ನು ಕೆಲವು ದಿನಗಳ ಹಿಂದೆ ₹2.50 ಲಕ್ಷಕ್ಕೆ ಮಾರಾಟ ಮಾಡಿ,ಈಗ ವಾಪಸ್ ನೀಡುವಂತೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.



ಸ್ವಾತಂತ್ರ್ಯ ಉದ್ಯಾನದಲ್ಲಿ 'ನಟ್ಟಿರುಳ ನಾದ' ಅಹೋರಾತ್ರಿ ಸಾಂಸ್ಕೃತಿಕ ಪ್ರತಿರೋಧ ಕಾರ್ಯಕ್ರಮ ನಡೆಯಿತು.

ಒಳಮೀಸಲಾತಿಗಾಗಿ ಆಮರಣಾಂತ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾ. ನಾಗಮೋಹನ ದಾಸ್ ವರದಿಯ ಆಧಾರದಲ್ಲಿ ಒಳಮೀಸಲಾತಿ ಜಾರಿಯಾಗುವವರೆಗೆ ಉಪವಾಸ ಸತ್ಯಾಗ್ರಹ ನಡೆಸಲು ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಹೋರಾಟ ಸಮಿತಿ ನಿರ್ಧರಿಸಿದೆ.

ಗುರುವಾರ ಮಧ್ಯರಾತ್ರಿ 12ಕ್ಕೆ ಸತ್ಯಾಗ್ರಹ ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಗೊಳ್ಳಲಿದೆ. ಹೋರಾಟ ಸಮಿತಿಯ ಮುಖಂಡರಾದ ಅಂಬಣ್ಣ ಆರೋಲಿಕರ, ಬಸವರಾಜ್ ಕೌತಾಳ್, ಎಸ್. ಮಾರಪ್ಪ, ಕರಿಯಪ್ಪ ಗುಡಿಮನೆ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ನಡೆಯಲಿದೆ ಎಂದು ಸಮಿತಿಯ ಮುಖಂಡರು ತಿಳಿಸಿದ್ದಾರೆ.

ಸತ್ಯಾಗ್ರಹದ ಅಂಗವಾಗಿ 'ನಟ್ಟಿರುಳ ನಾದ' ಅಹೋರಾತ್ರಿ ಸಾಂಸ್ಕೃತಿಕ ಪ್ರತಿರೋಧ ಕಾರ್ಯಕ್ರಮ ನಡೆಯಿತು. ತಳಸಮುದಾಯದ ಹೋರಾಟಗಾರರು, ಸಾಹಿತಿಗಳು, ಕಲಾವಿದರು ತಮಟೆ, ಹಾಡುಗಳ ಮೂಲಕ, ನಾಟಕ, ಮಾತುಗಳ ಮೂಲಕ ಪ್ರತಿರೋಧವನ್ನು ದಾಖಲಿಸಿದರು.

ಎಚ್‌ಎಂಟಿ ಪುನಶ್ಚೇತನಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ



ವಿ.ಕೆ. ಸಾರಸ್ವತ್ ಜತೆಗೆ ಎಚ್‌.ಡಿ.ಕುಮಾರಸ್ವಾಮಿ ಚರ್ಚಿಸಿದರು.

ನವದೆಹಲಿ: ಕೇಂದ್ರದ ಭಾರಿ ಕೈಗಾರಿಕೆ ಸಚಿವಾಲಯದ ಅಧೀನದಲ್ಲಿರುವ ಎಚ್‌ಎಂಟಿ ಲಿಮಿಟೆಡ್ ಪುನಶ್ಚೇತನ ಕುರಿತಂತೆ ನೀತಿ ಆಯೋಗದ ಸದಸ್ಯ ಡಾ. ವಿ.ಕೆ.ಸಾರಸ್ವತ್ ಅವರೊಂದಿಗೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಗುರುವಾರ ಚರ್ಚೆ ನಡೆಸಿದರು.

ಸದೃಢ, ಸ್ವಾವಲಂಬಿ ಉತ್ಪಾದನಾ ವಲಯದ ದೃಷ್ಟಿಕೋನಕ್ಕೆ ಅನುಗುಣವಾಗಿ ಪ್ರಮುಖ ಕಾರ್ಯಾಚರಣೆಗಳನ್ನು ಬಲಪಡಿಸುವುದು, ಸೌಲಭ್ಯಗಳನ್ನು ಆಧುನೀಕರಿಸುವುದು, ಉತ್ಪಾದನಾ ಮಾರ್ಗಗಳನ್ನು ಅತ್ಯುತ್ತಮಗೊಳಿಸುವುದು ಮತ್ತು ಮಾರುಕಟ್ಟೆ ವ್ಯಾಪ್ತಿಯನ್ನು ಹಿಗ್ಗಿಸುವ ಕುರಿತು ಉಭಯತರು ಚರ್ಚಿಸಿದರು.

ಎಸ್‌ಟಿ ಪ್ರವರ್ಗಕ್ಕೆ ಕಾಡುಗೊಲ್ಲ-ಪರಿಷ್ಕೃತ ಪ್ರಸ್ತಾವಕ್ಕೆ ಸೂಚನೆ

ಕಾಡುಗೊಲ್ಲ ಸಮುದಾಯವನ್ನು ಎಸ್‌ಟಿ ಪ್ರವರ್ಗಕ್ಕೆ ಸೇರಿಸಬೇಕೆಂಬ ಬಹುದಿನಗಳ ಬೇಡಿಕೆ ಬಗ್ಗೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ವಿಭು ನಾಯರ್ ಅವರೊಂದಿಗೆ ಕುಮಾರಸ್ವಾಮಿ ಸಮಾಲೋಚನೆ ನಡೆಸಿದರು.

ಕರ್ನಾಟಕ ಸರ್ಕಾರ ಈಗಾಗಲೇ ಸಲ್ಲಿಸಿರುವ ಪ್ರಸ್ತಾವದಲ್ಲಿ ಕೆಲ ತಾಂತ್ರಿಕ ಲೋಪಗಳಿದ್ದು, ಅವುಗಳನ್ನು ಸರಿಪಡಿಸಿ ಪರಿಷ್ಕೃತ ಪ್ರಸ್ತಾವ ಸಲ್ಲಿಸಿದರೆ ತಕ್ಷಣವೇ ಪರಿಗಣಿಸಿ ಪರಿಶೀಲಿಸುವುದಾಗಿ ನಾಯರ್ ಭರವಸೆ ನೀಡಿದರು.

ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಮತ್ತು ತಾವು ಸಲ್ಲಿಸಿರುವ ಮನವಿಗಳನ್ನೂ ಪರಿಗಣನೆಗೆ ತೆಗೆದುಕೊಂಡಿದ್ದೇವೆ ಎಂದು ನಾಯರ್ ಅವರು ಸಚಿವರಿಗೆ ತಿಳಿಸಿದರು.

ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಕರ್ನಾಟಕ ಸರ್ಕಾರವು 2015ರ ಆಗಸ್ಟ್ 17ರಂದು ಶಿಫಾರಸು ಮಾಡಿತ್ತು. ಯಾವುದೇ ಸಮುದಾಯವನ್ನು ಪರಿಶಿಷ್ಟ ಪಂಗಡ ಅಥವಾ ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡುವುದಕ್ಕೆ ಅಥವಾ ಕೈ ಬಿಡುವುದಕ್ಕೆ ಹಾಗೂ ಇತರ ಪರಿಷ್ಕರಣೆಗೆ ಕೇಂದ್ರ ಸರ್ಕಾರ 1999ರಲ್ಲೇ ಕಾರ್ಯವಿಧಾನ ರೂಪಿಸಿದೆ. ಇದರ ಪ್ರಕಾರ, ಯಾವುದೇ ಪ್ರಸ್ತಾವನೆಯನ್ನು ಕುಲಶಾಸ್ತ್ರೀಯ ಅಧ್ಯಯನ ವರದಿಯೊಂದಿಗೆ ರಾಜ್ಯ ಸರ್ಕಾರ ಸಲ್ಲಿಸಬೇಕು. ಇದಕ್ಕೆ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ಆರ್‌ಜಿಐ) ಹಾಗೂ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ ಸಹಮತ ವ್ಯಕ್ತಪಡಿಸಬೇಕು. ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ ಆರ್‌ಜಿಐ ಈ ಹಿಂದೆ ಕೆಲವು ಸ್ಪಷ್ಟನೆಗಳನ್ನು ಕೇಳಿತ್ತು.

19 ಪೊಲೀಸ್ ಸಿಬ್ಬಂದಿಗೆ ರಾಷ್ಟ್ರಪತಿ ಪದಕ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ 19 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ 2025ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಸ್ವಾತಂತ್ರ್ಯೋತ್ಸವ ದಿನಾಚರಣೆ ವೇಳೆ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ಹಾಗೂ ಶ್ಲಾಘನೀಯ ಸೇವಾ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಹೆಸರು ಪ್ರಕಟಿಸಲಾಗಿದೆ. ಪದಕ ಪುರಸ್ಕೃತರ ವಿವರ ಇಲ್ಲಿದೆ.



ಎಸ್. ಬದರಿನಾಥ್



ಚಂದ್ರಗುಪ್ತ, ಕೆ.ಎಂ. ಶಾಂತರಾಜು, ಕಲಾ ಕೃಷ್ಣಸ್ವಾಮಿ, ರಾಮಕೃಷ್ಣ ಮುದ್ದೇಪಾಲ, ಎನ್. ವೆಂಕಟೇಶ್, ಪ್ರಕಾಶ್ ರಾಠೋಡ, ಜಿ. ಪ್ರವೀಣ್ ಬಾಬು, ಬಿ.ಎಸ್. ಸತೀಶ್, ಶಾಂತಾರಾಮ, ಎಡ್ವಿನ್ ಪ್ರದೀಪ್ ಎಸ್., ಝೂನ್ಸಿರಾಣಿ, ಸುಜನ ಶೆಟ್ಟಿ, ಗುರುರಾಜ ಮಹಾದೇವಪ್ಪ, ಶಂಕರ ವೈ.



ರಾಕೇಶ್ ಎಂ.ಜಿ., ಶಮ್‌ಶುದ್ದೀನ್, ಅಲಂಕಾರ ರಾಕೇಶ, ರವಿ ಎಲ್.

ವಿಶಿಷ್ಟ ಸೇವಾ ಪದಕ ಪುರಸ್ಕೃತರು
ಎಸ್.ಬದರಿನಾಥ್, ಎಸ್‌ಪಿ, ಕೆಎಲ್‌ಎ, ಬೆಂಗಳೂರು
ಶ್ಲಾಘನೀಯ ಸೇವಾ ಪದಕ ಪುರಸ್ಕೃತರು
ಚಂದ್ರಗುಪ್ತ, ಐಜಿಪಿ, ಹೆಚ್ಚುವರಿ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಬೆಂಗಳೂರು
ಕೆ.ಎಂ. ಶಾಂತರಾಜು, ಎಸ್ಪಿ (ಐಎಸ್‌ಡಿ), ಬೆಂಗಳೂರು
ಕಲಾ ಕೃಷ್ಣಸ್ವಾಮಿ, ಎಐಜಿಪಿ (ಅಪರಾಧ), ಪೊಲೀಸ್ ಪ್ರಧಾನ ಕಚೇರಿ, ಬೆಂಗಳೂರು
ರಾಮಕೃಷ್ಣ ಮುದ್ದೇಪಾಲ, ಕಮಾಂಡೆಂಟ್, ಒಂಬತ್ತನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು
ಎನ್. ವೆಂಕಟೇಶ್, ಎಸ್‌ಪಿ, ಸಿಐಡಿ, ಬೆಂಗಳೂರು
ಪ್ರಕಾಶ್ ರಾಠೋಡ, ಎಸಿಪಿ, ಕೆ.ಜಿ. ಹಳ್ಳಿ ಉಪ–ವಿಭಾಗ, ಬೆಂಗಳೂರು
ಜಿ. ಪ್ರವೀಣ್ ಬಾಬು, ಇನ್‌ಸ್ಪೆಕ್ಟರ್, ಮಹದೇವಪುರ ಪೊಲೀಸ್ ಠಾಣೆ, ಬೆಂಗಳೂರು
ಬಿ.ಎಸ್. ಸತೀಶ್, ಇನ್‌ಸ್ಪೆಕ್ಟರ್, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ, ಬೆಂಗಳೂರು
ಶಾಂತಾರಾಮ, ಇನ್‌ಸ್ಪೆಕ್ಟರ್, ನಂದಗುಡಿ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಎಡ್ವಿನ್ ಪ್ರದೀಪ್ ಎಸ್., ಇನ್‌ಸ್ಪೆಕ್ಟರ್, ಬೆಸ್ಕಾಂ, ಬೆಂಗಳೂರು
ಜೆ. ಝೂನ್ಸಿರಾಣಿ, ಪಿಎಸ್‌ಐ, ಎಸ್‌ಸಿಆರ್‌ಬಿ, ಬೆಂಗಳೂರು
ಸುಜನ ಶೆಟ್ಟಿ, ಎಎಸ್‌ಐ, ಸಿಸಿಬಿ, ಮಂಗಳೂರು
ಗುರುರಾಜ ಮಹಾದೇವಪ್ಪ ಬೂದಿಹಾಳ, ಎಆರ್‌ಎಸ್‌ಐ, ಡಿಪಿಒ, ಗದಗ
ರಾಕೇಶ್ ಎಂ.ಜಿ., ಆರ್‌ಎಚ್‌ಸಿ–99, ನಾಲ್ಕನೇ ಪಡೆ, ಕೆಎಸ್‌ಆರ್‌ಪಿ ಬೆಂಗಳೂರು
ಶಮ್‌ಶುದ್ದೀನ್, ಎಚ್‌ಸಿ–91, ಗಣಕಯಂತ್ರ ವಿಭಾಗ, ಡಿಪಿಒ ಕೊಪ್ಪಳ
ಶಂಕರ್ ವೈ., ಸಿಎಚ್‌ಸಿ–654, ಐಎಸ್‌ಡಿ, ಬೆಂಗಳೂರು
ಅಲಂಕಾರ ರಾಕೇಶ, ಸಿಎಚ್‌ಸಿ–146, ಪೊಲೀಸ್ ಕಮಿಷನರ್ ಕಚೇರಿ, ಕಲಬುರಗಿ ನಗರ
ರವಿ ಎಲ್., ಸಿಎಚ್‌ಸಿ–7709, ಐಎಸ್‌ಡಿ ಬೆಂಗಳೂರು

ಅಗ್ನಿಶಾಮಕ ದಳದ ಮೂವರಿಗೂ ಪದಕ

ಬೆಂಗಳೂರು: 'ರಾಷ್ಟ್ರಪತಿಗಳ ಅಗ್ನಿಶಾಮಕ ಸೇವಾ ಪ್ರಶಸ್ತಿ'ಗಳನ್ನು ಪ್ರಕಟಿಸಲಾಗಿದ್ದು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಮೂವರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಯಾದಗಿರಿ ಅಗ್ನಿಶಾಮಕ ಠಾಣೆಯ ಪ್ರಮುಖ ಅಗ್ನಿಶಾಮಕ ಚಿದಾನಂದ ಪರ್ವತಯ್ಯಾ ಹಿರೇಮಠ, ಜೇವರ್ಗಿ ಅಗ್ನಿಶಾಮಕ ಠಾಣೆಯ ಮಲ್ಲಿಕಾರ್ಜುನ ಹಣಮಂತಗೊಳ, ಅಂಜನಾಪುರ ಅಗ್ನಿಶಾಮಕ ಠಾಣೆಯ ಟಿ.ಎಂ ಮಧುಸೂದನ ಅವರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಅಗ್ನಿಶಾಮಕ, ತುರ್ತು ಸೇವಾ ಇಲಾಖೆ(ತರಬೇತಿ ಮತ್ತು ಎಸ್‌ಡಿಆರ್‌ಎಫ್) ಉಪ ನಿರ್ದೇಶಕರು ತಿಳಿಸಿದ್ದಾರೆ.



ಆ. 15ರಿಂದ 16ರವರೆಗೆ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ

ಶ್ರೀಕೃಷ್ಣ ಜನ್ಮಾಷ್ಟಮಿ: ಮಾರ್ಗ ಬದಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶ್ರೀ ಕೃಷ್ಣ ಜನ್ಮಾಷ್ಟಮಿ ಹಿನ್ನೆಲೆಯಲ್ಲಿ ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಇಸ್ಕಾನ್ ದೇವಸ್ಥಾನದ ಸುತ್ತಮುತ್ತ ಆಗಸ್ಟ್ 15ರಿಂದ 16ರವರೆಗೆ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ.

'ಲಕ್ಷಾಂತರ ಭಕ್ತರು, ಗಣ್ಯ ವ್ಯಕ್ತಿಗಳು ದೇವರ ದರ್ಶನಕ್ಕಾಗಿ ಇಸ್ಕಾನ್ ದೇವಸ್ಥಾನಕ್ಕೆ ಆಗಮಿಸಲಿದ್ದು, ವಾಹನ ದಟ್ಟಣೆ ಉಂಟಾಗಲಿದೆ. ಹೀಗಾಗಿ, ಸುಗಮ ಸಂಚಾರದ ದೃಷ್ಟಿಯಿಂದ ವೆಸ್ಟ್ ಆಫ್ ಕಾರ್ಡ್ ರಸ್ತೆ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿದೆ. ದೇವಸ್ಥಾನಕ್ಕೆ ಬರುವ ಸಾರ್ವಜನಿಕರು ಸಾಧ್ಯ ವಾದಷ್ಟು ಮೆಟ್ರೊ ರೈಲು, ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸಬೇಕು' ಎಂದು ಪೊಲೀಸರು ತಿಳಿಸಿದ್ದಾರೆ.

ಸಂಚಾರ ಬದಲು:

- ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಿಂದ ವಿಜಯನಗರ, ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್ ಕಡೆಗೆ ಹೋಗುವ ವಾಹನಗಳು ಸೋಪ್ ಫ್ಯಾಕ್ಟರಿ ಜಂಕ್ಷನ್‌ನಲ್ಲಿ ಡಾ.ರಾಜ್‌ಕುಮಾರ್ ರಸ್ತೆಗೆ ಹೋಗಿ 10ನೇ ಕ್ರಾಸ್ ಅಥವಾ ಕೇತಮಾರನಹಳ್ಳಿ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಒಂದನೇ ಬ್ಲಾಕ್ ರಾಜಾಜಿನಗರ ಸಿಗ್ನಲ್‌ನಲ್ಲಿ ವೆಸ್ಟ್ ಆಫ್ ಕಾರ್ಡ್ ರಸ್ತೆಗೆ ಸಾಗಬೇಕು.
- ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಿಂದ ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣದವರೆಗೆ ಪ್ರಯಾಣಿಕರ ಪಿಕ್‌ಅಪ್ ಮತ್ತು ಡ್ರಾಪ್ ಮಾಡುವುದನ್ನು ನಿರ್ಬಂಧಿಸಲಾಗಿದೆ.
- ಇಸ್ಕಾನ್ ದೇವಸ್ಥಾನಕ್ಕೆ ಸಾರ್ವಜನಿಕರನ್ನು ಕರೆತರುವ ಆಟೊ, ಕ್ಯಾಬ್ ಚಾಲಕರು ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣದ ಸಮೀಪ ಅಥವಾ ಸೋಪ್ ಫ್ಯಾಕ್ಟರಿ ಸಮೀಪ ಪಿಕ್‌ಅಪ್ ಮತ್ತು ಡ್ರಾಪ್ ಮಾಡಬೇಕು.
- ಇಸ್ಕಾನ್ ದೇವಸ್ಥಾನಕ್ಕೆ ಸ್ವಂತ ವಾಹನಗಳಲ್ಲಿ ಬರುವ ಭಕ್ತರನ್ನು ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣದಿಂದ ಸೋಪ್ ಫ್ಯಾಕ್ಟರಿ ಕಡೆಗೆ ಹೋಗುವ ರಸ್ತೆಯಲ್ಲಿ ಇಳಿಸಬೇಕು ಮತ್ತು ವಾಹನಕ್ಕೆ ಹತ್ತಿಸಿಕೊಳ್ಳಬೇಕು.
- ತುಮಕೂರು ರಸ್ತೆಯಿಂದ ಮೆಜೆಸ್ಟಿಕ್ ಕಡೆಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳು ಯಶವಂತಪುರ ಮೇಲ್ಸೇತುವೆ, ಸರ್ಕಲ್ ಮಾರಮ್ಮ ದೇವಸ್ಥಾನ, ಮಾರ್ಗೋಸಾ ರಸ್ತೆ, ಕೆ.ಸಿ. ಜನರಲ್ ಆಸ್ಪತ್ರೆ ಸಿಗ್ನಲ್ ಮಾರ್ಗವಾಗಿ ಬಂದು ಲಿಂಕ್ ರಸ್ತೆ ಮೂಲಕ ಸಾಗಬೇಕು.

ಭಕ್ತರಿಗೆ ಸಲಹೆಗಳು

- ಇಸ್ಕಾನ್ ದೇವಸ್ಥಾನಕ್ಕೆ ಬರುವ ಭಕ್ತರಿಗೆ ದೇವಸ್ಥಾನದ ವತಿಯಿಂದ ಪಾಸ್ ವಿತರಿಸಿದ್ದು, ಅಂತಹವರು ನಿಗದಿತ ಸ್ಥಳಗಳಲ್ಲಿ ವಾಹನ ನಿಲ್ಲಿಸಬೇಕು.
- ಭಕ್ತರು ಸಾಧ್ಯವಾದಷ್ಟು ಸಂಜೆ 5 ಗಂಟೆಯೊಳಗೆ ದೇವರ ದರ್ಶನ ಪಡೆಯಬೇಕು.
- ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಮಧ್ಯಾಹ್ನ 12 ಗಂಟೆಯೊಳಗೆ ದೇವರ ದರ್ಶನ ಮಾಡಿಸಿಕೊಂಡು, ಸುರಕ್ಷಿತವಾಗಿ ಮನೆಗೆ ತೆರಳಬೇಕು.
- ದೇವರ ದರ್ಶನಕ್ಕೆ ಬರುವ ಭಕ್ತರು ಆಭರಣ ಮತ್ತು ಬೆಲೆ ಬಾಳುವ ವಸ್ತುಗಳನ್ನು ಧರಿಸಿ ಬರುವುದನ್ನು ತಪ್ಪಿಸಬೇಕು.
- ದೇವರ ದರ್ಶನದ ನಂತರ ದೇವಸ್ಥಾನದ ಆವರಣದಲ್ಲಿ ಸೆಲ್ಫಿ, ಫೋಟೊ ತೆಗೆಸಿಕೊಳ್ಳುವುದರಲ್ಲಿ ತೊಡಗಿ, ಇತರರಿಗೆ ಅಡ್ಡಿಪಡಿಸದೆ ಶೀಘ್ರವೇ ದೇವಸ್ಥಾನದ ಆವರಣದಿಂದ ನಿರ್ಗಮಿಸಬೇಕು.

ಸ್ಪರ್ಧೆ ಮಾಡದ 10 ಪಕ್ಷಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಆರು ವರ್ಷಗಳಿಂದ ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡದ ರಾಜ್ಯದಲ್ಲಿನ 10 ರಾಜಕಿಯ ಪಕ್ಷಗಳನ್ನು ಚುನಾವಣಾ ಆಯೋಗ ಪಟ್ಟಿ ಮಾಡಿದೆ.

ಅಖಿಲ ಭಾರತೀಯ ರೈತ ಪಾರ್ಟಿ, ಬಡವರ ಶ್ರಮಿಕರ ರೈತರ ಕಾಂಗ್ರೆಸ್ ಪಾರ್ಟಿ, ಭಾರತೀಯ ಜನಶಕ್ತಿ ಕಾಂಗ್ರೆಸ್, ಭಾರತೀಯ ರಾಷ್ಟ್ರೀಯ ಮಹಿಳಾ ಸರ್ವೋದಯ ಕಾಂಗ್ರೆಸ್, ಡಾ. ಅಂಬೇಡ್ಕರ್ ಸಮಾಜವಾದಿ ಡೆಮಾಕ್ರಟಿಕ್ ಪಾರ್ಟಿ, ಜನ ಸಾಮಾನ್ಯರ ಪಾರ್ಟಿ, ಮಾನವ ಪಾರ್ಟಿ, ಪ್ರಜಾ ಪರಿವರ್ತನ ಪಾರ್ಟಿ, ಶುಭ ಕರ್ನಾಟಕ, ಯಂಗ್ ಇಂಡಿಯಾ ಕಾಂಗ್ರೆಸ್ ಪಾರ್ಟಿ ಇವು ಚುನಾವಣಾ ಆಯೋಗವು ಪಟ್ಟಿ ಮಾಡಲಾದ ಪಕ್ಷಗಳಾಗಿವೆ.

ಈ ಪಕ್ಷಗಳಿಂದ ವಿವರ ಪಡೆದು ರಾಜಕೀಯ ಪಕ್ಷಗಳ ಪಟ್ಟಿಯಿಂದ ಕೈಬಿಡಲು ಇಲ್ಲವೇ ಮುಂದುವರಿಸಲು ಕ್ರಮ ಕೈಗೊಳ್ಳುವಂತೆ ಭಾರತೀಯ ಚುನಾವಣಾ ಆಯೋಗವು ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ತಿಳಿಸಿದೆ.

14 ವರ್ಷದ ನಂತರ ಬಿಬಿಎಂಪಿಯಿಂದ ಆಸ್ಪತ್ರೆ ನಿರ್ಮಾಣಕ್ಕೆ ಯೋಜನೆ

₹21.25 ಕೋಟಿ ವೆಚ್ಚದಲ್ಲಿ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಬಿಡಿಎ ವತಿಯಿಂದ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ಮಾಡಿ 14 ವರ್ಷದ ನಂತರ, ನಿವೇಶನ ಪಡೆದುಕೊಂಡಿರುವ ಬಿಬಿಎಂಪಿ ₹21.25 ಕೋಟಿ ವೆಚ್ಚದಲ್ಲಿ ತಾಯಿ–ಮಕ್ಕಳ ಆಸ್ಪತ್ರೆ ನಿರ್ಮಿಸಲು ಮುಂದಾಗಿದೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 2ನೇ ಬ್ಲಾಕ್‌ನಲ್ಲಿ ನಾಗರಿಕರ ನಿವೇಶನ ಸಂಖ್ಯೆ 2ರಲ್ಲಿ 3,432 ಚದರ ಮೀಟರ್ ವಿಸ್ತೀರ್ಣದಲ್ಲಿ 50 ಹಾಸಿಗೆಗಳ ತಾಯಿ–ಮಕ್ಕಳ ಆಸ್ಪತ್ರೆ ನಿರ್ಮಿಸಲು ಬಿಬಿಎಂಪಿ ಯೋಜನೆ ತಯಾರಿಸಿದೆ.

3278 ಚದರ ಮೀಟರ್ ವಿಸ್ತೀರ್ಣದಲ್ಲಿ ನೆಲ ಹಾಗೂ ಎರಡು ಅಂತಸ್ತುಗಳ ಕಟ್ಟಡ ನಿರ್ಮಿಸಲು ಯೋಜಿಸಲಾಗಿದ್ದು, ಸಿವಿಲ್ ಕೆಲಸಗಳಿಗೆ ₹10.49 ಕೋಟಿ ವೆಚ್ಚವಾಗಲಿದೆ. ಅಗ್ನಿಶಾಮಕ, ಲಿಫ್ಟ್, ಸಿಸಿಟಿವಿ ಕ್ಯಾಮೆರಾ, ದೂರವಾಣಿ, ಯುಪಿಎಸ್ ವ್ಯವಸ್ಥೆ ಇತ್ಯಾದಿಗಳಿಗೆ ₹1.48 ಕೋಟಿ, ಮಾದರಿ ಶಸ್ತ್ರಚಿಕಿತ್ಸೆ ಘಟಕ, ವೈದ್ಯ ಗ್ಯಾಸ್ ಕೊಳವೆ ಮಾರ್ಗ, ಪೀಠೋಪಕರಣಕ್ಕೆ ₹1.61 ಕೋಟಿ, ಎಲೆಕ್ಟ್ರಿಕಲ್, ನೀರು, ಎಸ್‌ಟಿಪಿ, ಕೊಳವೆಬಾವಿ ಸೇರಿದಂತೆ ಮೂಲಸೌಕರ್ಯಕ್ಕೆ ₹1.94 ಕೋಟಿ, ವೈದ್ಯಕೀಯ ಉಪಕರಣಗಳಿಗೆ ₹70 ಲಕ್ಷ, ಟೆಂಡರ್ ಪ್ರೀಮಿಯಂಗೆ ₹1.55 ಕೋಟಿ, ಯೋಜನಾ ನಿರ್ವಹಣೆ ಸಲಹೆಗಾರರಿಗೆ ₹7.76 ಲಕ್ಷ, ಜಿಎಸ್‌ಟಿ ₹3.21 ಕೋಟಿ ಹಾಗೂ ಇತರೆ ವೆಚ್ಚಗಳೂ ಸೇರಿ ₹21.25 ಕೋಟಿ ವೆಚ್ಚವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂಜಿನಿಯರ್‌ಗಳು ಬಿಬಿಎಂಪಿಗೆ ವರದಿ ನೀಡಿದ್ದಾರೆ.

‘ಉಪ ಮುಖ್ಯಮಂತ್ರಿಯವರ ಸೂಚನೆಯಂತೆ ಆಸ್ಪತ್ರೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಯೋಜನೆ ರೂಪಿಸಲಾಗಿದ್ದು, ಶೀಘ್ರವೇ ಟೆಂಡರ್ ಕರೆಯಲಾಗುತ್ತದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಪಾಲಿಕೆಯಿಂದ ಆಸ್ಪತ್ರೆ: ‘ವಿಶ್ವೇಶ್ವರಯ್ಯ 2ನೇ ಬ್ಲಾಕ್‌ನಲ್ಲಿ ಬಿಡಿಎ ನೀಡಿರುವ ನಾಗರಿಕ ಸೌಲಭ್ಯ ನಿವೇಶನದಲ್ಲಿ ಬಿಬಿಎಂಪಿ ವತಿಯಿಂದಲೇ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತದೆ. ನಂತರ ಅದನ್ನು ಆರೋಗ್ಯ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಆಲೋಚಿಸಲಾಗುತ್ತದೆ’ ಎಂದು ವಿಧಾನ ಪರಿಷತ್‌ನಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಾಂಗ್ರೆಸ್‌ನ ಉಮಾಶ್ರೀ ಅವರ ಪ್ರಶ್ನೆಗೆ ಉತ್ತರಿಸಿದ್ದ ಅವರು, ಆಸ್ಪತ್ರೆಯನ್ನು ಶೀಘ್ರವಾಗಿ ನಿರ್ಮಿಸಲಾಗತ್ತದೆ ಎಂಬ ಭರವಸೆ ನೀಡಿದರು.

‘ಆಸ್ಪತ್ರೆಗೆ ನಿವೇಶನ ಪಡೆದುಕೊಳ್ಳಲು ವಿಳಂಬಧೋರಣೆ ಅನುಸರಿಸಿದ ಅಧಿಕಾರಿಗಳ ಮೇಲೆ ಕ್ರಮವಾಗಬೇಕು’ ಎಂದು ಉಮಾಶ್ರೀ ಆಗ್ರಹಿಸಿದರು. ‘ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಶಿವಕುಮಾರ್ ಹೇಳಿದರು.



ಬಿಡಿಎ ಸರ್ ಎಂ. ವಿಶ್ವೇಶ್ವರಯ್ಯ 2ನೇ ಬ್ಲಾಕ್ ಬಡಾವಣೆಯಲ್ಲಿ ಬಿಬಿಎಂಪಿಗೆ ಹಂಚಿಕೆ ಮಾಡಿರುವ ನಾಗರಿಕ ಸೌಲಭ್ಯ ನಿವೇಶನ

ಬಿಬಿಎಂಪಿ ಮರೆತಿದ್ದ ನಿವೇಶನ!

ಬಿಡಿಎ ಸಿಎ ನಿವೇಶನವನ್ನು 2011ರ ಜನವರಿ 6ರಂದು ಬಿಬಿಎಂಪಿಗೆ ಹಂಚಿಕೆ ಪತ್ರ ನೀಡಿತ್ತು. ಇದಾಗಿ 11 ವರ್ಷವಾದರೂ ಬಿಬಿಎಂಪಿ ನಿವೇಶನ ಪಡೆದುಕೊಂಡಿರಲಿಲ್ಲ. ಈ ಬಗ್ಗೆ ‘ಪ್ರಜಾವಾಣಿ’ಯಲ್ಲಿ 2022ರ ಅಕ್ಟೋಬರ್ 7ರಂದು ‘ಬಿಬಿಎಂಪಿ ಮರೆತ ಆಸ್ಪತ್ರೆ ನಿವೇಶನ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದಾದ ನಂತರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಧ್ಯಪ್ರವೇಶದ ನಂತರ ಗುತ್ತಿಗೆ ಹಣ ಪಾವತಿಸಿತ್ತು.

ಬಿಬಿಎಂಪಿ 2024ರ ಜನವರಿ 17ರಂದು ಸಿಎ ನಿವೇಶನಕ್ಕಾಗಿ ₹1.71 ಕೋಟಿಯನ್ನು ಬಿಡಿಎಗೆ ಪಾವತಿಸಿತ್ತು. ಆದರೆ, ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯದ ಅಧಿಕಾರಿಗಳು ಈ ನಿವೇಶನ ನೋಂದಣಿ ಬಗ್ಗೆ ಕ್ರಮಕೈಗೊಂಡಿರಲಿಲ್ಲ. ಈ ಬಗ್ಗೆ ಪ್ರಜಾವಾಣಿಯಲ್ಲಿ ‘ಆಸ್ಪತ್ರೆ ನಿವೇಶನ ನೋಂದಣಿಗೆ ನಿರ್ಲಕ್ಷ್ಯ’ ಶೀರ್ಷಿಕೆಯಡಿ 2025ರ ಜೂನ್ 21ರಂದು ವಿಶೇಷ ವರದಿ ಪ್ರಕಟವಾಗಿತ್ತು. ನಂತರ, ರಾಜರಾಜೇಶ್ವರಿ ನಗರ ವಲಯ ಆಯುಕ್ತ ಸತೀಶ್ ಅವರ ಸೂಚನೆಯಂತೆ, ಬಿಡಿಎಯೊಂದಿಗೆ 30 ವರ್ಷಗಳ ಗುತ್ತಿಗೆ ಕರಾರನ್ನು ಬಿಬಿಎಂಪಿ ಅಧಿಕಾರಿಗಳು ಜುಲೈ 22ರಂದು ಮಾಡಿಕೊಂಡಿದ್ದರು.

ನಟ ದರ್ಶನ್ ಜಾಮೀನು ರದ್ದು: ಡೆವಿಲ್ ಸಿನಿಮಾದ ಹಾಡು ಬಿಡುಗಡೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದರ್ಶನ್ ನಟನೆಯ ಬಹುನಿರೀಕ್ಷಿತ ‘ದಿ ಡೆವಿಲ್’ ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಮಿಲನ ಪ್ರಕಾಶ್ ನಿರ್ದೇಶನದ ಈ ಚಿತ್ರದ ಪ್ರಚಾರ ಕಾರ್ಯ ಆರಂಭಿಸಬೇಕು ಎಂದು ಚಿತ್ರತಂಡ ಸಕಲ ಸಿದ್ಧತೆ ಮಾಡಿಕೊಂಡಿತ್ತು. ಅದರ ಮೊದಲ ಹಂತವಾಗಿ ‘ಇದ್ರೆ ನೆಮ್ಮದಿಯಾಗ್ ಇರ್ಬೇಕ್’ ಹಾಡನ್ನು ಆ.15ರಂದು ಬಿಡುಗಡೆ ಮಾಡುವುದಾಗಿ ಚಿತ್ರತಂಡ ಈ ಹಿಂದೆ ಹೇಳಿತ್ತು.

ಗುರುವಾರ ದರ್ಶನ್ ಜಾಮೀನು ರದ್ದಾದ ಬೆನ್ನಲ್ಲೇ ಚಿತ್ರತಂಡ ಹಾಡಿನ ಬಿಡುಗಡೆಯನ್ನೂ ಮುಂದೂಡಿದೆ.

ಜಾಮೀನು ರದ್ದು ಸುದ್ದಿ ಹೊರ ಬರುತ್ತಿದ್ದಂತೆ, ‘ಅನಿವಾರ್ಯ ಕಾರಣದಿಂದ ಹಾಡಿನ ಬಿಡುಗಡೆ ಮುಂದೂಡಿರುವುದಾಗಿ’ ಚಿತ್ರತಂಡ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದೆ.

‘ಕಾಟೇರ’ ಸಿನಿಮಾದ ಯಶಸ್ಸಿನ ಬಳಿಕ ‘ದಿ ಡೆವಿಲ್’ ಸಿನಿಮಾದ ಕೆಲಸಗಳಲ್ಲಿ ದರ್ಶನ್ ತೊಡಗಿಕೊಂಡಿದ್ದರು. ರೇಣುಕಸ್ವಾಮಿ ಪ್ರಕರಣದಲ್ಲಿ ದರ್ಶನ್ ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರ ಬರುತ್ತಿದ್ದಂತೆ ದರ್ಶನ್ ಈ ಚಿತ್ರದ ಬಾಕಿ ಉಳಿದಿದ್ದ ಚಿತ್ರೀಕರಣ ಮುಗಿಸಿಕೊಟ್ಟಿದ್ದರು.

ಡಬ್ಬಿಂಗ್ ಕೂಡ ಮುಗಿಸಿದ್ದಾರೆ. ಹೀಗಾಗಿ ಸಿನಿಮಾ ಪ್ರಚಾರದ ಹೊರತಾಗಿ ದರ್ಶನ್ ಭಾಗದ ಎಲ್ಲ ಕೆಲಸಗಳು ಮುಗಿದಿವೆ.


Reliance
Growth is Life
SMART BAZAAR
ಫುಲ್ ಪೈಸಾ ವಸೂಲ್ ಸೇಲ್
13th - 17th AUG
ಕೊನೆಯ 3 ದಿನಗಳು
13 ರಿಂದ 17 ಆಗಸ್ಟ್ ವರೆಗೂ
ಒಂದೇ ಮಾತು ಬನ್ನಿ ಫುಲ್ ಪೈಸಾ ವಸೂಲ್ ಮಾಡೋಣ
ಗುಡ್ ಲೈಫ್ ಡೈಲಿ / ರಾಯಲ್ ಬುಲೆಟ್ ಕೋಲಂ ಅಕ್ಕಿ 26 kg
ಸ್ಮಾರ್ಟ್ ಬೆಲೆ ₹999/ ₹1049
₹38.42 /kg
₹40.34 /kg
ಎಮ್ಆರ್‌ಪಿ ₹1800 / ₹1900
ಉಳಿಸಿರಿ ₹801 / ₹851
ಗುಡ್ ಲೈಫ್ ಬಾದಾಮ್ / ಕ್ಯಾಶೂ (W320) 500 g
ಸ್ಮಾರ್ಟ್ ಬೆಲೆ ₹389/ ₹439
ಎಮ್ಆರ್‌ಪಿ ₹620 / ₹725
ಉಳಿಸಿರಿ ₹231 / ₹286
ಲೂಸ್ ತೊಗರಿ ಬೇಳೆ ವ್ಯಾಲ್ಯೂ 1 kg / ಗುಡ್ ಲೈಫ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 1 L
ಸ್ಮಾರ್ಟ್ ಬೆಲೆ ₹101 / ₹125
ಮಾರುಕಟ್ಟೆ ಬೆಲೆ ₹106
ಎಮ್ಆರ್‌ಪಿ ₹185
ಉಳಿಸಿರಿ ₹60
BUY ANY 1 GET ANY 1 FREE
ಬಿಸ್ಕಿಟ್ ದೊಡ್ಡ ಪ್ಯಾಕ್ 253 g ರಿಂದ (ಆಯ್ದ ಪ್ರಕಾರಗಳು)
ಎಮ್ಆರ್‌ಪಿ ₹160 ರಿಂದ
BUY ANY 3 GET ANY 1 FREE
ತಂಪು ಪಾನೀಯಗಳು ಮತ್ತು ಜ್ಯೂಸ್‌ಗಳು 600 ml ರಿಂದ (ಆಯ್ದ ಪ್ರಕಾರಗಳು)
ಎಮ್ಆರ್‌ಪಿ ₹40 ರಿಂದ/ಯೂನಿಟ್
ಲೂಸ್ ಸಕ್ಕರೆ (ಚಿಕ್ಕದು) 1 kg / ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ಸ್ಮಾರ್ಟ್ ಬೆಲೆ ₹43.50
ಮಾರುಕಟ್ಟೆ ಬೆಲೆ ₹50
ಎಮ್ಆರ್‌ಪಿ ₹638
ಡವ್ / ಪೀಯರ್ಸ್ / ಫಿಯಾಮಾ ಸೋಪ್ ವೆರೈಟಿ ಪ್ಯಾಕ್ 125 g ರಿಂದ (5 ಪ್ಯಾಕ್) (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್ಆರ್‌ಪಿ ₹449 ರಿಂದ
ಸ್ಮಾರ್ಟ್ ಬೆಲೆ ₹225 ರಿಂದ
ಸರ್ಫ್ 7 kg / ಟೈಡ್ 8 kg ಡಿಟರ್ಜೆಂಟ್ ಪೌಡರ್
ಫ್ಲ್ಯಾಟ್ 40% ಕಡಿತ
ಎಮ್ಆರ್‌ಪಿ ₹985 ರಿಂದ
ಸ್ಮಾರ್ಟ್ ಬೆಲೆ ₹591 ರಿಂದ
ಟಾಟಾ ಟೀ ಗೋಲ್ಡ್ 500 g
ಉಳಿಸಿರಿ ₹85
ಎಮ್ಆರ್‌ಪಿ ₹275 ರಿಂದ
ಸ್ಮಾರ್ಟ್ ಬೆಲೆ ₹190 ರಿಂದ
ಡೈರಿ / ಫ್ರೋಜನ್ ಮತ್ತು ಬೇಕರಿ (ಆಯ್ದ ಸರಣಿ)
ಮಿನಿಮಮ್ 25% ಕಡಿತ
ಎಮ್ಆರ್‌ಪಿ ₹25 ರಿಂದ
ಟೂತ್‌ಪೇಸ್ಟ್ 280 g ರಿಂದ (ಆಯ್ದ ಪ್ರಕಾರಗಳು)
ಎಮ್ಆರ್‌ಪಿ ₹212 ರಿಂದ
BUY ANY 1 GET ANY 1 FREE
ಸ್ಟೇನ್‌ಲೆಸ್ ಸ್ಟೀಲ್ ಟ್ರಿಪ್ಲಿ ಕುಕ್‌ವೇರ್ ಕಾಂಬೊ (ಕಡಾಯಿ 22 cm & ಫ್ರೈ ಪ್ಯಾನ್ 24 cm)
ಸ್ಮಾರ್ಟ್ ಬೆಲೆ ₹999
ಎಮ್ಆರ್‌ಪಿ ₹3649
LYF SINGER Surya Flame
3 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ಎಮ್ಆರ್‌ಪಿ ₹5290
ಸ್ಮಾರ್ಟ್ ಬೆಲೆ ₹1999
ಸ್ಮಾರ್ಟ್ ಬೆಲೆ ₹3999
ಉಚಿತ ಡಫಲ್ ಟ್ರಾಲಿ ಬ್ಯಾಗ್ ಪಡೆಯಿರಿ
2 ಸೆಟ್ ಟ್ರಾಲಿ
ಎಮ್ಆರ್‌ಪಿ ₹12800
2000+ ಫ್ಯಾಷನ್ ಸ್ಟೈಲ್ಸ್
₹399 ಕ್ಕಿಂತ ಕಡಿಮೆ
Ask for your Bundle of Savings
Get Offer Coupons Booklet
worth ₹3999
at ₹9*
*On Shopping of ₹299/- & Above
Conditions apply
ಎಲ್ಲವೂ ₹49 ರೊಳಗೆ
ಎಮ್ಆರ್‌ಪಿ ₹100 ರಿಂದ
*T & C apply.
ಪುರುಷರ, ಮಹಿಳೆಯರ, ಮತ್ತು ಮಕ್ಕಳ ಉಡುಗೆ
ಈಗ ತೆರೆದಿದೆ ಟಿಟಿಎಂಸಿ, ಶಾಂತಿನಗರ ಬಸ್ ಸ್ಟ್ಯಾಂಡ್.
ಬೆಂಗಳೂರು: ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ. • ಅಕ್ಷಯನಗರ: ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ - ಹುಳಿಮಾವು ರಸ್ತೆ • ಚಂದಾಪುರ: ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ: ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್: ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ: ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. • ವಿಜ್ಞಾನನಗರ: ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ • ವಿಜಯನಗರ ಟಿ ಟಿ ಎಮ್ ಸಿ: ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ: ಚೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, • ಭಾರತೀಯ ಮಾಲ್ ಆಫ್ ಬೆಂಗಳೂರು: ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ: ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್: ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್‌ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್: ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
fresh Signature
10% INSTANT DISCOUNT# SBI card
#Min. Trxn.: ₹3,000; Max. Discount: ₹500 per Trxn. per credit card; Validity: 13 Aug - 17 Aug 2025. T&C Apply.
BAJAJ FINSERV
Get ₹1000 GV on shopping of ₹5000 or more with Bajaj Easy EMI.
Offer Valid from 13th August to 17th August 2025
T&C Apply.
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಆಪ್ಪರೇಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಗಳಲ್ಲಿ ಮಾತ್ರ ಊರ್ಜಿತವಿದೆ. ಬಜಾಜ್ ಫಿನ್‌ಸರ್ವ್ ಮತ್ತು ಕೂಪನ್ ಬುಕ್‌ಲೆಟ್ ಆಫರ್‌ಗಳು ಸ್ಮಾರ್ಟ್ ಬಜಾರ್ ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 17 ಆಗಸ್ಟ್ 2025. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.
SMART BAZAAR

ಜನದಟ್ಟಣೆಯ ಒತ್ತಡ: ಪ್ಲಾಟ್‌ಫಾರ್ಮ್ ಚಿಕ್ಕದು

ನಮ್ಮ ಮೆಟ್ರೊ ಆರ್‌.ವಿ. ರಸ್ತೆ ಇಂಟರ್‌ಚೇಂಜ್ ನಿಲ್ದಾಣದಲ್ಲಿ ಸ್ಥಳಾವಕಾಶದ ಸಮಸ್ಯೆ: ಪ್ರಯಾಣಿಕರ ಅಳಲು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹಳದಿ ಮಾರ್ಗ ಉದ್ಘಾಟನೆಗೊಂಡ ಬಳಿಕ ನಮ್ಮ ಮೆಟ್ರೊ ಪ್ರಯಾಣಿಕರ ಒಟ್ಟು ಸಂಖ್ಯೆ 1.5 ಲಕ್ಷ ಹೆಚ್ಚಾಗಿದೆ. ಹಸಿರು ಮಾರ್ಗ ಮತ್ತು ಹಳದಿ ಮಾರ್ಗ ಸೇರುವ ಆರ್‌.ವಿ. ರಸ್ತೆಯ 'ಇಂಟರ್‌ಚೇಂಜ್' ನಿಲ್ದಾಣದ ಪ್ಲಾಟ್‌ಫಾರ್ಮ್ ಸಣ್ಣದಾಗಿದೆ. ದಟ್ಟಣೆ ಅವಧಿಯಲ್ಲಿ ಕಾಲಿಡಲು ಜಾಗ ಇಲ್ಲದಂತಾಗಿದೆ.

ಡೆಲ್ಟಾ ಎಲೆಕ್ಟ್ರಾನಿಕ್ ಬೊಮ್ಮಸಂದ್ರದಿಂದ ಹೊರಡುವ ರೈಲಿಗೆ ಆರ್‌.ವಿ. ರಸ್ತೆ ಕೊನೆ ನಿಲ್ದಾಣ ಆಗಿರುವುದರಿಂದ ಆ ಪ್ಲಾಟ್‌ಫಾರ್ಮ್‌ನಲ್ಲಿ ಸಮಸ್ಯೆ ಉಂಟಾಗಿಲ್ಲ. ಆದರೆ, ಆರ್‌.ವಿ. ರಸ್ತೆಯಿಂದ ಡೆಲ್ಟಾ ಎಲೆಕ್ಟ್ರಾನಿಕ್ ಬೊಮ್ಮಸಂದ್ರ ಕಡೆಗೆ ಇರುವ ಪ್ಲಾಟ್‌ಫಾರ್ಮ್‌ನಲ್ಲಿ ಸಮಸ್ಯೆ ಎದುರಾಗಿದೆ.

'ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾಗಿರುವುದು ನಮಗೆ ಬಹಳ ಅನುಕೂಲವಾಗಿದೆ. ಹಿಂದೆ ಮೆಜೆಸ್ಟಿಕ್‌ನಿಂದ ಎಲೆಕ್ಟ್ರಾನಿಕ್ ಸಿಟಿಗೆ ಹೋಗಲು ಮೆಜೆಸ್ಟಿಕ್‌ನಿಂದಲೇ ಬಸ್ ಹತ್ತಬೇಕಿತ್ತು. ಇಲ್ಲವೇ ಮೆಟ್ರೊ ಹಸಿರು ಮಾರ್ಗದಲ್ಲಿ ಬಂದು ಬನಶಂಕರಿಯಲ್ಲಿ ಇಳಿದು, ಅಲ್ಲಿಂದ ಬಸ್ ಹತ್ತಿ ಎಲೆಕ್ಟ್ರಾನಿಕ್ ಸಿಟಿಗೆ ಹೋಗಬೇಕಿತ್ತು. ಹೇಗೆ ಹೋದರೂ ಒಂದೂವರೆ ಗಂಟೆ ಬೇಕಿತ್ತು. ವಾಹನ ದಟ್ಟಣೆ ಹೆಚ್ಚಿದ್ದರೆ ಇನ್ನೂ ಅಧಿಕ ಸಮಯ ಹಿಡಿಯುತ್ತಿತ್ತು. ಹಸಿರು ಮಾರ್ಗದಲ್ಲಿ ಮೆಜೆಸ್ಟಿಕ್‌ನಿಂದ ಆರ್‌.ವಿ. ರಸ್ತೆಗೆ ತಲುಪಲು 15–16 ನಿಮಿಷ ಸಾಕಾಗುತ್ತದೆ. ಹಾಗಾಗಿ ವಾಹನ ದಟ್ಟಣೆಯಲ್ಲಿ ಸಿಲುಕುವ ಜಂಜಾಟ ತಪ್ಪಿದೆ. ಆದರೆ, ಈಗ ಆರ್‌.ವಿ. ರಸ್ತೆ ಮೆಟ್ರೊ ಸ್ಟೇಷನ್‌ನಲ್ಲಿ ನಿಲ್ಲಲು ಜಾಗ ಇಲ್ಲದಂತಾಗಿರುವುದು ಹೊಸ ಸಮಸ್ಯೆ' ಎಂದು ಎಲೆಕ್ಟ್ರಾನಿಕ್ ಸಿಟಿಯ ಐಟಿ ಉದ್ಯೋಗಿ ರೋಹನ್ ಎಸ್. ಅನುಭವ ಹಂಚಿಕೊಂಡರು.

'ನಾನು ಆರ್‌.ವಿ. ರಸ್ತೆಗೆ ತಲುಪಿದಾಗ ಬೊಮ್ಮಸಂದ್ರ ಕಡೆಗೆ ಆಗಷ್ಟೇ ಮೆಟ್ರೊ ಹೋಗಿ ಎರಡು ನಿಮಿಷ ಆಗಿತ್ತು. ಮುಂದಿನ ಮೆಟ್ರೊ 23 ನಿಮಿಷ ಎಂದು ಸಮಯ ಫಲಕ ತೋರಿಸುತ್ತಿತ್ತು. ನಿಲ್ದಾಣದಲ್ಲಿ ಆಗ ಅಷ್ಟೇನು ಜನರು ಇರಲಿಲ್ಲ. 10 ನಿಮಿಷ ಕಳೆಯುವ ಹೊತ್ತಿಗೆ ಜನರು ತುಂಬಿದ್ದರು. ಮೆಟ್ರೊ ಬರಲು ಇನ್ನೂ ಮೂರು ನಿಮಿಷ ಇದೆ ಎನ್ನುವ ಹೊತ್ತಿಗೆ ನಿಲ್ಲಲು ಜಾಗ ಇಲ್ಲದಂತಾಗಿತ್ತು. ಹಿಂದಿನಿಂದ ಕೆಲವರು ಜಾಗವಿಲ್ಲದೇ ದಬ್ಬುತ್ತಿದ್ದರು. ಭದ್ರತಾ ಸಿಬ್ಬಂದಿ ನಿಯಂತ್ರಿಸಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದರು' ಎಂದು ಐಟಿ ಉದ್ಯೋಗಿ ಪ್ರಜ್ವಲ್ ಕುಮಾರ್ ಅಪಾಯದ ಸನ್ನಿವೇಶವನ್ನು ಬಿಚ್ಚಿಟ್ಟರು.

'ಇಂಟರ್‌ಚೇಂಜ್ ನಿಲ್ದಾಣ ಎಂದ ಮೇಲೆ ಪ್ರಯಾಣಿಕರ ಸಂಖ್ಯೆ ಹೆಚ್ಚೇ ಇರುತ್ತದೆ. ಅಲ್ಲದೇ ಹಳದಿ ಮಾರ್ಗ ಐಟಿ ಹಬ್ ಕಡೆಗೆ ಸಂಪರ್ಕಿಸುವುದರಿಂದ ಉದ್ಯೋಗಿಗಳು ದೊಡ್ಡ ಸಂಖ್ಯೆಯಲ್ಲಿ ಪ್ರಯಾಣಿಸುತ್ತಾರೆ. ಹೀಗಿರುವಾಗ ಪ್ರಯಾಣಿಕರು ನಿಲ್ಲಲು ಎಷ್ಟು ಜಾಗ ಬೇಕು ಎಂದು ಮೊದಲೇ ಅಂದಾಜಿಸಿ, ಅದಕ್ಕೆ ಸರಿಯಾಗಿ ನಿಲ್ದಾಣ ದೊಡ್ಡದಾಗಿ ನಿರ್ಮಿಸಬೇಕಿತ್ತು. ಈಗ ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದೆ' ಎಂದು ಎಲೆಕ್ಟ್ರಾನಿಕ್ ಸಿಟಿಯ ಮತ್ತೊಬ್ಬ ಐಟಿ ಉದ್ಯೋಗಿ ಸೃಜನ್ ಪಿ. ತಿಳಿಸಿದರು.

ಇಂಟರ್‌ಚೇಂಜ್ ನಿಲ್ದಾಣವನ್ನು ಉಳಿದ ಸಾಮಾನ್ಯ ನಿಲ್ದಾಣದಂತೆ ನಿರ್ಮಿಸಿರುವುದೇ ಸಮಸ್ಯೆಗೆ ಕಾರಣ ಎಂಬುದು ಬಹುತೇಕ ಪ್ರಯಾಣಿಕರ ಅಭಿಪ್ರಾಯವಾಗಿದೆ.

ಮುಖ್ಯಾಂಶಗಳು

- 10,48,031: ಆ. 11ರಂದು ನಮ್ಮ ಮೆಟ್ರೊದಲ್ಲಿ ಸಂಚರಿಸಿದವರು
- 10,32,687 ಮಂದಿ ಆಗಸ್ಟ್ 12ರಂದು ಸಂಚರಿಸಿದವರು

ಪಿಎಸ್‌ಡಿ ಅಳವಡಿಸಲು ಸಂಸದರ ಪತ್ರ

ಹಳದಿ ಮಾರ್ಗದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಿರುವುದರಿಂದ ನಿಲ್ದಾಣಗಳಲ್ಲಿ ಅಪಾಯ ಉಂಟಾಗುವ ಸಾಧ್ಯತೆ ಇದೆ. ಹಾಗಾಗಿ ಮೆಟ್ರೊ ಬಂದಾಗ ತೆರೆದುಕೊಂಡು, ಮೆಟ್ರೊ ಮುಂದಕ್ಕೆ ಚಲಿಸಿದ ಕೂಡಲೇ ಮುಚ್ಚುವ ತಂತ್ರಜ್ಞಾನದ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ (ಪಿಎಸ್‌ಡಿ) ಅಳವಡಿಸಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಅವರು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಹಳದಿ ಮಾರ್ಗದಲ್ಲಿ ಪಿಎಸ್‌ಡಿ ಅಳವಡಿಸುವ ಬಗ್ಗೆ ಚಿಂತನೆ ನಡೆದಿದೆ. ಪಿಎಸ್‌ಡಿ ಇಲ್ಲದಿದ್ದರೆ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದು ಮೆಟ್ರೊ ಅಧಿಕಾರಿಗಳು ಪ್ರತಿಕ್ರಿಯಿಸಿದರು.



ನಮ್ಮ ಮೆಟ್ರೊ ಹಳದಿ ಮಾರ್ಗದ ಆರ್‌.ವಿ. ರಸ್ತೆ ನಿಲ್ದಾಣದಲ್ಲಿ ಪ್ರಯಾಣಿಕರು

'ರೈಲುಗಳ ಸಂಖ್ಯೆ ಹೆಚ್ಚಾದಾಗ ಸಮಸ್ಯೆಗೆ ಪರಿಹಾರ'

ಆರ್‌.ವಿ. ರಸ್ತೆ ಮೆಟ್ರೊ ನಿಲ್ದಾಣಕ್ಕೆ ಹಳದಿ ಮಾರ್ಗದಲ್ಲಿ ಒಂದು ರೈಲು ಹೋಗಿ ಇನ್ನೊಂದು ರೈಲು ಬರುವ ಹೊತ್ತಿಗೆ (25 ನಿಮಿಷ) ಹಸಿರು ಮಾರ್ಗದಲ್ಲಿ ಮೆಜೆಸ್ಟಿಕ್ ಕಡೆಯಿಂದ ಕನಿಷ್ಠ ನಾಲ್ಕು, ರೇಷ್ಮೆ ಸಂಸ್ಥೆ ಕಡೆಯಿಂದ ನಾಲ್ಕು ಮೆಟ್ರೊ ರೈಲು ಬಂದು ಹೋಗಿರುತ್ತವೆ. ಬೊಮ್ಮಸಂದ್ರ ಕಡೆಗೆ ಸಾಗುವವರೆಲ್ಲ ಹಸಿರು ಮಾರ್ಗದ ಮೆಟ್ರೊದಿಂದ ಇಳಿದು ಹಳದಿ ಮಾರ್ಗದ ಪ್ಲಾಟ್‌ಫಾರ್ಮ್‌ಗೆ ಬರುತ್ತಾರೆ. ಇದರಿಂದಾಗಿ ದಟ್ಟಣೆ ಅವಧಿಯಲ್ಲಿ ಸಮಸ್ಯೆ ಆಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಪ್ಲಾಟ್‌ಫಾರ್ಮ್ ಚಿಕ್ಕದಾಗಿಲ್ಲ. ಹಳದಿ ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಖ್ಯೆ ಕಡಿಮೆ ಇರುವುದು ಸಮಸ್ಯೆಗೆ ಕಾರಣ. ರೈಲುಗಳ ಸಂಖ್ಯೆ ಹೆಚ್ಚಾದಾಗ ಸಮಸ್ಯೆ ಪರಿಹಾರಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಮುಂದಿನ ತಿಂಗಳು ನಾಲ್ಕನೇ ರೈಲು ಸಂಚಾರ ಆರಂಭಿಸಲಿದೆ. ಮುಂದಿನ ವರ್ಷ ಮಾರ್ಚ್ ಅಂತ್ಯದ ಒಳಗೆ ಎಲ್ಲ ರೈಲುಗಳ ಪೂರೈಕೆ ಆಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಕೊಡಗು: ರಾಷ್ಟ್ರೀಯ ಹೆದ್ದಾರಿಗೆ ಕುಸಿದ ಮಣ್ಣು

ಮಡಿಕೇರಿ: ಮಾಣಿ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ಜೋಡುಪಾಲ ಬಳಿ ರಸ್ತೆ ಬದಿ ಗುರುವಾರ ಕುಸಿದ ಮಣ್ಣನ್ನು ಸಿಬ್ಬಂದಿ ತೆರವುಗೊಳಿಸಲಾಯಿತು.

ಸ್ಥಳಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಭೂ ವಿಜ್ಞಾನಿಗಳಾದ ಎಂ.ಎಸ್.ರಾಹುಲ್, ರೋಜಾ, ಲಾಯಲ್ ಮಿರಾಂಡ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅನನ್ಯ ವಾಸುದೇವ್, ರಾಷ್ಟ್ರೀಯ ಹೆದ್ದಾರಿ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗಿರೀಶ್ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ರಾಷ್ಟ್ರೀಯ ಹೆದ್ದಾರಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗಿರೀಶ್, 'ಸ್ವಲ್ಪ ಪ್ರಮಾಣದ ಮಣ್ಣು ಕುಸಿದಿತ್ತು, ತೆರವುಗೊಳಿಸಲಾಗಿದ್ದು, ಆತಂಕವಿಲ್ಲ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕಳೆದ ರಾತ್ರಿ ಇಲ್ಲಿ ಕುಸಿದ ಮಣ್ಣಿನಲ್ಲಿ ಲಾರಿಯ ಚಕ್ರಗಳು ಸಿಲುಕಿಕೊಂಡಿತ್ತು, ಮಣ್ಣು ತೆಗೆದ ನಂತರ ಅದು ಸಂಚರಿಸಿತ್ತು.

ಮಡಿಕೇರಿ ಸೇರಿ ಕೊಡಗು ಜಿಲ್ಲೆಯ ಹಲವೆಡೆ ಕಳೆದೆರಡು ದಿನಗಳಿಂದ ನಿರಂತರವಾಗಿ ಜಿಟಿಜಿಟಿ ಮಳೆ ಸುರಿಯುತ್ತಿದೆ. ಕೆಲವೆಡೆ ಬಿರುಸಿನ ಮಳೆಯಾಗುತ್ತಿದೆ. ಗುಡ್ಡದ ಮಣ್ಣು ಕುಸಿದ ಜೋಡುಪಾಲ ಸಮೀಪದ ಸಂಪಾಜೆಯಲ್ಲಿ 4 ಸೆಂ.ಮೀ.ಗೂ ಅಧಿಕ ಮಳೆ ಸುರಿದಿದೆ.

'ಶಿಕ್ಷಣದಲ್ಲಿ ಕೌಶಲ, ತಂತ್ರಜ್ಞಾನಕ್ಕೆ ಆದ್ಯತೆ ಅಗತ್ಯ'



ಬೆಂಗಳೂರು: ಗುಣಮಟ್ಟದ ಶಿಕ್ಷಣದ ಜತೆಗೆ ಕೌಶಲ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ಕೊಟ್ಟರೆ ಸದೃಢ ದೇಶ ನಿರ್ಮಿಸಲು ಸಾಧ್ಯ ಎಂದು ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ವಿಶ್ವಮಾನವ ಯುವ ವೇದಿಕೆ, ಕ್ವೀನ್ಸ್ ಗ್ಲೋಬಲ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಗುರುವಾರ ಹಮ್ಮಿಕೊಂಡಿದ್ದ 'ರಾಷ್ಟ್ರಕ್ಕಾಗಿ ಪರಿವರ್ತನೆ - ವೃತ್ತಿಪರ ಕೊಡುಗೆಗಳ ಮೂಲಕ ಭಾರತದ ಅಭಿವೃದ್ಧಿ' ಕುರಿತ 9ನೇ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ದೇಶವನ್ನು ಅಭಿವೃದ್ಧಿಯ ಪಥದೆಡೆಗೆ ಕೊಂಡೊಯ್ಯಬೇಕಾದರೆ ಮಾಡುವ ಕೆಲಸದಲ್ಲಿ ಕೌಶಲ್ಯ ಇರಬೇಕು. ತಂತ್ರಜ್ಞಾನ ಉನ್ನತ ಮಟ್ಟಕ್ಕೇರುತ್ತಿದೆ. ಅದರ ಜತೆಗೆ ನಾವೂ ಕೂಡ ಹೊಂದಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಮಾತನಾಡಿ, 'ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರ ಕೊಡುಗೆ ಅಗತ್ಯವಿದೆ. ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಸ್ಪಂದಿಸಬೇಕು' ಎಂದರು.

ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮಿ ದೇಶಮಾನೆ, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಉದ್ಯಮಿ–ಒಕ್ಕಲಿಗ ಫಸ್ಟ್ ಸರ್ಕಲ್‌ನ ಅಧ್ಯಕ್ಷ ಮುನಿರಾಜು ಡಿ., ವಿಶ್ವಮಾನವ ಯುವ ವೇದಿಕೆ ಅಧ್ಯಕ್ಷ ಮಧುರಾನಿ ಗೌಡ, ಕ್ವೀನ್ಸ್ ಗ್ಲೋಬಲ್ ಮ್ಯಾನೇಜ್‌ಮೆಂಟ್ ಪಾಲುದಾರ ಮಹೇಶ್ ಜಿ.ಕೆ. ಇದ್ದರು.

ಚಿಟಿಕೆ ಸುದ್ದಿ

ಕವಿತೆಗಳ ಆಹ್ವಾನ

ಬೆಂಗಳೂರು: 'ಮೀಮ್' ಮೂರನೇ ಆವೃತ್ತಿಯ ಭಾಗವಾಗಿ ನಡೆಯಲಿರುವ ಕವಿಗೋಷ್ಠಿಗೆ ಕವಿತೆಗಳನ್ನು ಆಹ್ವಾನಿಸಲಾಗಿದೆ.

ಮಹಮ್ಮದ್ ಪೈಗಂಬರ್ ಅವರ ಕುರಿತಾಗಿ ಕವಿತೆ ರಚಿಸಿರಬೇಕು. ಸ್ವರಚಿತ ಹಾಗೂ ಅಪ್ರಕಟಿತವಾಗಿರಬೇಕು. ಆಯ್ದ ಕವಿಗಳಿಗೆ ತಮ್ಮ ಕವಿತೆಗಳನ್ನು ವಾಚಿಸಲು ಮತ್ತು ಖ್ಯಾತ ಲೇಖಕರಿಂದ ನಡೆಯಲಿರುವ ಸಾಹಿತ್ಯ ಕಾರ್ಯಾಗಾರದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಸೆಪ್ಟೆಂಬರ್ 21ರಂದು ಬೆಂಗಳೂರಿನ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಕಾರ್ಯಕ್ರಮ ಜರುಗಲಿದೆ. ಸೆಪ್ಟೆಂಬರ್ 1ಕ್ಕಿಂತ ಮೊದಲು ಕವಿತೆಗಳನ್ನು meemkannada@gmail.com ಗೆ ಕಳುಹಿಸಲು ಸಂಘಟಕರು ಕೋರಿದ್ದಾರೆ.

ಕೋಯಿಕ್ಕೋಡ್‌ನ ಮರ್ಕಝ್ ನಾಲೆಜ್‌ಸಿಟಿ ಅಧೀನದ 'ವಿರಾಸ್ ಕನ್ನಡ ವಿದ್ಯಾರ್ಥಿಗಳ ಸಂಘಟನೆ'ಯು ಕಾರ್ಯಕ್ರಮ ಆಯೋಜಿಸಿದೆ. ಮಾಹಿತಿಗಾಗಿ ಮೊಬೈಲ್:7902936986

23ಕ್ಕೆ ಯಕ್ಷಗಾನ

ಬೆಂಗಳೂರು: ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಗಸ್ಟ್ 23ರಂದು ರಾತ್ರಿ 10ಕ್ಕೆ ಪೌರಾಣಿಕ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಜ್ವಾಲಾ ಪ್ರತಾಪ, ಭೀಷ್ಮ ವಿಜಯ, ರಕ್ತರಾತ್ರಿ ಪ್ರಸಂಗಗಳು ಪ್ರದರ್ಶನಗೊಳ್ಳಲಿದ್ದು, ಹಿಮ್ಮೇಳದಲ್ಲಿ ಕೊಳಗಿ, ಮೂಡುಬೆಳ್ಳೆ, ಸೃಜನ್ ಗಣೇಶ್, ಭರತ್ ಶೆಟ್ಟಿ ಸಿದ್ಧಕಟ್ಟೆ ಮುಂತಾದ ಪ್ರಸಿದ್ಧ ಕಲಾವಿದರು ಭಾಗವಹಿಸಲಿದ್ದಾರೆ. ಮುಮ್ಮೇಳದಲ್ಲಿ ಕೊಂಡದಕುಳಿ, ತೋಟಿಮನೆ, ಪ್ರಸನ್ನ, ಯಲಗುಪ್ಪ, ಹಿಲಿಯಾಣ, ಕಿರಾಡಿ, ರಾಜೇಶ್ ಭಂಡಾರಿ, ಹೆನ್ನಾಬೈಲ್, ದೇವಲ್ಕುಂದ, ಕನ್ನಾರ್ ಭಾಗವಹಿಸಲಿದ್ದಾರೆ. ರಮೇಶ್ ಭಂಡಾರಿ, ಸೀತಾರಾಮ್ ಕಟೀಲು, ಎಳಬೇರು ಅವರ ಹಾಸ್ಯ ಇರಲಿದೆ ಎಂದು ಸಂಘಟಕ ನವೀನ್ ಶೆಟ್ಟಿ ತಿಳಿಸಿದ್ದಾರೆ.

ವಿವರ ಮತ್ತು ಆಸನ ಕಾಯ್ದಿರಿಸಲು ಮೊಬೈಲ್ :9900802670, 9353463402 ಸಂಪರ್ಕಿಸಬಹುದು.

ವಿದ್ಯುತ್ ಚಾಲಿತ ಎಸಿ ಬಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬೆಂಗಳೂರು ಮಹಾನಗರದ ವಿವಿಧ ಭಾಗಗಳಿಗೆ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಂಪರ್ಕ ಕಲ್ಪಿಸುವ 'ವಾಯು ವಜ್ರ' ಸೇವೆಗೆ ನೂತನವಾಗಿ 84 ವಿದ್ಯುತ್ ಚಾಲಿತ ಬಸ್‌ಗಳು ಸೇರ್ಪಡೆಗೊಂಡಿದ್ದು, ಗುರುವಾರ ಸಾಂಕೇತವಾಗಿ ಹತ್ತು ಬಸ್‌ಗಳನ್ನು ಸೇವೆಗೆ ಮುಕ್ತಗೊಳಿಸಲಾಯಿತು.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಸಂಸದ ಡಾ.ಕೆ.ಸುಧಾಕರ್ ನೂತನ ಬಸ್‌ಗಳಿಗೆ ಚಾಲನೆ ನೀಡಿದರು. ನಂತರ ಮಾತನಾಡಿದ ರಾಮಲಿಂಗಾ ರೆಡ್ಡಿ, 'ಬಿಎಂಟಿಸಿಯಲ್ಲಿ 10 ಸಾವಿರಕ್ಕೂ ಅಧಿಕ ಬಸ್‌ಗಳಿವೆ. ಅದರಲ್ಲಿ ಬಹುತೇಕ ಶೂನ್ಯ ಮಾಲಿನ್ಯ ಬಸ್‌ಗಳಾಗಿವೆ. ಇದರಿಂದ ಮಾಲಿನ್ಯ ನಿಯಂತ್ರಣ ಹಾಗೂ ಇಂಧನ ವೆಚ್ಚ ತಗ್ಗಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ನಗರದ ವಿವಿಧ ಭಾಗಗಳಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ನೂತನ ಜಿಸಿಸಿ ಮಾದರಿಯ ವಿದ್ಯುತ್ ಚಾಲಿತ ಎಸಿ ಬಸ್‌ಗಳನ್ನು ನೀಡಲಾಗುತ್ತಿದೆ. ಇವುಗಳ ಚಾರ್ಜ್‌ಗಾಗಿ ವಿಮಾನ ನಿಲ್ದಾಣದ ಪಿ7 ಪಾರ್ಕಿಂಗ್‌ನಲ್ಲಿ 240 ಕಿಲೋ ವ್ಯಾಟ್ ಸಾಮರ್ಥ್ಯದ 9 ಚಾರ್ಜರ್ ಅಳವಡಿಸಲಾಗಿದೆ ಎಂದು ತಿಳಿಸಿದರು.

ಸಂಸದ ಕೆ.ಸುಧಾಕರ್ ಮಾತನಾಡಿ, ಬೆಂಗಳೂರಿನ ಸುಸ್ಥಿರ ಮತ್ತು ಹಸಿರು ಸಂಚಾರ ವ್ಯವಸ್ಥೆಗೆ ಬಲನೀಡುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಮಹತ್ವಾಕಾಂಕ್ಷಿ ಯೋಜನೆಯಾದ ಪಿಎಂ ಇ-ಡ್ರೈವ್ ಯೋಜನೆಯಡಿ ಬೆಂಗಳೂರು ಮಹಾನಗರಕ್ಕೆ 4,500 ಬಸ್ ನೀಡಲಾಗಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಂಪರ್ಕ
- ನೂತನವಾಗಿ 84 ವಿದ್ಯುತ್ ಚಾಲಿತ ಬಸ್‌ಗಳು ಸೇರ್ಪಡೆ
- ಸಾಂಕೇತವಾಗಿ ಹತ್ತು ಬಸ್‌ಗಳು ಸೇವೆಗೆ ಮುಕ್ತ

ವಿದ್ಯುತ್ ಚಾಲಿತ ಬಸ್‌ಗಳ ಮೂಲ ಸೌಕರ್ಯಕ್ಕಾಗಿ ಬಿಎಂಟಿಸಿ ₹1.5 ಕೋಟಿ ಹೂಡಿಕೆ ಮಾಡಿದೆ. ಮೊದಲ ಹಂತದಲ್ಲಿ 10 ಬಸ್‌ಗಳು ಆಗಸ್ಟ್ 14ರಿಂದ ಕಾರ್ಯಾಚರಣೆ ಮಾಡುತ್ತಿವೆ

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ



ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ ವಿದ್ಯುತ್ ಚಾಲಿತ ಹವಾನಿಯಂತ್ರಿತ ವಾಯು ವಜ್ರ ಬಸ್‌ಗಳ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಸಂಸದ ಡಾ.ಕೆ.ಸುಧಾಕರ್ ಚಾಲನೆ ನೀಡಿದರು

ಹವಾನಿಯಂತ್ರಿತ ವಿದ್ಯುತ್ ಚಾಲಿತ ವಾಯುವಜ್ರ ಸಾರಿಗೆ ವಿವರ

ಮಾರ್ಗಸಂಖ್ಯೆ	ಎಲ್ಲಿಂದ-ಎಲ್ಲಿಗೆ	ಬಸ್ ಸಂಖ್ಯೆ
ಕೆಐಎ-4	ಎಚ್‌ಎಎಲ್ ಮುಖ್ಯದ್ವಾರ-ಕೆಐಎ	9
ಕೆಐಎ-5	ಬನಶಂಕರಿ ಟಿಟಿಎಂಸಿ-ಕೆಐಎ	7
ಕೆಐಎ-5ಡಿ	ಆರ್ಟ್ ಆಫ್ ಲಿವಿಂಗ್(ರವಿಶಂಕರ ಆಶ್ರಮ) -ಕೆಐಎ	8
ಕೆಐಎ-6	ಕಾಡುಗೋಡಿ ಬಸ್ ನಿಲ್ದಾಣ-ಕೆಐಎ	6
ಕೆಐಎ-6ಎ	ಕಾಡುಗೋಡಿ ಬಸ್ ನಿಲ್ದಾಣ-ಕೆಐಎ	2
ಕೆಐಎ-7	ಎಚ್.ಎಸ್.ಆರ್ ಕೆಐಬಿ ಜಂಕ್ಷನ್-ಕೆಐಎ	3
ಕೆಐಎ-7ಎ	ಎಚ್.ಎಸ್.ಆರ್ ಬಿಡಿಎ ಕಾಂಪ್ಲೆಕ್ಸ್ - ಕೆಐಎ	11
ಕೆಐಎ-9	ಕೆಂಪೇಗೌಡ ಬಸ್ ನಿಲ್ದಾಣ -ಕೆಐಎ	21
ಕೆಐಎ-10	ಮೈಸೂರು ರಸ್ತೆ ಬಸ್ ನಿಲ್ದಾಣ - ಕೆಐಎ	5
ಕೆಐಎ-14	ರಾಯಲ್ ಮೀನಾಕ್ಷಿ ಮಾಲ್- ಕೆಐಎ	8
ಕೆಐಎ-15	ವೈಟ್‌ಫಿಲ್ಡ್ ಟಿಟಿಎಂಸಿ-ಕೆಐಎ	5

ಲಾಭದ ಆಮಿಷ: ₹29 ಲಕ್ಷ ವಂಚನೆ

ತುಮಕೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ, ದುಪ್ಪಟ್ಟು ಲಾಭ ಗಳಿಸಬಹುದು ಎಂಬ ಆಮಿಷಕ್ಕೆ ಒಳಗಾಗಿ ಕುಣಿಗಲ್‌ನ ದೊಡ್ಡಪೇಟೆಯ ಕೆ.ಎಸ್.ಸಂತೋಷ್ ಎಂಬುವರು ₹29.55 ಲಕ್ಷ ಕಳೆದುಕೊಂಡಿದ್ದಾರೆ.

ಆರೋಪಿಗಳು, ಸಂತೋಷ್ ಮೊಬೈಲ್ ಸಂಖ್ಯೆಯನ್ನು ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದರು. ಅವರು ಕಳಿಸಿದ್ದ ಲಿಂಕ್ ಕ್ಲಿಕ್ ಮಾಡಿದ ಸಂತೋಷ್, ವಿವಿಧ ಬ್ಯಾಂಕ್ ಖಾತೆಗಳಿಗೆ ಒಟ್ಟು ₹29 ಲಕ್ಷ ವರ್ಗಾವಣೆ ಮಾಡಿದ್ದಾರೆ. ಈ ಪೈಕಿ ₹30,100 ಮಾತ್ರ ವಾಪಸ್ ಹಾಕಿದ್ದಾರೆ.

ಸಂತೋಷ್ ಹಣ ವಾಪಸ್ ನೀಡುವಂತೆ ಕೇಳಿದಾಗ ಮತ್ತಷ್ಟು ಹೂಡಿಕೆ ಮಾಡಿದರೆ ಮಾತ್ರ ಪೂರ್ತಿ ಹಣ ನೀಡಲಾಗುವುದು ಎಂದಿದ್ದಾರೆ. ಮೋಸ ಹೋಗಿರುವುದು ತಿಳಿದ ನಂತರ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

ಅಂಧರ ಸಬಲೀಕರಣಕ್ಕೆ ನಿಧಿಯ ನಿರೀಕ್ಷೆ

ಬೆಂಗಳೂರು: ಐದು ದಶಕಗಳಿಂದ ಅಂಧರ ಸಬಲೀಕರಣ ಹಾಗೂ ತರಬೇತಿಯಲ್ಲಿ ನಿರತವಾಗಿರುವ ಸರ್ಕಾರೇತರ ಸಂಸ್ಥೆಯಾದ ರಾಷ್ಟ್ರೀಯ ಅಂಧರ ಸಂಘ-ಕರ್ನಾಟಕ (ಎನ್‌ಎಬಿಕೆ), ಜೀವನ್ ಬಿಮಾ ನಗರದಲ್ಲಿರುವ ತನ್ನ ಪ್ರಧಾನ ಕಚೇರಿಯ ಗುತ್ತಿಗೆ ನವೀಕರಿಸಲು ₹ 2 ಕೋಟಿ ನಿಧಿಗೆ ಸಾರ್ವಜನಿಕರ ಬೆಂಬಲ ಕೋರಿದೆ.

1977ರಲ್ಲಿ ಸ್ಥಾಪನೆಯಾದ ಎನ್‌ಎಬಿಕೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 1985 ರಲ್ಲಿ ನಿವೇಶನ ಹಂಚಿಕೆ ಮಾಡಿತ್ತು. 1986ರಲ್ಲಿ ಅಲ್ಲಿ ಕಟ್ಟಡ ತಲೆಯೆತ್ತಿತ್ತು. ಸಂಘದ 30 ವರ್ಷಗಳ ಭೋಗ್ಯ 2015ರಲ್ಲಿ ಅಂತ್ಯಗೊಂಡಿದೆ. ನಿವೇಶನದ ಭೋಗ್ಯ ನವೀಕರಣಕ್ಕೆ ಸಂಬಂಧಿಸಿದಂತೆ ಹಣ ಪಾವತಿಗೆ ನವೆಂಬರ್ 1ರವರೆಗೆ ಕಾಲಾವಕಾಶ ನೀಡಲಾಗಿದ್ದು, ಈ ನವೀಕರಣದಿಂದ 2046ರವರೆಗೆ ಅವಧಿ ವಿಸ್ತರಣೆಯಾಗಲಿದೆ.

'ನವೀಕರಣಕ್ಕೆ ಸಂಬಂಧಿಸಿದಂತೆ ಅವಧಿ ಮುಕ್ತಾಯಗೊಂಡಾಗಿನಿಂದ ಬಿಡಿಎ ಜತೆಗೆ ಮಾತುಕತೆ ನಡೆಸುತ್ತಿದ್ದೇವೆ. ನವೀಕರಣ ವಿಳಂಬಕ್ಕೆ ಸಂಬಂಧಿಸಿದ ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಿ ಪ್ರಾಧಿಕಾರವು ಇತ್ತೀಚೆಗೆ ಆದೇಶವನ್ನೂ ಹೊರಡಿಸಿದೆ. ಕೆಲ ಹಿತೈಷಿಗಳು ಹಾಗೂ ಕಾರ್ಪೊರೇಟ್ ಬೆಂಬಲಿಗರು ಸುಮಾರು ₹ 35 ಲಕ್ಷದಿಂದ ₹ 40 ಲಕ್ಷ ನೀಡಿದ್ದಾರೆ' ಎಂದು ಸಂಸ್ಥೆಯ ಗೌರವ ಉಪಾಧ್ಯಕ್ಷ ಶ್ರೀಕಾಂತ್ ರಾವ್ ತಿಳಿಸಿದರು.

ಎನ್‌ಎಬಿಕೆ ಕೇಂದ್ರವು ಕೌಶಲ ಅಭಿವೃದ್ಧಿಯ ಜತೆಗೆ, ಆಹಾರ ಮತ್ತು ವಸತಿ ಸಹಿತ ಉಚಿತ ತರಬೇತಿಯನ್ನು ನೀಡುತ್ತಿದೆ. ವೃತ್ತಿಪರ ತರಬೇತಿ ನಡೆಸುತ್ತಿದೆ. ಉಡುಪು ತಯಾರಿಕೆ, 'ಲೈಟ್ ಎಂಜಿನಿಯರಿಂಗ್'ನಂತಹ ಕೌಶಲದ ತರಬೇತಿ ಒಳಗೊಂಡಿದೆ

'ಕಂಪ್ಯೂಟರ್ ತರಬೇತಿಯನ್ನೂ ಒದಗಿಸಲಾಗುತ್ತಿದೆ. ಇದರಿಂದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ಲಭ್ಯವಾಗುತ್ತಿದೆ' ಎಂದು ಶ್ರೀಕಾಂತ್‌ರಾವ್ ಹೇಳಿದರು.

ಕಳೆದ ವರ್ಷ ಸುಮಾರು 120 ವಿದ್ಯಾರ್ಥಿಗಳಿಗೆ ಫೌಂಡೇಷನ್ ಕೋರ್ಸ್‌ಗಳಲ್ಲಿ ತರಬೇತಿ ಒದಗಿಸಲಾಗಿದೆ. 95 ಮಂದಿಗೆ ಬೇಸಿಕ್ ಕಂಪ್ಯೂಟರ್ ಕೌಶಲ, 50 ಮಂದಿಗೆ ಮುಂದುವರಿದ ಕಂಪ್ಯೂಟರ್ ಬಳಕೆ ಬಗ್ಗೆ, 50 ಮಂದಿಗೆ ವಿವಿಧ ಉದ್ಯೋಗ ಕೌಶಲ, 75 ಮಂದಿಗೆ ವಾಕ್ ಮತ್ತು ಶ್ರವಣ ತರಬೇತಿ ಒದಗಿಸಲಾಗಿದೆ.

ದೇಣಿಗೆ ನೀಡಲು, ಸಂಪರ್ಕಕ್ಕೆ: 6363891284, ಇಮೇಲ್: outreach@nabkarnataka.org.

'ಕಳತಾವೂರ್ ಮಳಾವ್' ಬಂಜಾರ ಸಿನಿಮಾ ಕಾರ್ಯಕ್ರಮ

'ಬಂಜಾರ ಚಿತ್ರಗಳಿಗೆ ಸಹಾಯಧನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಬಂಜಾರ ಸಂಸ್ಕೃತಿ ಮತ್ತು ಭಾಷೆಯ ಸಿನಿಮಾಗಳಿಗೆ ಪ್ರತ್ಯೇಕವಾಗಿ ಸಹಾಯಧನ ನೀಡಲು ಮುಂದಾಗಬೇಕು' ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ ಆಗ್ರಹಿಸಿದರು.

ಅಕಾಡೆಮಿಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಕಳತಾವೂರ್ ಮಳಾವ್' (ಸಜ್ಜನರ ಸಲ್ಲಾಪ) ಬಂಜಾರ ಸಿನಿಮಾ ವಿಶೇಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಬಂಜಾರ ಭಾಷೆಯ ಚಲನಚಿತ್ರ ಕಲಾವಿದರಿಗಾಗಿ ಸರ್ಕಾರವು ಒಂದು ಪ್ರಶಸ್ತಿಯನ್ನು ಸ್ಥಾಪಿಸಿ, ಬಂಜಾರ ಸಿನಿಮಾ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಬಂಜಾರ ಸಿನಿಮಾ ತಯಾರಿಕೆಗೆ ಸಂಬಂಧಿಸಿದಂತೆ ನಮ್ಮ ಅಕಾಡೆಮಿಯು ಕಥೆ, ನಿರ್ದೇಶನ, ಸಂಕಲನ, ವಸ್ತ್ರ ವಿನ್ಯಾಸ, ಪ್ರಸಾದನ ಮತ್ತು ನಟನೆ ಬಗ್ಗೆ ಮುಂದಿನ ದಿನಗಳಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಿದೆ' ಎಂದು ಹೇಳಿದರು.


'ಸಿನಿಮಾ ಕ್ಷೇತ್ರವನ್ನು ಬಂಜಾರ ಸಮುದಾಯವು ಸರಿಯಾಗಿ ಬಳಸಿಕೊಳ್ಳಬೇಕು. ಬಂಜಾರ, ತುಳು, ಕೊಂಕಣಿ, ಬ್ಯಾರಿ, ಅರೆಭಾಷೆಗಳ ಸಿನಿಮಾಗಳ ಉತ್ಸವಕ್ಕೆ ಸರ್ಕಾರ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಬಂಜಾರ ಚಲನಚಿತ್ರ ನಿರ್ದೇಶಕ ವಿಜೇತ ಕುಮಾರ್ ರಾಠೋಡ್, 'ಬಂಜಾರ ಸಮುದಾಯದಲ್ಲಿ ಹುಟ್ಟಿರುವ ನನಗೆ, ಈ ಸಂಸ್ಕೃತಿಯನ್ನು ಇತರರಿಗೂ ತಿಳಿಸಬೇಕೆಂಬ ಬಯಕೆ ಚಿಕ್ಕಂದಿನಲ್ಲಿಯೇ ಚಿಗುರಿತು. ಆದ್ದರಿಂದ ಬಂಜಾರರ ಆಚಾರ-ವಿಚಾರಗಳನ್ನು ಒಳಗೊಂಡು ಕಸೂತಿ ಬಗ್ಗೆ ಸಾಕ್ಷ್ಯಚಿತ್ರ ನಿರ್ದೇಶಿಸಿದೆ' ಎಂದು ಸ್ಮರಿಸಿಕೊಂಡರು.

ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಚಲನಚಿತ್ರ ನಿರ್ದೇಶಕರಾದ ಹೇಮಂತ್‌ಕುಮಾರ್, ಪಿ. ಉಮೇಶ್ ನಾಯ್ಕ್, ಕುಮಾರ ನಾಯ್ಕ್, ಕಲಾವಿದ ರವಿ ಲಮಾಣಿ, ಅಕಾಡೆಮಿ ಸದಸ್ಯರಾದ ಆರ್.ಬಿ. ನಾಯಕ್, ಉತ್ತಮ್ ಕೆ.ಎಚ್. ಉಪಸ್ಥಿತರಿದ್ದರು.



ಎ.ಆರ್.ಗೋವಿಂದಸ್ವಾಮಿ ಮಾತನಾಡಿದರು. ಕೃಷ್ಣೇಗೌಡ, ಹೇಮಂತ್ ಕುಮಾರ್, ವಿಜೇತ ಕುಮಾರ್ ರಾಠೋಡ್, ಪಿ. ಉಮೇಶ್ ನಾಯ್ಕ್, ಕುಮಾರ ನಾಯ್ಕ್, ರವಿ ಲಮಾಣಿ, ಆರ್.ಬಿ. ನಾಯಕ್, ಉತ್ತಮ್ ಕೆ.ಎಚ್. ಉಪಸ್ಥಿತರಿದ್ದರು



ಒಡಿಶಾದ ಭುವನೇಶ್ವರದಲ್ಲಿ ಇದೇ 10ರಂದು ನಡೆದ ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಕೂಟದ ಮಹಿಳೆಯರ ವಿಭಾಗದ 400 ಮೀಟರ್ ಓಟದಲ್ಲಿ ಚಿನ್ನದ ಪದಕ ಗಳಿಸಿದ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಗೌಡೇನಹಳ್ಳಿ ಗ್ರಾಮದ ವಿಜಯಕುಮಾರಿ ಜಿ.ಕೆ. ಅವರಿಗೆ ₹10 ಲಕ್ಷ ಪ್ರೋತ್ಸಾಧನ ಘೋಷಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧದಲ್ಲಿ ಗುರುವಾರ ₹5 ಲಕ್ಷದ ಚೆಕ್ ನೀಡಿ ಸನ್ಮಾನಿಸಿದರು.ಮುಂದಿನ ವರ್ಷ ₹5 ಲಕ್ಷ ನೀಡಲಾಗುವುದು ಎಂದೂ ತಿಳಿಸಿದರು. ಶಾಸಕ ದಿನೇಶ್ ಗೂಳಿಗೌಡ ಉಪಸ್ಥಿತರಿದ್ದರು.

ಬಣಕಲ್ ಠಾಣೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ವಿವಾಹಿತ ಮಹಿಳೆಯೊಂದಿಗೆ ಪರಾರಿಯಾದ ಅನ್ಯಕೋಮಿನ ಯುವಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹಿಂದುತ್ವಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಬಣಕಲ್ ಪೊಲೀಸ್ ಠಾಣೆ ಮುಂದೆ ಗುರುವಾರ ಪ್ರತಿಭಟಿಸಿದರು.

'ತಾಲ್ಲೂಕಿನಲ್ಲಿ ಲವ್ ಜಿಹಾದ್ ನಡೆಯುತ್ತಿದ್ದು, ವಿವಾಹಿತ ಮಹಿಳೆಯನ್ನು ಕರೆದೊಯ್ದಿರುವ ಯುವಕನ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಗ್ರಾಮದಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಗಿದ್ದು, ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ.

ನಗರದಲ್ಲಿ ಇಂದು

ಸ್ವಾತಂತ್ರ್ಯ ದಿನಾಚರಣೆ ವಿಶೇಷ

ಆಯೋಜನೆ: ಕನ್ನಡ ಯುವಜನ ಸಂಘ, ಧ್ವಜಾರೋಹಣ: ಸಿ. ಸೋಮಶೇಖರ್, ಅತಿಥಿ: ನಂದಿನಿ ರೆಡ್ಡಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ, ಬೆಳಿಗ್ಗೆ 7.30

ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು, ಶೇಷಾದ್ರಿಪುರಂ ಕಾಲೇಜಿನ ಆವರಣ, ಶೇಷಾದ್ರಿಪುರ, ಧ್ವಜಾರೋಹಣ: ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿ: ವೂಡೇ ಪಿ. ಕೃಷ್ಣ, ಬೆಳಿಗ್ಗೆ 7.30



ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ

ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಆವರಣ, ಚಾಮರಾಜಪೇಟೆ, ಧ್ವಜಾರೋಹಣ: ಮಹೇಶ ಜೋಶಿ, ಉಪಸ್ಥಿತಿ: ಬಿ.ಎಂ. ಪಟೇಲ್‌ಪಾಂಡು, ಡಿ.ಆರ್. ವಿಜಯ ಕುಮಾರ್, ಬೆಳಿಗ್ಗೆ 7.30

ಆಯೋಜನೆ: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಧ್ವಜಾರೋಹಣ: ಅತಿಥಿಗಳು: ಪಿ.ವಿ. ಹರಿ, ಎ.ಎಂ. ನಾಗಲಕ್ಷ್ಮಿ, ಕೆ.ಸಿ. ಜಗನ್ನಾಥ ರೆಡ್ಡಿ, ಬಿ. ಗೋವಿಂದರಾಜು, ಎಚ್‌.ಎ. ಪುಲಕೇಶಿ, ಸ್ಥಳ: ಚಿಕ್ಕಣ್ಣ ಬಡಾವಣೆ, ಹೆಣ್ಣೂರು, ಬೆಳಿಗ್ಗೆ 8

ಆಯೋಜನೆ ಮತ್ತು ಸ್ಥಳ: ಶಾರದಾ ವಿದ್ಯಾಪೀಠ, ಬ್ಯಾಟರಾಯನಪುರ, ಮೈಸೂರು ರಸ್ತೆ, ಧ್ವಜಾರೋಹಣ: ಬಿ.ಎಂ. ಪಟೇಲ್‌ಪಾಂಡು, ಅತಿಥಿ: ರಮೇಶ್ ಬೆಲ್ಲಂಕೊಂಡ, ಅಧ್ಯಕ್ಷತೆ: ಎನ್. ಕಾಮರಾಜು, ಬೆಳಿಗ್ಗೆ 8

ಆಯೋಜನೆ ಮತ್ತು ಸ್ಥಳ: ಪಟೇಲ್‌ಗುಳ್ಳಪ್ಪ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆ, ಪಟೇಲ್‌ಗುಳ್ಳಪ್ಪ ಪದವಿಪೂರ್ವ, ಪದವಿ ಕಾಲೇಜು, ಆವಲಹಳ್ಳಿ, ಧ್ವಜಾರೋಹಣ: ಎಂ. ಲಕ್ಷ್ಮೀನಾರಾಯಣ್, ಅತಿಥಿಗಳು: ರಮೇಶ್ ರಾಜನಹಳ್ಳಿ, ಬಿ.ಆರ್. ಚಂದ್ರಶೇಖರ್, ವಿಜಯರಾಜ್ ಎಸ್., ಕಿರಣ್ ಗಾಳ, ಅಧ್ಯಕ್ಷತೆ: ಬಿ.ಎಂ. ಪಟೇಲ್‌ಪಾಂಡು, ಬೆಳಿಗ್ಗೆ 8.30

ಸ್ವಾತಂತ್ರ್ಯೋತ್ಸವ: ಧ್ವಜಾರೋಹಣ: ಸಿದ್ದರಾಮಯ್ಯ, ಸ್ಥಳ: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನ, ಮಹಾತ್ಮ ಗಾಂಧಿ ರಸ್ತೆ, ಬೆಳಿಗ್ಗೆ 9

ಆಯೋಜನೆ ಮತ್ತು ಸ್ಥಳ: ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೇಂದ್ರ ಕಚೇರಿಯ ಆವರಣ, ಧ್ವಜಾರೋಹಣ: ಕೆ. ಗಂಗಪ್ಪಗೌಡ, ಉಪಸ್ಥಿತಿ: ಬಿ.ವಿ. ರಾಮಲತಾ, ಮೋಹನ್ ಕುಮಾರ್ ಕೊಂಡಜ್ಜಿ, ಬೆಳಿಗ್ಗೆ 9

ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಬೆಂಗಳೂರು ಪ್ರಾದೇಶಿಕ ಕೇಂದ್ರ, ದೇಶಭಕ್ತಿ ಗೀತೆಗಳು: ನಾಗಚಂದ್ರಿಕಾ ಭಟ್ ಮತ್ತು ತಂಡ, ಬೆಳಿಗ್ಗೆ 9

ಆಯೋಜನೆ: ಅಖಿಲ ಕರ್ನಾಟಕ ಮಹಮದೀಯರ ಕನ್ನಡ ವೇದಿಕೆ, ಧ್ವಜಾರೋಹಣ: ಮುರಳೀಧರ ಲಿ. ದಂಡಗಿ, ಅತಿಥಿಗಳು: ಖಾಸೀಂ ಮಲ್ಲಿಗೆಮಡು, ಎಸ್. ಸೋಮಶೇಖರ, ಎಡ್ವರ್ಡ್, ಸಮೀವುಲ್ಲಾ ಖಾನ್, ಷಹಜಹಾನ್, ಸ್ಥಳ: ಮತ್ತೀಕೆರೆ ಮಸ್ಜಿದ್–ಎ–ತಾಹ, ಎಂ.ಎಸ್.ಆರ್. ರಸ್ತೆ, ಮತ್ತೀಕೆರೆ, ಬೆಳಿಗ್ಗೆ 9

ಆಯೋಜನೆ: ಬೆಂಗಳೂರು ವಕೀಲರ ಸಂಘ, ಅತಿಥಿಗಳು: ಕೆ.ಎಸ್. ಮುದ್ಗಲ್, ಜೆ.ಎಂ. ಖಾಜಿ, ಧ್ವಜಾರೋಹಣ: ವಿವೇಕ್ ಸುಬ್ಬಾರೆಡ್ಡಿ, ಸ್ಥಳ: ಕರ್ನಾಟಕ ಹೈಕೋರ್ಟ್ ಆವರಣ, ಬೆಳಿಗ್ಗೆ 9

ಆಯೋಜನೆ: ರಾಜರಾಜೇಶ್ವರಿನಗರ ಕಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಸ್ಥಳ: ಟಿ.ಎನ್. ಬಾಲಕೃಷ್ಣ ಬಯಲು ರಂಗಮಂದಿರ, ರಾಜರಾಜೇಶ್ವರಿನಗರ, ಬೆಳಿಗ್ಗೆ 9

ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡನಗರ, ಧ್ವಜಾರೋಹಣ: ಡಿ.ಎಲ್. ಮಹೇಶ್ವರ್, ಅಧ್ಯಕ್ಷತೆ: ಎಚ್. ಶರತ್‌ಚಂದ್ರ, ಬೆಳಿಗ್ಗೆ 9.30

ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬಿಬಿಎಂಪಿ ಪಬ್ಲಿಕ್ ಶಾಲೆ, ಗೌತಮನಗರ, ಶ್ರೀರಾಮಪುರ, ಅತಿಥಿಗಳು: ಕೆ. ಅಜಿತ್ ಕುಮಾರ್ ರೈ, ಘನಶ್ಯಾಮ್ ಅಗರ್ವಾಲ್, ಸುಪ್ರಿಯಾ ಪ್ರದೀಪ್ ಕೆ., ಪಿಯೂಷ್ ಜೈನ್, ಬೆಳಿಗ್ಗೆ 9.30

ಆಯೋಜನೆ: ರಕ್ಷಣಾ ಸಚಿವಾಲಯ, ಮಿಲಿಟರಿ ಬ್ಯಾಂಡ್: ಮದ್ರಾಸ್ ಎಂಜಿನಿಯರಿಂಗ್ ತಂಡ, ಸ್ಥಳ: ಲಾಲ್‌ಬಾಗ್, ಸಂಜೆ 4

'ಆದಿನಾರಾಯಣ ದರ್ಶನ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಚಿತ್ಕಲಾ ಕೆ. ತುಂಗ, ಮದ್ದಳೆ: ಚಿನ್ಮಯ ಹೆಗಡೆ ಅಂಬಾರಗೋಡ್ಲು, ಚಂಡೆ: ಮಿತ್ರ ಮಧ್ಯಸ್ಥ, ಮುಮ್ಮೇಳ: ಶ್ರೀಧರ ಡಿ.ಎಸ್., ವಿ. ಪ್ರಸನ್ನ ಭಟ್ ಮಾಗೋಡು, ಅಂಬರೀಷ್ ಭಟ್, ರವಿ ಮಡೋಡಿ, ಆದಿತ್ಯ ಹಲ್ಕೋಡು, ಆಯೋಜನೆ ಮತ್ತು ಸ್ಥಳ: ಯಕ್ಷಕಲಾ ಅಕಾಡೆಮಿ, ನಾಗರಬಾವಿ, ಸಂಜೆ 4.30

ಸಾಂಸ್ಕೃತಿಕ ಕಾರ್ಯಕ್ರಮಗಳು: ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಇತರೆ ಕಾರ್ಯಕ್ರಮಗಳು

ನಾಗತಿಹಳ್ಳಿ ಚಂದ್ರಶೇಖರ ಅಕ್ಷರ ಮೀಮಾಂಸೆ: ಉದ್ಘಾಟನೆ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, 'ಒಳಚರಂಡಿ' ಕಥಾಸಂಗ್ರಹ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, 'ನಾಗತಿಹಳ್ಳಿ' ಸಾಹಿತ್ಯ ಗೋಷ್ಠಿ: 'ನಾಗತಿಹಳ್ಳಿ ಚಂದ್ರಶೇಖರ': ಎಸ್. ದಿವಾಕರ್, ಕೆ.ಎನ್. ಗಣೇಶಯ್ಯ, 'ಕಾಂದಬರಿಯ ಜಾಡು ಹಿಡಿದು': ಎಂ.ಆರ್. ದತ್ತಾತ್ರಿ, 'ಅಂಕಣದ ಅಂಗಣದಲ್ಲಿ': ಕುಸುಮಾ ಆಯರಹಳ್ಳಿ, 'ಮೇಷ್ಟರ ಜತೆ ದೇಶಾಟನೆ': ಮೇಘನಾ ಸುಧೀಂದ್ರ, ಉಪಸ್ಥಿತಿ: ನಾಗತಿಹಳ್ಳಿ ಚಂದ್ರಶೇಖರ, ಆಶಯ ನುಡಿ: ಜೋಗಿ, ಪ್ರಾಸ್ತಾವಿಕ ನುಡಿ: ವೀರಕಪುತ್ರ ಶ್ರೀನಿವಾಸ್, ಆಯೋಜನೆ: ವೀರಲೋಕ, ಅಭಿವ್ಯಕ್ತಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ನಾಗತಿಹಳ್ಳಿ ಚಂದ್ರಶೇಖರ್

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ: ರಾಯಣ್ಣನ ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ತುಷಾರ್ ಗಿರಿನಾಥ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ನಾರಾಯಣ ಗೌಡ, ಡಾ. ನಾಗಲಕ್ಷ್ಮಿ ಚೌಧರಿ, ಜೆ. ಹುಚ್ಚಪ್ಪ, ಎಂ. ಶಿವರಾಜು, ಮಹೇಶ್ವರ್ ರಾವ್ ಎಂ., ನವೀನ್ ಕುಮಾರ್ ರಾಜು, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಆವರಣ, ದೇವರಾಜ ಅರಸು ವೃತ್ತ, ಬೆಳಿಗ್ಗೆ 11

'7 ಶೇಡ್ಸ್' ಛಾಯಾಚಿತ್ರಗಳ ಪ್ರದರ್ಶನ: ಸ್ಥಳ: ರಂಗೋಲಿ ಮೆಟ್ರೊ ಕಲಾ ಕೇಂದ್ರ, ಎಂ.ಜಿ. ರಸ್ತೆ, ಬೆಳಿಗ್ಗೆ 11

ಶ್ರೀಕೃಷ್ಣ ಜನ್ಮಾಷ್ಟಮಿ: ಆಯೋಜನೆ: ಇಸ್ಕಾನ್ ಸೌತ್ ಬೆಂಗಳೂರು, ರಾಜರಾಜೇಶ್ವರಿನಗರ, ಸ್ಥಳ: ವೈಟ್ ಪರ್ಲ್ ಕನ್ವೆನ್ಷನ್ ಹಾಲ್, ಆರ್.ಆರ್. ನಗರ, ಸಂಜೆ 4ರಿಂದ

ರಂಗ ಪ್ರೇಮಾ 'ಪ್ರೇಮ ಕಾರಂತ–90'

ಗುರು ನಮನ: ಆಯೋಜನೆ: ಬೆನಕ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕಥಕ್ ಪರಂಪರಾ–ಪವನೀ ಕಲ್ಪಕಲ್ಪ: ಆಯೋಜನೆ: ನಾದಂ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

'ಕಾಯ' ನಾಟಕ ಪ್ರದರ್ಶನ: ನಿರ್ದೇಶನ ವೀಣಾ ಬಸವರಾಜಯ್ಯ, ಸಂಗೀತ: ಮುರಳಿ ಮನೋಹರ ಗೌಡ, ಅಭಿನಯ: ಲಕ್ಷ್ಮೀ ಚಂದ್ರಶೇಖರ್, ಹರ್ಷಿತಾ ಭಟ್, ಕಾವ್ಯ ಶ್ರೀನಿವಾಸನ್, ಅನಘಾ ಕಶ್ಯಪ್, ಶ್ರೀಪ್ರಿಯಾ, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ದೇಶದಲ್ಲೇ ಅತಿದೊಡ್ಡ ಸುರಂಗ ರಸ್ತೆ ನಿರ್ಮಾಣ’

ಬೆಂಗಳೂರಿನಲ್ಲಿ ಸಾಕ್ಷಿ ಗುಡ್ಡೆ ಬಿಟ್ಟುಹೋಗುವ ಬಯಕೆ ಇದೆ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ


ವಿಧಾನಮಂಡಲ ಅಧಿವೇಶನ

ಬೆಂಗಳೂರು: ‘ಬೆಂಗಳೂರಿನಲ್ಲಿ ನಿರ್ಮಾಣವಾಗುವ ಅವಳಿ ಸುರಂಗ ರಸ್ತೆ ದೇಶದಲ್ಲೇ ಅತಿದೊಡ್ಡದ್ದು ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸಿ.ಟಿ. ರವಿ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ಮೂರು + ಒಂದು ವಾಹನ ಸಂಚರಿಸಲು ಅವಕಾಶವಿರುವ 14 ಮೀಟರ್ ಅಗಲದ ಸುರಂಗ ರಸ್ತೆ ಇದು. ನೀವು ಅಟಲ್ ಸುರಂಗ ಹಾಗೂ ಇತರೆ ಚಿಕ್ಕ ಸುರಂಗಗಳಿಗೆ ಹೋಲಿಕೆ ಮಾಡಿಕೊಳ್ಳುವುದು ಬೇಡ’ ಎಂದರು.

‘ಬೇರೆ ಸುರಂಗ ರಸ್ತೆಗೆ ತಗುಲಿರುವ ವೆಚ್ಚಕ್ಕೂ ಇಲ್ಲಿನ ಸುರಂಗ ರಸ್ತೆಗೂ ವೆಚ್ಚ ದುಪ್ಪಟ್ಟು ಆಗಿದೆ ಹಾಗೂ ಕಪ್ಪುಪಟ್ಟಿಗೆ ಸೇರಿದ ಸಂಸ್ಥೆಗಳು ಯಾಕೆ ಡಿಪಿಆರ್ ಮಾಡಿವೆ? ಇದು ಮತ್ತೊಂದು ನೈಸ್ ರಸ್ತೆ ಆಗಬಾರದು’ ಎಂದು ಸಿ.ಟಿ. ರವಿ ಹೇಳಿದರು.

‘ಕಪ್ಪುಪಟ್ಟಿಗೆ ಸೇರಿವೆ ಎಂದು ಹೇಳುತ್ತಿರುವ ಸಂಸ್ಥೆಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿವೆ. ಇನ್ನು ಡಿಪಿಆರ್‌ನಲ್ಲಿ ಕಟ್ ಅಂಡ್ ಪೇಸ್ಟ್ ಮಾಡಿರುವ ವಿಚಾರ ನಿಜ. ನಾವು ಎಚ್ಚೆತ್ತುಕೊಂಡು, ಸಂಸ್ಥೆಗೆ ದಂಡ ವಿಧಿಸಲಾಗಿದೆ’ ಎಂದರು.



‘ಅವಳಿ ಭೂಗತ ಸುರಂಗ ರಸ್ತೆ’ಯ ಮಾದರಿ

‘ನಮ್ಮ ಸುರಂಗ ರಸ್ತೆಗೆ ಪ್ರತಿ ಕಿ.ಮೀಗೆ ₹770 ಕೋಟಿ ಆಗಲಿದೆ. ಗಾಯ್ ಮುಖ ಸುರಂಗ, ಆರೆಂಜ್ ಗೇಟ್ ಸುರಂಗನಲ್ಲಿ ಪ್ರತಿ ಕಿ.ಮೀಗೆ ₹1,316 ಕೋಟಿ ವೆಚ್ಚ ಮಾಡಲಾಗಿದೆ. ನಮ್ಮ ಸುರಂಗ ರಸ್ತೆ ದೇಶದ ಇತರೆ ಸುರಂಗ ರಸ್ತೆಗಳ ವೆಚ್ಚಕ್ಕಿಂತ ಶೇ 60ರಿಂದ ಶೇ 70ರಷ್ಟು ಕಡಿಮೆ ಇದೆ’ ಎಂದು ಶಿವಕುಮಾರ್ ಮಾಹಿತಿ ನೀಡಿದರು.

ಮೆಟ್ರೊ ರೀತಿ ಈ ಸುರಂಗ ರಸ್ತೆ, ರಸ್ತೆ ಕೆಳಗೆ ಹೋಗುವುದಿಲ್ಲ, ಕಟ್ಟಡಗಳ ಕೆಳಗೂ ಸಾಗುತ್ತದೆ. ಹೀಗಾಗಿ ಇದನ್ನು ನಿರ್ಮಿಸುವಾಗ ಸುರಕ್ಷತಾ ಕ್ರಮ ವಹಿಸಬೇಕಾಗುತ್ತದೆ. ಮುಖ್ಯಮಂತ್ರಿಯವರು ಜಾಗತಿಕ ಟೆಂಡರ್ ಕರೆದು ಯೋಜನೆ ಮಾಡಲು ಸೂಚಿಸಿದ್ದರು. ಅದರಂತೆ, ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ (ಬೂಟ್) ಆಧಾರದಲ್ಲಿ ಟೆಂಡರ್ ಕರೆಯಲಾಗಿದೆ. ನಾವು ಶೇ 40ರಷ್ಟು, ಗುತ್ತಿಗೆಯವರು ಶೇ 60ರಷ್ಟು ವೆಚ್ಚ ಭರಿಸುತ್ತಾರೆ. ನಂತರ ಶುಲ್ಕ ವಿಧಿಸಲಾಗುವುದು’ ಎಂದು ತಿಳಿಸಿದರು.

‘ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್‌ವರೆಗೂ ಪ್ರಾಯೋಗಿಕವಾಗಿ ಡಬಲ್ ಡೆಕರ್ ಯೋಜನೆ ಮಾಡಲಾಗಿದೆ. ಪ್ರಧಾನ ಮಂತ್ರಿಯವರೂ ಇದನ್ನು ಮೆಚ್ಚಿ ಅಭಿನಂದನೆ ಸಲ್ಲಿಸಿದ್ದಾರೆ. 44 ಕಿ.ಮೀ. ಉದ್ದದ ಡಬಲ್ ಡೆಕರ್, 113 ಕಿ.ಮೀ. ಉದ್ದದಷ್ಟು ಎಲಿವೇಟೆಡ್ ಕಾರಿಡಾರ್ ಮಾಡಲು ಡಿಪಿಆರ್ ಸಿದ್ಧಪಡಿಸಲಾಗಿದ್ದು, ಟೆಂಡರ್ ಕರೆಯಲಾಗುತ್ತಿದೆ’ ಎಂದು ಹೇಳಿದರು.

‘ನೀವು ಅಧಿಕಾರದಲ್ಲಿದ್ದಾಗ ಅನೇಕ ಯೋಜನೆಗಳನ್ನು ಮಾಡಿದ್ದೀರಿ. ಅವುಗಳ ಉದ್ದೇಶ ಹಣ ಮಾಡುವುದಾ? ಜನ ಸೇವೆ ದೃಷ್ಟಿಯಿಂದ ನೀವು ಹೇಗೆ ಯೋಜನೆ ಮಾಡಿದ್ದೀರೋ, ನಾವು ಕೂಡ ಅದೇ ರೀತಿ ಈ ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್, ಡಬಲ್ ಡೆಕರ್, ಬಫರ್ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಇಲ್ಲಿ ವ್ಯವಹಾರ ನೋಡುತ್ತಿಲ್ಲ. ಬೆಂಗಳೂರಿನ ಮೇಲೆ ಬಹಳ ಆಸಕ್ತಿ ಹೊಂದಿದ್ದು, ನಗರದಲ್ಲಿ ನನ್ನದೇ ಆದ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು ಎಂದು ತೀರ್ಮಾನಿಸಿದ್ದೇನೆ. ‘ನೀವು ಈ ಯೋಜನೆಯಲ್ಲಿ ಮುಂದುವರಿಯಿರಿ, ನಿಮ್ಮ ಪ್ರಸ್ತಾವವನ್ನು ಪರಿಶೀಲನೆ ಮಾಡುತ್ತೇನೆ’ ಎಂದು ನರೇಂದ್ರ ಮೋದಿ ಭರವಸೆ ನೀಡಿದ್ದಾರೆ’ ಎಂದು ತಿಳಿಸಿದರು.

‘ಬಿಡಿಎಗೆ ವರ್ಷಕ್ಕೆ ₹1 ಸಾವಿರ ಕೋಟಿ ನಷ್ಟ’

‘ಶಿವರಾಮ ಕಾರಂತ ಬಡಾವಣೆ ಸುಪ್ರೀಂ ಕೋರ್ಟ್ ಮಾರ್ಗದರ್ಶನದಲ್ಲಿ ನಿರ್ಮಾಣವಾಗುತ್ತಿದ್ದು, ಬಿಡಿಎ ಸುಮಾರು ₹7 ಸಾವಿರ ಕೋಟಿ ಹೂಡಿಕೆ ಮಾಡಿದೆ. ಈವರೆಗೆ ಒಂದು ನಿವೇಶನ ನೀಡಲು ಸಾಧ್ಯವಾಗಿಲ್ಲ. ಹೀಗಾಗಿ ಬಿಡಿಎಗೆ ಪ್ರತಿ ವರ್ಷ ₹1 ಸಾವಿರ ಕೋಟಿ ನಷ್ಟವಾಗುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನಿವೇಶನ ನೀಡಲು ಅರ್ಜಿ ಸಲ್ಲಿಕೆಗೂ ಹೈಕೋರ್ಟ್ ತಡೆ ನೀಡಿರುವುದರಿಂದ ಸಮಸ್ಯೆಯಾಗಿದೆ. ಅದನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಭೂಸ್ವಾಧೀನದ ಅಧಿಸೂಚನೆಯಾಗಿ 15 ವರ್ಷವಾಗಿದ್ದು, ರೈತರಿಗೆ ಹಣ ಪಾವತಿಸಲು, ನಿವೇಶನ ನೀಡಲು ಸಾಧ್ಯವಾಗುತ್ತಿಲ್ಲ. ಯಾವುದಾದರೂ ಪ್ರಕ್ರಿಯೆಯಲ್ಲಿ ಸಮಸ್ಯೆ ಇದ್ದರೆ ದೂರು ಕೊಡಿ, ಪರಿಹರಿಸೋಣ’ ಎಂದು ಜವರಾಯಿಗೌಡ ಅವರಿಗೆ ತಿಳಿಸಿದರು.

‘52.60 ಕಿ.ಮೀ ಉದ್ದದ ಪಿಆರ್‌ಆರ್–2 ರಸ್ತೆ ನಿರ್ಮಿಸ ಲಾಗುತ್ತಿದ್ದು, 10.77 ಕಿ.ಮೀ. ಕಾಮಗಾರಿ ಮುಗಿದಿದೆ. ಪ್ರಾಥಮಿಕ ಅಧಿಸೂಚನೆ 2005ರ ಡಿಸೆಂಬರ್ 12ರಂದು ಆಗಿದ್ದು, ಡಿನೋಟಿಫೈ ಮಾಡುವ ಪ್ರಶ್ನೆಯೇ ಇಲ್ಲ. ಡಿನೋಟಿಫೈ ಮಾಡಿ ಜೈಲಿಗೆ ಹೋಗಲು ಸಿದ್ಧನಿಲ್ಲ. ರೈತರೊಂದಿಗೆ ಸಮಾಲೋಚನೆ ನಡೆಸಿ, ಪರಿಹಾರ ನೀಡಿ ರಸ್ತೆ ನಿರ್ಮಿಸಲಾಗುತ್ತದೆ’ ಎಂದು ಎಚ್.ಎಸ್. ಗೋಪಿನಾಥ್ ಅವರ ಪ್ರಶ್ನೆಗೆ ಶಿವಕುಮಾರ್ ಉತ್ತರಿಸಿದರು.

‘ದೂರು ಕೊಟ್ಟರೆ ಬಿಡಿಎ ಅಧಿಕಾರಿ ಅಮಾನತು’

‘ಕೆಂಪೇಗೌಡ ಬಡಾವಣೆಯಲ್ಲಿ ಯಾವ ಅಧಿಕಾರಿ ಹಣ ಪಡೆದಿದ್ದಾನೆ ಹೇಳಿ, ಹೊತ್ತು ಮುಳುಗುವುದರಲ್ಲಿ ಅಮಾನತು ಮಾಡುತ್ತೇನೆ’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಜವರಾಯಿಗೌಡ ಅವರು, ‘ರೈತರು ತಮ್ಮ ಜಮೀನು ಉಳಿಸಿಕೊಳ್ಳಲು ಎಕರೆಗೆ ಹತ್ತು ಗುಂಟೆ ಕಳೆದುಕೊಳ್ಳುತ್ತಿದ್ದಾರೆ. ಬಿಡಿಎ ಅಧಿಕಾರಿಗಳು ಕೋಟ್ಯಂತರ ಹಣ ಪಡೆಯುತ್ತಿದ್ದಾರೆ’ ಎಂದು ಆರೋಪಿಸಿದರು.

‘ಜವರೇಗೌಡರು ಅನೇಕ ಆರೋಪ ಮಾಡಿದ್ದಾರೆ. ಇಂತಹ ಪ್ರಕರಣ ನಡೆಯುತ್ತಿದ್ದರೆ, ಯಾರು, ಯಾರಿಗೆ ಹಣ ನೀಡಿದ್ದಾರೆ ಎಂದು ರೈತರಿಂದ ದೂರು ಕೊಡಿಸಿ. ಅಂತಹ ಅಧಿಕಾರಿಯನ್ನು ಅಮಾನತು ಮಾಡುತ್ತೇನೆ. ಆಮೇಲೆ ತನಿಖೆ ನಡೆಸಲಾಗುವುದು. ನನ್ನ ಜೊತೆ ಒಂದು ಕಾಫಿ ಕುಡಿದು ಮಾಹಿತಿ ಕೊಡಿ, ರೈತರ ಸಮಸ್ಯೆ ಬಗೆಹರಿಸೋಣ’ ಎಂದರು.

ಸಿವಿಲ್ ಸರ್ವೀಸ್ ಬೋರ್ಡ್ ಶೀಘ್ರ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸಿವಿಲ್ ಸರ್ವೀಸ್ ಬೋರ್ಡ್ ರಚನೆ ಬಗ್ಗೆ ಮುಂದಿನ ಸಚಿವ ಸಂಪುಟದಲ್ಲಿ ಚರ್ಚೆ ನಡೆಸಿ, ಶೀಘ್ರವೇ ಅನುಷ್ಠಾನ ಮಾಡಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್ ಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 2024ರ ಸೆಪ್ಟೆಂಬರ್ 26ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಸಿವಿಲ್ ಸರ್ವೀಸ್ ಬೋರ್ಡ್ ರಚಿಸುವುದಕ್ಕಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ ಎಂದರು.

ಉಪ ಸಮಿತಿಯು ಹಲವು ಸಭೆಗಳನ್ನು ನಡೆಸಿ, ಸುದೀರ್ಘವಾಗಿ ಚರ್ಚಿಸಿ ವರದಿ ನೀಡಿದೆ. ಅವರ ಶಿಫಾರಸಿನ ವರದಿಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

‘ಸುಪ್ರೀಂ ಕೋರ್ಟ್ ಆದೇಶದಂತೆ ಇದನ್ನು ಕೂಡಲೇ ಸ್ಥಾಪಿಸಬೇಕು’ ಎಂದು ಪ್ರತಾಪ್ ಸಿಂಹ ನಾಯಕ್ ಒತ್ತಾಯಿಸಿದರು. ‘ನಿಮ್ಮ ಗುಜರಾತ್‌ನಲ್ಲೂ ಇನ್ನೂ ಸ್ಥಾಪಿಸಿಲ್ಲ. ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶದವರೂ ಸ್ಥಾಪಿಸಿಲ್ಲ. ನಾವೇ, ರಚನೆಯ ಪ್ರಕ್ರಿಯೆಯಲ್ಲಿ ಇಷ್ಟೊಂದು ಮುಂದೆ ಇದ್ದೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ದೇಶದಲ್ಲಿ ಮೊದಲು ಸಿವಿಲ್ ಸರ್ವೀಸ್ ಬೋರ್ಡ್ ಸ್ಥಾಪನೆ ಮಾಡಿ ದೇಶಕ್ಕೇ ಮಾದರಿಯಾಗಬೇಕು’ ಎಂದು ಸಿ.ಟಿ. ರವಿ, ಪ್ರತಾಪ್ ಸಿಂಹ ನಾಯಕ್ ಸಲಹೆ ನೀಡಿದರು.

ಜಿಎಸ್‌ಟಿ ಸೋರಿಕೆ ತಡೆಗೆ ಕಟ್ಟುನಿಟ್ಟಿನ ಕ್ರಮ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೋರಿಕೆ ವ್ಯಾಪಕವಾಗಿದ್ದು, ಅದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ.

ಇದಕ್ಕೆ ಪೂರಕವಾಗಿ ‘ಕರ್ನಾಟಕ ಸರಕು ಸೇವೆಗಳ ತಿದ್ದುಪಡಿ ಮಸೂದೆ-2025’ ಕ್ಕೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಸೂದೆಯನ್ನು ಮಂಡಿಸಿದರು.

‘ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್’ ಅನ್ನು ಕೆಲವರು ಅಕ್ರಮವಾಗಿ ಪಡೆದುಕೊಳ್ಳುತ್ತಿದ್ದಾರೆ. ತಂಬಾಕು–ಅಡಿಕೆ ಆಧಾರಿತ ಪದಾರ್ಥಗಳಲ್ಲಿ (ಗುಟ್ಕಾ, ಪಾನ್ ಮಸಾಲಾ) ತೆರಿಗೆ ಸೋರಿಕೆ ಆಗುತ್ತಿದೆ. ಇದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಆದಾಯ ತೆರಿಗೆ ರೀಫಂಡ್ ಹಗರಣಗಳು ದೊಡ್ಡ ಪ್ರಮಾಣದಲ್ಲಿ ಮಾಧ್ಯಮಗಳಲ್ಲಿ ವರದಿಯಾಗುತ್ತಿರುತ್ತವೆ. ಅವುಗಳನ್ನು ವ್ಯವಸ್ಥೆಯ ಮೂಲಕವೇ ತಡೆಗಟ್ಟುವ ಪ್ರಯತ್ನ ಮಾಡಬೇಕು. ಒಬ್ಬೊಬ್ಬರನ್ನೇ ಹುಡುಕಿಕೊಂಡು ಹೋದರೆ ಅವರನ್ನು ಹಿಡಿಯುವುದು ಕಷ್ಟ. ಆದ್ದರಿಂದ, ಅವರು ಯಾವ ರೀತಿ ದುರುಪಯೋಗ ಮಾಡುತ್ತಿದ್ದಾರೆ ಎಂಬುದನ್ನು ಹುಡುಕಿ ಅದನ್ನು ತಡೆಗಟ್ಟಲು ಈ ಮಸೂದೆ ತರಲಾಗಿದೆ’ ಎಂದರು.

ಪುತ್ರನ ಕೊಲೆ: ತಂದೆಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗನನ್ನು ಬ್ಯಾಟ್‌ನಿಂದ ಹೊಡೆದು ಕೊಲೆ ಮಾಡಿದ್ದ, ತಂದೆ ರವಿಕುಮಾರ್‌ಗೆ ಜೀವಾವಧಿ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿ 50ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಮಕ್ಕಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿ.ಬಿ. ಸಂತೋಷ್ ಅವರು ಆದೇಶಿಸಿದ್ದಾರೆ.

ರವಿಕುಮಾರ್ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಅಪರಾಧಿ ಪತ್ನಿ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಮದ್ಯಪಾನ ಮಾಡಲು ಪ್ರತಿದಿನ ಹಣ ನೀಡುವಂತೆ ಪತ್ನಿಗೆ ಪೀಡಿಸುತ್ತಿದ್ದ. ಕೊಲೆಯಾದ ರವಿಕುಮಾರ್ ಮಗ ತೇಜಸ್ ಒಂಬತ್ತನೇ ತರಗತಿಯಲ್ಲಿ ಓದುವುದರ ಜೊತೆಗೆ ಹಾಲು ಮತ್ತು ಪೇಪರ್ ಹಾಕುವ ಕೆಲಸವನ್ನು ಮಾಡುತ್ತಿದ್ದ.

ಮಗ ತೇಜಸ್ ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ ಎನ್ನುವ ಕಾರಣಕ್ಕೆ ರವಿಕುಮಾರ್ ತೇಜಸ್‌ನನ್ನು ಮರದ ಬ್ಯಾಟ್‌ನಿಂದ ಹೊಡೆದು ಕೊಲೆ ಮಾಡಿದ್ದ. ಈ ಬಗ್ಗೆ ರವಿಕುಮಾರ್ ಪತ್ನಿ ಕುಮಾರ್‌ಸ್ವಾಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕುಮಾರ್‌ಸ್ವಾಮಿ ಲೇಔಟ್ ಪೊಲೀಸ್ ಠಾಣೆಯ ಅಂದಿನ ತನಿಖಾಧಿಕಾರಿಯಾಗಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಜಗದೀಶ್ ಆರ್. ಅವರು ಈ ಪ್ರಕರಣದ ತನಿಖೆ ಕೈಗೊಂಡು, ಅಪರಾಧಿಯ ವಿರುದ್ಧ ಕಲಂ 103 ಬಿಎನ್‌ಎಸ್ ಅಡಿಯಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವನ್ನು ಸಿಸಿಎಚ್–51ರ ನ್ಯಾಯಾಧೀಶ ಸಿ.ಬಿ. ಸಂತೋಷ್ ವಿಚಾರಣೆ ನಡೆಸಿ, ಅಪರಾಧಿ ರವಿಕುಮಾರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ನೀಡಿದ್ದಾರೆ. ಪ್ರಕರಣವನ್ನು ಸರ್ಕಾರಿ ವಕೀಲರಾಗಿ ಬಿ.ಎಚ್. ಭಾಸ್ಕರ್ ಅವರು ವಾದ ಮಂಡಿಸಿದ್ದರು.

ಆರೋಪಕ್ಕೆ ಪುರಾವೆ ಒದಗಿಸಿ: ಇ.ಸಿ

ನವದೆಹಲಿ (ಪಿಟಿಐ): ‘ವೋಟ್ ಚೋರಿ’ಯಂತಹ (ಮತ ಕಳವು) ಅಗೌರವದ ಪದ ಬಳಸಿ ಸುಳ್ಳಿನ ಸಂಕಥನ ಸೃಷ್ಟಿಸುವ ಬದಲು ಆರೋಪಗಳಿಗೆ ಸಂಬಂಧಿಸಿ ದಂತೆ ಪುರಾವೆಗಳನ್ನು ಒದಗಿಸಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಚುನಾವಣಾ ಆಯೋಗವು ಸೂಚಿಸಿದೆ.

‘ಒಬ್ಬ ವ್ಯಕ್ತಿಗೆ ಒಂದು ಮತ’ ಎಂಬ ಕಾನೂನು 1951-1952ರಲ್ಲಿ ನಡೆದ ಮೊದಲ ಚುನಾವಣೆಯಿಂದಲೇ ಜಾರಿಯಲ್ಲಿದೆ ಎಂದು ಆಯೋಗವು ಗುರುವಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

‘ಯಾವುದೇ ಪುರಾವೆಗಳಿಲ್ಲದೆ ದೇಶದ ಎಲ್ಲ ಮತದಾರರನ್ನು ‘ಚೋರ್’ (ಕಳ್ಳ) ಎಂದು ಕರೆಯುವ ಬದಲು ಯಾವುದೇ ಚುನಾವಣೆಯಲ್ಲಿ ಒಬ್ಬ ವ್ಯಕ್ತಿ ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂಬುದಕ್ಕೆ ಪುರಾವೆಗಳು ಇದ್ದರೆ ಅದನ್ನು ಲಿಖಿತ ಪ್ರಮಾಣಪತ್ರದೊಂದಿಗೆ ಚುನಾವಣಾ ಆಯೋಗದ ಜತೆ ಹಂಚಿಕೊಳ್ಳಿ’ ಎಂದು ಹೇಳಿದೆ.

‘ವೋಟ್ ಚೋರಿ’ ಎಂಬ ಅಗೌರವದ ಪದ ಬಳಸುವ ಮೂಲಕ ಸುಳ್ಳು ಸಂಕಥನವನ್ನು ಸೃಷ್ಟಿಸಲು ಪ್ರಯತ್ನಿಸುವುದು ಭಾರತದ ಕೋಟ್ಯಂತರ ಮತದಾರರ ಮೇಲಿನ ನೇರ ದಾಳಿ ಮಾತ್ರವಲ್ಲದೆ, ಲಕ್ಷಾಂತರ ಚುನಾವಣಾ ಸಿಬ್ಬಂದಿಯ ಪ್ರಾಮಾಣಿಕತೆಯ ಮೇಲಿನ ಆಕ್ರಮಣವೂ ಹೌದು ಎಂದು ಟೀಕಿಸಿದೆ.

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಬಹುದೊಡ್ಡ ಚುನಾವಣಾ ಅಕ್ರಮ ಮತ್ತು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮತಗಳ ‘ಕಳವು’ ನಡೆದಿದೆ ಎಂದು ರಾಹುಲ್ ಗಾಂಧಿ ಕಳೆದ ವಾರ ಆರೋಪಿಸಿದ್ದರು.

‘ಸರ್ಕಾರವೇ ಅಸ್ಪೃಶ್ಯತೆ ಆಚರಿಸುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಜಿಎಫ್‌ನಲ್ಲಿ ಅಂಬೇಡ್ಕರ್ ವಸ್ತು ಸಂಗ್ರಹಾಲಯ, ಸಂಶೋಧನಾ ಸಂಸ್ಥೆ ಮತ್ತು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ವಸತಿಹೀನರಿಗಾಗಿ ಜಮೀನು ಮಂಜೂರಾಗಿದ್ದ ಆದೇಶವನ್ನು ಹಿಂಪಡೆದಿರುವ ಕೋಲಾರ ಜಿಲ್ಲಾಧಿಕಾರಿಯ ಕ್ರಮ, ಸರ್ಕಾರವೇ ಅನುಸರಿಸುತ್ತಿರುವ ಅಸ್ಪೃಶ್ಯತೆಗೆ ಉದಾಹರಣೆಯಾಗಿದೆ’ ಎಂದು ಈ ಸಂಬಂಧದ ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಈ ಕುರಿತಂತೆ ಕೆಜಿಎಫ್‌ನ ಶಿವಗಾಮಿ (60) ಸೇರಿದಂತೆ ಒಟ್ಟು 24 ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್. ವೆಂಕಟೇಶ ದೊಡ್ಡೇರಿ, ‘ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕೆಜಿಎಫ್ ಪಟ್ಟಣ ಪ್ರದೇಶದಲ್ಲಿ ರಸ್ತೆ ಬದಿ ವಾಸವಾಗಿರುವ ವಸತಿಹೀನ ದಿನಗೂಲಿ ಕಾರ್ಮಿಕರಿಗೆ ವಿಶೇಷ ವರ್ಗದ ಅಡಿ ಸರ್ಕಾರಿ ಜಮೀನಿನಲ್ಲಿ ಪುನರ್ವಸತಿ ಕಲ್ಪಿಸಲು ಮಂಜೂರಾಗಿದ್ದ 9 ಎಕರೆ ಜಮೀನನ್ನು ಹಿಂಪಡೆಯಲಾಗಿದೆ. ಈ ಕುರಿತ ಜಿಲ್ಲಾಧಿಕಾರಿ ಆದೇಶವು ವಾಸ್ತವದಲ್ಲಿ ಸರ್ಕಾರವೇ ಅಸ್ಪೃಶ್ಯತೆ ಆಚರಿಸುವಂತಿದೆ’ ಎಂದು ದೂರಿದರು.

‘ಜಿಲ್ಲಾಧಿಕಾರಿಯ ಈ ನಡೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಅಪರಾಧಿಕ ಕೃತ್ಯವಾಗಿದೆ. ಅರ್ಜಿದಾರರ ನ್ಯಾಯಯುತ ಮನವಿಗೆ ಚ್ಯುತಿ ಉಂಟುಮಾಡಿರುವ ಪ್ರಕರಣದ ಪ್ರತಿವಾದಿಗಳನ್ನು ದೌರ್ಜನ್ಯ ತಡೆ ಕಾಯ್ದೆಯ ಕಲಂಗಳಡಿ ಶಿಕ್ಷಾರ್ಹ ಅಪರಾಧಗಳಿಗೆ ಗುರಿಪಡಿಸಬೇಕಾಗುತ್ತದೆ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅರ್ಜಿದಾರರ ಆಕ್ಷೇಪಣೆಗೆ ಸೂಕ್ತ ಕಾರಣ ನೀಡಿ ಇಲ್ಲವೇ ಕೋರ್ಟ್‌ಗೆ ಖುದ್ದು ಹಾಜರಾಗಿ’ ಎಂದು ಪ್ರಕರಣದ ಐದನೇ ಪ್ರತಿವಾದಿ ಕೋಲಾರ ಜಿಲ್ಲಾಧಿಕಾರಿಗೆ ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 4ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಕೆಜಿಎಫ್ ತಾಲ್ಲೂಕು ರಾಬರ್ಟ್‌ಸನ್ ಪೇಟೆ ಹೋಬಳಿ, ಬಂಗಾರದ ಗಣಿ ಗ್ರಾಮದ ಸರ್ವೆ ನಂಬರ್ 2ರಲ್ಲಿ 9 ಎಕರೆ ಜಮೀನನ್ನು ಕೆಜಿಎಫ್ ಪಟ್ಟಣದ ರಸ್ತೆಬದಿ ವಾಸವಾಗಿರುವ ವಸತಿಹೀನ ದಿನಗೂಲಿ ಕಾರ್ಮಿರಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ನಿವೇಶನ ವಿತರಣೆಗಾಗಿ ಗುರುತಿಸಲಾಗಿತ್ತು. ಈ ಸಂಬಂಧ ಸರ್ಕಾರದ ಆದೇಶದಂತೆ ಕಂದಾಯ ದಾಖಲೆಗಳಲ್ಲಿ ನಮೂದಿಸಿ 2023ರಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತಕ್ಕೆ ಒಪ್ಪಿಸಲಾಗಿತ್ತು. ಆದರೆ, ಜಿಲ್ಲಾಧಿಕಾರಿ ಈ ಮಂಜೂರಾತಿ ಆದೇಶವನ್ನು 2024ರಲ್ಲಿ ಹಿಂಪಡೆದು ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಹಸ್ತಾಂತರ ಮಾಡಿದ್ದಾರೆ. ನಂತರ ಜಮೀನನ್ನು ಇತರೆಯವರಿಗೆ ಮಂಜೂರು ಮಾಡಿರುವುದು ಕಾನೂನು ಬಾಹಿರ ನಡೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಹೈಕೋರ್ಟ್ ಸುದ್ದಿ

‘ಎಲ್‌ಕೆಜಿ ಪ್ರವೇಶ ನಿರಾಕರಣೆ: ಹಕ್ಕಿನ ಉಲ್ಲಂಘನೆ ಅಲ್ಲ’

‘ಖಾಸಗಿ ಅನುದಾನರಹಿತ ಶಾಲೆಯಲ್ಲಿ ವಿದ್ಯಾರ್ಥಿಗೆ ಪ್ರವೇಶ ನಿರಾಕರಣೆ ಮಾಡಿದರೆ ಅದು ಸಂವಿಧಾನದ 21ನೇ (ಜೀವಿಸುವ ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕು) ವಿಧಿಯ ಉಲ್ಲಂಘನೆ ಆಗುವುದಿಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

‘ನನ್ನ ಮಗನಿಗೆ ಎಲ್‌ಕೆಜಿ ಪ್ರವೇಶಾತಿ ನಿರಾಕರಿಸಲಾಗಿದೆ’ ಎಂದು ಆಕ್ಷೇಪಿಸಿ ಬೆಳಗಾವಿ ಕ್ಯಾಂಪ್ ಪ್ರದೇಶದ ‘ಸೆಂಟ್ ಪಾಲ್ಸ್ ಹೈಸ್ಕೂಲ್’ ಆಡಳಿತ ಮಂಡಳಿಯ ಕ್ರಮವನ್ನು ಪ್ರಶ್ನಿಸಿ ಬೆಳಗಾವಿಯ ಶ್ರೀನಗರ ನಿವಾಸಿ ಮುಜಮ್ಮಿಲ್ ಖಾಜಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಪೀಠ, ‘ಅರ್ಜಿದಾರರ ಮಗುವಿಗೆ ಪ್ರವೇಶ ನಿರಾಕರಿಸಿರುವುದು ಸಂವಿಧಾನ ಉಲ್ಲಂಘನೆ ಆಗದು. ಮಗುವನ್ನು ಶಾಲೆಗೆ ಸೇರಿಸಿಕೊಂಡರೆ ಮಾತ್ರ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಹಕ್ಕುಗಳನ್ನು ಸಂರಕ್ಷಿಸಲಾಗುತ್ತದೆ ಎಂಬುದು ನಿಜವಲ್ಲ. ಅರ್ಜಿದಾರರು ಬೇರೆ ಶಾಲೆಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆದುಕೊಳ್ಳಬಹುದು’ ಎಂದು ಸೂಚಿಸಿದೆ.

ಪ್ರಕರಣವೇನು?: ತಮ್ಮ ಮಗನನ್ನು ಎಲ್‌ಕೆಜಿಗೆ ಸೇರಿಸಲು ಅರ್ಜಿದಾರರು ಶಾಲೆಗೆ ಅರ್ಜಿ ಸಲ್ಲಿಸಿದ್ದರು. ‘ಮಗು ಆಯ್ಕೆಯಾಗಿದೆ. ಬಂದು ಪ್ರಾಂಶುಪಾಲರ ಜತೆ ಮಾತನಾಡಿ ಸೀಟು ಖಾತ್ರಿಪಡಿಸಿಕೊಳ್ಳಬೇಕು’ ಎಂದು ಶಾಲೆಯ ವತಿಯಿಂದ ಪೋಷಕರಿಗೆ 2025ರ ಫೆಬ್ರುವರಿ 28ರಂದು ಸಂದೇಶ ರವಾನಿಸಲಾಗಿತ್ತು. ಆದರೆ ನಂತರದಲ್ಲಿ, ‘ನಿಮ್ಮ ಅರ್ಜಿ ಪರಿಶೀಲನೆಗೆ ಬಾಕಿ ಇದೆ’ ಎಂದು ತಿಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಪಿಪಿ ನೇಮಕ ಅಕ್ರಮ: ಪಿಐಎಲ್‌ಗೆ ಪರಿವರ್ತನೆ

‘ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ನೇಮಕಾತಿಯಲ್ಲಿ ನಡೆದ ಅಕ್ರಮದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕೋರ್ಟ್ ಆದೇಶ ನೀಡಿ ಐದು ವರ್ಷಗಳಾದರೂ ಸರ್ಕಾರ ಪಾಲನೆ ಮಾಡಿಲ್ಲ’ ಎಂದು ಆಕ್ಷೇಪಿಸಲಾಗಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ಪರಿವರ್ತಿಸಿ ದಾಖಲಿಸಿಕೊಂಡಿದೆ.

ಈ ಸಂಬಂಧ ಹೈಕೋರ್ಟ್ ವಕೀಲೆ ಸುಧಾ ಕಾಟ್ವ ಸಲ್ಲಿಸಿರುವ ರಿಟ್ ಅರ್ಜಿ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಗುರುವಾರ ವಿಚಾರಣೆಗೆ ನಿಗದಿಯಾಗಿತ್ತು.

ಕೆಲ ಕಾಲ ವಿಚಾರಣೆ ವೇಳೆ ಆಲಿಸಿದ ನ್ಯಾಯಪೀಠ, ‘ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯ ಸಾರ್ವಜನಿಕ ಮಹತ್ವದ್ದಾಗಿದೆ. ಆದ್ದರಿಂದ, ಈ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ಪರಿವರ್ತಿಸಿ ಸಂಬಂಧಿಸಿದ ನ್ಯಾಯಪೀಠದ ಮುಂದಿರಿಸಬೇಕು’ ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶನ ನೀಡಿತು.

ಈಡಿಗ, ಬಿಲ್ಲವರಿಗೆ ಅಬಕಾರಿ ಲಾಭಾಂಶ: ತೆಲಂಗಾಣಕ್ಕೆ ಸಮಿತಿ– ಆರ್.ಬಿ.ತಿಮ್ಮಾಪುರ

ಬೆಂಗಳೂರು: ಅಬಕಾರಿ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಈಡಿಗ/ಬಿಲ್ಲವ ಸಮುದಾಯದವರಿಗೆ ವ್ಯಾವಹಾರಿಕ ಬೆಂಬಲ, ಲಾಭಾಂಶ ನೀಡಲು ಸಮಿತಿ ರಚಿಸಲಾಗುವುದು. ತೆಲಂಗಾಣಕ್ಕೆ ಕಳುಹಿಸಿ, ವರದಿ ಪಡೆಯಲಾಗುವುದು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ತೆಲಂಗಾಣ ದಲ್ಲಿ ಅಬಕಾರಿ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಗೌಡ ಸಮುದಾಯಕ್ಕೆ ಅಲ್ಲಿನ ಸರ್ಕಾರ ವ್ಯಾವಹಾರಿಕ ಬೆಂಬಲದ ಜತೆಗೆ, ಲಾಭಾಂಶವನ್ನೂ ನೀಡುತ್ತಿರುವ ಬಗ್ಗೆ ಹರಿಪ್ರಸಾದ್ ಗಮನ ಸೆಳೆದಿದ್ದಾರೆ. ರಾಜ್ಯದಲ್ಲೂ ಈ ಸೌಲಭ್ಯವನ್ನು ಮೂಲ ಕಸುಬುದಾರರಾದ ಈಡಿಗ/ಬಿಲ್ಲವರಿಗೆ ನೀಡಲು ಸರ್ಕಾರ ಸಿದ್ಧವಿದೆ. ಸಮಿತಿಯು ವರದಿ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಅಬಕಾರಿ ಮೂಲದಿಂದ ಸಿಗುವ ಲಾಭದಲ್ಲಿ ಮೊದಲು ಶೇ 20ರಷ್ಟು ಮೂಲಕಸುಬುದಾರ ಕುಟುಂಬಗಳಿಗೆ ನೀಡಲಾಗುತ್ತಿತ್ತು. ಈಗ ಅದನ್ನು ಶೇ 10ಕ್ಕೆ ಇಳಿಸಲಾಗಿದೆ. ಸನ್ನದು ಶುಲ್ಕವನ್ನೂ ವಿಧಿಸಲಾಗುತ್ತಿದೆ. ಉದ್ದೇಶ ಪೂರ್ವಕವಾಗಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಇಂತಹ ಕಿರುಕುಳಗಳಿಂದಾಗಿ ವೃತ್ತಿ ಘೋಷಣೆ ಮಾಡಿಕೊಂಡಿದ್ದ ಶೇ 25ರಷ್ಟು ಮಂದಿ ಮೂಲ ವೃತ್ತಿ ತೊರೆದಿದ್ದಾರೆ. ಸರ್ಕಾರ ಅವರ ನೆರವಿಗೆ ನಿಲ್ಲಬೇಕು. ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ನೀಡಿರುವ ಸಲಹೆಗಳನ್ನು ಪರಿಗಣಿಸಬೇಕು’ ಎಂದು ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದರು.

ಪುಣೆ ರೇಸ್

ನಾಸ್ಟಾಲ್ಜಿಯಾ ಗೆಲ್ಲುವ ನಿರೀಕ್ಷೆ

ಟೀನಾ ಕಟ್ರಕ್ ಮೆಮೋರಿಯಲ್ ಇಂಡಿಪೆಂಡೆನ್ಸ್ ಮಿಲಿಯನ್ ಶುಕ್ರವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಸ್ಟಾಲಿಜಿಯಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಪಾನಿಷ್ ಐಸ್ 4, ಚಾರ್ಡಿಕಲ 8, ಶಿರ್ಷಾ 6
2ನೇ ರೇಸ್: ಎಸ್ಪರಾಂಜ 4, ಟರ್ನ್ ಅಂಡ್ ಬರ್ನ್ 3, ಕೆಲ್ಲಿನಿ 1
3ನೇ ರೇಸ್: ಅರೈವ್ಡ್ 1, ಕೆರಡಾಕ್ 3, ಹಾರ್ಟ್ 8
4ನೇ ರೇಸ್: ಕ್ಯಾಸ್ಕೇಡ್ 5, ಓ ಕೆ 4, ಮಾ ಚೆರಿ 3
5ನೇ ರೇಸ್: ನಾಸ್ಟಾಲ್ಜಿಯಾ 6, ಲ್ಯಾಂಡ್ ಆಫ್ ಪ್ಲೆಂಟಿ 4, ಕಿಂಗ್ ಕೆ 3
6ನೇ ರೇಸ್: ಡ್ರೀಮರ್ 5, ಫಾಕ್ಸಿ 7, ಸಂಟಾನ ರೊ 12
7ನೇ ರೇಸ್: ಕಾವ್ಯ 3, ಸಿಂಡ್ರೆಲಾಸ್ ಡ್ರೀಮ್ 2, ವೆಸ್ಟರನ್ ಸ್ಟಾರ್ 4

ಉತ್ತಮ ಬೆಟ್: ಎಸ್ಪರಾಂಜ

ಜಾಕ್‌ಪಾಟ್‌ಗೆ 3,4,5,6,7 | ಟ್ರೆಬಲ್ 4,5,6

ಮೋಂಬತ್ತಿ ಹಿಡಿದು ಪ್ರತಿಭಟನೆ



‘ಮತಕಳ್ಳರೇ ಅಧಿಕಾರ ಬಿಟ್ಟು ತೊಲಗಿ’ ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಕೆಪಿಸಿಸಿ, ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಗುರುವಾರ ರಾತ್ರಿ ಮೋಂಬತ್ತಿ ಹಿಡಿದು ಪ್ರತಿಭಟಿಸಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಸದಸ್ಯ ಬಿ.ಕೆ. ಹರಿಪ್ರಸಾದ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್, ಬಿ.ವಿ. ಶ್ರೀನಿವಾಸ್ ಇದ್ದರು

‘ಎನ್‌ಡಿಎ ಸಂಸದೆಗೆ ಎರಡು ಎಪಿಕ್ ಕಾರ್ಡ್’

ಪಟ್ನಾ: ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಸಂಸದೆ ವೀಣಾ ದೇವಿ ಅವರು ಎರಡು ಮತದಾರರ ಗುರುತಿನ ಪತ್ರ (ಎಪಿಕ್ ಕಾರ್ಡ್) ಹೊಂದಿದ್ದಾರೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಆರೋಪಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಭಾಗವಾಗಿ ಬಿಹಾರದಲ್ಲಿ ಪ್ರಕಟಿಸಲಾದ ಕರಡು ಮತದಾರರ ಪಟ್ಟಿಯದ್ದು ಎನ್ನಲಾದ ಸ್ಕ್ರೀನ್‌ಶಾಟ್‌ಗಳನ್ನು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ವೈಶಾಲಿ ಕ್ಷೇತ್ರದ ಸಂಸದೆ ವೀಣಾದೇವಿ ಅವರು ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ನೇತೃತ್ವದ ಲೋಕ ಜನಶಕ್ತಿ ಪಕ್ಷದಿಂದ (ರಾಮ್ ವಿಲಾಸ್) ಸ್ಪರ್ಧಿಸಿ ಗೆದ್ದಿದ್ದರು.

ನರಸೀಪುರ: ಪಶುವೈದ್ಯರಿಲ್ಲದೇ ರೈತರ ಪರದಾಟ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ನರಸೀಪುರ ಗ್ರಾಮದ ಪಶುವೈದ್ಯ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೆ ಹೈನುಗಾರರಿಗೆ ತೊಂದರೆಯಾಗಿದೆ.

ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಶು ವೈದ್ಯರು ಒಂದು ತಿಂಗಳ ಹಿಂದೆ ವರ್ಗಾವಣೆಯಾಗಿ ಹೋಗಿದ್ದಾರೆ. ಅವರ ಬದಲಿಗೆ ಯಾರನ್ನೂ ನಿಯೋಜಿಸಿಲ್ಲ. ಇದರಿಂದ ದನಕರುಗಳಿಗೆ ಕಾಯಿಲೆ ಬಂದರೆ ಚಿಕಿತ್ಸೆ ಕೊಡಿಸಲು ಆಗುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ನರಸೀಪುರ ಪಶುವೈದ್ಯಕೀಯ ಕೇಂದ್ರ ವ್ಯಾಪ್ತಿಗೆ 29 ಗ್ರಾಮಗಳು, 10 ಹಾಲು ಉತ್ಪಾದಕರ ಸಹಕಾರ ಸಂಘಗಳು ಬರುತ್ತವೆ. ಈ ಭಾಗದ ರೈತರು ಕೃಷಿ, ತೋಟಗಾರಿಕೆ ಜೊತೆಗೆ ಹೈನುಗಾರಿಕೆ ನೆಚ್ಚಿಕೊಂಡಿದ್ದಾರೆ.



ನರಸೀಪುರ ಪಶು ವೈದ್ಯಕೀಯ ಕೇಂದ್ರ

ಇದಕ್ಕಾಗಿ ಹೆಚ್ಚು ಹೆಚ್ಚು ರಾಸುಗಳನ್ನು ಸಾಕಿದ್ದಾರೆ. ದಿನನಿತ್ಯ ಬಮೂಲ್ ಸಾವಿರಾರು ಲೀಟರ್ ಹಾಲು ಕಳುಹಿಸುತ್ತಾರೆ. ರಾಸುಗಳು ಅನಾರೋಗ್ಯಕ್ಕೆ ಒಳಗಾದರೆ ಸಕಾಲಕ್ಕೆ ಸೂಕ್ತ ಚಿಕಿತ್ಸೆ ಸಿಗದಾಗಿದೆ ಎನ್ನುತ್ತಾರೆ ರೈತ ರಾಮಯ್ಯ.

ರೈತರು, ದನಗಳ ಜೊತೆಗೆ ಮೇಕೆ, ಕುರಿಗಳನ್ನು ಸಾಕಿದ್ದಾರೆ. ಪಶು ಚಿಕಿತ್ಸಾಲಯದಲ್ಲಿ ವೈದ್ಯರು ಇಲ್ಲದೆ ಅವುಗಳಿಗೂ ಸಮಯಕ್ಕೆ ಚಿಕಿತ್ಸೆ ಸಿಗದಾಗಿದೆ.

ವೈದ್ಯರು ಇಲ್ಲದೆ ಇರುವುದರಿಂದ ರಾಸುಗಳಿಗೆ ಅಕಾಲಿಕ ಕಾಯಿಲೆ ಹಾಗೂ ಇತರ ತೊಂದರೆ ಉಂಟಾದರೆ ಬೇರೆ ಕಡೆ ಕೆಲಸ ಮಾಡುವ ವೈದ್ಯರನ್ನು ಅವಲಂಬಿಸಬೇಕಾದ ಅಥವಾ ಮೆಡಿಕಲ್ ಸ್ಟೋರ್‌ಗಳಲ್ಲಿ ಔಷಧಿ ತಂದು ಹಾಕಬೇಕಾದ ಪರಿಸ್ಥಿತಿಯಿದೆ. ದೂರದಿಂದ ವೈದ್ಯರು ಬರುವ ವೇಳೆಗೆ ದನ ಕರು ಮೇಕೆ ಸತ್ತರೆ ಏನು ಮಾಡಬೇಕು ಎಂದು ಬೇಸರದಿಂದ ಪ್ರಶ್ನಿಸುತ್ತಾರೆ ರೈತ ಆನಂದ್.

ಗಾನಸಿದ್ಧ ಗಂಗಾ ಕಲ್ಚರಲ್ ಟ್ರಸ್ಟ್‌ನ ಲಾಂಛನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರು ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಅಂಗವಾಗಿ ಸುಜ್ಞಾನೇಂದ್ರ ತೀರ್ಥರ ಆರಾಧನೆಯ ದಿನ ಕೆಂಗೇರಿ ಉಪ ನಗರದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗಾನಸಿದ್ಧ ಗಂಗಾ ಕಲ್ಚರಲ್ ಟ್ರಸ್ಟ್‌ನ ಲಾಂಛನ ಬಿಡುಗಡೆ ಮಾಡಲಾಯಿತು.

ಜನಪದ ಹಾಡುಗಾರ ಜೋಗಿಲ ಸಿದ್ದರಾಜು ಲಾಂಛನ ಬಿಡುಗಡೆಗೊಳಿಸಿ ಮಾತನಾಡಿ, ‘ಟ್ರಸ್ಟ್‌ನಿಂದ ಉತ್ತಮ ಕಾರ್ಯಗಳು ನಡೆಯಲಿ. ಅವು ಸಮಾಜಕ್ಕೆ ಒಳಿತನ್ನು ಉಂಟು ಮಾಡಲಿ’ ಎಂದು ಹಾರೈಸಿದರು.

ಗಾನ ಸಿದ್ದಗಂಗಾ ಕಲ್ಚರಲ್ ಟ್ರಸ್ಟ್ ಅಧ್ಯಕ್ಷೆ ಗೀತಾ ಭತ್ತದ್ ನೇತೃತ್ವದಲ್ಲಿ ಸಂಗೀತ ಕಾರ್ಯಕ್ರಮ ನಡೆಯಿತು. ಅಧ್ಯಕ್ಷ ಎಚ್.ಎಸ್. ಸುಧೀಂದ್ರ ರಾಘವೇಂದ್ರ ಸ್ವಾಮಿಗಳ ಮಠದ ಕುಮಾರ್, ಸ್ಥಳೀಯ ಮುಖಂಡರಾದ ವಿ.ವಿ. ಸತ್ಯನಾರಾಯಣ, ಮಲ್ಲಿಕಾರ್ಜುನ ಮಹಾಮನೆ, ಪ್ರಶಾಂತ್ ರಮ್ಯ ಇದ್ದರು.



ಕೆಂಗೇರಿ ಉಪನಗರದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗಾನಸಿದ್ಧ ಗಂಗಾ ಕಲ್ಚರಲ್ ಟ್ರಸ್ಟ್‌ನ ಲಾಂಛನ ಬಿಡುಗಡೆ ಮಾಡಲಾಯಿತು

ಪೆರಿಫೆರಲ್ ವರ್ತುಲ ರಸ್ತೆ ಯೋಜನೆ • ಸಂಧಾನ ಸಭೆಯಲ್ಲಿ ರೈತರ ಆಗ್ರಹ

‘ಮಾರುಕಟ್ಟೆ ಮೌಲ್ಯದಷ್ಟು ಪರಿಹಾರ ನೀಡಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ (ಬೆಂಗಳೂರು ಬಿಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ದರ ನಿಗದಿ ಸಂಬಂಧ ಭೂ ಮಾಲೀಕರೊಂದಿಗೆ ಭೂ ಸ್ವಾಧೀನ ಅಧಿಕಾರಿಗಳು ಹಿರಂಡಹಳ್ಳಿಯಲ್ಲಿ ದರ ಸಂಧಾನ ಸಭೆ ನಡೆಸಿದರು.

ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಜಮೀನು ಕಳೆದುಕೊಳ್ಳುವ ಮಾಲೀಕರೊಂದಿಗೆ ಹಿರಂಡಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ದರ ಸಂಧಾನ ಸಭೆಗೆ ಜಮೀನ್ದಾರರು ವಿರೋಧ ವ್ಯಕ್ತಪಡಿಸಿದರು.



ಭೂ ಮಾಲೀಕರೊಂದಿಗೆ ಭೂ ಸ್ವಾಧೀನ ಅಧಿಕಾರಿಗಳು ದರ ಸಂಧಾನ ಸಭೆ ನಡೆಸಿದರು

2007ರಲ್ಲಿ ಪಿಆರ್‌ಆರ್ ಯೋಜನೆಯ ಅಧಿಸೂಚನೆ ಹೊರಡಿಸಿ 20 ವರ್ಷವಾದ ನಂತರ ಮತ್ತೆ ಯೋಜನೆ ಜಾರಿ ಮಾಡುವುದಾಗಿ ಬಂದಿದ್ದಾರೆ. ರೈತರ ಕಷ್ಟ ಅರ್ಥ ಮಾಡಿಕೊಂಡು ನಮ್ಮ ಜಮೀನಿಗೆ ಸೂಕ್ತ ಪರಿಹಾರ ಕೊಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು. ಹಳೇ ಕಾಯ್ದೆ ಪ್ರಕಾರ ಭೂ ಪರಿಹಾರ ಬೇಡ, ಹಿರಂಡಹಳ್ಳಿಯಲ್ಲಿ 90ರಷ್ಟು ರೈತರು ಜಮೀನು ಕಳೆದುಕೊಳ್ಳುತ್ತಿದ್ದಾರೆ. 200 ರೈತರ ಭೂಮಿ ಸ್ವಾಧೀನವಾಗುತ್ತಿದೆ ಎಂದು ರೈತ ಮುಖಂಡ ಎಚ್.ಎನ್ ಜಗನಾಥ್ ದೂರಿದರು.

ಹೆಚ್ಚುವರಿ ಉಪ ಆಯುಕ್ತ ಕೆ.ಎಚ್.ಜಗದೀಶ್ ಮಾತನಾಡಿ, ಯೋಜನೆಗಾಗಿ 2007ರಲ್ಲಿ 78 ಎಕರೆ 23 ಗುಂಟೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದೆ. ಮಾರ್ಗಸೂಚಿಯ ದರದ ಪ್ರಕಾರ ಎಕರೆಗೆ 1 ಕೋಟಿ 99 ಲಕ್ಷ ನಿಗದಿಯಾಗಿತ್ತು. ಈಗ ಹೊಸ ಮಾನದಂಡದ ಮೇಲೆ 5 ಕೋಟಿ 99 ಲಕ್ಷ ದರ ನಿಗದಿಯಾಗಿದೆ. ಸಂಧಾನಿತ ಸಭೆ ನಡೆಸಿ ಒಪ್ಪಿಗೆ ಪತ್ರ ಪಡೆಯಲು ಬಂದಿದ್ದೇವೆ ಎಂದು ವಿವರಿಸಿದರು.

ರೈತ ಮುಖಂಡರಾದ ಜಗನ್ನಾಥ್, ರೈತರಾದ ಕೆಂಪರಾಜು, ನಾರಾಯಣಸ್ವಾಮಿ, ಮುಕುಂದ್, ರಾಮಾಂಜಿ, ರಾಮಸ್ವಾಮಿ ಇದ್ದರು.

ವಿಧಾನ ಪರಿಷತ್ ಪ್ರಶ್ನೋತ್ತರ

ಪ್ರಶ್ನೋತ್ತರ

ಹಂಪಿ ಮಾದರಿಯಲ್ಲಿ ಬೇಲೂರು, ಹಳೇಬೀಡು, ಪಟ್ಟದಕಲ್ಲು, ಐಹೊಳೆ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಮುಖ್ಯಮಂತ್ರಿಯವರಿಂದ ವಿಶೇಷ ಅನುದಾನ ಪಡೆಯಲಾಗುತ್ತದೆ. ನೇಪಾಳದ ಕಠ್ಮಂಡು, ಇಂಡೊನೇಷ್ಯಾದ ಜಕಾರ್ತ, ಥಾಯ್ಲೆಂಡ್‌ನ ಬ್ಯಾಂಕಾಕ್, ಶ್ರೀಲಂಕಾದ ಕೊಲಂಬೊ ನಗರಗಳಿಗಿಂತ ಕರ್ನಾಟಕದಲ್ಲಿ ಪ್ರವಾಸದರ ದುಬಾರಿ ಇದೆ. ಆದರೆ, ಲಂಡನ್, ಬರ್ಲಿನ್, ಟೊಕಿಯೊ, ವಾಷಿಂಗ್ಟನ್, ಮ್ಯಾಡ್ರಿಡ್, ಮಾಸ್ಕೋ ನಗರಗಳಿಗೆ ಹೋಲಿಸಿದರೆ ಪ್ರವಾಸದ ದರ ಕಡಿಮೆ ಇದೆ

ಎಚ್‌.ಕೆ. ಪಾಟೀಲ, ಪ್ರವಾಸೋದ್ಯಮ ಸಚಿವ (ಪ್ರಶ್ನೆ: ಎಂ.ನಾಗರಾಜು, ಕಾಂಗ್ರೆಸ್ ಸದಸ್ಯ)

ಚಿತ್ರದುರ್ಗದ ಹಿರಿಯೂರಿನ ವಾಣಿ ವಿಲಾಸ ಸಾಗರದಲ್ಲಿ ನವೆಂಬರ್ 1ರಿಂದ ಬೋಟಿಂಗ್ ಪ್ರಾರಂಭಿಸಲಾಗುತ್ತದೆ. ಕಯಾಕಿಂಗ್, ಜೆಟ್ ಸ್ಕೀ, ಬನಾನಾ ರೈಡ್ ಮುಂತಾದ ಚಟುವಟಿಕೆಗಳನ್ನು ಆರಂಭಿಸಲು ಜಲಸಂಪನ್ಮೂಲ ಇಲಾಖೆಯ ನಿರಾಕ್ಷೇಪಣಾಪತ್ರವನ್ನು ನಿರೀಕ್ಷಿಸಲಾಗುತ್ತಿದೆ. ರಾಜ್ಯದ ಪ್ರಮುಖ 15 ಪ್ರವಾಸಿ ತಾಣಗಳಲ್ಲಿ ಕೆಎಸ್‌ಟಿಡಿಸಿ ಹೋಟೆಲ್ ಇಲ್ಲ. ಏಳು ಪ್ರವಾಸಿ ತಾಣಗಳಲ್ಲಿ ಈ ವರ್ಷವೇ ಹೋಟೆಲ್ ನಿರ್ಮಿಸಲಾಗುತ್ತದೆ

ಎಚ್‌.ಕೆ. ಪಾಟೀಲ, ಪ್ರವಾಸೋದ್ಯಮ ಸಚಿವ (ಪ್ರಶ್ನೆ: ಡಿ.ಟಿ. ಶ್ರೀನಿವಾಸ್, ಕಾಂಗ್ರೆಸ್ ಸದಸ್ಯ)

ಕೋಮು ಗಲಭೆ, ಗೋಹತ್ಯೆ, ಮತೀಯ ಗೂಂಡಾಗಿರಿ ನಿಯಂತ್ರಣಕ್ಕೆ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗದಲ್ಲಿ ವಿಶೇಷ ಕಾರ್ಯಪಡೆ ಸ್ಥಾಪಿಸಲಾಗಿದೆ. ಈ ಕಾರ್ಯಪಡೆ ಕಾರ್ಯಾರಂಭಿಸಿದ ಮೇಲೆ ಯಾವುದೇ ಪ್ರಕರಣ ದಾಖಲಾಗಿಲ್ಲ. ದ್ವೇಷ ಭಾಷಣ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆ ತರಲು ಸರ್ಕಾರ ಚಿಂತನೆ ನಡೆಸಿದೆ

ಜಿ. ಪರಮೇಶ್ವರ, ಗೃಹ ಸಚಿವ (ಪ್ರಶ್ನೆ: ಕಿಶೋರ್ ಕುಮಾರ್ ಪುತ್ತೂರ್, ಬಿಜೆಪಿ ಸದಸ್ಯ)

ವಿಧಾನಸಭೆಯಲ್ಲಿ ಪ್ರಶ್ನೋತ್ತರ

ಅನಾರೋಗ್ಯದಿಂದ ಬಳಲುತ್ತಿರುವವರು ತ್ವರಿತವಾಗಿ ಆರೋಗ್ಯ ಸೇವೆ ಪಡೆಯಲು ಅನುಕೂಲವಾಗುವಂತೆ 24 ಗಂಟೆಯೊಳಗೆ ಬಿಪಿಎಲ್ ವಿತರಣೆ ಸಂಬಂಧ ಪ್ರತ್ಯೇಕ ಪೋರ್ಟಲ್ ಸೇವೆ ಆರಂಭಿಸಲಾಗುವುದು. ಅಲ್ಲದೆ, ಬಿಪಿಎಲ್ ಕಾರ್ಡ್ ಪಡೆದಿರುವ 13 ಲಕ್ಷ ಅನರ್ಹರು ಎಪಿಎಲ್ ಪಡೆದರೆ ಅರ್ಹ ಬಿಪಿಎಲ್ ಕುಟುಂಬಗಳಿಗೆ ಮುಂದಿನ ತಿಂಗಳಿನಿಂದ ಬಿಪಿಎಲ್ ಕಾರ್ಡ್ ವಿತರಣೆಗೆ ಅರ್ಜಿ ಸ್ವೀಕಾರ ಆರಂಭಿಸಲು ಚಿಂತನೆ ನಡೆಸಲಾಗಿದೆ

ಕೆ.ಎಚ್‌. ಮುನಿಯಪ್ಪ, ಆಹಾರ ಸಚಿವ (ಪ್ರಶ್ನೆ: ಬಿಜೆಪಿಯ ಭರತ್ ಶೆಟ್ಟಿ)

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆಗೆ ಕೌನ್ಸೆಲಿಂಗ್ ಪ್ರಕ್ರಿಯೆ ನಡೆದಿದೆ. ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ನಿಯೋಜಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಎಲ್‌ಕೆಜಿ, ಯುಕೆಜಿಯಲ್ಲಿರುವ ಎಲ್ಲ ಮಕ್ಕಳಿಗೂ ಬಿಸಿಯೂಟ ಒದಗಿಸಲು ಕೂಡಾ ಕ್ರಮ ವಹಿಸಲಾಗುವುದು. ಅಲ್ಲದೆ, ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಅಗತ್ಯ ಸಿಬ್ಬಂದಿ ನಿಯೋಜನೆ ಬಗ್ಗೆಯೂ ಶಿಕ್ಷಣ ಸಚಿವರ ಜೊತೆ ಚರ್ಚಿಸಲಾಗುವುದು

ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ (ಶಾಲಾ ಶಿಕ್ಷಣ ಸಚಿವರ ಪರವಾಗಿ) (ಪ್ರಶ್ನೆ: ಬಿಜೆಪಿಯ ಕೆ. ಗೋಪಾಲಯ್ಯ)

ಹಿಂದಿನ ಸರ್ಕಾರ ಸ್ಥಾಪಿಸಿದ್ದ ಏಳು ಹೊಸ ವಿಶ್ವವಿದ್ಯಾಲಯಗಳ ಸಾಧಕ-ಬಾಧಕ, ಮುಂದುವರಿಕೆ, ರದ್ದತಿ ವಿಚಾರವಾಗಿ ಚರ್ಚಿಸಲು ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚನೆಯಾಗಿದೆ. ಬಾಗಲಕೋಟೆ ವಿಶ್ವವಿದ್ಯಾಲಯದ ಬಗ್ಗೆಯೂ ಆ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು

ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ (ಪ್ರಶ್ನೆ: ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್)

‘ಮಂಜುನಾಥನ ಸನ್ನಿಧಿಗೆ ಕೈ ಇಟ್ಟರೆ ಕಷ್ಟ’

ಧರ್ಮಸ್ಥಳ ಪ್ರಕರಣದ ಬಗ್ಗೆ ವ್ಯಾಪಕ ಚರ್ಚೆ • ವಿರೋಧ ಪಕ್ಷಗಳಿಂದ ಟೀಕಾಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳದ ಬಾಹುಬಲಿ ಬೆಟ್ಟದ ಬುಡಕ್ಕೆ ಕೈಹಾಕಿದ್ದೀರಿ. ಮಂಜುನಾಥನ ಸನ್ನಿಧಿಗೆ ಕೈ ಹಾಕಿದರೆ ಸುಮ್ಮನಿರಲು ಸಾಧ್ಯವಿಲ್ಲ. ಆಗ ನಿಮ್ಮ ಬುಡವೇ ಅಲ್ಲಾಡುತ್ತದೆ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ನಿಯಮ 69ರಡಿ ಗುರುವಾರ ವಿಷಯ ಪ್ರಸ್ತಾಪಿಸಿದ ಅವರು, ‘ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಧಾರ್ಮಿಕ ನಂಬಿಕೆ ಹರಣ ನಡೆಯುತ್ತಿದೆ. ಇದಕ್ಕೆ ಸಂವಿಧಾನ ಮತ್ತು ಕಾನೂನಿನ ನೆರಳು ಪಡೆಯುತ್ತಿದ್ದಾರೆ. ಧರ್ಮಸ್ಥಳ, ಮಂಜುನಾಥ ಸ್ವಾಮಿ, ವೀರೇಂದ್ರ ಹೆಗ್ಗಡೆ ವಿರುದ್ಧ ಇಷ್ಟೊಂದು ಅಪಪ್ರಚಾರ ನಡೆಯುತ್ತಿರುವಾಗ ಅದನ್ನು ತಡೆಯಲು ಸರ್ಕಾರ ಮುಂದಾಗಿಲ್ಲ. ಸರ್ಕಾರವೇ ಈ ಗುಂಪುಗಳಿಗೆ ಒತ್ತಾಸೆಯಾಗಿ ನಿಂತಿದೆಯೋ ಎಂಬ ಅನುಮಾನ ಬರುತ್ತಿದೆ’ ಎಂದು ಹೇಳಿದರು.

‘ಮುಸುಕುಧಾರಿ ವ್ಯಕ್ತಿ ಪೊಲೀಸ್ ಇಲಾಖೆಗೆ ಮಂಕುಬೂದಿ ಎರಚುತ್ತಿದ್ದಾನೆ. ಈತ ತನಗೆ ಬೇಕಾದ ಹಾಗೆ ಎಸ್‌ಐಟಿಯನ್ನು ಕುಣಿಸುತ್ತಿದ್ದಾನೆ. ಅಧಿಕಾರಿಗಳೂ ಆತನ ಮಾತು ಕೇಳುತ್ತಿದ್ದಾರೆ. ಈತ ಯಾರು, ಈತನ ಹಿಂದೆ ಯಾರಿದ್ದಾರೆ ಎಂಬುದು ಬಯಲಾಗಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳ, ಹಿಂದುತ್ವದ ಕುರಿತ ಅವಹೇಳನಕಾರಿ ಮಾತುಗಳನ್ನು ಕೇಳಿದಾಗ ರಕ್ತ ಕುದಿಯುತ್ತದೆ. ಅಪ ಪ್ರಚಾರ ಮಾಡುತ್ತಿರುವವರ ಬಗ್ಗೆ ಏಕೆ ಎಫ್‌ಐಆರ್ ದಾಖಲಿಸಿಲ್ಲ’ ಎಂದು ಪ್ರಶ್ನಿಸಿದರು.

‘ನಮ್ಮ ಜಿಲ್ಲೆಯಲ್ಲಿ ಅಧಿಕಾರಿಯಾಗಿದ್ದ, ಈಗ ನೆರೆ ರಾಜ್ಯದಿಂದ ನಿಮ್ಮ ಪಕ್ಷದಿಂದ ಜನಪ್ರತಿನಿಧಿಯಾಗಿರುವ ವ್ಯಕ್ತಿ ಈ ಷಡ್ಯಂತ್ರದಲ್ಲಿದ್ದಾನೆ ಎಂಬ ವಿಚಾರ ಕೆಲ ಮಾಧ್ಯಮಗಳಲ್ಲಿ ವರದಿಯಾಗಿದೆ. ಧರ್ಮಸ್ಥಳಕ್ಕೂ ಎಸ್‌ಡಿಪಿಐಗೂ ಏನು ಸಂಬಂಧ? ಅವರೇಕೆ ಅಲ್ಲಿ ಪ್ರತಿಭಟನೆ ನಡೆಸಬೇಕು? ಹಲವು ವ್ಯಕ್ತಿಗಳಿಗೆ ವಿದೇಶಗಳಿಂದ ಹಣ ಬರುತ್ತಿದೆ? ವಿದೇಶಿ ಅಲ್‌ಜಝೀರಾ ಚಾನೆಲ್‌ಗೆ ಅಲ್ಲೇನು ಕೆಲಸ’ ಎಂದೂ ಸುನಿಲ್‌ಕುಮಾರ್ ಕೇಳಿದರು.

‘ತಿರುಪತಿ, ಶಬರಿಮಲೈ, ಶನಿಶಿಂಗ್ನಾಪುರ, ತಿರುವನಂತಪುರ ದೇಗುಲಗಳ ನಂತರ ನಗರ ನಕ್ಸಲರು ಮತ್ತು ಎಡಚರ ಗ್ಯಾಂಗ್ ಧರ್ಮಸ್ಥಳಕ್ಕೆ ಕೈ ಹಾಕಿದೆ. ಬಾಹುಬಲಿ ಬೆಟ್ಟದ ಬುಡಕ್ಕೂ ಕೈಹಾಕಿದೆ. ಮಂಜುನಾಥನ ಸನ್ನಿಧಿಗೆ ಕೈ ಹಾಕಿದರೆ ಸುಮ್ಮನಿರಲು ಸಾಧ್ಯವಿಲ್ಲ. ಆಗ ನಿಮ್ಮ ಬುಡವೇ ಅಲ್ಲಾಡುತ್ತದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬಾಹ್ಯ ಶಕ್ತಿಗಳ ಒತ್ತಡಕ್ಕೆ ಮಣಿದು ಎಸ್‌ಐಟಿ ರಚಿಸಿದ್ದೀರಾ? ಇದರಲ್ಲಿ ನಿಮ್ಮ ಹೈಕಮಾಂಡ್ ನಿರ್ದೇಶನ ಇದೆಯೇ? ಇಂಡಿ ಒಕ್ಕೂಟದ ರಹಸ್ಯ ಕಾರ್ಯಸೂಚಿ ಏನಾದರೂ ಇದೆಯಾ’ ಎಂದು ಪ್ರಶ್ನಿಸಿದರು.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಿದವರಿಗೆ ಶಿಕ್ಷೆ ಕೊಡಿ. ಮುಸುಕುಧಾರಿ ತಪ್ಪಿತಸ್ಥನಾದರೆ ಗಲ್ಲಿಗೇರಿಸಿ

ಎಸ್‌.ಆರ್‌.ವಿಶ್ವನಾಥ್, ಬಿಜೆಪಿ

ಹಿಂದೂ ಧರ್ಮ ಹಲವು ಸವಾಲುಗಳನ್ನು ಗೆದ್ದು ಬಂದಿದೆ. ಅದೇ ರೀತಿ ಧರ್ಮಸ್ಥಳವೂ ಸವಾಲುಗಳನ್ನು ಗೆದ್ದು ಹೊರಬರುತ್ತದೆ. ಅಪಪ್ರಚಾರ ನಡೆಸುವ ಯೂಟ್ಯೂಬರ್‌ಗಳನ್ನು ನಿಯಂತ್ರಿಸಬೇಕು

ಡಾ.ರಂಗನಾಥ್, ಕಾಂಗ್ರೆಸ್

ಭಕ್ತರ ಮನಸ್ಸಿನಲ್ಲಿ ಗೊಂದಲ ಉಂಟಾಗುವ ಕೆಲಸ ನಡೆದಿದೆ. ಇದಕ್ಕೆ ತೆರೆ ಎಳೆಯುವ ಕೆಲಸ ಆಗಬೇಕು. ನಮ್ಮ ಪಕ್ಷ ಧರ್ಮಸ್ಥಳಕ್ಕೆ ವಿರೋಧವಾಗಿಲ್ಲ

ಅಶೋಕ ಕುಮಾರ್ ರೈ, ಕಾಂಗ್ರೆಸ್

ಸೌಜನ್ಯಾ ಕೊಲೆ ಪ್ರಕರಣದ ತನಿಖೆಯು ತಾರ್ಕಿಕ ಅಂತ್ಯವನ್ನು ಏಕೆ ತಲುಪುತ್ತಿಲ್ಲ. ಮುಖ್ಯಮಂತ್ರಿ ಈ ಸಂಬಂಧ ಸದನದಲ್ಲಿ ಉತ್ತರ ನೀಡಬೇಕು

ಹರೀಶ್ ಪೂಂಜಾ, ಬಿಜೆಪಿ



ವಿಧಾನ ಪರಿಷತ್ ಸಭಾಂಗಣದಲ್ಲಿ ಗುರುವಾರ ನಡೆದ ಕಲಾಪದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು –ಪ್ರಜಾವಾಣಿ ಚಿತ್ರ

‘ನಗರ ನಕ್ಸಲರು ಹಿಂದಿದ್ದಾರೆ’

ಇಡೀ ಪ್ರಕರಣದ ಹಿಂದೆ ನಗರ ನಕ್ಸಲರು ಇದ್ದಾರೆ. ಇವರ ಒತ್ತಡದ ಕಾರಣ ಎಸ್‌ಐಟಿ ತನಿಖೆಗೆ ಆದೇಶಿಸಲಾಗಿದೆ. ಇವರು ನಿಮ್ಮ (ಮುಖ್ಯಮಂತ್ರಿ) ಹಿಂದೆ ಮುಂದೆ ಏಕೆ ಓಡಾಡಿಕೊಂಡಿದ್ದಾರೆ. ಹಲವು ವಕೀಲರು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಹಣಕಾಸು ನೆರವು ನೀಡುತ್ತಿರುವವರು ಯಾರು? ಕುದುರೆಮುಖ ಉಳಿಸಿ ಆಂದೋಲನ ಉಳಿಸಿ ಎಂದು ಹೋರಾಟ ಆರಂಭಿಸಿದ್ದು ಇದೇ ಶಕ್ತಿಗಳು

ಆರಗ ಜ್ಞಾನೇಂದ್ರ, ಬಿಜೆಪಿ ಶಾಸಕ

‘ನೂರಾರು ಶವ ಹೊತ್ತೊಯ್ಯಲು ವಿಕ್ರಮ ಬೇತಾಳನೇ?’

‘ತನಿಖೆಯಲ್ಲಿ ಶವಗಳು ಸಿಗದೇ ಇದ್ದಾಗ, ಕೊನೆಯಲ್ಲಿ ಆ ‘ಮಾಸ್ಕ್ ಮ್ಯಾನ್ ಹುಚ್ಚ’ ಎಂದು ಷರಾ ಬರೆಯುವುದಕ್ಕೂ ಮೊದಲೇ ಆತನನ್ನು ತನಿಖೆಗೆ ಒಳಪಡಿಸಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

‘ತನಿಖೆಗಾಗಿ ಹಿಟಾಚಿ, ಜೆಸಿಬಿ ಮತ್ತಿತರ ಆಧುನಿಕ ಸಾಧನಗಳನ್ನು ಬಳಸಲಾಗಿದೆ. ಆತನ ಭದ್ರತೆಗಾಗಿ ಮಷಿನ್‌ಗನ್ ಬಳಸುತ್ತಿದ್ದಾರೆ. ಹೀಗಾಗಿ ಮುಸುಕುಧಾರಿ ಯಾರೆಂಬುದು ಜನರಿಗೆ ತಿಳಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಮುಸುಕುಧಾರಿ ವ್ಯಕ್ತಿಯ ಹೆಸರು ಚಿನ್ನಯ್ಯ, ಆತ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವನು ಎಂದು ಜನ ಹೇಳುತ್ತಿದ್ದಾರೆ. ಪೊಲೀಸರು ಪ್ರತಿದಿನ ಆತನಿಗೆ ಮೇಕಪ್ ಮಾಡಿ, ಬಿರಿಯಾನಿ ತಿನ್ನಿಸಿ, ಸಂಪೂರ್ಣ ಭದ್ರತೆ ನೀಡಿ ಕರೆದೊಯ್ಯುತ್ತಿದ್ದಾರೆ. ಆತ ಇವೆಲ್ಲವನ್ನೂ ಎಂಜಾಯ್ ಮಾಡುತ್ತಿದ್ದಾನೆ’ ಎಂದರು.

‘20 ಅಡಿ ಆಳದಲ್ಲಿ ಯಾರಾದರೂ ಹೆಣ ಹೂಳುತ್ತಾರಾ? ಒಬ್ಬ ವ್ಯಕ್ತಿ ಆರಡಿ ಅಗೆಯಬೇಕೆಂದರೂ ಬಹಳ ಕಷ್ಟ. ಆದರೆ, ಈ ವ್ಯಕ್ತಿ ಒಬ್ಬನೇ ಇಷ್ಟು ಕೆಲಸ ಮಾಡಿದ್ದಾನೆ ಎಂದರೆ, ಚಂದಾಮಾಮದಲ್ಲಿ ಬರುತ್ತಿದ್ದ ವಿಕ್ರಮ ಬೇತಾಳ ಕಥೆ ನೆನಪಿಗೆ ಬರುತ್ತದೆ. ಈತ ಒಬ್ಬನೇ ಕಾಡಿಗೆ ಹೆಣವನ್ನು ಹೊತ್ತುಕೊಂಡು ಹೋಗಿದ್ದಾನೆ ಎಂದರೆ ನಂಬಲು ಸಾಧ್ಯವಿಲ್ಲ. ಈಗ ಅಗೆದಿರುವ ಹೊಂಡಗಳನ್ನು ಕೃಷಿ ಹೊಂಡ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ’ ಎಂದು ಅಶೋಕ ವ್ಯಂಗ್ಯವಾಡಿದರು.

ಧರ್ಮಸ್ಥಳ ಮುಟ್ಟಿದರೆ ಕ್ರಾಂತಿ ಆಗುತ್ತದೆ

ಹಿಂದೆ ಮೊಘಲರು ಹಿಂದೂ ಧರ್ಮ ನಾಶ ಮಾಡಲು ಪ್ರಯತ್ನಿಸಿದ್ದರು. ಈಗ ಆಧುನಿಕ ಮೊಘಲರು, ಬುದ್ಧಿಜೀವಿಗಳು, ಎಡಚರು, ಢೋಂಗಿ ಜಾತ್ಯತೀತರು ಆ ಕೆಲಸ ಮಾಡುತ್ತಿದ್ದಾರೆ. ವಿದೇಶಿ ಹಣವನ್ನು ಪಡೆದು ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ. ಧರ್ಮಸ್ಥಳವನ್ನು ಮುಟ್ಟಲು ಹೋದರೆ ದೊಡ್ಡ ಕ್ರಾಂತಿ ಆಗುತ್ತದೆ. ಸರ್ಕಾರ ಕೊನೆಯ ದಿನ ಎಣಿಸಬೇಕಾಗುತ್ತದೆ.

ಬಸನಗೌಡ ಪಾಟೀಲ ಯತ್ನಾಳ

‘ಕೋಟಿ ಜನರ ಭಾವನೆಗಳ ಜತೆ ಆಡಬೇಡಿ’

ನನ್ನ ಬಂಧು ಧರ್ಮಸ್ಥಳ ಮಂಜುನಾಥ, ನನ್ನ ಭಾವನೆಗಳ ಜತೆ ಆಟ ಆಡಬೇಡಿ. ಕೋಟಿಗಟ್ಟಲೆ ಜನ ಇದೇ ರೀತಿ ಭಾವನೆ ಹೊಂದಿದ್ದಾರೆ. ಒಬ್ಬ ವಕೀಲ ಕೇರಳ ಸರ್ಕಾರಕ್ಕೆ ಪತ್ರ ಬರೆದು, ಈ ಪ್ರಕರಣದಲ್ಲಿ ಕರ್ನಾಟಕಕ್ಕೆ ನೆರವಾಗಬೇಕು ಎಂದಿದ್ದಾನೆ. ಹೀಗಾಗಿ ಇದರ ಹಿಂದೆ ದೊಡ್ಡ ಪಿತೂರಿಯೇ ಇದೆ. ಧರ್ಮಸ್ಥಳಕ್ಕೆ ಬುಲ್ಡೋಜರ್ ಹತ್ತಿಸಬೇಕು ಎಂದು ಹೇಳಿರುವ ವ್ಯಕ್ತಿ ಹಿಂದೆ ಶಾಸಕರ ಭವನಕ್ಕೆ ಬಾಂಬ್ ಇಟ್ಟಿದ್ದ, ನಿತ್ಯವೂ ಪ್ರಚೋದನಕಾರಿಯಾಗಿ ಮಾತನಾಡುವ ಈತನ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ?

ಎಸ್‌.ಸುರೇಶ್‌ಕುಮಾರ್, ರಾಜಾಜಿನಗರ ಶಾಸಕ

ಸದನ: ಮಾತು- ಗಮ್ಮತ್ತು

ನಾನೇನೂ ಕಮ್ಮಿ ಇಲ್ಲ: ದೇಶಪಾಂಡೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ‘ಚುನಾವಣಾ ರಾಜಕೀಯ’ ವಿಧಾನಸಭೆಯಲ್ಲಿ ಬುಧವಾರ ಚರ್ಚೆಯಾಗಿತ್ತು. ಗುರುವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ, ‘ಜಾತಿ ಬಲ ಇಲ್ಲದಿದ್ದರೂ ನಾನು ಒಂಬತ್ತು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದೇನೆ. 10 ಬಾರಿ ಸ್ಪರ್ಧಿಸಿ, 2008ರಲ್ಲಿ ಮಾತ್ರ ಸೋತಿದ್ದೆ’ ಎನ್ನುವ ಮೂಲಕ ‘ನಾನೇನೂ ಕಮ್ಮಿ ಇಲ್ಲ’ ಎಂದು ಎದೆತಟ್ಟಿಕೊಂಡರು.

‘ಸಿದ್ದರಾಮಯ್ಯ ಈಗಾಗಲೇ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ 5 ವರ್ಷ ಪೂರ್ಣಗೊಳಿಸಿದ್ದಾರೆ. ಎರಡನೇ ಬಾರಿಗೆ ಮತ್ತೆ ಐದು ವರ್ಷ ಪೂರ್ಣಗೊಳಿಸುವ ಪ್ರಯತ್ನದಲ್ಲಿದ್ದಾರೆ’ ಎಂದರು. ಆಗ ಬಿಜೆಪಿಯ ಸದಸ್ಯರು, ‘ಇನ್ನೊಮ್ಮೆ ಹೇಳಿ’ ಎಂದು ಕಾಲೆಳೆದರು. ಸ್ಪಷ್ಟನೆ ನೀಡಿದ ದೇಶಪಾಂಡೆ, ‘ನಾನು ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಯಲ್ಲ. ನನ್ನ ಬೆಂಬಲ ಸಿದ್ದರಾಮಯ್ಯ ಅವರಿಗೆ’ ಎಂದರು.

ಮಧ್ಯಪ್ರವೇಶಿಸಿದ ಬಿಜೆಪಿಯ ಎಸ್. ಸುರೇಶ್‌ಕುಮಾರ್, ‘ಜನತಾ ಪಕ್ಷ, ಜನತಾ ದಳ, ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡಿದ್ದೀರಿ. ಅದರ ಗುಟ್ಟೇನು. ಕಾಂಗ್ರೆಸ್- ಜನತಾದಳ ಉತ್ತರ - ದಕ್ಷಿಣ ಧ್ರುವಗಳಿದ್ದಂತೆ. ಆ ಆತ್ಮೀಯತೆ ಹೇಗೆ ಸಾಧ್ಯವಾಯಿತು’ ಎಂದು ಕೇಳಿದರು.

ಅದಕ್ಕೆ ದೇಶಪಾಂಡೆ, ‘ಗುಟ್ಟೇನೂ ಇಲ್ಲ. ಎಲ್ಲರೊಂದಿಗೆ ಸಂಬಂಧ ಚೆನ್ನಾಗಿದೆ. ಮುಖ್ಯಮಂತ್ರಿಗಳ ಜೊತೆಗಿನ ಆತ್ಮೀಯತೆಯ ವಿಚಾರ ಹೇಳಲಾಗದು’ ಎಂದರು.

‘ಹೆಸರು ಸಂಪಾದನೆ ನನ್ನ ಚಿಂತನೆ, ಲಾಭ ನಿನ್ನ ಯೋಜನೆ’

‘ಹೆಸರು ಸಂಪಾದನೆಗೆ ನಾನು, ನನ್ನ ಪಕ್ಷದವರು ಆಲೋಚಿಸುತ್ತೇವೆ. ಲಾಭದ ಬಗ್ಗೆ ಯೋಜನೆ ಮಾಡುವವನು ನೀನು’ ಎಂದು ಬಿಜೆಪಿಯ ಸಿ.ಟಿ. ರವಿ ಅವರಿಗೆ ಕುಟುಕಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಈ ರಾಜ್ಯ ಹಾಗೂ ನಗರದಲ್ಲಿ ನನ್ನದೇ ಆದ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು ಎಂದು ತೀರ್ಮಾನಿಸಿದ್ದೇನೆ’ ಎಂದರು.

ವಿಧಾನ ಪರಿಷತ್‌ನ ಪ್ರಶ್ನೋತ್ತರ ಸಮಯದಲ್ಲಿ ಬೆಂಗಳೂರಿನ ಸುರಂಗ ರಸ್ತೆ ಯೋಜನೆ ಪ್ರಸ್ತಾಪವಾಗುತ್ತಿದ್ದ ಸಂದರ್ಭದಲ್ಲಿ, ‘ಯೋಜನೆ ಪಾರದರ್ಶಕವಾಗಿರಲಿ. ಏಕೆಂದರೆ ಲಾಭ ಇಲ್ಲದೆ ಡಿ.ಕೆ. ಶಿವಕುಮಾರ್ ಅವರು ಏನು ಮಾಡುವುದಿಲ್ಲ ಎಂಬ ಭಾವನೆ ಎಲ್ಲರಲ್ಲಿದೆ’ ಎಂದರು ಸಿ.ಟಿ. ರವಿ.

‘ಕೆಲವು ಸಂಸದರು ನನ್ನ ಮೇಲೆ ಆರೋಪ ಮಾಡಿ, ನಾನು ದುಡ್ಡು ಹೊಡೆಯಲು ಈ ಯೋಜನೆ ಮಾಡುತ್ತಿದ್ದೇನೆ ಎಂದು ಟೀಕೆ ಮಾಡಿದ್ದಾರೆ. ನಾನು ಇಲ್ಲಿ ವ್ಯವಹಾರ ನೋಡುತ್ತಿಲ್ಲ. ನಾನು ಬೆಂಗಳೂರಿನ ಮೇಲೆ ಬಹಳ ಆಸಕ್ತಿ ಹೊಂದಿದ್ದೇನೆ. ಯೋಜನೆಯಲ್ಲಿ ಯಾವುದೇ ಲೋಪ, ಭ್ರಷ್ಟಾಚಾರ ಇದ್ದರೆ, ಯಾವುದೇ ತನಿಖೆಗೂ ಸಿದ್ಧ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

‘ಧರ್ಮಸ್ಥಳದ ವಿರುದ್ಧ ದೊಡ್ಡ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ವಿಚಾರದಲ್ಲಿ ದೊಡ್ಡ ಷಡ್ಯಂತ್ರ ನಡೆದಿದೆ. ಇದನ್ನು ಯಾರು ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಧರ್ಮಸ್ಥಳ ಆಡಳಿತ ಮಂಡಳಿ ಮೇಲೆ ಕಪ್ಪು ಚುಕ್ಕೆ ತರಲು ವ್ಯವಸ್ಥಿತವಾಗಿ ಷಡ್ಯಂತ್ರ ರೂಪಿಸಲಾಗಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಧರ್ಮಸ್ಥಳದ ಕುರಿತ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ‘ಈ ವಿಷಯವನ್ನು ರಾಜಕೀಯಕ್ಕೆ ತಿರುಗಿಸಬೇಡಿ. ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಹೈಕಮಾಂಡ್‌ಅನ್ನು ಎಳೆದು ತರಬೇಡಿ’ ಎಂದರು.

‘ಈ ವಿಚಾರವಾಗಿ ಇಲ್ಲಿ ನಾವು ನಾಲ್ಕು ಜನ ಮಾತನಾಡುವುದು ಅಷ್ಟೇ ಅಲ್ಲ, ನಾಡಿನ ಲಕ್ಷಾಂತರ ಭಕ್ತಾದಿಗಳು ಈ ಕ್ಷೇತ್ರವನ್ನು ನಂಬಿದ್ದಾರೆ. ದೇಶದಲ್ಲಿ ಅನ್ನದಾಸೋಹ ಆರಂಭವಾಗದೇ ಇದ್ದ ಕಾಲದಲ್ಲೇ ಈ ಕ್ಷೇತ್ರದಲ್ಲಿ ಇದನ್ನು ಆರಂಭಿಸಲಾಗಿತ್ತು’ ಎಂದು ಅವರು ಹೇಳಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಪ್ರಕರಣದ ಸಂಪೂರ್ಣ ಮಾಹಿತಿ ನನಗೂ ಗೊತ್ತಿದೆ. ಇದು ಖಾಲಿ ಟ್ರಂಕ್. ಹೀಗಾಗಿ ಜಾಸ್ತಿ ಸದ್ದು ಮಾಡುತ್ತಿದೆ ಅಷ್ಟೇ. ಯಾವುದೇ ಧರ್ಮದ ಭಾವನೆಗೂ ಚ್ಯುತಿ ಬರಬಾರದು. ಯಾರು ತಪ್ಪು ಮಾಡುತ್ತಾರೋ ಅವರಿಗೆ ಶಿಕ್ಷೆ ಆಗಬೇಕು. ತಪ್ಪು ಮಾಡಿದವರ ರಕ್ಷಣೆ ಮಾಡುವುದಿಲ್ಲ. ಏನೂ ಇಲ್ಲದೇ ಈ ರೀತಿ ಸೃಷ್ಟಿ ಮಾಡಿದ್ದಾರೆ. ಈ ವಿಚಾರ ನ್ಯಾಯಾಲಯದಲ್ಲಿ ಬಂದ ನಂತರ ಇದನ್ನು ಸರಿಯಾಗಿ ತನಿಖೆ ಮಾಡಬೇಕು. ಅದಕ್ಕಾಗಿ ಎಸ್‌ಐಟಿ ರಚಿಸಿ ತನಿಖೆ ಮಾಡಿಸಲಾಗುತ್ತಿದೆ’ ಎಂದು ತಿಳಿಸಿದರು.

‘ನೂರಾರು ವರ್ಷದಿಂದ ಬಂದ ಪರಂಪರೆ ನಾಶ ಮಾಡಲು ಹೊರಟಿದ್ದಾರೆ. ಯಾರನ್ನೇ ಆಗಲಿ ಅನಗತ್ಯವಾಗಿ ತೇಜೋವಧೆ ಮಾಡುವುದು ಸರಿಯಲ್ಲ. ನಮಗೆ ನಮ್ಮದೇ ಆದ ನಂಬಿಕೆ ಇದೆ. ಅವನ್ಯಾರೋ ಮುಸುಕುಧಾರಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ ಪರಿಣಾಮ ಇದೆಲ್ಲ ಆಗಿದೆ’ ಎಂದರು.

‘ನಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ನಮ್ಮ ನಾಯಕರಾದ ಶಿವಲಿಂಗೇಗೌಡ, ಬೇಳೂರು ಗೋಪಾಲಕೃಷ್ಣ, ಅಶೋಕ್ ಕುಮಾರ್ ರೈ ಸೇರಿ ಹಲವರು ಈ ವಿಚಾರ ಮಾತನಾಡಿದ್ದಾರೆ. ಈ ವಿಚಾರದಲ್ಲಿ ಅಪಪ್ರಚಾರ ಮಾಡಿ ಯಾರು ದಾರಿ ತಪ್ಪಿಸುತ್ತಿದ್ದಾರೋ ಅವರ ವಿರುದ್ಧ ತನಿಖೆ ಮಾಡಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಇಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಯವರೂ ತಿಳಿಸಿದ್ದಾರೆ’ ಎಂದರು.

ಸುಳ್ಳು ಆಪಾದನೆಗೆ ಶಿಕ್ಷೆ ಖಚಿತ: ಪರಮೇಶ್ವರ



ಜಿ.ಪರಮೇಶ್ವರ

‘ಧರ್ಮಸ್ಥಳದ ಬಗ್ಗೆ ನಮಗೂ ಗೌರವವಿದೆ. ಆದರೆ, ಆಪಾದನೆ ಬಂದಾಗ ಸತ್ಯ ಹೊರ ಬರಬೇಕು. ಒಂದು ವೇಳೆ ಆರೋಪ ಸುಳ್ಳಾದರೆ ಆರೋಪಿಸಿದ ವ್ಯಕ್ತಿಯನ್ನು ಶಿಕ್ಷೆಗೆ ಗುರಿಪಡಿಸುವ ಅಧಿಕಾರವಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಸಭೆಯಲ್ಲಿ ಧರ್ಮಸ್ಥಳದ ಮೇಲಿನ ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ‘ಎಸ್‌ಐಟಿಗೆ ತನಿಖೆ ನಡೆಸಲು ಮುಕ್ತ ಅವಕಾಶ ನೀಡಲಾಗಿದೆ. ಯಾವುದೇ ಅಧಿಕಾರಿಗೂ ನಾನಾಗಲಿ ಮುಖ್ಯಮಂತ್ರಿಯಾಗಲಿ ಒಂದು ಫೋನ್ ಕರೆ ಕೂಡ ಮಾಡಿಲ್ಲ. ಸುಳ್ಳು ಆಪಾದನೆ ಮಾಡಿದವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿದೆ’ ಎಂದರು.

‘ಸರ್ಕಾರ ಯಾರ ಒತ್ತಡಕ್ಕೂ ಮಣಿದು ಎಸ್‌ಐಟಿ ರಚನೆ ಮಾಡಿಲ್ಲ. ಇಷ್ಟು ದೊಡ್ಡ ಆರೋಪ ಬಂದಾಗ ಸತ್ಯ ಹೊರಗೆ ಬರಲೇಬೇಕು, ನ್ಯಾಯ ಕೊಡಬೇಕು ಎಂಬ ಕಾರಣಕ್ಕೆ ಎಸ್‌ಐಟಿ ರಚನೆ ಮಾಡಲಾಗಿದೆ. ಧರ್ಮಸ್ಥಳ ಸಮಾಜಕ್ಕೆ ಹಲವು ಕ್ಷೇತ್ರಗಳಲ್ಲಿ ದೊಡ್ಡ ಮಟ್ಟದ ಕೊಡುಗೆ ನೀಡಿದೆ. ಆದ ಕಾರಣಕ್ಕೆ ವೀರೇಂದ್ರ ಹೆಗ್ಗಡೆ ಅವರಿಗೆ ಪದ್ಮಶ್ರೀ ನೀಡಲಾಗಿದೆ. ಅಲ್ಲಿ ಹಲವು ಮಕ್ಕಳು ಜೀವನ ಕಟ್ಟಿಕೊಳ್ಳಲು ಶಿಕ್ಷಣ ನೀಡಿದ್ದಾರೆ. ಗ್ರಾಮೀಣ ಜನತೆಯ ಜೀವನ ಹಸನಾಗಲು ನೆರವಾಗಿದ್ದಾರೆ’ ಎಂದು ಪರಮೇಶ್ವರ ಅವರು ಹೇಳಿದರು.

‘ಆಪಾದನೆ ಬಂದಿದೆ. ತನಿಖೆ ಮಾಡದೇ ಇದ್ದರೆ ಆಪಾದನೆ ಹಾಗೇ ಉಳಿಯುತ್ತದೆ. ಸತ್ಯ ಶೋಧನೆ ಆಗಿ ಸತ್ಯ ಹೊರಬರಬೇಕು ಅಲ್ಲವೇ, ಸರ್ಕಾರ ಯಾವುದೇ ತಪ್ಪು ಮಾಡಿಲ್ಲ. ಈ ಚರ್ಚೆಗೆ ಸೋಮವಾರ ಉತ್ತರ ನೀಡುತ್ತೇನೆ’ ಎಂದು ಅವರು ತಿಳಿಸಿದರು.

ಕೆ.ಎನ್. ರಾಜಣ್ಣ ವಜಾ: ಪಕ್ಷದ ಆಂತರಿಕ ವಿಷಯ- ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವ ಪ್ರಕರಣದ ಬಗ್ಗೆ ಮೊದಲ ಬಾರಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ನಮ್ಮ ಪಕ್ಷದ ಆಂತರಿಕ ವಿಷಯಗಳನ್ನು ನಿಮಗೆಲ್ಲ ಹೇಳಲು ಸಾಧ್ಯವಿಲ್ಲ’ ಎಂದು ಪ್ರತಿಪಕ್ಷ ನಾಯಕರನ್ನು ಉದ್ದೇಶಿಸಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಸಚಿವ ರಾಜಣ್ಣ ಅವರನ್ನು ಏಕೆ ತೆಗೆದುಹಾಕಿದಿರಿ. ದಲಿತ ನಾಯಕನಿಗೆ ಅನ್ಯಾಯ ಮಾಡುತ್ತಿದ್ದೀರಿ, ಮಾಹಿತಿ ಕೊಡಿ’ ಎಂದು ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

‘ಸಭಾನಾಯಕರು ಈ ಬಗ್ಗೆ ಉತ್ತರ ಕೊಡಿಸುವ ಭರವಸೆ ನೀಡಿದ್ದರು’ ಎಂದು ನಾರಾಯಣಸ್ವಾಮಿ ಹೇಳಿದಾಗ, ‘ಸರ್ಕಾರ ಉತ್ತರ ನೀಡಿಯಾಗಿದೆ’ ಎಂದು ಸಭಾನಾಯಕ ಬೋಸರಾಜು ಹೇಳಿದರು.

‘ಈ ಪ್ರಶ್ನೆ ಮೊನ್ನೆ ಪ್ರಸ್ತಾಪವಾದಾಗ, ಅವರನ್ನು ತೆಗೆಯೋದು ಇಟ್ಟುಕೊಳ್ಳೋದು ಸರ್ಕಾರದ ನಿರ್ಧಾರ ಎಂದು ಸಭಾನಾಯಕರು ಹೇಳಿದ್ದಾರೆ. ಅಲ್ಲಿಗೆ ಆ ಪ್ರಕರಣವನ್ನು ಮುಕ್ತಾಯ ಮಾಡಿದ್ದೇನೆ. ಮತ್ತೆ ಅದನ್ನು ಮಾತನಾಡುವಂತಿಲ್ಲ’ ಎಂದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಮಂಜುನಾಥ ಭಂಡಾರಿ ಅವರನ್ನು ಪೀಠದಲ್ಲಿ ಕೂರಿಸಿ ಹೊರಟರು.

‘ಉತ್ತರ ನೀಡಲೇಬೇಕು’ ಎಂದು ಬಿಜೆಪಿ ಸದಸ್ಯರು ಒತ್ತಾಯ ಮಾಡುತ್ತಿದ್ದರು. ಸಿದ್ದರಾಮಯ್ಯ ಅವರು ಯಾವುದೇ ಪ್ರತಿಕ್ರಿಯೆ ನೀಡದೆ ಸದನದಿಂದ ಹೊರಡಲು ಸಿದ್ಧರಾದರು. ‘ದಯವಿಟ್ಟು ಪಲಾಯನ ಮಾಡಬೇಡಿ ಮುಖ್ಯಮಂತ್ರಿಯವರೇ’ ಎಂದು ಛಲವಾದಿ ನಾರಾಯಣಸ್ವಾಮಿ ಹೇಳಿದರು.

ವಾಪಸ್ ಬಂದ ಸಿದ್ದರಾಮಯ್ಯ, ‘ಏನು ಮಾತಾಡುತ್ತಾ ಇದ್ದೀರಿ ನೀವು? ನಾವು ನಿಮ್ಮ ಪ್ರಶ್ನೆಗೆ ಉತ್ತರಿಸುವುದಿಲ್ಲ. ಸಭಾನಾಯಕರು ಈಗಾಗಲೇ ಉತ್ತರಿಸಿದ್ದಾರೆ’ ಎಂದರು.

‘ದಲಿತ ನಾಯಕನಿಗೆ ಅನ್ಯಾಯವಾಗಿದೆ. ಇದು ಕಾಂಗ್ರೆಸ್‌ನ ಸಂಸ್ಕೃತಿ’ ಎಂದು ನಾರಾಯಣಸ್ವಾಮಿ ದೂರಿದರು.

ಇದರಿಂದ ಸಿಟ್ಟಾದ ಸಿದ್ದರಾಮಯ್ಯ ಅವರು, ‘ಇದು ನಮ್ಮ ಸಂಸ್ಕೃತಿಯಲ್ಲ, ನಿಮ್ಮ ಸಂಸ್ಕೃತಿ. ಧನಕರ್ ರಾಜೀನಾಮೆ ಕೊಟ್ಟರಲ್ವಾ, ಚರ್ಚೆ ಮಾಡಿದ್ದೀರಾ? ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ಯಾಕೆ ರಾಜೀನಾಮೆ ಕೊಟ್ಟರು, ಯಾರಾದರೂ ಕಾರಣ ಕೊಟ್ಟರಾ? ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದಿರಿ; ಯಾಕೆ ಅಂತ ಹೇಳಿದೀರಾ? ಇವೆಲ್ಲ ಪಕ್ಷದ ಆಂತರಿಕ ವಿಷಯಗಳು. ನಿಮಗೆ ಹೇಳಬೇಕಾದ ಅಗತ್ಯ ಇಲ್ಲ’ ಎಂದು ಮೂರು ಬಾರಿ ಎಂದು ಹೇಳಿ ಸದನದಿಂದ ಹೊರಟರು.

‘ದಲಿತ ವಿರೋಧಿ ನೀತಿ, ಪಲಾಯನವಾದ’ ಎಂದು ಬಿಜೆಪಿಯ ಸಿ.ಟಿ. ರವಿ, ರವಿಕುಮಾರ್, ಭಾರತಿ ಶೆಟ್ಟಿ ಘೋಷಣೆ ಕೂಗಿದರು.

ಧರ್ಮಸ್ಥಳ: ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ

10 ವರ್ಷದ ಹಿಂದೆ ಬಾಲಕಿ ನಾಪತ್ತೆ: ಎಸ್‌ಐಟಿಗೆ ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ), ಬಂಟ್ವಾಳ ತಾಲ್ಲೂಕಿನ ಕಾವಳ ಮೂಡೂರು ಗ್ರಾಮದ ಬಾಲಕಿಯೊಬ್ಬಳು 2012ರಲ್ಲಿ ನಾಪತ್ತೆಯಾದ ಬಗ್ಗೆ ಗುರುವಾರ ದೂರು ಸಲ್ಲಿಕೆ ಆಗಿದೆ.

ಬಾಲಕಿ ಹೇಮಾವತಿಯ ಅಣ್ಣ ನಿತಿನ್ ದೇವಾಡಿಗ ಅವರು ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ತೆರಳಿ ದೂರು ನೀಡಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಮ್ಮ ತಂಗಿ ಧರ್ಮಸ್ಥಳಕ್ಕೆ ಹೋಗುತ್ತೇನೆ ಎಂದು ಹೇಳಿ 10 ವರ್ಷ ಹಿಂದೆ ಮನೆ ಸಮೀಪದ ಮಹಿಳೆಯೊಬ್ಬರ ಜೊತೆ ಹೋಗಿದ್ದವಳು ಈವರೆಗೂ ಮನೆಗೆ ಮರಳಿಲ್ಲ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೆವು. ಆದರೆ ಅವರು ದೂರು ಸ್ವೀಕರಿಸಿಲ್ಲ. ದೂರು ನೀಡಿದ ಕುರಿತ ದಾಖಲಾತಿಗಳೂ ಈಗ ನಮ್ಮಲ್ಲಿ ಇಲ್ಲ. ಕಾಣೆಯಾದಾಗ ತಂಗಿಗೆ 17 ವರ್ಷ’ ಎಂದು ಮಾಹಿತಿ ನೀಡಿದರು.

‘ಧರ್ಮಸ್ಥಳಕ್ಕೆ ತೆರಳಿದ್ದಾಗ ಕಾಣೆಯಾಗಿರುವವರ ಬಗ್ಗೆ ಮಾಹಿತಿ ಇದ್ದರೆ ಹಂಚಿಕೊಳ್ಳುವಂತೆ ಎಸ್‌ಐಟಿಯವರು ಪ್ರಕಟಣೆ ನೀಡಿದ್ದಾರೆ. ಹಾಗಾಗಿ ಎಸ್‌ಐಟಿ ಕಚೇರಿಗೆ ಬಂದು ದೂರು ನೀಡಿದ್ದೇವೆ. ತಂಗಿ ಏನಾದಳು, ಆಕೆಗೆ ಏನಾದರೂ ಹೆಚ್ಚು ಕಮ್ಮಿ ಆಗಿದೆಯೇ ಎಂಬುದು ನಮಗೆ ಗೊತ್ತಾಗಬೇಕು. ಮಗಳನ್ನು ಕಳೆದುಕೊಂಡ ನಮ್ಮ ತಾಯಿ ಈಗಲೂ ಕೊರಗುತ್ತಿದ್ದಾರೆ. ಆ ಚಿಂತೆಯಲ್ಲೇ ಮಾನಸಿಕ ಸಮಸ್ಯೆಗೆ ಒಳಗಾಗಿದ್ದಾರೆ’ ಎಂದರು.

‘ತಂಗಿ ಎಂಟನೇ ತರಗತಿವರೆಗೆ ಕಲಿತಿದ್ದಳು. ಬಳಿಕ ಓದನ್ನು ಅರ್ಧದಲ್ಲೇ ತ್ಯಜಿಸಿ, ಮನೆಯಲ್ಲಿ ಬೀಡಿ ಕಟ್ಟುತ್ತಿದ್ದಳು. ಆಕೆ ಬಳಿ ಮೊಬೈಲ್ ಇರಲಿಲ್ಲ. ಆಕೆಯನ್ನು ಕರೆದೊಯ್ದಿದ್ದ ಮನೆಯ ಸಮೀಪದ ಮಹಿಳೆ ನನಗೆ ಫೋನ್ ಮಾಡಿ, ‘ತಂಗಿಯನ್ನು ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದೇನೆ’ ಎಂದು ತಿಳಿಸಿದ್ದರು. ಆ ಮಹಿಳೆ ಅಲ್ಲಿಂದ ಮರಳಿದ ಬಳಿಕ ತಂಗಿಯ ಸುಳಿವಿಲ್ಲ. ಆ ಮಹಿಳೆ ಬಳಿ ವಿಚಾರಿಸಿದಾಗ, ‘ನನಗೆ ಏನೂ ಗೊತ್ತಿಲ್ಲ’ ಎಂದೇ ಹೇಳಿದ್ದರು. ಅವರು ಈಗ ನಮ್ಮ ಜೊತೆ ಮಾತನಾಡುತ್ತಿಲ್ಲ’ ಎಂದು ತಿಳಿಸಿದ್ದಳು. ನಿತಿನ್ ಅವರ ಸೋದರ ನಿತೇಶ್ ದೇವಾಡಿಗ ಕೂಡಾ ಜೊತೆಯಲ್ಲಿದ್ದರು.

‘ಸಹೋದರಿಯು ಧರ್ಮಸ್ಥಳ ದೇವಸ್ಥಾನಕ್ಕೆ 2012ರಲ್ಲಿ ತೆರಳಿದ್ದು, ಬಳಿಕ ಮನೆಗೆ ಹಿಂತಿರುಗಿಲ್ಲ. ಬಗ್ಗೆ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿ ಎಂದು ನಿವಾಸಿ ನಿತಿನ್ ದೇವಾಡಿಗ ಅವರು ಪುಂಜಾಲಕಟ್ಟೆ ಪೊಲೀಸ್ ಠಾಣೆಗೂ ದೂರು ನೀಡಿದ್ದಾರೆ.

ಹೊಸ ಜಾಗದಲ್ಲಿ ಶೋಧ: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರ ಕನ್ಯಾಡಿ ಬಳಿ ನೇತ್ರಾವತಿ ನದಿ ಬಳಿ ಹೊಸ ಜಾಗವನ್ನು ಗುರುವಾರ ಎಸ್‌ಐಟಿ ಅಧಿಕಾರಿಗಳಿಗೆ ತೋರಿಸಿದ್ದು, ಅಲ್ಲಿ ನಡೆದ ಶೋಧ ಕಾರ್ಯ ನಡೆಯಿತು. ಸ್ನಾನಘಟ್ಟದ ಪಕ್ಕದಲ್ಲಿ ಹರಿಯುವ ನೇತ್ರಾವತಿ ನದಿಯ ಇನ್ನೊಂದು ಬದಿಯಲ್ಲಿದ್ದ ಈ ಜಾಗ ಉಜಿರೆ–ಧರ್ಮಸ್ಥಳ ರಸ್ತೆಯಿಂದ ಸುಮಾರು 1 ಕಿ.ಮೀ ದೂರದಲ್ಲಿತ್ತು.

‘ಸಾಕ್ಷಿ ದೂರುದಾರ ಗುರುವಾರ ತೋರಿಸಿದ ಜಾಗ ಖಾಸಗಿ (ದ್ವಾರಕ ಆಶ್ರಮ) ಸ್ವತ್ತು. ಆ ಜಾಗದ ಮಾಲೀಕರ ಅನುಮತಿ ಪಡೆದು ಅಲ್ಲಿ ಶೋಧ ಕಾರ್ಯ ನಡೆಸಿದ್ದೇವೆ. ಅಲ್ಲೂ ಮೃತದೇಹ ಹೂತು ಹಾಕಿದ್ದ ಯಾವುದೇ ಕುರುಹು ಸಿಕ್ಕಿಲ್ಲ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹಾಗೂ ಎಸ್‌ಐಟಿ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ, ವಿಧಿ ವಿಜ್ಞಾನ ತಜ್ಞರು ಸ್ಥಳದಲ್ಲಿದ್ದರು. ಈ ಜಾಗಕ್ಕೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ನಿರಾಕರಿಸಲಾಗಿತ್ತು.

ಸಾಕ್ಷಿ ದೂರುದಾರ ಇದುವರೆಗೆ ಶವಗಳನ್ನು ಹೂತಿರುವುದಾಗಿ ಹೇಳಿ 18 ಜಾಗಗಳನ್ನು ತೋರಿಸಿದ್ದು, ಅವುಗಳಲ್ಲಿ ಶೋಧ ನಡೆಸಿದಾಗ ಎರಡು ಕಡೆ ಮೃತದೇಹದ ಅವಶೇಷ ಪತ್ತೆಯಾಗಿವೆ. ಒಂದು ಕಡೆ (ಸಾಕ್ಷಿ ದೂರುದಾರ ತೋರಿಸಿದ 11ನೇ ಜಾಗಕ್ಕಿಂತ 100 ಮೀ ದೂರದಲ್ಲಿದ್ದ ಜಾಗ) ನೆಲದ ಮೇಲೆಯೇ ಮೃತದೇಹ ಸಿಕ್ಕಿತ್ತು. ಒಟ್ಟು 17 ಜಾಗಗಳಲ್ಲಿ ಎಸ್‌ಐಟಿಯವರು ನೆಲವನ್ನು ಅಗೆದು ಶೋಧ ನಡೆಸಿದ್ದಾರೆ.



ಧರ್ಮಸ್ಥಳದಲ್ಲಿ ಸಾಕ್ಷಿ ದೂರುದಾರ ಉಳಿದುಕೊಂಡಿದ್ದ ಎನ್ನಲಾದ ಸ್ಥಳದ ಮಹಜರು ಕಾರ್ಯ ಗುರುವಾರ ನಡೆಯಿತು

ಸಾಕ್ಷಿ ದೂರುದಾರ ಉಳಿದುಕೊಂಡಿದ್ದ ಸ್ಥಳ ಮಹಜರು

ಸಾಕ್ಷಿ ದೂರುದಾರ ವ್ಯಕ್ತಿ ಈ ಹಿಂದೆ ಧರ್ಮಸ್ಥಳ ಗ್ರಾಮದಲ್ಲಿದ್ದ ಎನ್ನಲಾದ ಜಾಗದಲ್ಲಿ ಎಸ್‌ಐಟಿಯವರು ಗುರುವಾರ ಮಹಜರು ನಡೆಸಿದರು.

‘ಧರ್ಮಸ್ಥಳದ ಮಾಹಿತಿ ಕೇಂದ್ರದ ಸಮೀಪದಲ್ಲಿ ಕೊಠಡಿಯೊಂದರಲ್ಲಿ ಸಾಕ್ಷಿ ದೂರುದಾರ ಹಿಂದೆ ಉಳಿದುಕೊಂಡಿದ್ದ. ಕೊಲೆ ಪ್ರಕರಣಗಳ ಸಂಬಂಧ ಆತ ನೀಡಿದ್ದ ಹೇಳಿಕೆ ಆಧರಿಸಿ ಅಲ್ಲಿಗೆ ಆತನನ್ನು ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘4 ಪ್ರಕರಣ ಎಸ್‌ಐಟಿಗೆ ವಹಿಸಲು ಆಗ್ರಹಿಸಿ 24ರಂದು ಉಜಿರೆ ಚಲೊ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಸೌಜನ್ಯಾ ಅತ್ಯಾಚಾರ ಮತ್ತು ಹತ್ಯೆ ಪ್ರಕರಣ ಸೇರಿದಂತೆ ಧರ್ಮಸ್ಥಳ ಗ್ರಾಮದಲ್ಲಿ ನಡೆದ ನಾಲ್ಕು ಕೊಲೆ ಪ್ರಕರಣಗಳನ್ನು ಎಸ್‌ಐಟಿಗೆ ವಹಿಸಬೇಕು ಎಂದು ಒತ್ತಾಯಿಸಿ ಇದೇ 24ರಂದು ಉಜಿರೆ ಚಲೊ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ’ ಎಂದು ‘ಸೌಜನ್ಯಾ ಹೋರಾಟ ಸಮಿತಿ’ಯ ಪ್ರಮುಖ ಕೆ.ದಿನೇಶ್ ಗಾಣಿಗ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿನಿ ಪದ್ಮಲತಾ, ಶಿಕ್ಷಕಿ ವೇದವಲ್ಲಿ, ಮಾವುತ ನಾರಾಯಣ ಮತ್ತು ಯಮುನಾ ಕೊಲೆ ಪ್ರಕರಣವನ್ನು ಈಗ ಧರ್ಮಸ್ಥಳದಲ್ಲಿ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಥವಾ ಬೇರೆ ತಂಡಕ್ಕೆ ವಹಿಸಬೇಕು ಎಂದು ಒತ್ತಾಯಿಸಿದರು.

ನಾಲ್ಕು ಪ್ರಕರಣಗಳನ್ನು ಎಸ್‌ಐಟಿಗೆ ವಹಿಸಬೇಕು ಮತ್ತು ಧರ್ಮಸ್ಥಳ ಗ್ರಾಮದಲ್ಲಿ ನಡೆದಿರುವ ಎಲ್ಲ ಕೊಲೆ ಪ್ರಕರಣಗಳ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸುವುದು ಮತ್ತು ಈಗ ನಡೆಯುತ್ತಿರುವ ಎಸ್‌ಐಟಿ ತನಿಖೆಯನ್ನು ಬೆಂಬಲಿಸುವುದು ಉಜಿರೆ ಚಲೊದ ಉದ್ದೇಶ ಎಂದು ಅವರು ತಿಳಿಸಿದರು.

ಕೊಲೆಗಳ ರಹಸ್ಯ ಭೇದಿಸದೇ ಇರುವುದರಿಂದ ಧರ್ಮಸ್ಥಳ ಕ್ಷೇತ್ರದ ಹೆಸರಿಗೆ ಕಳಂಕ ಬರುವಂತಾಗಿವೆ. ಇದಕ್ಕೆ ಪ್ರಮುಖ ಕಾರಣ ಪೊಲೀಸರ ಲೋಪ. ಆದ್ದರಿಂದ ಎಲ್ಲ ಪ್ರಕರಣಗಳ ಆರೋಪಿಗಳ ಬಗ್ಗೆ ಜನರಿಗೆ ತಿಳಿಯಬೇಕು. ಈ ಕುರಿತು ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ದೂರು ಸಲ್ಲಿಸಲಾಗಿದೆ. ಧರ್ಮಸ್ಥಳದ ಬಗ್ಗೆ ಪರವಾಗಿ ಅಥವಾ ವಿರುದ್ಧವಾಗಿ ಇಲ್ಲಸಲ್ಲದ ಆರೋಪ ಮಾಡುವ ಎಲ್ಲರ ಮೇಲೆಯೂ ಸುಮೊಟೊ ಪ್ರಕರಣ ದಾಖಲಿಸಬೇಕು ಎಂದು ಅವರು ಆಗ್ರಹಿಸಿದರು.

ಆದಿತ್ಯ, ಕಿರಣ್ ಮತ್ತು ಸಚಿನ್ ಪಾಲ್ಗೊಂಡಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

24ರಿಂದ 'ಮನುಷ್ಯತ್ವದೆಡೆಗೆ ಸಮುದಾಯ 50 ಜಾಥಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮುದಾಯ ಕರ್ನಾಟಕದಿಂದ 50ರ ಸಂಭ್ರಮವನ್ನು ಆಗಸ್ಟ್ 24 ರಿಂದ 27ರವರೆಗೆ 'ಮನುಷ್ಯತ್ವದೆಡೆಗೆ ಸಮುದಾಯ 50 ಜಾಥಾ' ಹಮ್ಮಿಕೊಳ್ಳುವ ಮೂಲಕ ಆಚರಿಸಲಾಗುತ್ತಿದೆ

ರವೀಂದ್ರ ಕಲಾಕ್ಷೇತ್ರದ ಸಂಸಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಬರಹಗಾರ ಬಂಜಗೆರೆ ಜಯಪ್ರಕಾಶ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮನುಷ್ಯತ್ವದೆಡೆಗೆ ಸಮುದಾಯ- ಕಲಾ ಶಿಬಿರವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪ. ಸ. ಕುಮಾರ್ ಉದ್ಘಾಟಿಸಲಿದ್ದಾರೆ. ರಾಷ್ಟ್ರೀಯ ನಾಟಕೋತ್ಸವ, ರಾಷ್ಟ್ರೀಯ ಬೀದಿ ನಾಟಕೋತ್ಸವ, ರಾಷ್ಟ್ರೀಯ ವಿಚಾರ ಸಂಕಿರಣ, ಕಿರುನಾಟಕ ಸ್ಪರ್ಧೆ, ಚಿತ್ರೋತ್ಸವ, ಕಿರುಚಿತ್ರೋತ್ಸವ/ ಕಿರುಚಿತ್ರ ಸ್ಪರ್ಧೆ, ಚಿತ್ರಕಲಾ ಶಿಬಿರ ಮತ್ತು ಪ್ರದರ್ಶನ, ರಂಗಗೀತೆ ಕಾರ್ಯಾಗಾರ, ಬೀದಿನಾಟಕ ಜಾಥಾ, ಬೈಕ್ ರ್ಯಾಲಿ, ಸಂಗೀತ ನೃತ್ಯ ಕಾರ್ಯಕ್ರಮಗಳು, ಹಿರಿಯ ರಂಗಕರ್ಮಿಗಳಿಗೆ ರಂಗಗೌರವ ನೀಡಲಾಗುತ್ತದೆ' ಎಂದು ಹೇಳಿದರು.

ದ್ವಿಭಾಷಾ ನೀತಿ ಜಾರಿಗೊಳಿಸಲು ಆಗ್ರಹ

ಪ್ರೊ.ಥೋರಟ್ ವರದಿ ಜಾರಿಗೊಳಿಸಿ • ಕರವೇಯಿಂದ ಅಹೋರಾತ್ರಿ ಧರಣಿ



ಕರ್ನಾಟಕದ ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ನೀತಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ನಡೆದ ಅಹೋರಾತ್ರಿ ಧರಣಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ ಸೇರಿದಂತೆ ಹಲವರು ಭಾಗಿಯಾದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕನ್ನಡ ಮತ್ತು ಇಂಗ್ಲಿಷ್ ಒಳಗೊಂಡ ದ್ವಿಭಾಷಾ ನೀತಿ ಜಾರಿಗೊಳಿಸಿ
- ಕನ್ನಡ ಕಲಿಸದ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಿ
- ಹಿಂದಿ ಹೇರಿಕೆಗೆ ಅವಕಾಶ ಬೇಡ

ಬೆಂಗಳೂರು: ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಒಳಗೊಂಡ ದ್ವಿಭಾಷಾ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಬೆಂಗಳೂರಿನಲ್ಲಿ ಗುರುವಾರ ಅಹೋರಾತ್ರಿ ಧರಣಿ ನಡೆಸಲಾಯಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಕರವೇ ಅಧ್ಯಕ್ಷ ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಶಿಕ್ಷಣ ತಜ್ಞ ಪ್ರೊ.ಸುಖದೇವ ಥೋರಟ್ ನೇತೃತ್ವದ ಸಮಿತಿ ಇತ್ತೀಚಿಗೆ ಸಲ್ಲಿಸಿದ ವರದಿಯಲ್ಲಿ ಭಾಷಾ ನೀತಿ ಜಾರಿ ವಿಚಾರವಾಗಿ ಸ್ಪಷ್ಟವಾಗಿ ಶಿಫಾರಸುಗಳನ್ನು ಮಾಡಿದೆ. ಇದನ್ನು ಜಾರಿಗೊಳಿಸಿ ಕನ್ನಡಕ್ಕೆ ಗೌರವ ನೀಡ ಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಲಾಯಿತು.

2024-25ನೇ ಸಾಲಿನಲ್ಲಿ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಲ್ಲಿ ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯನ್ನಾಗಿ ಕಲಿಸಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ. ಎಂಟನೇ ತರಗತಿಗೆ ಮೂರನೇ ಭಾಷೆಯಾಗಿ ಕನ್ನಡದ ಪಠ್ಯ ಪುಸ್ತಗಳನ್ನು ಮುದ್ರಿಸದಿರಲು ನಿರ್ಧರಿಸಿದೆ. ಆದರೆ ಈ ಮಾದರಿಯ ಶಾಲೆಗಳು ಕನ್ನಡವನ್ನು ಕಲಿಸದೇ ನ್ಯಾಯಾಲಯದ ಮೊರೆ ಹೋಗಿ ಸರ್ಕಾರಕ್ಕೆ ಸೆಡ್ಡು ಹೊಡೆಯುತ್ತಿವೆ. ಕನ್ನಡ ಕಲಿಸದ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಲಾಯಿತು.

> ತ್ರಿಭಾಷಾ ಸೂತ್ರದಿಂದ ವಿದ್ಯಾರ್ಥಿಗಳ ಮೇಲೆ ಅನಗತ್ಯ ಒತ್ತಡ ಹೇರಲಾಗುತ್ತಿದೆ. ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿಂದಿ ವಿಷಯದಲ್ಲಿ ಸುಮಾರು 90 ಸಾವಿರ ಮಕ್ಕಳು ಅನುತ್ತೀರ್ಣರಾಗಿದ್ದಾರೆ
> **ಟಿ.ಎ.ನಾರಾಯಣಗೌಡ**, ಕರವೇ ಅಧ್ಯಕ್ಷ

ಈ ವೇಳೆ ಮಾತನಾಡಿದ ನಾರಾಯಣಗೌಡ, ಥೋರಟ್ ಸಮಿತಿ ಕನ್ನಡವನ್ನು ಮಾತೃಭಾಷೆ ಹಾಗೂ ಇಂಗ್ಲಿಷ್ ಅನ್ನು ಕಲಿಕೆಯ ಭಾಷೆಯಾಗಿ ಗುರುತಿಸಿದೆ. ಈ ಗೊಂದಲಕ್ಕೆ ಅವಕಾಶ ನೀಡದೇ ಕನ್ನಡ ಮತ್ತು ಇಂಗ್ಲಿಷ್ ಎರಡೂ ಒಳಗೊಂಡ ಭಾಷಾ ನೀತಿ ಜಾರಿಗೆ ತಂದು ಯಾವುದೇ ಕಾರಣಕ್ಕೂ ಹಿಂದಿ ಹೇರಿಕೆಗೆ ಅವಕಾಶ ಮಾಡಿಕೊಡಬಾರದು. ಸದ್ಯ ಇರುವ ತ್ರಿಭಾಷಾ ಸೂತ್ರವನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಹಿಂದಿ ಹೇರುವ ಮೂಲಕ ಆ ಭಾಷೆಯೇ ಉನ್ನತವೆಂದು ಎತ್ತಿ ಹಿಡಿಯುವ ಪ್ರಯತ್ನಗಳು ಹಿಂದಿನಿಂದಲೂ ನಡೆದಿವೆ. ಹಿಂದಿಯ ಜತೆಗೆ 3ನೇ ಭಾಷೆಯಾಗಿ ಫ್ರೆಂಚ್, ರಷ್ಯನ್, ಜರ್ಮನ್ ಭಾಷೆ ಕಲಿಕೆಗೂ ಅವಕಾಶ ಮಾಡಿಕೊಡುವ ಬಗ್ಗೆಯೂ ಯೋಚಿಸಬೇಕು ಎಂದು ಒತ್ತಾಯಿಸಿದರು.

ಮದನ ಗೌಡ ಕಸಾಪ ಗೌರವ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ



ಮದನ ಗೌಡ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನೂತನ ಗೌರವ ಕಾರ್ಯದರ್ಶಿಯಾಗಿ ಪತ್ರಕರ್ತ ಎಚ್.ಬಿ.ಮದನ ಗೌಡ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಗುರುವಾರ ಇಲ್ಲಿ ಆದೇಶ ಪ್ರತಿ ಹಸ್ತಾಂತರಿಸಿದರು. ಗೌರವ ಕಾರ್ಯದರ್ಶಿ ಹುದ್ದೆಗೆ ಪದ್ಮಿನಿ ನಾಗರಾಜು ಹಾಗೂ ನೇ.ಭ. ರಾಮಲಿಂಗ ಶೆಟ್ಟಿ ಅವರು ಜೂನ್‌ನಲ್ಲಿ ರಾಜೀನಾಮೆ ನೀಡಿದ್ದರು. ಇದರಿಂದಾಗಿ ಗೌರವ ಕೋಶಾಧ್ಯಕ್ಷ ಹುದ್ದೆಯಲ್ಲಿದ್ದ ಬಿ.ಎಂ.ಪಟೇಲ್ ಪಾಂಡು ಅವರನ್ನು ಗೌರವ ಕಾರ್ಯದರ್ಶಿ ಹುದ್ದೆಗೆ ನಾಮನಿರ್ದೇಶನ ಮಾಡಲಾಗಿತ್ತು. ಖಾಲಿಯಿದ್ದ ಇನ್ನೊಂದು ಹುದ್ದೆಗೆ ಹಾಸನದ ಮದನ ಗೌಡ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

'ಮದನ ಗೌಡ ಅವರು ಮೂರು ದಶಕಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದು, ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಹಾಸನದ 'ಜನಮಿತ್ರ' ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ' ಎಂದು ಕಸಾಪ ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

'ಪುಸ್ತಕ ಐಷಾರಾಮಿ ವಸ್ತುವಾಗಬಾರದು'

ಸಮಾರಂಭದಲ್ಲಿ ಅಲ್ಲಮಪ್ರಭು ಬೆಟ್ಟದೂರು ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕಗಳು ಐಷಾರಾಮಿ ವಸ್ತುಗಳಾಗಬಾರದು. ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಗೆ ಪುಸ್ತಕಗಳನ್ನು ತಲುಪಿಸುವ ಜವಾಬ್ದಾರಿಯನ್ನು ಸರ್ಕಾರಿ ಪುಸ್ತಕ ಪ್ರಕಟಣೆ ಸಂಸ್ಥೆಗಳು ತೆಗೆದುಕೊಳ್ಳಬೇಕು' ಎಂದು ಸಾಹಿತಿ ಅಲ್ಲಮ ಪ್ರಭು ಬೆಟ್ಟದೂರು ಅಭಿಪ್ರಾಯಪಟ್ಟರು.

ಕನ್ನಡ ಪುಸ್ತಕ ಪ್ರಾಧಿಕಾರ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಿ.ಕೆ. ವೆಂಕಟರಾಮಯ್ಯ, ಗೌರೀಶ ಕಾಯ್ಕಿಣಿ, ಅ.ನ. ಕೃಷ್ಣರಾಯ, ಕೋ.ಚೆನ್ನಬಸಪ್ಪ ಹಾಗೂ ಸಿದ್ಧಲಿಂಗಯ್ಯ ಅವರ ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಕಾಡೆಮಿ ಮತ್ತು ಪ್ರಾಧಿಕಾರಗಳು ಪ್ರಕಟಿಸುವ ಪುಸ್ತಕಗಳು ಜನಮಾನಸವನ್ನು ಮುಟ್ಟಬೇಕು. ಸರ್ಕಾರಿ ಸಂಸ್ಥೆಗಳು ಪ್ರಕಟಿಸಿದ ಪುಸ್ತಕಗಳ ಖರೀದಿಗೆ ಸಾಹಿತ್ಯಾಸಕ್ತರು ಬೆಂಗಳೂರಿಗೆ ಬರುವುದು ತಪ್ಪಬೇಕು. ಆದ್ದರಿಂದ ಎಲ್ಲೆಡೆ ಪುಸ್ತಕಗಳು ಸಿಗುವ ವ್ಯವಸ್ಥೆಯನ್ನು ರೂಪಿಸಬೇಕು. ನಾವು ವಿದ್ಯಾರ್ಥಿಯಾಗಿದ್ದಾಗ ಸಿದ್ಧಲಿಂಗಯ್ಯ ಅವರ ಪುಸ್ತಕಗಳನ್ನು ₹2ಕ್ಕೆ ಖರೀದಿ ಮಾಡುತ್ತಿದ್ದೆವು. ಇತ್ತೀಚೆಗೆ ಪುಸ್ತಕಗಳು ಐಷಾರಾಮಿ ವಸ್ತುಗಳಾಗಿ ಮಾರ್ಪಡುತ್ತಿವೆ. ಜನಸಾಮಾನ್ಯರಿಗೆ ಸಾಹಿತ್ಯ ತಲುಪಬೇಕಾದರೆ ಕನಿಷ್ಠ ಬೆಲೆ ನಿಗದಿಪಡಿಸಿ, ಮಾರಾಟ ಮಾಡಬೇಕು' ಎಂದು ಆಗ್ರಹಿಸಿದರು.

> ಬಹುಸಂಸ್ಕೃತಿ ಈ ದೇಶದ ನಿಜವಾದ ಸಂಸ್ಕೃತಿ. ಏಕ ಸಂಸ್ಕೃತಿ ಹೇರುವ, ಕೋಮುವಾದ ಹರಡುವ ಸಂಕುಚಿತ ದೃಷ್ಟಿಕೋನ ಹೆಚ್ಚುತ್ತಿದೆ. ಇಡೀ ಭಾರತಕ್ಕೆ ವೈಚಾರಿಕ ದೃಷ್ಟಿಕೋನ ಅಗತ್ಯ
> **ಅಲ್ಲಮಪ್ರಭು ಬೆಟ್ಟದೂರು**, ಸಾಹಿತಿ

'ಕನ್ನಡದಲ್ಲಿ ಸಾಹಿತ್ಯದ ಮುಖ್ಯವಾದ ಧಾರೆ ವಿಚಾರ ಸಾಹಿತ್ಯ. ಈ ಪ್ರಕಾರದ ಸಾಹಿತ್ಯ ಪುಸ್ತಕಗಳೇ ಹೆಚ್ಚು ಮಾರಾಟವಾಗುತ್ತವೆ ಎನ್ನುವುದು ಸಮೀಕ್ಷೆಯೊಂದರಿಂದ ದೃಢಪಟ್ಟಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ ಓದುವವರ ಸಂಖ್ಯೆ ಕಡಿಮೆಯಿದ್ದು, ಬರೆಯುವವರು ಜಾಸ್ತಿಯಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಕೆಲವು ಪ್ರಾತಿನಿಧಿಕ ಕೃತಿಗಳ ಅಗತ್ಯವಿದ್ದು, ನವೋದಯ, ನವ್ಯ ಮತ್ತು ದಲಿತ ಬಂಡಾಯ ಕಾವ್ಯ ಹಾಗೂ ಕಥೆಗಳ ಸಂಚಿಕೆಗಳನ್ನು ಹೊರತರಬೇಕು' ಎಂದು ಹೇಳಿದರು.

ಬಿಡುಗಡೆಯಾದ ಸಾಹಿತ್ಯ ಸಂಪುಟಗಳ ಬಗ್ಗೆ ಮಾತನಾಡಿದಲೇಖಕಿ ಸಾವಿತ್ರಿ ಮುಜುಮದಾರ, 'ಯುವಜನರು ಹಳಗನ್ನಡ ಸಾಹಿತ್ಯವನ್ನು ಕಬ್ಬಿಣದ ಕಡಲೆ ಅಂದುಕೊಳ್ಳುತ್ತಾರೆ. ನಡುಗನ್ನಡ ಸಾಹಿತ್ಯದಿಂದ ದೂರ ಆಗುತ್ತಿದ್ದಾರೆ. ಅವರಿಗೆ ಆಧುನಿಕ ಕನ್ನಡ ಸಾಹಿತ್ಯವನ್ನೂ ತಿಳಿಸುವ ಅನಿವಾರ್ಯತೆ ಬಂದಿದೆ. ಅಕಾಡೆಮಿ ಮತ್ತು ಪ್ರಾಧಿಕಾರಗಳು ಪ್ರಕಟಿಸುತ್ತಿರುವ ಪುಸ್ತಕಗಳು ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗುತ್ತವೆ. ಆದ್ದರಿಂದ ವಿಶ್ವವಿದ್ಯಾಲಯಗಳಿಗೆ ಪುಸ್ತಕಗಳನ್ನು ತಲುಪಿಸುವ ಕೆಲಸವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪುಸ್ತಕದ ಸಂಪಾದಕರಾದ ಶಾ.ಮಂ. ಕೃಷ್ಣರಾಯ, ಲಕ್ಷ್ಮಣ ಕೊಡಸೆ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಸಿ. ರಮಾಕುಮಾರಿ ಸಿದ್ಧಲಿಂಗಯ್ಯ, ಸಾವಿತ್ರಿ ಮುಜುಮದಾರ, ಕೆ.ಎಂ. ಗಾಯಿತ್ರಿ, ಮಾನಸ, ಅಲ್ಲಮಪ್ರಭು ಬೆಟ್ಟದೂರು, ಶಾ.ಮಂ. ಕೃಷ್ಣರಾಯ ಮತ್ತು ಲಕ್ಷ್ಮಣ ಕೊಡಸೆ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಯುವಜನ ಆಯೋಗ ಸ್ಥಾಪನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಹರಿಸಲು ಯುವಜನ ಆಯೋಗ ರಚಿಸಬೇಕು ಎಂದು 'ಯುವ ಮುನ್ನಡೆ–ಕರ್ನಾಟಕ' ಸಾಮಾಜಿಕ ಸ್ಪಂದನೆಗಾಗಿ ಯುವಜನರ ವೇದಿಕೆ ಆಗ್ರಹಿಸಿದೆ.

ಯುವಜನರ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಅವರ ಕೊಡುಗೆಗಳನ್ನು ಗೌರವಿಸುವ ಉದ್ದೇಶದಿಂದ ವಿಶ್ವ ಯುವಜನ ದಿನ ಆಚರಿಸಲಾಗುತ್ತಿದೆ. ಆಚರಣೆಗೆ ಸೀಮಿತವಾಗದೇ ಸಮಸ್ಯೆ ಪರಿಹರಿಸಲು ಆಯೋಗ ಅಗತ್ಯ ಎಂದು ಸಹಯಾನ ಸಂವಾದ ಹಾಗೂ ಯುವಮುನ್ನಡೆ ಕಾರ್ಯಕ್ರಮದ ರೂವಾರಿ ರಾಮಕ್ಕ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾರತವು ವಿಶ್ವದಲ್ಲಿಯೇ ಹೆಚ್ಚು ಯುವಜನರನ್ನು ಹೊಂದಿದ ರಾಷ್ಟ್ರ. ಗುಣಮಟ್ಟದ ಶಿಕ್ಷಣದ ಕೊರತೆ, ಕೌಶಲ ರಹಿತ ಶಿಕ್ಷಣ ವ್ಯವಸ್ಥೆ, ಉದ್ಯೋಗಾವಕಾಶಗಳ ಕೊರತೆ, ಮಾನಸಿಕ ಒತ್ತಡ, ಆತ್ಮಹತ್ಯೆ ಮುಂತಾದ ಸಮಸ್ಯೆಗಳು ಕಾಡುತ್ತಿವೆ. ಯುವಜನರ ಧ್ವನಿಯನ್ನು ಗಮನಿಸುವ, ಸಮಾಲೋಚನೆ ನೀಡುವ, ಸಬಲೀಕರಣಕ್ಕಾಗಿ ಕಾರ್ಯಕ್ರಮ ರೂಪಿಸುವ ಆಯೋಗ ಬೇಕಾಗಿದೆ. ಅದಕ್ಕಾಗಿ ಯುವಧ್ವನಿ ಅಭಿಯಾನವನ್ನು ರಾಜ್ಯದಾದ್ಯಂತ ನಡೆಸಲಾಗುತ್ತಿದೆ. ಯುವಜನರು, ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ ಎಂದು ವಿವರಿಸಿದರು.

ದರ್ಶನ್, ಪವಿತ್ರಾ ಮತ್ತೆ ಜೈಲಿಗೆ

ಒಂದನೇ ಪುಟದಿಂದ...

ಅನುಕುಮಾರ್ ಹಾಗೂ ಜಗದೀಶ್ ಅವರನ್ನು ಶುಕ್ರವಾರ ಬೆಳಿಗ್ಗೆ ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಾಮೀನು ರದ್ದು ಆದೇಶ ಹೊರಬೀಳುವುದಕ್ಕೂ ಮುನ್ನ ಕೊಡಗು ಜಿಲ್ಲೆಯ ಸುಂಟಿಕೊಪ್ಪದ ಸ್ನೇಹಿತನ ಮನೆಯಿಂದ ತಮಿಳುನಾಡಿನ ಬನ್ನಾರಿಯಮ್ಮನ ಜಾತ್ರೆಗೆ ದರ್ಶನ್ ತೆರಳಿದ್ದರು. ಅಲ್ಲಿ ಕುದುರೆ ಖರೀದಿ ಸಂಬಂಧ ಮಾತುಕತೆ ನಡೆಸುತ್ತಿದ್ದರು. ಅದೇ ವೇಳೆ ಜಾಮೀನು ರದ್ದುಗೊಂಡಿರುವ ಮಾಹಿತಿ ಗೊತ್ತಾಗಿ ನಗರಕ್ಕೆ ವಾಪಸ್ ಬಂದರು. ಪತ್ನಿ ವಿಜಯಲಕ್ಷ್ಮಿ ಅವರಿಗೆ ಸೇರಿದ ಹೊಸಕೆರೆಹಳ್ಳಿಯ ಫ್ಲ್ಯಾಟ್‌ನಲ್ಲಿ ದರ್ಶನ್ ಅವರನ್ನು ಪೊಲೀಸರು ವಶಕ್ಕೆ ಪಡೆದು, ಬಂಧಿಸಿದರು. ದರ್ಶನ್ ಅವರು ಪ್ರಯಾಣಿಸಿದ್ದ ಜೀಪಿನ ದೃಶ್ಯವು ಟೋಲ್‌ವೊಂದರ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲೂ ಸೆರೆಯಾಗಿತ್ತು.

ಕಣ್ತಪ್ಪಿಸಿ ಫ್ಲ್ಯಾಟ್‌ಗೆ ತೆರಳಿದ್ದ ನಟ: ದರ್ಶನ್ ಅವರನ್ನು ಬಂಧಿಸಲು ಪೊಲೀಸರು ಸಿದ್ಧತೆ ನಡೆಸಿ, ಹುಡುಕಾಟ ನಡೆಸುತ್ತಿದ್ದರು. ಏಳು ಪೊಲೀಸ್ ತಂಡ ರಚಿಸಲಾಗಿತ್ತು. ಟೋಲ್ ಹಾಗೂ ವಿವಿಧ ಜಂಕ್ಷನ್‌ಗಳಲ್ಲಿ ಪೊಲೀಸರು ನಿಗಾ ವಹಿಸಿದ್ದರು. ರಾಜರಾಜೇಶ್ವರಿನಗರದ ಮನೆ ಹಾಗೂ ಹೊಸಕೆರೆಹಳ್ಳಿಯ ಫ್ಲ್ಯಾಟ್ ಬಳಿಯೂ ಪೊಲೀಸರು ಕಾದಿದ್ದರು. ಗುರುವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಪೊಲೀಸರ ಕಣ್ತಪ್ಪಿಸಿ ಬೇರೊಂದು ವಾಹನದಲ್ಲಿ ಬಂದಿದ್ದ ದರ್ಶನ್, ಫ್ಲ್ಯಾಟ್ ಒಳಗೆ ಹೋಗಿದ್ದರು. ಸ್ನೇಹಿತ ಧನ್ವೀರ್ ಜೀಪಿನಲ್ಲಿ ಬಂದಿದ್ದರು. ದರ್ಶನ್ ಬಂದಿದ್ದ ಮಾಹಿತಿ ತಿಳಿದು ಫ್ಲ್ಯಾಟ್‌ಗೆ ತೆರಳಿದ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದುಕೊಂಡರು. ಈ ಸಂದರ್ಭದಲ್ಲಿ ಪತ್ನಿ ವಿಜಯಲಕ್ಷ್ಮಿ ಫ್ಲ್ಯಾಟ್‌ನಲ್ಲಿ ಇದ್ದರು.

ಸುಪ್ರೀಂ ಕೋರ್ಟ್ ಆದೇಶ ಬರುವುದಕ್ಕೂ ಮುನ್ನ ಪವಿತ್ರಾಗೌಡ ಅವರು ಮನೆಯಲ್ಲಿ ತುಳಸಿ ಪೂಜೆ ನೆರವೇರಿಸಿ, ದೇವರ ಮೊರೆ ಹೋಗಿದ್ದರು. ಪೂಜೆಯ ಬಳಿಕ ದೇವಸ್ಥಾನಕ್ಕೆ ತೆರಳಿದ್ದರು. ಅಲ್ಲಿರುವಾಗಲೇ ಜಾಮೀನು ರದ್ದಾಗಿರುವ ಮಾಹಿತಿ ತಿಳಿದು ಕಣ್ಣೀರು ಹಾಕಿದರು. ಗಡಿಬಿಡಿಯಲ್ಲೇ ರಾಜರಾಜೇಶ್ವರಿನಗರದ ನಿವಾಸಕ್ಕೆ ವಾಪಸ್ಸಾದರು.

> ‘ನಟ ದರ್ಶನ್ ಅವರ ಜಾಮೀನು ರದ್ದಾಗಿರುವುದು ಕಾನೂನು ವ್ಯವಸ್ಥೆ, ನ್ಯಾಯಾಂಗದ ಮೇಲೆ ನಮ್ಮ ವಿಶ್ವಾಸ ಹೆಚ್ಚಾಗಿದೆ. ನಮ್ಮ ಮಗನ ಸಾವಿಗೆ ನ್ಯಾಯ ಸಿಗುವ ಭರವಸೆ ಇದೆ
> **ಕಾಶಿನಾಥಯ್ಯ ಶಿವನಗೌಡರ್**
> ರೇಣುಕಾಸ್ವಾಮಿ ತಂದೆ

ಶಾಕ್ ಆದೆ: ಡಿಕೆಶಿ

ಒಂದನೇ ಪುಟದಿಂದ...

ಆರೋಪಿಗಳಿಗೆ ಜೈಲಿನಲ್ಲಿ ರಾಜಾತಿಥ್ಯ ನೀಡುವ ಬಗ್ಗೆ ಕೋರ್ಟ್ ಪ್ರಸ್ತಾಪಿಸಿದೆ. ಇಂತಹ ನಡೆಯ ಮೇಲೆ ಕಣ್ಣಿಡುವುದಾಗಿ ಹೇಳಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಎಚ್ಚರಿಕೆಯಿಂದ ಇರಬೇಕು ಅಲ್ಲವಾ’ ಎಂದು ಪ್ರಶ್ನಿಸಿದರು.

ಅಷ್ಟರಲ್ಲಿ ನ್ಯಾಯಾಲಯದ ಆದೇಶದ ಪ್ರತಿಯೊಂದಿಗೆ ಮನೆಯ ಬಳಿಗೆ ಪೊಲೀಸರು ಬಂದಿದ್ದರು. ನ್ಯಾಯಾಲಯದಲ್ಲಿ ಶರಣಾಗತಿ ಆಗುವುದಾಗಿ ಆರೋಪಿ ಪರ ವಕೀಲರು ಮನವಿ ಮಾಡಿದರು. ಅದಕ್ಕೆ ಪೊಲೀಸರು ಅವಕಾಶ ನೀಡದೇ ಬಂಧಿಸಿ ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಕರೆತಂದರು.

ಬಂಧನ ಪ್ರಕ್ರಿಯೆಯ ದೃಶ್ಯವನ್ನು ಪೊಲೀಸ್ ಸಿಬ್ಬಂದಿಯೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡುತ್ತಿದ್ದರು. ಅವರ ಜತೆಗೆ ಪವಿತ್ರಾಗೌಡ ವಾಗ್ವಾದ ನಡೆಸಿದರು.

ಠಾಣೆಯಲ್ಲೇ ವೈದ್ಯಕೀಯ ಪರೀಕ್ಷೆ: ಗಿರಿನಗರದಲ್ಲಿ ಪ್ರದೂಷ್ ರಾವ್, ಮೈಸೂರಿನಲ್ಲಿ ನಾಗರಾಜ್, ಆರ್‌ಪಿಸಿ ಲೇಔಟ್‌ನಲ್ಲಿ ಲಕ್ಷ್ಮಣ್, ಚಿತ್ರದುರ್ಗದಲ್ಲಿ ಅನುಕುಮಾರ್ ಹಾಗೂ ಜಗದೀಶ್ ಅವರನ್ನು ಬಂಧಿಸಲಾಯಿತು. ಅನ್ನಪೂರ್ಣೇಶ್ವರಿ ಠಾಣೆಗೆ ವೈದ್ಯರನ್ನು ಕರೆಸಿಕೊಂಡು ಐವರು ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಠಾಣೆ ಮುಂದೆ ಅಭಿಮಾನಿಗಳ ಜಮಾವಣೆ: ದರ್ಶನ್ ಅವರನ್ನು ಅನ್ನಪೂರ್ಣೇಶ್ವರಿ ಠಾಣೆಗೆ ಕರೆತಂದಾಗ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರು. ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಅಮಾನತು: ಖಡಕ್ ಎಚ್ಚರಿಕೆ

4 ನಾವು ಜಾಮೀನು ಮಂಜೂರು ಹಾಗೂ ರದ್ದತಿ ಎರಡನ್ನೂ ಪರಿಗಣಿಸಿದ್ದೇವೆ. ಈ ಪ್ರಕರಣದಲ್ಲಿ ಹೈಕೋರ್ಟ್‌ನ ತೀರ್ಪು ಗಂಭೀರ ಕಾನೂನು ನ್ಯೂನತೆಗಳನ್ನು ಒಳಗೊಂಡಿದೆ. ಈ ತೀರ್ಪು ಸೆಕ್ಷನ್ 302, 120ಬಿ ಮತ್ತು 34 ಸೆಕ್ಷನ್‌ಗಳ ಅಡಿಯಲ್ಲಿ ಜಾಮೀನು ಮಂಜೂರು ಮಾಡಲು ಯಾವುದೇ ವಿಶೇಷ ಅಥವಾ ಸ್ಪಷ್ಟ ಕಾರಣ ದಾಖಲಿಸಲು ವಿಫಲವಾಗಿದೆ

5 ಇಂತಹ ಪ್ರಕರಣಗಳಲ್ಲಿ ಅಪರಾಧದ ಸ್ವರೂಪ ಮತ್ತು ಆಳ, ಆರೋಪಿಯ ಪಾತ್ರ ಮತ್ತು ವಿಚಾರಣೆಯಲ್ಲಿ ಮಧ್ಯಪ್ರವೇಶ ಮಾಡುವ ಅಪಾಯಗಳನ್ನು ಅರ್ಥ ಮಾಡಿಕೊಳ್ಳದೆ ಜಾಮೀನು ನೀಡುವುದು ವಿವೇಚನಾ ಅಧಿಕಾರದ ದುರುಪಯೋಗಕ್ಕೆ ಕಾರಣವಾಗುತ್ತದೆ

6 ಜನಪ್ರಿಯತೆಯು ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಕವಚವಾಗಲು ಸಾಧ್ಯವಿಲ್ಲ

7 ಜಾಮೀನು ದೊರೆತ ತಕ್ಷಣವೇ 2ನೇ ಆರೋಪಿಯು ಸಾರ್ವಜನಿಕ ಕಾರ್ಯಕ್ರಮಗಳಿಗೆ ಮರಳಿರುವುದು, ವಿಚಾರಣಾ ಸಾಕ್ಷಿಗಳೊಂದಿಗೆ ವೇದಿಕೆ ಹಂಚಿಕೊಂಡಿರುವುದು, ಪೊಲೀಸ್ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿರುವುದು... ಇವೆಲ್ಲವೂ ವಿಚಾರಣೆಯ ಸಮಗ್ರತೆಗೆ ಬೆದರಿಕೆ ಒಡ್ಡುತ್ತವೆ

8 ಸೆಲೆಬ್ರಿಟಿಗಳು ಸಮಾಜದಲ್ಲಿ ಮಾದರಿಯಾಗಿರುತ್ತಾರೆ. ಅವರು ತಮ್ಮ ಪ್ರಸಿದ್ಧಿಯಿಂದ ಸಾಮಾಜಿಕ ಮೌಲ್ಯಗಳ ಮೇಲೆ ಗಣನೀಯ ಪ್ರಭಾವ ಬೀರುತ್ತಾರೆ. ಅಂತಹ ವ್ಯಕ್ತಿಯು ಸಂಚುಗಾರಿಕೆ ಮತ್ತು ಹತ್ಯೆಯಂತಹ ಗಂಭೀರ ಆರೋಪಗಳನ್ನು ಹೊಂದಿದ್ದರೂ ಅವರನ್ನು ಸಡಿಲ ಬಿಡುವುದು ಸಮಾಜಕ್ಕೆ ತಪ್ಪು ಸಂದೇಶ ನೀಡುತ್ತದೆ

9 ಸಾಕ್ಷಿಗಳ ಮೇಲೆ ಬೆದರಿಕೆ, ವಿಧಿವಿಜ್ಞಾನ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಮೇಲೆ ಒತ್ತಡವು ಜಾಮೀನಿನ ರದ್ದತಿಯ ಅಗತ್ಯತೆಯನ್ನು ಒತ್ತಿ ಹೇಳುತ್ತಿವೆ

10 ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ವ್ಯಕ್ತಿಯು ತನ್ನ ಸಾಮಾಜಿಕ ಸ್ಥಿತಿಗತಿ ಅಥವಾ ಆರ್ಥಿಕ ಸ್ಥಿತಿಗತಿಯ ಕಾರಣದಿಂದ ಕಾನೂನಾತ್ಮಕ ಉತ್ತರದಾಯಿತ್ವದಿಂದ ಹೊರಗಿರಲು ಸಾಧ್ಯವಿಲ್ಲ

11 ಸಾಕ್ಷಿಗಳ ವಿಶ್ವಾಸಾರ್ಹತೆ ಮತ್ತು ಅವಲಂಬನೆಯನ್ನು ವಿಶ್ಲೇಷಿಸುವ ಅಧಿಕಾರವಿರುವುದು ವಿಚಾರಣಾ ನ್ಯಾಯಾಲಯಕ್ಕೆ ಮಾತ್ರ

12 ಈ ಪ್ರಕರಣದ ಗಾಂಭೀರ್ಯ ಪರಿಗಣಿಸಿ, ವಿಚಾರಣೆ ತ್ವರಿತಗೊಳಿಸಬೇಕು ಮತ್ತು ಕಾನೂನಾತ್ಮಕವಾಗಿ ಸೂಕ್ತ ತೀರ್ಪು ನೀಡಬೇಕು

ಪ್ರಾಸಿಕ್ಯೂಟರ್ ಆಯ್ಕೆ: ಗುಣಮಟ್ಟದ ತನಿಖೆ...


ಫಲ ನೀಡಿದ ಸರ್ಕಾರದ ವಿಶೇಷ ಮುತುವರ್ಜಿ: ಪ್ರಾಸಿಕ್ಯೂಷನ್ ಪಾಲಿಗೆ ವರವಾದ ಡಿಜಿಟಲ್ ಸಾಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕೂಡಲೇ ಪತ್ತೆಹಚ್ಚಲು ಮತ್ತು ಅಗತ್ಯವಾದ ನಿಖರ ಸಾಕ್ಷ್ಯಗಳನ್ನು ಕಲೆಹಾಕಲು ಆ್ಯಂಡ್ರಾಯ್ಡ್ ಮೊಬೈಲ್ ಫೋನ್‌ಗಳು ಈ ದಿನಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನೂಹ್ಯ ನೆರವು ನೀಡುತ್ತಿವೆ. ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಇದು ಸಾಬೀತಾಗಿದೆ.

ಇದೀಗ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲೂ ಪ್ರಾಸಿಕ್ಯೂಷನ್ ಪಾಲಿಗೆ ಡಿಜಿಟಲ್ ಸಾಕ್ಷ್ಯ ಮಹತ್ವದ ವರವಾಗಿ ಪರಿಣಮಿಸಿದೆ. ಅಷ್ಟೇ ಅಲ್ಲ, ಪ್ರಾಸಿಕ್ಯೂಟರ್‌ಗಳ ಆಯ್ಕೆಯಲ್ಲಿ ಸರ್ಕಾರ ವಹಿಸಿದ ವಿಶೇಷ ಮುತುವರ್ಜಿ ಫಲ ನೀಡಿದೆ.

- ಈ ಪ್ರಕರಣದಲ್ಲಿ 1ನೇ ಆರೋಪಿ ಪವಿತ್ರಾ ಗೌಡ ಮತ್ತು 2ನೇ ಆರೋಪಿ ನಟ ದರ್ಶನ್ ಅವರನ್ನು 2024ರ ಜೂನ್ 11ರಂದು ಬಂಧಿಸಲಾಗಿತ್ತು. ಇದರಲ್ಲಿ 17 ಜನ ಆರೋಪಿಗಳಿದ್ದಾರೆ. ಆರೋಪಿಗಳು ನಂತರದ ದಿನಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಪ್ರತ್ಯಕ್ಷ ಸೇರಿದಂತೆ ಒಟ್ಟು 272 ಜನ ಸಾಕ್ಷಿಗಳಿದ್ದಾರೆ.
- ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ಮತ್ತು ಸಿಬಿಐ (ಕೇಂದ್ರೀಯ ತನಿಖಾ ದಳ) ಪರ ಹೈಕೋರ್ಟ್ ಮತ್ತು ವಿಚಾರಣಾ ಕೋರ್ಟ್‌ಗಳಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ರಾಜ್ಯ ಸರ್ಕಾರ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆಗಿ 2024ರ ಜೂನ್ 15ರಂದು ನೇಮಕ ಮಾಡಿದೆ. ಅಂತೆಯೇ, ಆರೋಪಿಗಳ ಜಾಮೀನು ರದ್ದುಪಡಿಸುವಂತೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಮೇಲ್ಮನವಿಯಲ್ಲಿ ವಾದ ಮಂಡಿಸಿರುವ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಅವರು ಕ್ರಿಮಿನಲ್, ಸೈಬರ್ ಅಪರಾಧ ಪ್ರಕರಣಗಳಲ್ಲಿ ಹೆಸರುವಾಸಿ.
- ರಾಜ್ಯ ಪೊಲೀಸರ ತನಿಖಾ ಕಾರ್ಯ ವೈಖರಿಗೆ ಭಿನ್ನವಾದ ಪ್ರಾಸಿಕ್ಯೂಷನ್ ಕಾರ್ಯ ವಿಧಾನಗಳನ್ನು ಅಂದರೆ ಎನ್‌ಐಎ ಮತ್ತು ಸಿಬಿಐ ಗುಣಮಟ್ಟದ ತನಿಖಾ ಶೈಲಿಯನ್ನು ಈ ಪ್ರಕರದಲ್ಲಿ ಅಳವಡಿಸಿಕೊಳ್ಳಲಾಗಿದೆ. ಪ್ರಾಸಿಕ್ಯೂಷನ್ ಬಲವಾದ ಸಾಕ್ಷ್ಯಗಳನ್ನು ಸಂಗ್ರಹಿಸಿದೆ. ಈ ಮೂಲಕ ಜಾಮೀನು ರದ್ದುಪಡಿಸುವ ನಿಟ್ಟಿನಲ್ಲಿ, ಸುಪ್ರೀಂ ಕೋರ್ಟ್‌ಗೆ ಸಂಗ್ರಹಿಸಿರುವ ಸಾಕ್ಷ್ಯಗಳಲ್ಲಿ ಏನೇನೆಲ್ಲಾ ಇದೆ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದೆ


ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಮತ್ತು ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್

ಸೆ. 10ರಂದು ಮುದ್ದತು ನಿಗದಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ತಿಂಗಳ 10ನೇ ತಾರೀಖಿಗೆ ಸೆಷನ್ಸ್ ನ್ಯಾಯಾಲಯದಲ್ಲಿ ಮುದ್ದತು ನಿಗದಿಯಾಗಿದೆ. ಅಂದು ಕೋರ್ಟ್‌ನಲ್ಲಿ ದೋಷಾರೋಪ ಹೊರಿಸುವ ಮುನ್ನಿನ ಪ್ರಕ್ರಿಯೆ ನಡೆಯುತ್ತದೆ. ‘ನೀವು ತಪ್ಪು ಮಾಡಿದ್ದೀರಿ ಎಂಬುದನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಕೇಸನ್ನು ನಡೆಸಿ, ತಪ್ಪು ಮಾಡಿಲ್ಲ ಎಂಬುದನ್ನು ಸಾಬೀತು ಪಡಿಸುತ್ತೀರಾ’ ಎಂಬ ನ್ಯಾಯಾಧೀಶರ ಪ್ರಶ್ನೆಗೆ ಎಲ್ಲ ಆರೋಪಿಗಳಿಂದ ಪಡೆಯಲಾಗುವ ಉತ್ತರವನ್ನು ಸಿಆರ್‌ಪಿಸಿ (ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973) ಕಲಂ 227ರ ಅಡಿಯಲ್ಲಿ ಅಧಿಕೃತ ಹೇಳಿಕೆಯ ಮುಖಾಂತರ ದಾಖಲು ಮಾಡಿಕೊಳ್ಳುವ ನ್ಯಾಯಾಧೀಶರು ಪ್ರಕರಣವನ್ನು ಮುಂದಿನ ನ್ಯಾಯಿಕ ವಿಚಾರಣೆಗೆ ಅಣಿಗೊಳಿಸುತ್ತಾರೆ.

ಡಿಜಿಟಲ್ ಸಾಕ್ಷ್ಯಗಳು

- ರೇಣುಕಸ್ವಾಮಿ, ಪವಿತ್ರಾ ಗೌಡ ಅವರಿಗೆ ಇನ್‌ಸ್ಟಾಗ್ರಾಂ ಮೂಲಕ ಕಳುಹಿಸಿದ್ದ ಸಂದೇಶಗಳನ್ನು ಪ್ರಾಸಿಕ್ಯೂಷನ್ ತಾಂತ್ರಿಕ ದಾಖಲೆಯಾಗಿ ಅಧಿಕೃತವಾಗಿ ಪಡೆದುಕೊಂಡಿದೆ.
- ಸಹ ಆರೋಪಿಗಳು ರೇಣುಕಸ್ವಾಮಿಯನ್ನು ಹಿಂಬಾಲಿಸುತ್ತಿದ್ದರು ಮತ್ತು ಕಣ್ಣಳತೆಯ ನಿಗಾದಲ್ಲಿ ಇರಿಸಿಕೊಂಡಿದ್ದರು ಎಂಬುದನ್ನು ಚಿತ್ರದುರ್ಗದ ವಿವಿಧ ಪ್ರದೇಶಗಳಲ್ಲಿನ ಸಿಸಿಟಿವಿ ದೃಶ್ಯಾವಳಿಗಳ ಮೂಲಕ ಕಲೆ ಹಾಕಲಾಗಿದೆ.
- ಚಿತ್ರದುರ್ಗದಿಂದ ರೇಣುಕಸ್ವಾಮಿಯನ್ನು ಅಪಹರಣ ಮಾಡುವಾಗ ಆರೋಪಿಗಳು ಇದ್ದುದು ಸಿಸಿಟಿಸಿ ಫೂಟೇಜುಗಳಲ್ಲಿ ಕಂಡು ಬಂದಿದೆ. ಅವರ ಮೊಬೈಲ್ ಟವರ್ ಲೊಕೇಶನ್‌ಗಳನ್ನು ಪತ್ತೆ ಹಚ್ಚಲಾಗಿದೆ.
- ಚಿತ್ರದುರ್ಗದಿಂದ ಪಟ್ಟಣಗೆರೆಯ ಶೆಡ್‌ಗೆ ಬಂದಿದ್ದು ಮಾರ್ಗಮಧ್ಯದಲ್ಲಿನ ಟೋಲ್ ಬೂತ್‌ನಲ್ಲಿದ್ದ ಸಿಸಿಟಿವಿಯಲ್ಲಿ ಸೆರೆಯಾಗಿದೆ.
- ಆರೋಪಿಗಳು ಮಾರ್ಗಮಧ್ಯದಲ್ಲಿ ಪೇ–ಟಿಎಂ ಬಳಸಿ ಮದ್ಯ ಖರೀದಿ ಮಾಡಿದ ಬಗ್ಗೆಯೂ ತಾಂತ್ರಿಕ ಸಾಕ್ಷ್ಯ ಸಂಗ್ರಹಿಸಲಾಗಿದೆ.
- ಎಲ್ಲ ಆರೋಪಿಗಳು ಮತ್ತು ರೇಣುಕಸ್ವಾಮಿಯ ಮೊಬೈಲ್ ಟವರ್ ಲೊಕೇಶನ್ ಅನ್ನು ಅಕ್ಷಾಂಶ, ರೇಖಾಂಶಗಳ ಆಧಾರದಲ್ಲಿ ನಿಖರವಾಗಿ ಗುರುತಿಸಲಾಗಿದೆ.
- ದರ್ಶನ್ ಮತ್ತು ಪವಿತ್ರಾ ಗೌಡ ಶೆಡ್‌ಗೆ ಬಂದಿದ್ದು, ಕಾರಿನಲ್ಲಿ ಹೊರಟಿದ್ದು, ತಲುಪಿದ್ದ ದೃಶ್ಯಗಳೆಲ್ಲದರ ಸಿಸಿಟಿವಿ ಫೂಟೇಜ್ ಸಂಗ್ರಹಿಸಲಾಗಿದೆ.
- ರೇಣುಕಸ್ವಾಮಿಯನ್ನು ಆರೋಪಿಗಳು ದಂಡಿಸುವಾಗ ಆತ ಕೈಮುಗಿದು ಬೇಡಿಕೊಳ್ಳುತ್ತಿರುವ ಫೋಟೊವನ್ನು ಆರೋಪಿಗಳೇ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದರು. ಇದನ್ನು ಪ್ರಾಸಿಕ್ಯೂಷನ್ ಕಲೆ ಹಾಕಿದೆ.
- ರೇಣುಕಸ್ವಾಮಿಯ ರಕ್ತವು ದರ್ಶನ್‌ನ ಬೂಟುಗಳು ಮತ್ತು ಪ್ಯಾಂಟ್, ಶರ್ಟ್‌ನಲ್ಲಿ ಇದ್ದುದನ್ನು ಪತ್ತೆಹಚ್ಚಲಾಗಿದೆ. ಮತ್ತು ಈ ಬಟ್ಟೆಗಳನ್ನು ಸರ್ಫ್ ಸೋಪು ಹಾಕಿ ಒಗೆದಿದ್ದರೂ ಅದರಲ್ಲಿರುವ ಡಿಎನ್‌ಎ ಅಂಶಗಳನ್ನು ಅಳಿಸಲಾಗಿಲ್ಲ. ಈ ನಿಟ್ಟಿನಲ್ಲಿ ಬಟ್ಟೆಗಳನ್ನು ಸ್ವಚ್ಛಗೊಳಿಸಿದ್ದರೂ ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಡಿಎನ್‌ಎ ಅಂಶಗಳನ್ನು ಪತ್ತೆ ಹಚ್ಚಲಾಗಿದೆ.
- ಪವಿತ್ರಾ ಗೌಡ ಅವರ ಸೆಲ್ವಾರ್ ಕಮೀಝ್ ಮತ್ತು ಚಪ್ಪಲಿಯಲ್ಲಿ ರೇಣುಕಸ್ವಾಮಿ ರಕ್ತ ಇರುವುದು ಇದರ ಡಿಎನ್‌ಎ ಹೋಲಿಕೆ ಆಗಿದೆ.
- ಇತರೆ ಆರೋಪಿಗಳ ಬಟ್ಟೆಗಳಲ್ಲೂ ರಕ್ತದ ಕಲೆ ಮತ್ತು ರೇಣುಕಸ್ವಾಮಿಯ ಡಿಎನ್‌ಎ ಹೋಲಿಕೆ ಆಗಿದೆ.
- ದರ್ಶನ್ ಬೂಟುಗಳ ತಳದಲ್ಲಿದ್ದ ಮಣ್ಣನ್ನು ಸಂಗ್ರಹಿಸಲಾಗಿತ್ತು. ಈ ಮಣ್ಣು ಪಟ್ಟಣಗೆರೆ ಶೆಡ್‌ನ ಜಾಗದಲ್ಲಿನ ಮಣ್ಣಿನ ಜೊತೆ ಹೋಲಿಕೆಯಾಗಿತ್ತು.
- ಹಗ್ಗ ಮತ್ತು ದೊಣ್ಣೆಯಲ್ಲಿನ ರಕ್ತದ ಕಲೆಗಳಲ್ಲಿ ರೇಣುಕಸ್ವಾಮಿಯ ರಕ್ತದ ಡಿಎನ್‌ಎ ಕಂಡುಬಂದಿತ್ತು.
- ಆರೋಪಿಗಳು ಪರಸ್ಪರ ನಡೆಸಿದ್ದ ಸಂಭಾಷಣೆಯ ಕಾಲ್ ರೆಕಾರ್ಡ್ ಅನ್ನು ಸಂಗ್ರಹಿಸಿರುವುದು ಪ್ರಮುಖ ಸಾಕ್ಷ್ಯವಾಗಿದ್ದು ಇದರ ಸಿಡಿಆರ್ ಅನ್ನು ನ್ಯಾಯಾಲಯಕ್ಕೆ ಪ್ರಸ್ತುಪಡಿಸಲಾಗಿತ್ತು.



ಯಾರ‍್ಯಾರ ಜಾಮೀನು ಆದೇಶ ರದ್ದು?

2024ರ ಜೂನ್ 9ರಂದು ಬೆಂಗಳೂರಿನ ಸುಮನಹಳ್ಳಿಯ ಸತ್ವ ಅನುಗ್ರಹ ಅಪಾರ್ಟ್‌ಮೆಂಟ್ ಬಳಿಯ ಮೋರಿ ಬಳಿ ರೇಣುಕಸ್ವಾಮಿ ಅವರ ಮೃತದೇಹ ಪತ್ತೆಯಾಗಿತ್ತು. ಪಶ್ಚಿಮ ವಿಭಾಗದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡು, 17 ಮಂದಿ ಆರೋಪಿಗಳನ್ನು ಜೂನ್ 10ರಂದು ಪೊಲೀಸರು ಬಂಧಿಸಿದ್ದರು. ಎಲ್ಲ ಆರೋಪಿಗಳೂ ಜಾಮೀನಿನ ಮೇಲೆ ಕೆಲವು ತಿಂಗಳ ಹಿಂದೆ ಬಿಡುಗಡೆ ಆಗಿದ್ದರು. 17 ಆರೋಪಿಗಳ ಪೈಕಿ ಏಳು ಆರೋಪಿಗಳ ಜಾಮೀನು ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಆರೋಪಿ 1: ಪವಿತ್ರಾಗೌಡ (33), ದರ್ಶನ್ ಗೆಳತಿ, ರಾಜರಾಜೇಶ್ವರಿ ನಗರ, ಬೆಂಗಳೂರು
ಉತ್ತರ ಪ್ರದೇಶದ ಸಂಜಯ್ ಸಿಂಗ್ ಅವರು ಬೆಂಗಳೂರಿನಲ್ಲಿ ಐ.ಟಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿ ಇದ್ದರು. ಆಗ ಸಂಜಯ್ ಸಿಂಗ್ ಹಾಗೂ ಪವಿತ್ರಾ ಪ್ರೀತಿಸಿ ಮದುವೆ ಆಗಿದ್ದರು. 2013ರಲ್ಲಿ ಇಬ್ಬರು ವಿಚ್ಛೇದನ ಪಡೆದುಕೊಂಡಿದ್ದರು. ನಂತರ, ಪವಿತ್ರಾಗೆ ಸಿನಿಮಾ ಸೆಟ್‌ವೊಂದರಲ್ಲಿ ದರ್ಶನ್ ಪರಿಚಯ ಆಗಿತ್ತು. ಹತ್ತು ವರ್ಷದಿಂದ ಆಪ್ತರಾಗಿದ್ದರು. ಕೊಲೆಯಾದ ರೇಣುಕಸ್ವಾಮಿ, ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದರು. ಈ ವಿಷಯವನ್ನು ಸಹಾಯಕ ಪವನ್‌ಗೆ ತಿಳಿಸಿದ್ದರು. ಆರೋಪಿ ಪವನ್ ಅವರು ದರ್ಶನ್‌ಗೆ ಮಾಹಿತಿ ನೀಡಿದ್ದರು. ಕೃತ್ಯಕ್ಕೆ ಸಂಚು ರೂಪಿಸಿದ್ದ ಪವಿತ್ರಾ, ಚಪ್ಪಲಿಯಲ್ಲಿ ರೇಣುಕಸ್ವಾಮಿ ಅವರ ಮೇಲೆ ಹಲ್ಲೆ ನಡೆಸಿದ್ದರು ಎಂಬುದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖವಾಗಿದೆ.

ಆರೋಪಿ 2: ದರ್ಶನ್ ಅಲಿಯಾಸ್ ಡಿ ಬಾಸ್ (47), ನಟ, ರಾಜರಾಜೇಶ್ವರಿ ನಗರ, ಬೆಂಗಳೂರು
ತನ್ನ ಗೆಳತಿಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ಮಾಹಿತಿ ತಿಳಿದ ಮೇಲೆ ರೇಣುಕಸ್ವಾಮಿ ಅವರನ್ನು ಅಪಹರಿಸಲು ಸಂಚು ರೂಪಿಸಿದ್ದರು. ಚಿತ್ರದುರ್ಗದ ಅಭಿಮಾನಿಗಳಿಗೆ ಸೂಚಿಸಿದ್ದರು. ಪಟ್ಟಣಗೆರೆಯ ಶೆಡ್‌ಗೆ ರೇಣುಕಸ್ವಾಮಿ ಕರೆತಂದಾಗ ಕಾಲಿನಿಂದ ಒದ್ದಿದ್ದರು. ಪವಿತ್ರಾ ಅವರ ಕಾಲಿಗೆ ಬೀಳಿಸಿ ಕ್ಷಮೆ ಕೇಳಿಸಿದ್ದರು. ಅಲ್ಲದೇ ಕೊಲೆ ಪ್ರಕರಣ ಮುಚ್ಚಿ ಹಾಕಲು ನಾಲ್ಕು ಮಂದಿಯನ್ನು ಪೊಲೀಸರಿಗೆ ಶರಣಾಗುವಂತೆ ಸುಪಾರಿ ನೀಡಿದ್ದರು. ಈ ಅಂಶಗಳನ್ನು ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.


ಆರೋಪಿ 6: ಜಗದೀಶ್ ಅಲಿಯಾಸ್ ಜಗ್ಗ (36), ಆಟೊ ಚಾಲಕ, ಚಿತ್ರದುರ್ಗ
ಜಗದೀಶ ಚಿತ್ರದುರ್ಗದಲ್ಲಿ ಆಟೊ ಚಾಲಕ. ರೇಣುಕಸ್ವಾಮಿಯನ್ನು ಅಪಹರಿಸಿಕೊಂಡು ಕಾರಿನಲ್ಲಿ ಬೆಂಗಳೂರಿಗೆ ಕರೆ ತಂದಿದ್ದರು.


ಆರೋಪಿ 7: ಅನುಕುಮಾರ್ (25), ಆಟೊ ಚಾಲಕ ಚಿತ್ರದುರ್ಗ
ಚಿತ್ರದುರ್ಗದಲ್ಲಿ ಆಟೊ ಚಾಲಕ. ರೇಣುಕಸ್ವಾಮಿಯನ್ನು ಬೆಂಗಳೂರಿಗೆ ಅಪಹರಿಸಲು ಜಗದೀಶ್‌ಗೆ ನೆರವು.


ಆರೋಪಿ 12: ಎಂ.ಲಕ್ಷ್ಮಣ್ (54), ದರ್ಶನ್ ಕಾರು ಚಾಲಕ, ಆರ್‌ಪಿಸಿ ಲೇಔಟ್, ಬೆಂಗಳೂರು
ದರ್ಶನ್ ಅವರ ಕಾರು ಚಾಲಕ. ಬೆಂಗಳೂರಿನ ಆರ್‌ಪಿಸಿ ಲೇಔಟ್‌ನಲ್ಲಿ ನೆಲಸಿದ್ದರು. ಕೃತ್ಯ ನಡೆದಿದ್ದ ಸ್ಥಳದಲ್ಲಿದ್ದರು. ಕೊಲೆ ಪ್ರಕರಣದಲ್ಲಿ ದರ್ಶನ್ ರಕ್ಷಣೆಗೆ ಮುಂದಾಗಿದ್ದರು. ಪೊಲೀಸ್ ಠಾಣೆಗೆ ತೆರಳಿ ಶರಣಾಗುವಂತೆ ನಾಲ್ವರಿಗೆ ಹಣ ನೀಡಿದ್ದರು.


ಆರೋಪಿ 11: ಆರ್. ನಾಗರಾಜ್ (41), ದರ್ಶನ್ ಕಾರು ಚಾಲಕ, ರಾಮಕೃಷ್ಣನಗರ, ಮೈಸೂರು
ಮೈಸೂರು ರಾಮಕೃಷ್ಣ ನಗರದ ನಿವಾಸಿ. 15 ವರ್ಷಗಳಿಂದ ದರ್ಶನ್ ಅವರ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಮೈಸೂರಿನಲ್ಲಿರುವ ದರ್ಶನ್ ಅವರ ಫಾರಂ ಹೌಸ್‌ನಲ್ಲಿ ಇರುತ್ತಿದ್ದರು. ಪ್ರಕರಣ ಮುಚ್ಚಿ ಹಾಕಲು ಪ್ರಯತ್ನ. ರೇಣುಕಸ್ವಾಮಿ ಮೇಲೆ ಹಲ್ಲೆ ನಡೆಸಿದ್ದರು.


ಆರೋಪಿ 14: ಪ್ರದೂಷ್ ರಾವ್ (40), ದರ್ಶನ್ ಸ್ನೇಹಿತ, ಉದ್ಯಮಿ, ಜೆಸಿ ರಸ್ತೆ, ಗಿರಿನಗರ, ಬೆಂಗಳೂರು
ಬೆಂಗಳೂರಿನ ಗಿರಿನಗರದ ನಿವಾಸಿ. ದರ್ಶನ್ ಸ್ನೇಹಿತ. ಕೊಲೆ ಪ್ರಕರಣದಲ್ಲಿ ದರ್ಶನ್ ರಕ್ಷಣೆ ಮಾಡಲು ₹30 ಲಕ್ಷ ಪಡೆದಿದ್ದ ಇವರು, ಶರಣಾದ ನಾಲ್ವರಿಗೆ ಸಂದಾಯ ಮಾಡಿದ್ದರು.

ಯಾವಾಗ ಏನಾಗಿತ್ತು...?

2024

ಜೂನ್ 8: ಚಿತ್ರದುರ್ಗದಿಂದ ರೇಣುಕಸ್ವಾಮಿ ಅಪಹರಣ, ಪಟ್ಟಣಗೆರೆಯ ಶೆಡ್‌ಗೆ ಕರೆತಂದು ಹಲ್ಲೆ, ಕೊಲೆ

ಜೂನ್ 9: ಸುಮನಹಳ್ಳಿಯ ಸತ್ವ ಅನುಗ್ರಹ ಅಪಾರ್ಟ್‌ಮೆಂಟ್‌ನ ಮೋರಿ ಬಳಿ ಮೃತದೇಹ ಪತ್ತೆ, ಕೊಲೆ ಪ್ರಕರಣ ದಾಖಲು

ಜೂನ್ 11: ದರ್ಶನ್, ಪವಿತ್ರಾಗೌಡ ಸೇರಿ 17 ಮಂದಿ ಬಂಧನ

ಜೂನ್ 22: ಜೈಲು ಸೇರಿದ್ದ ದರ್ಶನ್, ಪವಿತ್ರಾಗೌಡ

ಆಗಸ್ಟ್ 24: ಪರಪ್ಪನ ಅಗ್ರಹಾರ ಜೈಲಿನ ಬ್ಯಾರಕ್ ಹೊರಗೆ ಕುರ್ಚಿಯಲ್ಲಿ ಕುಳಿತು ಟೀ ಕುಡಿಯುತ್ತಾ, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ದರ್ಶನ್, ರೌಡಿ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ, ದರ್ಶನ್ ವ್ಯವಸ್ಥಾಪಕ ನಾಗರಾಜ್ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

ಆಗಸ್ಟ್ 26: ಕರ್ತವ್ಯ ಲೋಪದ ಆರೋಪದಡಿ ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕ ಮತ್ತು ಸಿಬ್ಬಂದಿ ಸೇರಿ ಒಂಬತ್ತು ಮಂದಿಯನ್ನು ಅಮಾನತು ಮಾಡಿದ್ದ ರಾಜ್ಯ ಸರ್ಕಾರ, ಮೂರು ಪ್ರತ್ಯೇಕ ಎಫ್‌ಐಆರ್ ದಾಖಲು

ಆಗಸ್ಟ್ 27: ಬಳ್ಳಾರಿ ಜೈಲಿಗೆ ದರ್ಶನ್ ಸ್ಥಳಾಂತರ, ಉಳಿದ ಆರೋಪಿಗಳೂ ರಾಜ್ಯದ ಬೇರೆ ಬೇರೆ ಕಾರಾಗೃಹಕ್ಕೆ ಸ್ಥಳಾಂತರ

ಸೆಪ್ಟೆಂಬರ್ 4: 24ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ

ಅಕ್ಟೋಬರ್ 30: ದರ್ಶನ್‌ಗೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಆರು ವಾರಗಳ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದ ಹೈಕೋರ್ಟ್, ಬಳಿಕ ನಿಯಮಿತ ಜಾಮೀನು ಮಂಜೂರು

ನವೆಂಬರ್ 17: ಹೈಕೋರ್ಟ್ ನೀಡಿದ್ದ ಜಾಮೀನು ಆದೇಶ ರದ್ದು ಮಾಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ಸಮ್ಮತಿ

ಡಿಸೆಂಬರ್ 4: ಮಧ್ಯಂತರ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆ

2025

ಮೇ 21: ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಕೆ

ಜುಲೈ 24: ದರ್ಶನ್ ಮತ್ತು ಇತರೆ ಏಳು ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿ, ಆದೇಶವನ್ನು ಕಾಯ್ದಿರಿಸಿತ್ತು

ಆಗಸ್ಟ್ 14: ಏಳು ಆರೋಪಿಗಳ ಜಾಮೀನು ಆದೇಶ ರದ್ದು

ಪೋಸ್ಟ್ ಅಳಿಸಿದ ಪವಿತ್ರಾ

‘ದೇವರ ಮೇಲೆ ನಂಬಿಕೆ ಇಡಬೇಕು. ಬಹುಶಃ ಅವರ ಉತ್ತರ ‘ಕಾಯಿರಿ’ ಅನ್ನೋದಾಗಿರಬಹುದು. ಕೆಲವು ವಿಳಂಬಗಳು ದೈವಿಕ ರಕ್ಷಣೆಯಾಗಿರುತ್ತದೆ. ನಾನು ತಾಳ್ಮೆ ಮತ್ತು ನಂಬಿಕೆಯನ್ನು ಆರಿಸಿಕೊಳ್ಳುತ್ತೇನೆ’ ಎಂದು ಪವಿತ್ರಾ ಗೌಡ ಅವರು ಗುರುವಾರ ಬೆಳಿಗ್ಗೆ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್‌ವೊಂದನ್ನು ಹಾಕಿದ್ದರು. ನ್ಯಾಯಾಲಯದ ಆದೇಶ ಬಂದ ಬಳಿಕ ಪೋಸ್ಟ್ ಅಳಿಸಿ ಹಾಕಿದ್ದರು.

ಶರಣಬಸವಪ್ಪ ಅಪ್ಪ ಇನ್ನಿಲ್ಲ

ಒಂದನೇ ಪುಟದಿಂದ...

ನಂತರ ಗುಲಬರ್ಗಾದಲ್ಲಿ ಸ್ವತಂತ್ರ ವಿಶ್ವವಿದ್ಯಾಲಯ ಮಂಜೂರಾತಿಗೆ ಶ್ರಮಿಸಿದ್ದ ಅಪ್ಪ ಅವರು ವಿ.ವಿ. ಆರಂಭಕ್ಕೆ ಅಗತ್ಯವಾದ ಭೂಮಿ ಹಾಗೂ ಇತರ ಸೌಕರ್ಯಗಳನ್ನು ಗುರುತಿಸಲು ಸರ್ಕಾರ ನೇಮಕ ಮಾಡಿದ್ದ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

1983ರಲ್ಲಿ ಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿಯಾಗಿದ್ದಾರೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ಅಪ್ಪಾ ಅವರು ಪೀಠಾರೋಹಣ ಮಾಡಿದ ನಂತರ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದರು.

ಯಾದಗಿರಿ ಜಿಲ್ಲೆಯ ಸುರಪುರ ಪಟ್ಟಣದಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದರು. ಯಾದಗಿರಿ, ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಪದವಿ ಕಾಲೇಜುಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳ ಹುಟ್ಟು ಹಾಕಿದರು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸೊಸೈಟಿಯ ಅಧ್ಯಕ್ಷರಾಗಿಯೂ ಶರಣಬಸವಪ್ಪ ಅವರು ಕಾರ್ಯನಿರ್ವಹಿಸಿದ್ದರು. ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಲಬುರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪುರಸ್ಕಾರ ಸೇರಿದಂತೆ ಹಲವು ಗೌರವಗಳು ಅರಸಿ ಬಂದಿದ್ದವು.

ಜಮ್ಮು–ಕಾಶ್ಮೀರದ ಕಿಶ್ತವಾಡ ಜಿಲ್ಲೆಯಲ್ಲಿ ದುರ್ಘಟನೆ • 120ಕ್ಕೂ ಅಧಿಕ ಮಂದಿಗೆ ಗಾಯ

ಮೇಘಸ್ಫೋಟ: ಯೋಧರು ಸೇರಿ 46 ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು–ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಚಸೋತಿ ಗ್ರಾಮದಲ್ಲಿ ಗುರುವಾರ ಭಾರಿ ಮೇಘಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಇಬ್ಬರು ಸಿಐಎಸ್‌ಎಫ್ ಯೋಧರು ಸೇರಿದಂತೆ 46 ಮಂದಿ ಮೃತಪಟ್ಟಿದ್ದಾರೆ. 120ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧಾರಾಕಾರ ಮಳೆ ಸುರಿದು ಗುರುವಾರ ಮಧ್ಯಾಹ್ನ ಸುಮಾರು 12ರಿಂದ 1ರ ವೇಳೆ ಮೇಘಸ್ಫೋಟ ಸಂಭವಿಸಿದೆ. ಇದರಿಂದಾಗಿ ಮಚೈಲ್ ಮಾತಾ ಯಾತ್ರಾ ಮಾರ್ಗದಲ್ಲಿ ಹಠಾತ್ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಘಟನೆಯಲ್ಲಿ 200ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದು, ಪ್ರವಾಹ ಸಂತ್ರಸ್ತರಿಗೆ ನೆರವು ತಲುಪಿಸು ವುದಕ್ಕೂ ರಕ್ಷಣಾ ಸಿಬ್ಬಂದಿ ಪರದಾಡುವ ಸ್ಥಿತಿ ಎದುರಾಗಿದೆ ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಾವಿನ ಸಂಖ್ಯೆ ಹೆಚ್ಚಳದ ಆತಂಕ: ಹಲವು ಪ್ರದೇಶಗಳು ಸಂಪೂರ್ಣ ಕಲ್ಲು, ಮಣ್ಣು, ಕೆಸರಿನ ಅವಶೇಷಗಳಿಂದ ತುಂಬಿ ಹೋಗಿದ್ದು, ಅವುಗಳ ಅಡಿಯಲ್ಲಿ ಜನರು ಸಿಲುಕಿರುವ ಸಾಧ್ಯತೆಗಳಿವೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಳವಾಗುವ ಆತಂಕವಿದ್ದು, ಅವಶೇಷಗಳ ಅಡಿಯಲ್ಲಿ ಸಿಲುಕಿರುವವರನ್ನು ರಕ್ಷಿಸಲು ಸಿಬ್ಬಂದಿ ಕಾರ್ಯಪ್ರವೃತ್ತರಾಗಿದ್ದಾರೆ.

ಯಾತ್ರೆ ಸ್ಥಗಿತ: ಮೇಘ ಸ್ಫೋಟದಿಂದಾಗಿ ಮಚೈಲ್ ಮಾತಾ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ. ಚಸೋತಿ ಗ್ರಾಮವು ಮಚೈಲ್ ಮಾತಾ ದೇವಸ್ಥಾನಕ್ಕೆ ತೆರಳಲು ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದ ಒಂದೇ ಒಂದು ಮಾರ್ಗವಾಗಿತ್ತು.


ಚಸೋತಿ ಗ್ರಾಮದಲ್ಲಿನ ಮೇಘಸ್ಫೋಟ ದುರಂತದಲ್ಲಿ ಸಾವಿಗೀಡಾದವರ ಮೃತದೇಹಗಳನ್ನು ಸಾಗಿಸಲಾಯಿತು — ಪಿಟಿಐ ಚಿತ್ರ

ಕಣಿವೆಯಲ್ಲಿ ಮೇಘಸ್ಫೋಟ

- 2021ರ ಜುಲೈನಲ್ಲಿ ಕಿಶ್ತವಾಡದ ಹುಂಜಾರ್ ಗ್ರಾಮದಲ್ಲಿ ಮೇಘ ಸ್ಫೋಟ ಸಂಭವಿಸಿ 26 ಮಂದಿ ಮೃತಪಟ್ಟಿದ್ದರು. 17 ಮಂದಿ ಗಾಯಗೊಂಡಿದ್ದರು
- 2022 ಜುಲೈನಲ್ಲಿ ಅಮರನಾಥ ದೇಗುಲದ ಬಳಿ ಸಂಭವಿಸಿದ ಮೇಘಸ್ಫೋಟದಲ್ಲಿ 16 ಯಾತ್ರಾರ್ಥಿಗಳು ಮೃತಪಟ್ಟಿದ್ದು, 40ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು
- 2017ರ ಜುಲೈನಲ್ಲಿ ದೊಡಾ ಜಿಲ್ಲೆಯ ಠಠರಿ ನಗರದಲ್ಲಿ ಮೇಘಸ್ಫೋಟ ಸಂಭವಿಸಿ 6 ಮಂದಿ ಮೃತಪಟ್ಟಿದ್ದರು
- 2014ರ ಸೆಪ್ಟೆಂಬರ್‌ನಲ್ಲಿ ಅತ್ಯಂತ ಭೀಕರವಾದ ಮೇಘಸ್ಫೋಟದಿಂದಾಗಿ ರಾಜಧಾನಿ ಶ್ರೀನಗರ ಬಹುಪಾಲು ಮುಳಗಡೆಯಾಗಿತ್ತು ಇದರಿಂದಾಗಿ 200 ಮಂದಿ ಮೃತಪಟ್ಟಿದ್ದಾರೆ

ರಕ್ಷಣಾ ಕಾರ್ಯಾಚರಣೆಗೂ ಅಡ್ಡಿ

ಮೇಘಸ್ಫೋಟದಿಂದ ಉಂಟಾದ ಪ್ರವಾಹದಿಂದಾಗಿ ಗ್ರಾಮದ ರಸ್ತೆಗಳು ಕೊಚ್ಚಿ ಹೋಗಿದ್ದು, ರಕ್ಷಣಾ ಕಾರ್ಯಾಚರಣೆಗೂ ಅಡ್ಡಿಯುಂಟಾಗಿದೆ. ತೀವ್ರವಾಗಿ ಗಾಯಗೊಂಡಿರುವ ಯಾತ್ರಾರ್ಥಿಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ವಿಪತ್ತು ಪ್ರತಿಕ್ರಿಯೆ ತಂಡ (ಎಸ್‌ಡಿಆರ್‌ಎಫ್), ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ಹಾಗೂ ಸೇನಾ ಸಿಬ್ಬಂದಿ ಮತ್ತು ಸ್ಥಳೀಯ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಸ್ವಾತಂತ್ರ್ಯೋತ್ಸವ: ದೇಶ ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ಮುರ್ಮು

ಸಿಂಧೂರ ಇತಿಹಾಸದಲ್ಲಿ ಉಳಿಯಲಿದೆ

ನವದೆಹಲಿ (ಪಿಟಿಐ): ‘ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತಿಯಾಗಿ ದೇಶವು ದಿಟ್ಟ ಉತ್ತರ ನೀಡಿದೆ. ಭಾರತ ಕೈಗೊಂಡ ಆಪರೇಷನ್ ಸಿಂಧೂರ, ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ನಿದರ್ಶನವಾಗಿ ಇತಿಹಾಸದಲ್ಲಿ ಉಳಿಯಲಿದೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಗುರುವಾರ ಹೇಳಿದ್ದಾರೆ.

79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಷ್ಟ್ರವನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆ ಹೇಡಿತನದ ಮತ್ತು ಅಮಾನವೀಯ ಕೃತ್ಯ’ ಎಂದು ಖಂಡಿಸಿದ ಅವರು, ‘ಪ್ರತೀಕಾರವಾಗಿ ಸಶಸ್ತ್ರ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಉಗ್ರರ ಮೂಲಸೌಕರ್ಯಗಳನ್ನು ನಾಶಪಡಿಸಲಾಯಿತು. ಇದು ದೇಶದಲ್ಲಿನ ಒಗ್ಗಟ್ಟು ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಸ್ವಾವಲಂಬನೆಯನ್ನು ತೋರಿಸುತ್ತದೆ’ ಎಂದು ಬಣ್ಣಿಸಿದರು.

‘ದೇಶವನ್ನು ವಿಭಜಿಸಲು ಯತ್ನಿಸಿದವರಿಗೆ, ಒಗ್ಗಟ್ಟು ಪ್ರದರ್ಶಿಸುವ ಮೂಲಕ ದೇಶದ ಜನತೆ ತಕ್ಕ ಉತ್ತರ ನೀಡಿದ್ದಾರೆ’ ಎಂದರು.

‘ರಾಷ್ಟ್ರೀಯ ಕೈಮಗ್ಗ ದಿನ’ ಪ್ರಸ್ತಾಪಿಸಿದ ಅವರು, ‘1905ರಲ್ಲಿ ಗಾಂಧೀಜಿ ಆರಂಭಿಸಿದ ಸ್ವದೇಶಿ ಚಳವಳಿಯಂತೆಯೇ ಕುಶಲ ಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಉತ್ತೇಜನ ನೀಡಲು ಕೈಮಗ್ಗ ದಿನಾಚರಣೆ ಹಮ್ಮಿಕೊಳ್ಳಲಾಗುತ್ತದೆ’ ಎಂದು ಹೇಳಿದರು.

ಮುರ್ಮು ಭಾಷಣದ ಪ್ರಮುಖ ಅಂಶಗಳು

- ವಿವಿಧ ದೇಶಗಳಿಗೆ ಭೇಟಿ ನೀಡಿದ ಸರ್ವಪಕ್ಷಗಳ ಸಂಸದರಿದ್ದ ನಿಯೋಗವು, ಗಡಿಯಾಚೆಗಿನ ಭಯೋತ್ಪಾದನೆ ಕುರಿತು ಭಾರತದ ನಿಲುವು ಹಾಗೂ ಅದರ ವಿರುದ್ಧ ಕೈಗೊಂಡಿರುವ ಸಾಮೂಹಿಕ ಹೋರಾಟವನ್ನು ಮನವರಿಕೆ ಮಾಡಿಕೊಟ್ಟಿದೆ
- ಭಾರತ ಎಂದಿಗೂ ಆಕ್ರಮಣಕಾರಿ ಆಗುವುದಿಲ್ಲ. ಆದರೆ, ದೇಶದ ಜನರು ಹಾಗೂ ಹಿತಾಸಕ್ತಿ ರಕ್ಷಣೆ ವಿಚಾರ ಬಂದಾಗ ಪ್ರತ್ಯುತ್ತರ ನೀಡಲು ಹಿಂಜರಿಯುವುದಿಲ್ಲ ಎಂಬ ನಮ್ಮ ನಿಲುವನ್ನು ಜಾಗತಿಕ ಸಮುದಾಯ ಗಮನಿಸಿದೆ
- ಆಪರೇಷನ್ ಸಿಂಧೂರವು ರಕ್ಷಣಾ ಕ್ಷೇತ್ರದಲ್ಲಿ ‘ಆತ್ಮನಿರ್ಭರ ಭಾರತ’ ಪರಿಕಲ್ಪನೆಯ ಯಶಸ್ಸನ್ನು ಪ್ರದರ್ಶಿಸಿದೆ. ಭಾರತದ ಪ್ರತಿಕ್ರಿಯೆ ಸರಿಯಾಗಿತ್ತು ಎಂಬುದನ್ನು ಈ ಕಾರ್ಯಾಚರಣೆಯ ಯಶಸ್ಸು ಸಾಬೀತುಪಡಿಸಿದೆ
- ಕೃತಕಬುದ್ಧಿಮತ್ತೆ (ಎಐ) ನಮ್ಮ ಜೀವನದ ಅವಿಭಾಜ್ಯ ಅಂಗವೇ ಆಗಿದೆ. ಈ ಕ್ಷೇತ್ರಕ್ಕೆ ಉತ್ತೇಜನ ನೀಡುವುದಕ್ಕಾಗಿ ‘ಇಂಡಿಯಾ–ಎಐ’ ಕಾರ್ಯಕ್ರಮ ಆರಂಭಿಸಲಾಗಿದೆ. 2047ರ ವೇಳೆಗೆ ಭಾರತವನ್ನು ಜಾಗತಿಕ ಎಐ ಕೇಂದ್ರವನ್ನಾಗಿ ಮಾಡುವ ಮಹತ್ವಾಕಾಂಕ್ಷೆಯನ್ನು ಸಾಕಾರಗೊಳಿಸಬೇಕಾಗಿದೆ.

‘ಎನ್‌ಇಪಿ: ಕಲಿಕೆ ಜೊತೆ ಮೌಲ್ಯಗಳನ್ನು ಬೆಸೆದಿದೆ’



ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ), ಭವಿಷ್ಯದಲ್ಲಿ ಆಗುವ ಬದಲಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡು ರೂಪಿಸಲಾಗಿದೆ. ಈ ನೀತಿಯು ಕಲಿಕೆಯೊಂದಿಗೆ ಮೌಲ್ಯಗಳನ್ನು, ಪರಂಪರೆಯೊಂದಿಗೆ ಕೌಶಲಗಳನ್ನು ಬೆಸೆದಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

‘ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವುದಕ್ಕಾಗಿ ನಮ್ಮ ಯುವಕರು ಸರಿಯಾದ ಪರಿಸರವನ್ನು ಕಂಡುಕೊಂಡಿದ್ದಾರೆ’ ಎಂದರು.

ಸಂಕ್ಷಿಪ್ತ ಸುದ್ದಿ

‘ಎಚ್‌ಒಡಿ’ ಕೊಲೆಗೆ ಸುಪಾರಿ ನೀಡಿದ್ದ ಪ್ರಾಧ್ಯಾಪಕ

ಲಖನೌ: ತಮ್ಮನ್ನು ವಿಭಾಗ ಮುಖ್ಯಸ್ಥ (ಎಚ್‌ಒಡಿ) ಹುದ್ದೆಯಿಂದ ಬದಲಿಸಿದ್ದಾರೆ ಎಂಬ ಕಾರಣಕ್ಕೆ ಕೆರಳಿದ ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ಪ್ರಾಧ್ಯಾಪಕರೊಬ್ಬರು, ಇದಕ್ಕೆ ಕಾರಣವಾದ ವಿಭಾಗದ ಮುಖ್ಯಸ್ಥರನ್ನೇ ಸುಪಾರಿ ನೀಡಿ ಕೊಲೆ ಮಾಡಲು ಸಂಚು ರೂಪಿಸಿದ್ದರು ಎಂಬ ಸಂಗತಿ ಪೊಲೀಸ್ ತನಿಖೆಯಿಂದ ಬಹಿರಂಗಗೊಂಡಿದೆ.

ಬನಾರಸ್ ಹಿಂದೂ ವಿಶ್ವವಿದ್ಯಾಲಯದ ತೆಲುಗು ವಿಭಾಗದ ಮಾಜಿ ಮುಖ್ಯಸ್ಥ ಬುಡತಿ ವೆಂಕಟೇಶ್ವರಲು, ತಮ್ಮನ್ನು ‘ಎಚ್‌ಒಡಿ’ ಸ್ಥಾನದಿಂದ ಕೆಳಗಿಳಿಸಿದ ಸಿ.ಎಸ್. ರಾಮಚಂದ್ರ ಮೂರ್ತಿ ಅವರನ್ನು ಕೊಲೆ ಮಾಡಲು ಸುಪಾರಿ ನೀಡಿದ್ದರು. ಇದಕ್ಕಾಗಿ ತಮ್ಮ ಬಳಿ ಈ ಹಿಂದೆ ಸಂಶೋಧನೆ ಕೈಗೊಂಡಿದ್ದ ವಿದ್ಯಾರ್ಥಿಯೂ ಸೇರಿ ಕೆಲವರ ನೆರವು ಪಡೆದುಕೊಂಡಿದ್ದರು.

ಜುಲೈ 28ರಂದು ರಾಮಚಂದ್ರ ಮೂರ್ತಿ ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಅವರ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರು ಬಿಎಚ್‌ಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು 9 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ವಿ.ವಿ ಪ್ರಾಧ್ಯಾಪಕನೂ ಭಾಗಿ?: ಈ ಪ್ರಕರಣದಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಖಾಸೀಂ ಬಾಬು ಪಾತ್ರದ ಬಗ್ಗೆಯೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಖಾಸೀಂ ಅವರನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನೇಮಕ ಮಾಡಿಕೊಳ್ಳಲು ವೆಂಕಟೇಶ್ವರಲು ಪ್ರಯತ್ನಿಸಿದ್ದರು ಎಂದು ಮೂಲಗಳು ತಿಳಿಸಿವೆ.

‘ನಿಮಿಷ ಪ್ರಿಯಾ ಪ್ರಕರಣ: ಸದ್ಯಕ್ಕೆ ಅಪಾಯವಿಲ್ಲ’

ನವದೆಹಲಿ (ಪಿಟಿಐ): ‘ಯೆಮನ್‌ನಲ್ಲಿ ಮರಣದಂಡನೆಗೆ ಗುರಿಯಾಗಿರುವ ಭಾರತದ ನರ್ಸ್ ನಿಮಿಷ ಪ್ರಿಯಾ ಅವರಿಗೆ ಸದ್ಯಕ್ಕೆ ಯಾವುದೇ ಅಪಾಯವಿಲ್ಲ. ಅವರನ್ನು ಉಳಿಸುವುದಕ್ಕಾಗಿ ಯೆಮನ್ ಜತೆ ಸಂಧಾನ ಮಾತುಕತೆ ಪ್ರಗತಿಯಲ್ಲಿದೆ’ ಎಂದು ಅರ್ಜಿದಾರರ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಪ್ರಿಯಾ ಅವರಿಗೆ ಕಾನೂನು ನೆರವು ನೀಡುತ್ತಿರುವ ‘ಸೇವ್ ನಿಮಿಷ ಪ್ರಿಯಾ ಇಂಟರ್‌ನ್ಯಾಷನಲ್ ಆ್ಯಕ್ಷನ್ ಕೌನ್ಸಿಲ್’ನ ವಕೀಲರು, ವಿಚಾರಣೆಯನ್ನು ನಾಲ್ಕು ವಾರಗಳ ಮಟ್ಟಿಗೆ ಮುಂದೂಡುವಂತೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, ವಿಚಾರಣೆಯನ್ನು ಎಂಟು ವಾರಗಳವರೆಗೆ ಮುಂದೂಡಿತು.


ಅತ್ಯುತ್ತಮ ಸೇವೆ ★ ನಿಶ್ಚಿತ ಕಡಿಮೆ ಬೆಲೆಯಲ್ಲಿ, 1971 ರಿಂದ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
MEGA FREEDOM SALE
BIGGEST DISCOUNTS ★ BIGGEST BRANDS
Upto 20% ಕ್ಯಾಶ್ ಬ್ಯಾಕ್
Upto 75% OFF
EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*
FINANCE BONANZA
UPTO ₹10,000
ಕ್ಯಾಶ್ ಬ್ಯಾಕ್
ಮಳಿಗೆಗಳು: 9AM - 11PM ತೆರೆದಿರುತ್ತದೆ
1 ಇ.ಎಮ್.ಐ ಉಚಿತ*
ಇನ್ಸ್ಟಂಟ್ ಲೋನ್ ಅಪ್ರೂವಲ್
Upto ₹4,00,000*
HDFC BANK
We understand your world
10% OFF DISCOUNT ON CC & DC EMI* MIN TXN ₹17,000 MAX CAP ₹3,000
*T&C
ASSURED GIFTS ON ALL LG PRODUCTS*
Life's Good
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
STORE LOCATOR
ಯಾವುದೇ ಲ್ಯಾಪ್‌ಟಾಪ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75%++ ರಿಯಾಯಿತಿ*
*₹3,153 ಮೌಲ್ಯದ HP W/L COMBO KEYBOARD & MOUSE+ 64GB 3.2 PENDRIVE ಖರೀದಿಯ ಮೇಲೆ
ಯಾವುದೇ ಎಲ್.ಇ.ಡಿ ಟಿವಿ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 69% ರಿಯಾಯಿತಿ*
*₹15,499 ಮೌಲ್ಯದ ZEBRONICS ಸೌಂಡ್ ಬಾರ್ ಖರೀದಿಯ ಮೇಲೆ
ಯಾವುದೇ ಮೊಬೈಲ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75%++ ರಿಯಾಯಿತಿ*
*₹3,239 ಮೌಲ್ಯದ BT NECKBAND + POWER BANK ಖರೀದಿಯ ಮೇಲೆ
ಯಾವುದೇ ವಾಷಿಂಗ್ ಮೆಷಿನ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 52% ರಿಯಾಯಿತಿ*
*₹945 ಮೌಲ್ಯದ KENSTAR DRY IRON ಖರೀದಿಯ ಮೇಲೆ
ಯಾವುದೇ ಏರ್ ಕಂಡಿಷನರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 64% ರಿಯಾಯಿತಿ*
*₹21,900 ಮೌಲ್ಯದ 32ಎಲ್.ಇ.ಡಿ ಟಿವಿ ಖರೀದಿಯ ಮೇಲೆ
ಯಾವುದೇ ರೆಫ್ರಿಜರೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 54% ರಿಯಾಯಿತಿ*
*₹20,990 ಮೌಲ್ಯದ KAFF CHIMNEY ಖರೀದಿಯ ಮೇಲೆ
ಯಾವುದೇ ಡ್ರೈಯರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 70% ರಿಯಾಯಿತಿ*
*₹2,669 ಮೌಲ್ಯದ PREETHI 5 LTR PRESSURE COOKER ಖರೀದಿಯ ಮೇಲೆ
ಯಾವುದೇ ಡಿಶ್ವಾಶರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 57% ರಿಯಾಯಿತಿ*
*₹999 ಮೌಲ್ಯದ PHILIPS COOK & SERVE ಖರೀದಿಯ ಮೇಲೆ
ಯಾವುದೇ ಮೈಕ್ರೋವೇವ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 72% ರಿಯಾಯಿತಿ*
*₹1,525 ಮೌಲ್ಯದ MILTON 3 PC's CASSEROLE ಖರೀದಿಯ ಮೇಲೆ
ಯಾವುದೇ ಡೀಪ್ ಫ್ರೀಜರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 67% ರಿಯಾಯಿತಿ*
*₹7,490 ಮೌಲ್ಯದ KENSTAR GEYSER ಖರೀದಿಯ ಮೇಲೆ
ಯಾವುದೇ ಕಿಚನ್ ಅಪ್ಲೈಯನ್ಸಸ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 70% ರಿಯಾಯಿತಿ*
*₹3,999 ಮೌಲ್ಯದ ZEBRONICS SMART WATCH ಖರೀದಿಯ ಮೇಲೆ
ಯಾವುದೇ ಹೋಮ್ ಥಿಯೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75% ರಿಯಾಯಿತಿ*
*₹11,500 ಮೌಲ್ಯದ ZEBRONICS SMART WATCH ಖರೀದಿಯ ಮೇಲೆ
LG SAMSUNG SONY Panasonic Haier IFB Godrej LLOYD Whirlpool BOSCH PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. * GST ಹೆಚ್ಚುವರಿ.
178 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org

ಶ್ರೀನಿವಾಸಪುರದಲ್ಲಿ ಇಬ್ಬರು ಬಾಂಗ್ಲಾ ಪ್ರಜೆ ವಶಕ್ಕೆ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ಶ್ರೀನಿವಾಸಪುರದಲ್ಲಿ ಅಕ್ರಮವಾಗಿ ವಾಸವಾಗಿ ಕೂಲಿ ಕೆಲಸದಲ್ಲಿ ತೊಡಗಿದ್ದ ಇಬ್ಬರು ಬಾಂಗ್ಲಾದೇಶದ ಪ್ರಜೆಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಈ ಇಬ್ಬರ ಬಳಿ ಇದ್ದ ದಾಖಲೆಗಳನ್ನು ಪರಿಶೀಲಿಸಿದ್ದು, ಬಾಂಗ್ಲಾದೇಶದ ಪ್ರಜೆಗಳು ಎಂಬುದು ದೃಢಪಟ್ಟಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ.ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ಈ ಇಬ್ಬರು ಪಟ್ಟಣದ ಬಳಿ ಬಯಲು ಪ್ರದೇಶದಲ್ಲಿ ಶೆಡ್ ಹಾಕಿಕೊಂಡು ನೆಲೆಸಿದ್ದರು ಎಂಬುದು ಗೊತ್ತಾಗಿದೆ. ಇವರ ಸಂಪರ್ಕದಲ್ಲಿದ್ದ ಇನ್ನಿತರ ಸುಮಾರು ಹತ್ತು ಮಂದಿ ಕೂಡ ಬಾಂಗ್ಲಾದೇಶದವರೇ ಆಗಿರಬಹುದೆಂಬ ಶಂಕೆ ಇದ್ದು ಅವರನ್ನೂ ವಶಕ್ಕೆ ಪಡೆದು ದಾಖಲೆ ಪರಿಶೀಲಿಸುತ್ತಿದ್ದಾರೆ. ನಾಲ್ಕು ಮಕ್ಕಳು ಹಾಗೂ ನಾಲ್ವರು ಮಹಿಳೆಯರು ಸೇರಿದಂತೆ 12 ಮಂದಿ ಇರುವುದು ಗೊತ್ತಾಗಿದೆ.

ವಶಕ್ಕೆ ಪಡೆದಿರುವ ಇಬ್ಬರನ್ನು ಬೆಂಗಳೂರಿನ ಡಿಟೆನ್ಷನ್ ಕೇಂದ್ರಕ್ಕೆ ಕಳುಹಿಸಲಿದ್ದಾರೆ. ಯಾವಾಗ ದೇಶಕ್ಕೆ ನುಸುಳಿದರು, ಎಷ್ಟು ವರ್ಷಗಳಿಂದ ಇಲ್ಲಿ ನೆಲೆಸಿದ್ದಾರೆ. ಇವರ ಜತೆಗೆ ಮತ್ತಾರು ಬಂದಿದ್ದಾರೆ. ಆಧಾರ್ ಅಥವಾ ಬೇರೆ ಯಾವುದಾದರೂ ದಾಖಲೆ ಹೊಂದಿದ್ದಾರೆಯೇ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಶ್ರೀನಿವಾಸಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕಾರಾಗೃಹದಲ್ಲೂ ಸಾಹಿತ್ಯ ಕಮ್ಮಟ

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಕೈದಿಗಳ ಮನಃಪರಿವರ್ತನೆಗೆ ಪ್ರಯತ್ನ


• ವರುಣ ಹೆಗಡೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿವಿಧ ಕಾರಾಗೃಹ ವಾಸಿಗಳಿಗೆ ಹಮ್ಮಿಕೊಂಡಿದ್ದ ಸಾಹಿತ್ಯ ಕಮ್ಮಟಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದರಿಂದ, ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳಿಗೂ ಈ ಕಮ್ಮಟದ ಮೂಲಕ ಸಾಹಿತ್ಯಾಭಿರುಚಿ ಮೂಡಿಸಲು ಅಕಾಡೆಮಿ ಮುಂದಾಗಿದೆ.

ಅಕಾಡೆಮಿ ಹಮ್ಮಿಕೊಂಡಿದ್ದ 'ಕಾರಾಗೃಹ ವಾಸಿಗಳಿಗೆ ಕಮ್ಮಟ' ಯೋಜನೆಗೆ ಮೇ ತಿಂಗಳಲ್ಲಿ ಚಾಲನೆ ದೊರೆತಿತ್ತು. ಈಗಾಗಲೇ ಮೈಸೂರಿನ ಕೇಂದ್ರ ಕಾರಾಗೃಹ, ಬೆಳಗಾವಿಯ ಹಿಂಡಲಗಾ ಜೈಲು, ಹಾವೇರಿ ಜಿಲ್ಲಾ ಕಾರಾಗೃಹದಲ್ಲಿ ಈ ಕಮ್ಮಟವನ್ನು ನಡೆಸಲಾಗಿದೆ. ಕೈದಿಗಳು ಹಾಗೂ ಜೈಲು ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸಿದ್ದರಿಂದ ವಿವಿಧ ಕಾರಾಗೃಹಗಳಲ್ಲಿ ಈ ಕಮ್ಮಟವನ್ನು ಹಮ್ಮಿಕೊಳ್ಳಲು ಅಕಾಡೆಮಿ ನಿರ್ಧರಿಸಿದೆ. ಈ ಸಂಬಂಧ ವಿವಿಧ ಕಾರಾಗೃಹಗಳ ಅಧಿಕಾರಿಗಳ ಜತೆಗೆ ಮಾತುಕತೆ ನಡೆಸುತ್ತಿದ್ದು, ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿಯೂ ಕಮ್ಮಟ ಆಯೋಜಿಸಲು ಯೋಜನೆ ರೂಪಿಸಿದೆ.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ



ಕೈದಿಗಳಿಗೆ ಸಾಹಿತ್ಯ ಪರಿಚಯಿಸಿದರೆ ಅವರಲ್ಲಿ ಅಲ್ಪಸ್ವಲ್ಪವಾದರೂ ಬದಲಾವಣೆ ಸಾಧ್ಯ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿಯೂ ಸಾಹಿತ್ಯ ಕಮ್ಮಟ ಹಮ್ಮಿಕೊಳ್ಳಲಾಗುತ್ತದೆ

ಎಲ್.ಎನ್. ಮುಕುಂದರಾಜ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ರಾಜ್ಯದ ಅತಿದೊಡ್ಡ ಮತ್ತು ಪ್ರಮುಖ ಕಾರಾಗೃಹವಾಗಿರುವ ಪರಪ್ಪನ ಅಗ್ರಹಾರಕ್ಕೆ, ರಾಜ್ಯದ ವಿವಿಧ ಭಾಗಗಳಿಂದ ಬಂದ ಅಪರಾಧಿಗಳನ್ನು ಇರಿಸಲಾಗುತ್ತದೆ. ಆದ್ದರಿಂದ ಸುರಕ್ಷತೆ ಹಾಗೂ ಸಿದ್ಧತೆಯನ್ನು ಖಚಿತಪಡಿಸಿಕೊಂಡು ಕಮ್ಮಟ ಹಮ್ಮಿಕೊಳ್ಳಲು ಅಕಾಡೆಮಿ ನಿರ್ಧರಿಸಿದೆ.

ಮೂರು ದಿನಗಳು ಈ ಕಮ್ಮಟ ನಡೆಯಲಿದ್ದು, ಕೈದಿಗಳ ಮನಃ ಪರಿವರ್ತನೆಗೆ ಸಾಹಿತ್ಯ ಉಪನ್ಯಾಸಗಳನ್ನು ಹಮ್ಮಿಕೊಳ್ಳುವ ಜತೆಗೆ, ಕಾರಾಗೃಹ ವಾಸಿಗಳಿಗೆ ಕಥೆ, ಕವನ ಬರೆಯಲು ಅವಕಾಶ ನೀಡಲಾಗುತ್ತದೆ.

ಕೈದಿಗಳಿಗೆ ಚಟುವಟಿಕೆ: ಈ ಕಮ್ಮಟದಲ್ಲಿ ಕೈದಿಗಳನ್ನು ವಿವಿಧ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಸಾಹಿತ್ಯ ಕ್ಷೇತ್ರದ ಪ್ರಮುಖರು ಉಪನ್ಯಾಸ ನೀಡುತ್ತಾರೆ. ಸಾಹಿತ್ಯ ಹಾಗೂ ಪುಸ್ತಕಗಳ ಓದಿನ ಮಹತ್ವದ ಬಗ್ಗೆಯೂ ಮನವರಿಕೆ ಮಾಡಿಸಲಾಗುತ್ತದೆ. ಕಾರಾಗೃಹ ವಾಸಿಗಳು ಕವನ, ಕಥೆಗಳನ್ನು ವಾಚಿಸಲು ಅವಕಾಶ ನೀಡಲಾಗುತ್ತದೆ. ಈ ಕಮ್ಮಟದ ಉದ್ಘಾಟನೆ ಸಮಾರಂಭದಲ್ಲಿ ಸಾಹಿತಿಗಳ ಜತೆಗೆ ಕಾರಾಗೃಹ ಅಧಿಕಾರಿಗಳೂ ಪಾಲ್ಗೊಳ್ಳುತ್ತಾರೆ. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೈದಿಗಳು ಅಧಿಕ ಸಂಖ್ಯೆಯಲ್ಲಿ ಇರುವುದರಿಂದ, ಆಯ್ದ ಕೈದಿಗಳಿಗೆ ಕಮ್ಮಟದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುತ್ತದೆ.

'ಕಾರಾಗೃಹಗಳಲ್ಲಿ ಅಪರಾಧಿಗಳ ಜತೆಗೆ ಆರೋಪಿಗಳು ಇರುತ್ತಾರೆ. ಅವರು ಬಂಧಿತರಾಗಲು ಹಲವು ಕಾರಣಗಳಿರುತ್ತವೆ. ಬಸವಾದಿ ಶರಣರು ಅದ್ಭುತವಾದ ಮನುಷ್ಯ ನೀತಿಯನ್ನು ಸಾರಿದ್ದಾರೆ. ಕನ್ನಡ ಸಾಹಿತ್ಯವು ಅನೇಕ ಮೌಲ್ಯಗಳನ್ನು ಸಾರುತ್ತಾ ಬಂದಿದೆ. ಕಾರಾಗೃಹದ ಬಂಧಿಗಳಾಗಿರುವವರಿಗೆ ಅಂತಹ ಮೌಲ್ಯಗಳನ್ನು ತಿಳಿಸಿ ಹೇಳಬೇಕಿದೆ. ಆದ್ದರಿಂದ ಈ ಕಮ್ಮಟವನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು.

ಸಂತೆಯಲ್ಲಿ ಕನ್ನಡ ಸಾಹಿತ್ಯ ವಿಸ್ತರಣೆ

ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಅಕಾಡೆಮಿ ಹಮ್ಮಿಕೊಂಡಿದ್ದ 'ಸಂತೆಯಲ್ಲಿ ಕನ್ನಡ ಸಾಹಿತ್ಯ' ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದರಿಂದ, ವಿವಿಧ ಸಂತೆಗಳಲ್ಲಿ ಸಾಹಿತ್ಯದ ಕಾರ್ಯಕ್ರಮ ನಡೆಸಲು ಅಕಾಡೆಮಿ ನಿರ್ಧರಿಸಿದೆ. ಜೂನ್ ತಿಂಗಳಲ್ಲಿ ತುಮಕೂರಿನ ಕುಣಿಗಲ್ ತಾಲ್ಲೂಕಿನ ಎಡೆಯೂರು ಗ್ರಾಮದ ಸಂತೆ ಮೈದಾನದಲ್ಲಿ ಈ ಕಾರ್ಯಕ್ರಮ ನಡೆಸುವ ಮೂಲಕ ಯೋಜನೆಗೆ ಚಾಲನೆ ನೀಡಲಾಗಿತ್ತು. ಅಲ್ಲಿ ಮೆರವಣಿಗೆಯನ್ನೂ ನಡೆಸಲಾಗಿತ್ತು. ಸಾಹಿತ್ಯಾಭಿರುಚಿ ಬೆಳೆಸುವುದರಿಂದ ವಿವಿಧ ಸಂತೆಗಳಲ್ಲಿ ಸ್ಥಳೀಯರ ಸಹಕಾರದೊಂದಿಗೆ ಈ ಕಾರ್ಯಕ್ರಮ ನಡೆಸಿ, ಪಂಪ, ಕುಮಾರವ್ಯಾಸ, ಕುವೆಂಪು, ಬೇಂದ್ರೆ ಮೊದಲಾದವರ ಬಗ್ಗೆ ಪರಿಚಯಿಸಲಿದೆ.



ಬೆಂಗಳೂರಿನ SN ಪಬ್ಲಿಕ್ ಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಕುಮಾರಿ ನಯನ ಯಾಷ್ವಿ ಅವರು ಇತ್ತೀಚೆಗೆ ಅಗಸ್ಟ್ 7 ರಿಂದ 13 ರವರೆಗೆ ಉತ್ತರಪ್ರದೇಶದಲ್ಲಿ ನಡೆದ 4ನೇ ಸಬ್ ಜೂನಿಯರ್ ರಾಷ್ಟ್ರೀಯ Boxing ಚಾಂಪಿಯನ್ ಶಿಪ್ ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ 46-49kg ವಿಭಾಗದಲ್ಲಿ ರಜತ ಪದಕವನ್ನು ಪಡೆದು ರಾಜ್ಯಕ್ಕೆ ಕೀರ್ತಿ ತಂದು ಕೊಟ್ಟಿದ್ದಾರೆ. ಅಲ್ಲದೆ ಟೂರ್ನಿಯ Best Challenger ಅವಾರ್ಡ್ ಕೂಡ ಪಡೆದಿದ್ದಾರೆ. Karnataka Amateur Boxing Association ನ ಕಾರ್ಯದರ್ಶಿ ಶ್ರೀ ಸಾಯಿ ಸತೀಶ್, ಧನಸಂಜಯನ್ ಹಾಗೂ ಮುಖ್ಯ ಗುರುಗಳಾದ Captain ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಕರ್ನಾಟಕದ Boxing ನಲ್ಲಿ ಭವಿಷ್ಯದ ಅದ್ಭುತ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ.



ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವಿಶ್ವ ಆನೆ ದಿನ ಆಚರಿಸಲಾಯಿತು

ಬನ್ನೇರುಘಟ್ಟ: ವಿಶ್ವ ಆನೆ ದಿನ ಸಂಭ್ರಮ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ನಡೆದ ವಿಶ್ವ ಆನೆ ದಿನದಂದು 'ಮಾನವ ಮತ್ತು ಆನೆ ಸಹಬಾಳ್ವೆ' ವಿಷಯಾಧಾರಿತ ಕಾರ್ಯಕ್ರಮ ಗುರುವಾರ ನಡೆಯಿತು.

ಪ್ರವಾಸಿಗರಿಗೆ ಆನೆಗಳ ಪರಿಚಯ, ಮಾವುತರು, ಕಾವಾಡಿಗಳು ಮತ್ತು ರಾತ್ರಿ ವೀಕ್ಷಕರು ನಿರ್ವಹಿಸುವ ನಿರ್ಣಾಯಕ ಪಾತ್ರಗಳ ಬಗ್ಗೆ ವಿವರಿಸಲಾಯಿತು.

ಈಚೆಗೆ ಪ್ರಾಣಿ ವಿನಿಮಯ ಯೋಜನೆಯಡಿ ಜಪಾನ್‌ಗೆ ಬನ್ನೇರುಘಟ್ಟದ ನಾಲ್ಕು ಆನೆ ಸ್ಥಳಾಂತರ ಮಾಡಿದ ಅನುಭವವನ್ನು ಸಿಬ್ಬಂದಿ ಹಂಚಿಕೊಂಡರು.

ಬನ್ನೇರುಘಟ್ಟ ಜೈವಿಕ ಉದ್ಯಾನ ಕಾರ್ಯ ನಿರ್ವಹಣಾಧಿಕಾರಿ ಎ.ವಿ. ಸೂರ್ಯಸೇನ್, ಮಾನವ ಮತ್ತು ಆನೆ ಸಂಘರ್ಷ ನಿರ್ವಹಣೆ, ಮಾವುತರ ಬಾಂಧವ್ಯ ವಿವರಿಸುವ ಸಲುವಾಗಿ ವಿಶ್ವ ಆನೆ ದಿನ ಆಯೋಜಿಸಲಾಗಿದೆ ಎಂದರು.

ಬನ್ನೇರುಘಟ್ಟ ಜೈವಿಕ ಉದ್ಯಾನ, ಅಂಚೆ ಇಲಾಖೆ, ಪೋಸ್ಟ್ ಕ್ರಾಸಿಂಗ್ ವೆಲ್ಫೇರ್ ಸೊಸೈಟಿ ಆಫ್ ಇಂಡಿಯಾ, ರೊಟ್ರಾಕ್ಟ್ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಿವೃತ್ತ ಮಾವುತರಾದ ಮೋಟ ಮತ್ತು ಭಾಸ್ಕರ್ ಅವರನ್ನು ಈ ಸಂದರ್ಭದಲ್ಲಿ ಸತ್ಕರಿಸಲಾಯಿತು.

ಜಾನಪದ ಉತ್ಸವ ಸೆ. 6ರಿಂದ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತಿನಿಂದ ಸೆ. 6 ಹಾಗೂ 7ರಂದು ದುಬೈನಲ್ಲಿ ಅಂತರರಾಷ್ಟ್ರೀಯ ಜಾನಪದ ಉತ್ಸವ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಂತರ ರಾಷ್ಟ್ರೀಯ ಘಟಕವನ್ನು ಉದ್ಘಾಟನೆ ಮಾಡಲಾಗುವುದು' ಎಂದು ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದೇ ಮೊದಲ ಬಾರಿಗೆ ದುಬೈನಲ್ಲಿ ಪರಿಷತ್ತಿನ ಘಟಕ ಪ್ರಾರಂಭಿಸಲಾಗುತ್ತಿದೆ. ಸಚಿವರಾದ ಶಿವರಾಜ ತಂಗಡಗಿ, ಎಚ್.ಸಿ. ಮಹದೇವಪ್ಪ, ಮಾಜಿ ಸಚಿವ ಎಚ್. ಆಂಜನೇಯ, ಶಿಕ್ಷಣ ತಜ್ಞ ಕೆ.ಇ. ರಾಧಾಕೃಷ್ಣ ಅವರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ' ಎಂದರು.

'ಜಾನಪದ ಕಲಾವಿದರಾದ ರಾಣಿ ಮಾಚಯ್ಯ ಹಾಗೂ ಮಳವಳ್ಳಿ ಮಹಾದೇವಸ್ವಾಮಿ ಅವರನ್ನು 'ಎಚ್. ಎಲ್. ನಾಗೇಗೌಡ ಅಂತರರಾಷ್ಟ್ರೀಯ ಜಾನಪದ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ' ಎಂದು ತಿಳಿಸಿದರು.

ಭಾರತದ ಹಿರಿಮೆ ಉಳಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತವು ಅನೇಕ ಕಾರಣಗಳಿಗಾಗಿ ವಿಶ್ವದಲ್ಲಿ ತನ್ನದೇ ಆದ ಹಿರಿಮೆ ಹೊಂದಿದ್ದು, ಇದನ್ನು ಉಳಿಸಿಕೊಳ್ಳುವ ಹೊಣೆ ಯುವ ಪೀಳಿಗೆ ಮೇಲೆ ಇದೆ ಎಂದು ಕಲಾವಿದರಾದ ವಿಶಾಖ ಹರಿ ಹೇಳಿದರು.

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ದಿಶಾಭಾರತ್ ಸಂಸ್ಥೆ ಆಯೋಜಿಸಿದ್ದ 6ನೇ ಆವೃತ್ತಿಯ ನನ್ನ ಭಾರತ– ರಾಷ್ಟ್ರ ಮಟ್ಟದ ಯುವ ಅಭಿಯಾನ ಹಾಗೂ ಉಪನ್ಯಾಸ ಸರಣಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಶೆಡ್ ನಂ. ಎ–54(ಎ) 2ನೇ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು–58,
e-mail : khdcvvs@gmail.com | Web: khdcltd.com, Mob: 8970893384
ಸಂಖ್ಯೆ:ಕ.ಕೈ.ಅ.ನಿ.ನಿ/ವ್ಯ(ವಿವಿಎಸ್)/ವ್ಯ.ನಿ/2025–26/SE0025 ದಿನಾಂಕ:13.08.2025

ಇ–ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ.ಎಲ್) ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಮತ್ತು ನಿಯಮ 2000ದ ಅನ್ವಯ ಪಾಲಿಯೆಸ್ಟರ್ ಕಾಟನ್ ಮತ್ತು ಪಾಲಿಯೆಸ್ಟರ್ ವಿಸ್ಕೋಸ್ ನಮೂನೆಯ ಕೈಮಗ್ಗ ಬಟ್ಟೆಗಳನ್ನು ಸಂಸ್ಕರಣೆ (ಬ್ಲೀಚಿಂಗ್ ಮತ್ತು ಡೈಯಿಂಗ್) ಮಾಡಲು ಅರ್ಹ ಬಿಡ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಿದೆ. ಟೆಂಡರ್ ದಾಖಲೆಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ನಿಗದಿತ ಇ.ಎಂ.ಡಿ ಮೊತ್ತದೊಂದಿಗೆ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 12.09.2025 ಸಂಜೆ 5:30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 15.09.2025 ರಂದು ಬೆಳಿಗ್ಗೆ 11:00ಗಂಟೆಗೆ.** ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೆ ಪೂರ್ತಿ ಅಥವಾ ಭಾಗಶಃ ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ–080–46010000/ 080–22631200ಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು.

ವಾಸಾಸಂಇ/ವಾಪ್ರ/ಜೆಎ/2326/2025–26

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ
ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in,Phone: 08176-255411
ಸಂ:ಮುಅ/ಪುಸಚ/ಇಂ.ವಿ/ಪುರಸಭಾಎಂಟರ್‌ಪ್ರೈಸಸ್‌ನಿಧಿ/2025–26
ದಿನಾಂಕ:14/08/2025/

:ಟೆಂಡರ್ ಪ್ರಕಟಣೆ: : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಪುರಸಭಾ ಎಂಟರ್‌ಪ್ರೈಸಸ್ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:15/09/2025 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯುಬಹುದು ದೂರವಾಣಿ:08176–254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:– ಕ್ರ.ಸಂ.ಕಾಮಗಾರಿ ಹೆಸರು ಪುರಸಭಾ ಎಂಟರ್‌ಪ್ರೈಸಸ್ ನಿಧಿ 2025–26 1.Construction of Commercial Complex in front of Muttattiraya temple of Channarayapattana TMC Limit (DMA/2025-26/BD/WORK_INDENT47083) ಅಂದಾಜು ಮೊತ್ತ (ಲಕ್ಷ ಗಳು)460.45 ಕಾಲಾವಧಿ 12 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ–4 ಸೂಚನೆ:– ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.

ಸಹಿ/–ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ
ಸಹಿ/– ಮುಖ್ಯಾಧಿಕಾರಿ ಪುರಸಭೆ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/452/ಕೆಎಸ್‌ಎಂಸಿಎ/2025–26

ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ
ಮೈಸೂರು ಅರಮನೆ ಮಂಡಳಿ, ಮೈಸೂರು
Phone: 0821-2421051, e-mail: ddmysorepalace@gmail.com
ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–02(3ನೇ ಕರೆ)/2025–26 ದಿನಾಂಕ: 13.08.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು **ಅರಮನೆಯ ಆವರಣದಲ್ಲಿ ಸಿವಿಲ್ ವಿಭಾಗದಿಂದ ಒಟ್ಟು 13 ಕಾಮಗಾರಿಗಳಲ್ಲಿ ಕ್ರ.ಸಂ. 1, 2, 7, 11 ಮತ್ತು 13ರ ಕಾಮಗಾರಿಗಳನ್ನು** ಕೈಗೊಳ್ಳುವ ಸಂಬಂಧ **ಒಟ್ಟು ರೂ. 275.43/– ಲಕ್ಷ + ಜಿ.ಎಸ್.ಟಿ ಗಳ** (ಕನಿಷ್ಠ ರೂ. 5.91 ಲಕ್ಷ + ಜಿ.ಎಸ್.ಟಿ ಮತ್ತು ಗರಿಷ್ಠ ರೂ. 169.41 ಲಕ್ಷ + ಜಿ.ಎಸ್.ಟಿ ಗಳು) ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಮೈಸೂರು ಅರಮನೆ ಮಂಡಳಿ ಅಥವಾ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಅಥವಾ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಮರುಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20.08.2025 16:30 ಗಂಟೆಯವರೆಗೆ. (2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **21.08.2025 16:35 ಗಂಟೆಗೆ.** ಮೈಸೂರು ಅರಮನೆ ಮಂಡಳಿ/ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ/ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರಿಗೆ ಮಾತ್ರ ಸಂಬಂಧಿಸಿದ ಕಾಮಗಾರಿಯುನ್ನು ನೀಡಲಾಗುವುದು. ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/– **ಉಪ ನಿರ್ದೇಶಕರು**
ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/MYS/797/SA/2025-26

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080–23407011–25, ಇ–ಮೇಲ್:kssidcho@gmail.com / chiefengineerkssidc@gmail.com, ವೆಬ್‌ಸೈಟ್: www.kssidc.co.in
ಸಂಖ್ಯೆ:ಇಎನ್‌ಜಿ/ಅ.ಅ/ಡ್ರೋನ್ ಸರ್ವೆ/2025–26/ ದಿ: 13–08–2025

ಪ್ರಸ್ತಾವನೆ ಸಲ್ಲಿಸಲು ಕೋರಿಕೆ
(ಟೆಂಡರ್ ಪ್ರಕಟಣೆ) (ದ್ವಿ ಟೆಂಡರ್ ದಾಖಲೆ ಪದ್ಧತಿ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಸೇವೆಯನ್ನು ಕೈಗೊಳ್ಳುವ ಬಗ್ಗೆ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲವುಳ್ಳ ಮತ್ತು ಸೇವೆಯಲ್ಲಿ ಅನುಭವವಿರುವ ಟೆಂಡರರುದಾರರು ಇವರಿಂದ ಟೆಂಡರನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಟೆಂಡರ್ ದಾಖಲೆ ಪದ್ಧತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರಗಳು	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	Hiring of service provider company / Firm for implementation of data collection, preparation of drawings, mapping and digitisation of existing layouts under KSSIDC for integration to unified land management system, Government of Karnataka.	2.00

ಟೆಂಡರ್ ದಸ್ತಾವೇಜುಗಳ (Tender Document) ಹಾಗೂ ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in **(Karnataka State Small Industries Development Corporation Limited)** ಮುಖಾಂತರ ದಿನಾಂಕ: **13.08.2025ರ ಸಂಜೆ 17.00 ಗಂಟೆಯ ನಂತರ** ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದು.

ಟೆಂಡರ್ ನ ಕಾಲಮಿತಿ ವಿವರಗಳು :
- ಟೆಂಡರ್ ದಾಖಲೆಗಳು ಲಭ್ಯವಾಗುವ ದಿನಾಂಕ: **13.08.2025 ರ 17.00 ಗಂಟೆಯ ನಂತರ.**
- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ ದಿನಾಂಕ: **19.08.2025 ರ ಮಧ್ಯಾಹ್ನ 12.00 ಗಂಟೆಗೆ**
- ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **30.08.2025 17.00 ಗಂಟೆಯವರೆಗೆ.**
- ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.09.2025ರ 17.00 ಗಂಟೆಯ ನಂತರ.**
- ತಾಂತ್ರಿಕ ಟೆಂಡರ್ ತೆರೆಯುವ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು
- ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಅಧೀಕ್ಷಕ ಅಭಿಯಂತರರು

ವಾಸಾಸಂಇ/ವಾಪ್ರ/ಜೆಎ/2327/2025–26

ನೇಪಾಳದ ಮಧೇಶ್ ಪ್ರಾಂತ್ಯದಲ್ಲಿ ಬರ: ಭಾರತೀಯ ನಿಯೋಗ ಭೇಟಿ

ಕಠ್ಮಂಡು (ಪಿಟಿಐ): ಭಾರತದ ಜಲಶಕ್ತಿ ಸಚಿವಾಲಯದ ಮೂವರು ಸದಸ್ಯರ ನಿಯೋಗ ನೇಪಾಳದ ಮಧೇಶ್ ಪ್ರಾಂತ್ಯದ ಮುಖ್ಯಮಂತ್ರಿ ಸತೀಶ್ ಕುಮಾರ್ ಸಿಂಗ್ ಅವರನ್ನು ಗುರುವಾರ ಭೇಟಿ ಮಾಡಿತು. ಮುಂಗಾರು ವಿಳಂಬದಿಂದ ನೇಪಾಳದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸಭೆ ನಡೆಸಿತು.

ಭಾರತದ ನಿಯೋಗವು ಪ್ರಾಂತ್ಯದ ನೀರಿನ ಕೊರತೆಯನ್ನು ನೀಗಿಸಲು ಅತ್ಯಮೂಲ್ಯ ಮಾಹಿತಿಯನ್ನು ಒದಗಿಸಿತು.

‘ಸೇನಾ ರಾಕೆಟ್ ಪಡೆ’ ರಚನೆ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಹೊಸದಾಗಿ ‘ಸೇನಾ ರಾಕೆಟ್ ಪಡೆ’ಯನ್ನು ರಚಿಸಲಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಘೋಷಿಸಿದ್ದಾರೆ.

ಅತ್ಯಾಧುನಿಕ ತಂತ್ರಜ್ಞಾನದ ಯುದ್ಧಾಸ್ತ್ರಗಳನ್ನು ಬಳಸುವ ನೈಪುಣ್ಯವನ್ನು ಈ ಪಡೆ ಹೊಂದಿರುತ್ತದೆ. ದೇಶದ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಈ ಪಡೆ ಒಂದು ಮೈಲುಗಲ್ಲಾಗಲಿದೆ ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನದ 78ನೇ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನವಾದ ಬುಧವಾರ ರಾತ್ರಿ ಅವರು ಈ ವಿಷಯ ಪ್ರಕಟಿಸಿದ್ದಾರೆ. ಈ ಪಡೆಯ ಕಾರ್ಯ ನಿರ್ವಹಣೆ ಮತ್ತು ಜವಾಬ್ದಾರಿಗಳ ಕುರಿತು ಅವರು ಹೆಚ್ಚಿನ ಮಾಹಿತಿ ನೀಡಲಿಲ್ಲ.


ಶೆಹಬಾಜ್

ಪಾಕಿಸ್ತಾನದ ಈ ಹೊಸ ಪಡೆಯ ರಚನೆಯು ಚೀನಾದಲ್ಲಿನ ‘ಪೀಪಲ್ ಲಿಬರೇಷನ್ ಆರ್ಮಿ’ಯ ರಾಕೆಟ್ ಪಡೆಯಿಂದ ಸ್ಫೂರ್ತಿ ಪಡೆದಿದೆ ಎನ್ನಲಾಗಿದೆ. ಚೀನಾದ ಈ ಪಡೆಯು ಖಂಡಾಂತರ ಕ್ಷಿಪಣಿಗಳು, ಹೈಪರ್‌ಸಾನಿಕ್, ಕ್ರೂಸ್ ಕ್ಷಿಪಣಿಗಳು ಸೇರಿದಂತೆ ಪರಮಾಣು ಮತ್ತು ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಶಸ್ತ್ರಾಗಾರದ ನಿಯಂತ್ರಣ ಹೊಂದಿದೆ.

ಪ್ರಧಾನಿ ಶೆಹಬಾಜ್ ಅವರು ಈ ಕುರಿತು ಘೋಷಣೆ ಮಾಡಿದ ಕಾರ್ಯಕ್ರಮದಲ್ಲಿ, ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ, ಮೂರೂ ಪಡೆಗಳ ಮುಖ್ಯಸ್ಥರು, ರಾಷ್ಟ್ರೀಯ ಮತ್ತು ವಿದೇಶಿ ಪ್ರತಿನಿಧಿಗಳು ಹಾಜರಿದ್ದರು.

ಇದೇ ವೇಳೆ ಅವರು, ಭಾರತ ಮತ್ತು ಪಾಕ್ ನಡುವೆ ಇತ್ತೀಚೆಗೆ ನಡೆದ ನಾಲ್ಕು ದಿನಗಳ ಸೇನಾ ಸಂಘರ್ಷವನ್ನೂ ಪ್ರಸ್ತಾಪಿಸಿದರು. ಈ ಸಂಘರ್ಷದಲ್ಲಿ ಪಾಕಿಸ್ತಾನಕ್ಕೆ ಬಹುದೊಡ್ಡ ಜಯ ದೊರೆತಿದೆ ಎಂದ ಅವರು, ‘ಇದರ ಶ್ರೇಯ ದೇಶದ ಪರಮಾಣು ಕಾರ್ಯತಂತ್ರ ಸಾಮರ್ಥ್ಯಕ್ಕೆ ಸಲ್ಲುತ್ತದೆ’ ಎಂದಿದ್ದಾರೆ.

‘ಇದರ ಪರಿಣಾಮ ಭಾರತದ ಆರ್ಭಟ ನಾಲ್ಕೇ ದಿನಕ್ಕೆ ಛಿದ್ರಗೊಂಡಿತು’ ಎಂದು ಹೇಳಿದ್ದಾರೆ.

ಎರಡೂ ದೇಶಗಳ ನಡುವಿನ ಸಂಘರ್ಷವನ್ನು ಶಮನಗೊಳಿಸಿ, ಕದನ ವಿರಾಮ ಘೋಷಣೆಯಾಗಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಹಿಸಿದ ಪಾತ್ರ ಮಹತ್ವದ್ದಾಗಿತ್ತು ಎಂದ ಅವರು, ‘ಕಾಶ್ಮೀರ ವಿಷಯವನ್ನು ವಿಶ್ವಸಂಸ್ಥೆಯ ನಿರ್ಣಯದಂತೆ ಪರಿಹರಿಸಬೇಕು’ ಎಂದು ಒತ್ತಾಯಿಸಿದರು.

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ
ಭಾರತ ಸರ್ಕಾರ
PM SHRI

ಜವಾಹರ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆ–2026ರ VI ನೇ ತರಗತಿಗೆ ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಗೆ ಅಧಿಸೂಚನೆ.

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ ನವೋದಯ ವಿದ್ಯಾಲಯದಲ್ಲಿ VI ನೇ ತರಗತಿ (2026–27ನೆಯ ಸಾಲಿಗೆ) ಪ್ರವೇಶಕ್ಕಾಗಿ ಆನ್ ಲೈನ್ ನೋಂದಣಿ ಪ್ರಗತಿಯಲ್ಲಿದೆ. ಆನ್ ಲೈನ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಆಗಸ್ಟ್ 27, 2025ರ ವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು https://cbseitms.rcil.gov.in/nvs ಈ ಲಿಂಕ್‌ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು.

ಇವರಿಂದ: ನವೋದಯ ವಿದ್ಯಾಲಯ ಸಮಿತಿ

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ
ದೂರವಾಣಿ ನಂ.: 08419–261273 Email: dcfyellapur@gmail.com
ಎ3/ಇ–ಟೆಂಡರ್/Campa/Building/2025–26 ದಿನಾಂಕ: 13–08–2025

ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಲೆಕ್ಕಶೀರ್ಷಿಕೆ: **2406-04-103-1-06-Others-140-Minor Works (Campa-06-Others)** ಅಡಿಯಲ್ಲಿ ಮುಂಚೂಣಿ ಸಿಬ್ಬಂದಿ ವಸತಿ ಗೃಹ **(Compelx type Frontline Staff quertress)** ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು ಮರು ಇ–ಟೆಂಡರ **KFD/2025-26/BD/WORK-Indent27270** (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಕೆಡಬ್ಲ್ಯೂ–2 ದ್ವಿ ಲಕೋಟೆ ಪದ್ಧತಿ) ಕರೆಯಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22–08–2025 ಮಧ್ಯಾಹ್ನ 4.00 ಗಂಟೆಗೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಯಲ್ಲಾಪುರ ವಿಭಾಗ, ಯಲ್ಲಾಪುರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 08419–261273).

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಯಲ್ಲಾಪುರ ವಿಭಾಗ, ಯಲ್ಲಾಪುರ

DIPR/KWR/KSMCA/382/25-26 Dt.14.08.2025

ಪಾಕಿಸ್ತಾನದಲ್ಲಿ ವೈದ್ಯೆಗೆ ಗುಂಡಿಕ್ಕಿ ‘ಮರ್ಯಾದೆಗೇಡು’ ಹತ್ಯೆ

ಲಾಹೋರ್ (ಪಿಟಿಐ): 24 ವರ್ಷದ ವೈದ್ಯೆಯನ್ನು ಅವರ ಕಿರಿಯ ಸಹೋದರ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ನಡೆದಿದೆ. ಪ್ರಕರಣವು ಮರ್ಯಾದೆಗೇಡು ಹತ್ಯೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಡಾ. ಅಯೇಷಾ ಬೀಬಿ ಹತ್ಯೆಗೀಡಾದ ವೈದ್ಯೆ. ಘಟನೆಯು ಕಳೆದ ವಾರ ತೋಬಾ ತೆಕ್ ಸಿಂಗ್‌ನಲ್ಲಿ ನಡೆದಿದೆ. ಸಂತ್ರಸ್ತೆ ಕಿರ್ಗಿಸ್ತಾನದಿಂದ ಎಂಬಿಬಿಎಸ್ ಮುಗಿಸಿ ಇತ್ತೀಚೆಗಷ್ಟೆ ದೇಶಕ್ಕೆ ಮರಳಿದ್ದರು.

ಆರಂಭದಲ್ಲಿ ಹೇಳಿಕೆ ನೀಡಿದ್ದ ಅಯೇಷಾ ಅವರ ತಂದೆ, ‘ಊಟ ಸಿದ್ಧ ಮಾಡಿಲ್ಲ ಎಂಬ ವಿಚಾರವಾಗಿ ವಾಗ್ವಾದ ನಡೆದು ಅವರ ತಮ್ಮ ಉಮೈರ್ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ’ ಎಂದು ತಿಳಿಸಿದ್ದರು. ಆದಾಗ್ಯೂ, ಬುಧವಾರ ಉಮೈರ್‌ನನ್ನು ಪೊಲೀಸರು ಬಂಧಿಸಿದರು.

‘ಅಯೇಷಾ ಅವರು ಕಿರ್ಗಿಸ್ತಾನದಲ್ಲಿ ಎಂಬಿಬಿಎಸ್ ಮಾಡಿರುವ ತಮ್ಮ ಆಯ್ಕೆಯ ಹುಡುಗನನ್ನು ವರಿಸಲು ಬಯಸಿದ್ದಕ್ಕೆ ಹತ್ಯೆ ಮಾಡಿದ್ದಾಗಿ ಉಮೈರ್ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ವರ್ಷಂಪ್ರತಿ 1,000 ಮಹಿಳೆಯರ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತವೆ ಎಂದು ದೇಶದ ಮಾನವ ಹಕ್ಕುಗಳ ಆಯೋಗ ಹೇಳಿದೆ.

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ನೋಂ. ಕಚೇರಿ, 30/1, 1ನೇ ಮತ್ತು 2ನೇ ಮಹಡಿ, ಬೃಬೆಂಮಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560051
ಸಂಖ್ಯೆ: ಉಪ್ರವ್ಯ–3/ಬೆಂಘತ್ಯಾನಿನಿ/ಪಿಆರ್/318/2025–26 ದಿನಾಂಕ: 14.08.2025

ಟೆಂಡರ್ ರದ್ದುಪಡಿಸುವಿಕೆ ಪ್ರಕಟಣೆ


ಈ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಉಲ್ಲೇಖಿತ ಟೆಂಡರ್ ಪ್ರಕಟಣೆ ಸಂಖ್ಯೆ.**DGM-3/BSWML/TEND/08/2025-26,** ರಂತೆ ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂ.ಘ.ತ್ಯಾ.ನಿ.ನಿ ರವರಿಂದ ದಿನಾಂಕ **28–07–2025**ರಂದು ಪ್ರಕಟಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರನ್ನು ರದ್ದುಗೊಳಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಡಿಐಪಿಆರ್/ಸಿಪಿ/2337/ಸಿಸಿಎಲ್/2025–26

ನಿಧನ ವಾರ್ತೆ

ಅಶ್ವತ್ಥ್ ಕುಮಾರ್



ಗೌರಿಬಿದನೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರ ಪತ್ನಿ ಅನಿತಾ ಅವರ ತಂದೆ ಅಶ್ವತ್ಥ್ ಕುಮಾರ್ (90) ಬುಧವಾರ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಬೆಂಗಳೂರಿನ ಟಿ.ದಾಸರಹಳ್ಳಿಯಲ್ಲಿ ಪುತ್ರಿ ಅನಿತಾ ಅವರ ನಿವಾಸದಲ್ಲಿ ಇದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು, ನಾಲ್ವರು ಪುತ್ರಿಯರಿದ್ದಾರೆ. ಸಿವಿಲ್ ಎಂಜಿನಿಯರ್ ಆಗಿದ್ದ ಅವರು, ಗೌರಿಬಿದನೂರು ವಿ.ವಿ. ಪುರಂನಲ್ಲಿ ವಾಸವಾಗಿದ್ದರು.

ಟಿ.ದಾಸರಹಳ್ಳಿಯಲ್ಲಿ ಗುರುವಾರ ಅಂತ್ಯ ಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಧು ಬಂಗಾರಪ್ಪ, ನಟ ಶಿವರಾಜ್ ಕುಮಾರ್ ಕುಟುಂಬ ಸೇರಿದಂತೆ ಗಣ್ಯರು ಅಂತಿಮ ದರ್ಶನ ಪಡೆದರು.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನೀಯರಿಂಗ್ ಘಟಕ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಆ & ಕು.ಕ.ಇ.ಇಂ ವಿಭಾಗ, ಫೋರ್ಟ ರೋಡ್, ಧಾರವಾಡ–580 008 ಸಂ: 0836–2955800.
(E-mail:eehfwedvndwd1@gmail.com)
ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ–ಧಾ/ಆಅಕೇಂ/564/25–26 ದಿ: 12.08.2025

ಟೆಂಡರ ಪ್ರಕಟಣೆ
(Through KPP portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗದಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿಯ ಈ ಕೆಳಗಿನ ಕಾಮಗಾರಿಗಳಿಗೆ (ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು (Double cover system) ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳ ಕಾಮಗಾರಿಗೆ **ದಿ: 22–08–2025**ರ ಸಾಯಂಕಾಲ **4:00** ಗಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು **ದಿ: 25–08–2025** ರಂದು ತೆರೆಯಲಾಗುವುದು.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಮ್.ಡಿ. ಮೊತ್ತ (ರೂ. ಲಕ್ಷಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿಯ ಅವಧಿ (ಮಳೆಗಾಲ ಸಹಿತ)	ಗುತ್ತಿಗೆದಾರರ ವರ್ಗ
	ಲೆಕ್ಕ ಶೀರ್ಷಿಕೆ: ಪಿ.ಎಮ್. ಅಭಿಮ್					
	ಬೆಳಗಾವಿ ಜಿಲ್ಲೆ					
1	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಧಮನೆಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
2	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಐನಾಪುರ–2ದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
3	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಬೇವನೂರುನಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
4	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ **ದೊಡ್ಡವಾಡದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
5	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ **ಹನಬರಹಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
6	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಶೇಡಬಾಳನಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
7	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಜುಂಜರವಾಡನಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
8	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಮಲಬಾದನಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	ST
9	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಅಗಸಗಾದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-I
10	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಭಸ್ತವಾಡದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-I
11	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ **ಧೂಪದಾಳದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
12	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ **ಅರಬಾವಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
13	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ **ಕನ್ನಾಳದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
14	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ **ಅರವಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
15	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ **ಖೋದಾನಪುರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
16	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ **ಸುನಡೊಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
	ಹಾವೇರಿ ಜಿಲ್ಲೆ					
17	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಅರಿಕಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
18	ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ **ಬಾಲೂರನಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
19	ಹಾವೇರಿ ಜಿಲ್ಲೆ ಮತ್ತು ತಾಲೂಕಿನ **ಬುಡಕಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
20	ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ **ಹನುಮಸಾಗರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
21	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಹಿರೆಕೊನತಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
22	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ **ಹುಲ್ಲಿಕಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
23	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಕಿರಿಗೇರಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
24	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ ಕೋಡಿಯಾಲ್ **ಹೊಸಪೇಟ–ಬಿ ಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
25	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ **ನೂಕಾಪುರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
26	ಹಾವೇರಿ ಜಿಲ್ಲೆ ಶಿಗ್ಗಾವ ತಾಲೂಕಿನ **ಬಾಡದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	ST
27	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ನೂಲಗೇರಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	ST
28	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ **ಉಕ್ಕುಂದ ದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	ST
29	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ **ಹುಲಿಹಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-I
30	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಚನ್ನಹಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
31	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಚಿನ್ನಮುಳಗುಂದ ದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
32	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಹದರಿಹಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
33	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಹಿರೆಮೊರಬ ದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
34	ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ **ಲಿಂಗದಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
35	ಹಾವೇರಿ ಜಿಲ್ಲೆ ಹಿರೆಕೆರೂರ ತಾಲೂಕಿನ **ಸುತ್ತಕೋಟಿ ಆಯುಷ್ಮಾನ ಆರೋಗ್ಯ** ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
36	ಹಾವೇರಿ ಜಿಲ್ಲೆ ಮತ್ತು ತಾಲೂಕಿನ **ಯತ್ತಿನಹಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
	ಉತ್ತರ ಕನ್ನಡ ಜಿಲ್ಲೆ					
37	ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ **ವಲಗಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	SC
38	ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ **ಹಾಲಕರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.41	0.54	Class III & above	6 Months	CAT-II (A)
	ವಿಜಯಪುರ ಜಿಲ್ಲೆ					
39	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ **ಐರಸಂಗದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	SC
40	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ಗುಣಕಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	SC
41	ವಿಜಯಪುರ ಜಿಲ್ಲೆ ಸಿಂದಗಿ ತಾಲೂಕಿನ **ಕನ್ನೋಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	SC
42	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ಕತನಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	SC
43	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ **ಪಡನೂರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	SC
44	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ಅಂಕಲಗಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	ST
45	ವಿಜಯಪುರ ಜಿಲ್ಲೆ ಸಿಂದಗಿ ತಾಲೂಕಿನ ಡಿ. **ನಾವಲಗಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	ST
46	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ತಕ್ಕಲಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	ST
47	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ಧನ್ನರಗಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-I
48	ವಿಜಯಪುರ ಜಿಲ್ಲೆ ಬ.ಬಾಗೇವಾಡಿ ತಾಲೂಕಿನ **ಹೆಚ್. ಹಿಪ್ಪರಗಿ–ಬಿಯಲ್ಲಿ ಆಯುಷ್ಮಾನ ಆರೋಗ್ಯ** ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-I
49	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ **ಬಳ್ಳೊಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-II (A)
50	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ **ಗೋಳಸಾರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-II (A)
51	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ **ಹಿರೆಬೇವನೂರದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-II (A)
52	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ನಾಗಠಾಣ ಬಿ (ಹುನಸ್ಯಾಳ) ಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-II (A)
53	ವಿಜಯಪುರ ಜಿಲ್ಲೆ ಮತ್ತು ತಾಲೂಕಿನ **ಯಕ್ಕುಂಡಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	54.61	0.55	Class III & above	6 Months	CAT-II (A)
	ಲೆಕ್ಕ ಶೀರ್ಷಿಕೆ: 15ನೇ ಹಣಕಾಸು					
	ಬೆಳಗಾವಿ ಜಿಲ್ಲೆ					
54	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ **ಕೊಳವಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
55	ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ **ಕುಂಬಾರವಾಡದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
56	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ **ಉರಬಿನಟ್ಟಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	SC
57	ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ **ನೇರಲಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	ST
58	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಸುಲಗಾದಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	ST
59	ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ **ಯಡಗುಡ್ಡ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	ST
60	ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ **ಹಿರೆಕೊಪ್ಪ ಕೆ.ಎಸ್.** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-I
61	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಕುದುರೆಮನೆಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
62	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ಮುಚ್ಚಂಡೆಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
63	ಬೆಳಗಾವಿ ಜಿಲ್ಲೆ ಬೆಳಗಾವಿ ಗ್ರಾಮೀಣ **ನಂದಿಹಳ್ಳಿಯಲ್ಲಿ** ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)
64	ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ **ಯಮಕನಮರಡಿ–2** ದಲ್ಲಿ ಆಯುಷ್ಮಾನ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	55.08	0.55	Class III & above	6 Months	CAT-II (A)

ಆಸಕ್ತ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು www.kppp.karnataka.gov.in ಪೋರ್ಟಲ್‌ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಆ. & ಕು.ಕ ಇಲಾಖೆ ಇಂಜನೀಯರಿಂಗ್ ವಿಭಾಗ, ಧಾರವಾಡ.

ವಾ.ಸಾ.ಇ/ಧಾರವಾಡ/538/ದೇಶಪಾಂಡೆಪಬ್ಲಿಸಿಟಿ/2025–26

ಜನ್ಮದಿನದ ಸ್ಮರಣೆ



ಡಾ. ಆರ್. ಎನ್. ಶೆಟ್ಟಿ

ಆರ್.ಎನ್. ಎಸ್. ಉದ್ಯಮ ಸಮೂಹದ ಸಂಸ್ಥಾಪಕರು


15.08.1928 - 17.12.2020

ನಿನ್ನೆಯೇ ನಾಳೆಗಳನ್ನು ಕಂಡ ದೂರದರ್ಶಿ
ಹಿಂದೆ, ಇಂದು, ಮುಂದೆಂದೂ ನೀವೇ ಮಾರ್ಗದರ್ಶಿ
ನಿಮ್ಮ ನಡೆ ನುಡಿಯೇ ನಮಗೆ ಕೈಮರ
ನಿಮ್ಮ ನೆನಪು ಅಜರಾಮರ

ಸದಾ ನಿಮ್ಮ ಸ್ಮರಣೆಯಲ್ಲಿ...

ಕುಟುಂಬ ವರ್ಗ, ಮಿತ್ರ ಬಳಗ ಹಾಗೂ
ಆರ್. ಎನ್. ಎಸ್. ಉದ್ಯಮ ಸಮೂಹದ ನೌಕರರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ: ಹಿಂದಿನ ಅಂತ್ಯ: 24,619; ಇಂದಿನ ಅಂತ್ಯ: 24,631; ದಿನದ ಗರಿಷ್ಠ: 24,673; 11

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹530; 12 ಕ್ಕೆ ₹70; ಮೈಸೂರು: 100 ಕ್ಕೆ ₹538

ರಾಮನಗರ ರೇಷ್ಮೆಗೂಡು: ಮಿಶ್ರತಳಿ(ಪ್ರ.ಕೆ) ₹300-645; ದ್ವಿತಳಿ (ಪ್ರ.ಕೆ) ₹269-778

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ): ಆರ್‌ಎಸ್‌ಎಸ್-4 ₹196; ಆರ್‌ಎಸ್‌ಎಸ್-5 ₹190; ಗುಡ್ ಲಾಟ್ ₹174

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ): ಅರಸೀಕೆರೆ ₹14500-24000; ದಾವಣಗೆರೆ ₹13300-13300; ತಿಪಟೂರು ₹24000-26007

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ): ದೊಡ್ಡ ₹1500-1900; ಮಧ್ಯಮ ₹1000-1500; ಸಣ್ಣ ₹500-1000

ಭಾರತದ ರೇಟಿಂಗ್ ಹೆಚ್ಚಿಸಿದ ಎಸ್‌ಆ್ಯಂಡ್‌ಪಿ

18 ವರ್ಷಗಳ ನಂತರ ಪರಿಷ್ಕರಣೆ, ಹಣಕಾಸು ಸಚಿವಾಲಯ ಸ್ವಾಗತ

ನವದೆಹಲಿ (ಪಿಟಿಐ): ಜಾಗತಿಕ ರೇಟಿಂಗ್ ಸಂಸ್ಥೆ ಎಸ್ ಆ್ಯಂಡ್ ಪಿ ಭಾರತದ ರೇಟಿಂಗ್‌ಅನ್ನು 18 ವರ್ಷಗಳ ನಂತರ ಮೇಲ್ದರ್ಜೆಗೆ ಏರಿಸಿದೆ. ಸಂಸ್ಥೆಯು ಭಾರತಕ್ಕೆ 'ಬಿಬಿಬಿ' ರೇಟಿಂಗ್ ನೀಡಿದೆ.

ಭಾರತದ ಆರ್ಥಿಕ ಬೆಳವಣಿಗೆ, ಸರ್ಕಾರದ ಸಾಲಗಳನ್ನು ಹಾಗೂ ಬಜೆಟ್ ಕೊರತೆಯನ್ನು ತಗ್ಗಿಸುವಲ್ಲಿ ರಾಜಕೀಯ ನಾಯಕತ್ವವು ಹೊಂದಿರುವ ಬದ್ಧತೆ, ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲು ಪೂರಕವಾಗಿರುವ ಹಣಕಾಸಿನ ನೀತಿಯನ್ನು ಉಲ್ಲೇಖಿಸಿ ಎಸ್ ಆ್ಯಂಡ್ ಪಿ ಸಂಸ್ಥೆಯು ದೇಶದ ಆರ್ಥಿಕ ಮುನ್ನೋಟವು ಸ್ಥಿರವಾಗಿದೆ ಎಂದು ಹೇಳಿದೆ.

'ಜಗತ್ತಿನಲ್ಲಿ ಅತ್ಯುತ್ತಮ ಸಾಧನೆ ತೋರುತ್ತಿರುವ ಅರ್ಥ ವ್ಯವಸ್ಥೆಗಳಲ್ಲಿ ಭಾರತದ ಅರ್ಥ ವ್ಯವಸ್ಥೆಯೂ ಒಂದಾಗಿದೆ... ಕಳೆದ ಐದಾರು ವರ್ಷಗಳ ಅವಧಿಯಲ್ಲಿ ಸರ್ಕಾರಿ ವೆಚ್ಚಗಳ ಗುಣಮಟ್ಟವು ಸುಧಾರಿಸಿದೆ' ಎಂದು ಎಸ್ ಆ್ಯಂಡ್ ಪಿ ಹೇಳಿದೆ.

ಅಮೆರಿಕವು ಭಾರತದ ಸರಕುಗಳ ಆಮದಿನ ಮೇಲೆ ವಿಧಿಸಿರುವ ಸುಂಕದ ಪರಿಣಾಮವು 'ನಿಭಾಯಿಸಬಹುದಾದ' ಮಟ್ಟದಲ್ಲಿ ಇದೆ ಎಂದು ಕೂಡ ಅದು ಹೇಳಿದೆ. 'ಭಾರತವು ಬಾಹ್ಯ ವ್ಯಾಪಾರದ ಮೇಲೆ ಹೆಚ್ಚು ಅವಲಂಬನೆ ಹೊಂದಿಲ್ಲ, ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಶೇಕಡ 60ರಷ್ಟು ಕೊಡುಗೆಯು ಆಂತರಿಕ ಬೇಡಿಕೆಯಿಂದ ಬರುತ್ತದೆ' ಎಂದು ಅದು ಉಲ್ಲೇಖಿಸಿದೆ.

ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಮಾಡಿರುವುದನ್ನು ಕೇಂದ್ರ ಹಣಕಾಸು ಸಚಿವಾಲಯವು ಸ್ವಾಗತಿಸಿದೆ. 'ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಅಡಿಯಲ್ಲಿ ಭಾರತದ ಅರ್ಥ ವ್ಯವಸ್ಥೆಯು ನಿಜವಾಗಿಯೂ ಲವಲವಿಕೆ ಹೊಂದಿರುವುದನ್ನು, ಸದಾ ಚಟುವಟಿಕೆಯಿಂದ ಕೂಡಿರುವುದನ್ನು, ಗಟ್ಟಿಯಾಗಿ ಇರುವುದನ್ನು ಇದು ದೃಢಪಡಿಸಿದೆ' ಎಂದು ಹೇಳಿದೆ.



ಸರ್ಕಾರದ ಸಾಲವನ್ನು ಹಾಗೂ ಬಜೆಟ್ ಕೊರತೆಯನ್ನು ಕಡಿಮೆ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಇದೇ ಸಂದರ್ಭದಲ್ಲಿ ಮೂಲಸೌಕರ್ಯ ಸೃಷ್ಟಿಗಾಗಿ ಮತ್ತು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗಾಗಿ ಕೈಗೊಂಡಿರುವ ಕಾರ್ಯಗಳನ್ನು ಮುಂದುವರಿಸಲಾಗಿದೆ. ಈ ಕಾರಣಗಳಿಂದಾಗಿ ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಆಗಿದೆ ಎಂದು ಸಚಿವಾಲಯವು ಹೇಳಿದೆ.

ಭಾರತದ ಅರ್ಥ ವ್ಯವಸ್ಥೆಯು ನಿರ್ಜೀವವಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ ಕೆಲವೇ ದಿನಗಳ ನಂತರದಲ್ಲಿ, ಅಮೆರಿಕ ಮೂಲದ ಸಂಸ್ಥೆಯಿಂದ ಭಾರತದ ರೇಟಿಂಗ್ ಹೆಚ್ಚಳ ಆಗಿದೆ. ಎಸ್ ಆ್ಯಂಡ್ ಪಿ ಸಂಸ್ಥೆಯು 2007ರಲ್ಲಿ ಭಾರತಕ್ಕೆ 'ಬಿಬಿಬಿ–' ರೇಟಿಂಗ್ ನೀಡಿತ್ತು. ಈ ವರ್ಷದ ಆರಂಭದಲ್ಲಿ ಮಾರ್ನಿಂಗ್‌ಸ್ಟಾರ್ ಡಿಬಿಆರ್‌ಎಸ್ ರೇಟಿಂಗ್ ಸಂಸ್ಥೆಯು ಭಾರತದ ರೇಟಿಂಗ್‌ಅನ್ನು ಮೇಲ್ದರ್ಜೆಗೆ ಏರಿಸಿತ್ತು.

'ಭಾರತದ ಅರ್ಥ ವ್ಯವಸ್ಥೆಯು ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ತಲುಪಿದ್ದ ಕೆಳಮಟ್ಟದಿಂದ ನಂತರದ ದಿನಗಳಲ್ಲಿ ಚೇತರಿಕೆ ಕಂಡುಕೊಂಡ ಕಾರಣ, ಪ್ರಪಂಚದಲ್ಲಿ ಬರುತ್ತಿರುವ ಅರ್ಥವ್ಯವಸ್ಥೆಗಳ ಪೈಕಿ ಅತ್ಯುತ್ತಮ ಅರ್ಥವ್ಯವಸ್ಥೆ ಆಗಿದೆ... ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ, ಮುಂದಿನ ಮೂರು ವರ್ಷಗಳಲ್ಲಿ ಅದು ಸರಾಸರಿ ಶೇ 6.8ರಷ್ಟು ಇರಲಿದೆ ಎಂಬುದು ನಮ್ಮ ಅಂದಾಜು' ಎಂದು ಸಂಸ್ಥೆಯು ಹೇಳಿದೆ.

ರೇಟಿಂಗ್ ಬಗ್ಗೆ ಒಂದಿಷ್ಟು ವಿವರ

ಅಮೆರಿಕ ಮೂಲದ ಎಸ್ ಆ್ಯಂಡ್ ಪಿ ಸಂಸ್ಥೆಯು ವಿವಿಧ ದೇಶಗಳಿಗೆ ಅಲ್ಲಿನ ಆರ್ಥಿಕ ಸ್ಥಿತಿಗತಿ ಆಧರಿಸಿ ರೇಟಿಂಗ್ ನೀಡುತ್ತದೆ. ಸಂಸ್ಥೆಯು ಈಗ ಭಾರತಕ್ಕೆ ನೀಡಿರುವುದು 'ಹೂಡಿಕೆ ದರ್ಜೆಯ ರೇಟಿಂಗ್'.

ಸಂಸ್ಥೆಯು ಈಗ ನೀಡಿರುವ 'ಬಿಬಿಬಿ' ರೇಟಿಂಗ್ ಅರ್ಥ 'ದೇಶವು ತನ್ನ ಹಣಕಾಸಿನ ಹೊಣೆಗಳನ್ನು ನಿಭಾಯಿಸಲು ಬೇಕಿರುವ ಸಾಮರ್ಥ್ಯ ಹೊಂದಿದೆ. ಆದರೆ ಅರ್ಥ ವ್ಯವಸ್ಥೆಯಲ್ಲಿ ನಕಾರಾತ್ಮಕ ಬೆಳವಣಿಗೆಗಳು ಆದಲ್ಲಿ ಸಮಸ್ಯೆ ಎದುರಾಗುತ್ತದೆ' ಎಂದಾಗಿದೆ. ಈ ಹಿಂದೆ ದೇಶಕ್ಕೆ ನೀಡಿದ್ದ 'ಬಿಬಿಬಿ–' ರೇಟಿಂಗ್ 'ಹೂಡಿಕೆ ದರ್ಜೆ'ಯಲ್ಲಿ ಅತ್ಯಂತ ಕಡಿಮೆ ಮಟ್ಟದ್ದಾಗಿತ್ತು.

ಈಗಿನ ರೇಟಿಂಗ್ ಏರಿಕೆಯ ಪರಿಣಾಮ?: ಈಗ ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಆಗಿರುವ ಪರಿಣಾಮವಾಗಿ ಭಾರತದ ಕಂಪನಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಕಡಿಮೆ ವೆಚ್ಚಕ್ಕೆ ಸಾಲ ಪಡೆಯಲು ಸಾಧ್ಯವಾಗುತ್ತದೆ.

ಚಿಟಕಿ ಸುದ್ದಿ

ಇಂದಿನಿಂದ ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್ ಜಾರಿ

ನವದೆಹಲಿ (ಪಿಟಿಐ): ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಹೆದ್ದಾರಿ ಟೋಲ್ ಪಾಸ್ ವ್ಯವಸ್ಥೆ ಶುಕ್ರವಾರದಿಂದ ಜಾರಿಗೆ ಬರಲಿದೆ.

ಈ ವಾರ್ಷಿಕ ಪಾಸ್‌ನ ಮೌಲ್ಯ ₹3 ಸಾವಿರ. ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳನ್ನು ಬಳಸುವ ವಾಣಿಜ್ಯೇತರ ವಾಹನಗಳು (ಖಾಸಗಿ ಕಾರು, ಜೀಪ್, ವ್ಯಾನ್‌ಗಳು) 200 ಟ್ರಿಪ್ ಗಳವರೆಗೆ ಈ ಪಾಸ್ ಬಳಸಬಹುದು. ಅಥವಾ ಟ್ರಿಪ್ ಪೂರ್ಣಗೊಂಡ ನಂತರ ಪಾಸ್‌ಗಳನ್ನು ಮತ್ತೆ ರೀಚಾರ್ಜ್ ಮಾಡಿಕೊಳ್ಳಬಹುದು. ವಾಹನಗಳಲ್ಲಿ ಫಾಸ್ಟ್‌ಟ್ಯಾಗ್ ಇರುವವರು ಹೊಸದಾಗಿ ಖರೀದಿಸುವ ಅಗತ್ಯ ಇಲ್ಲ.

ರಾಜ್‌ಮಾರ್ಗ್ ಯಾತ್ರಾ ಆ್ಯಪ್, ಎನ್‌ಎಚ್‌ಎಐ ಹಾಗೂ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವೆಬ್‌ಸೈಟ್‌ನಲ್ಲಿರುವ ಲಿಂಕ್ ಬಳಸಿ, ಪಾಸ್ ಪಡೆಯಬಹುದಾಗಿದೆ.

ಸುದ್ದಿ 2 ನಿಮಿಷ

ವ್ಯಾಪಾರ ಕೊರತೆ: 8 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ವ್ಯಾಪಾರ ಕೊರತೆ ಜುಲೈ ತಿಂಗಳಿನಲ್ಲಿ ₹2.39 ಲಕ್ಷ ಕೋಟಿ ಆಗಿದೆ. ಇದು ಎಂಟು ತಿಂಗಳ ಗರಿಷ್ಠ ಮಟ್ಟವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಆದರೆ ಇದೇ ಅವಧಿಯಲ್ಲಿ ದೇಶದ ರಫ್ತು ಪ್ರಮಾಣವು ಶೇ 7.29ರಷ್ಟು ಹೆಚ್ಚಳವಾಗಿದ್ದು, ₹3.26 ಲಕ್ಷ ಕೋಟಿಯಾಗಿದೆ. ಆಮದು ಶೇ 8.6ರಷ್ಟು ಏರಿಕೆಯಾಗಿದ್ದು, ₹5.65 ಲಕ್ಷ ಕೋಟಿಯಾಗಿದೆ. ಕಳೆದ ವರ್ಷದ ನವೆಂಬರ್ ನಂತರದ ಅತಿಹೆಚ್ಚಿನ ವ್ಯಾಪಾರ ಕೊರತೆ ಜುಲೈನಲ್ಲಿ ದಾಖಲಾಗಿದೆ.

ಏಪ್ರಿಲ್–ಜುಲೈ ಅವಧಿಯಲ್ಲಿ ರಫ್ತು ಶೇ 3ರಷ್ಟು ಏರಿಕೆಯಾಗಿದ್ದು, ₹13 ಲಕ್ಷ ಕೋಟಿಯಾಗಿದೆ. ಆಮದು ಶೇ 5ರಷ್ಟು ಹೆಚ್ಚಳವಾಗಿದ್ದು, ₹21.37 ಲಕ್ಷ ಕೋಟಿಯಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಿನಲ್ಲಿ ವ್ಯಾಪಾರ ಕೊರತೆ ₹8.30 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

'ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆಯೂ ದೇಶದ ಸರಕು ಮತ್ತು ಸೇವೆಗಳ ರಫ್ತು ಉತ್ತಮವಾಗಿದೆ. ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಹರಳು ಮತ್ತು ಆಭರಣಗಳು, ಔಷಧಗಳು ಮತ್ತು ರಾಸಾಯನಿಕ ವಲಯದ ಉತ್ಪನ್ನಗಳು ಹೆಚ್ಚಾಗಿ ರಫ್ತಾಗಿದ್ದು, ಬೆಳವಣಿಗೆಗೆ ಕಾರಣವಾಗಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಹೇಳಿದ್ದಾರೆ.



ಬಿಎಸ್‌ಎನ್‌ಎಲ್: ₹47 ಸಾವಿರ ಕೋಟಿ ಬಂಡವಾಳ ವೆಚ್ಚ

ನವದೆಹಲಿ (ಪಿಟಿಐ): ಭಾರತ್ ಸಂಚಾರ ನಿಗಮ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) ಜಾಲವನ್ನು ಉತ್ತಮಪಡಿಸಲು ₹47 ಸಾವಿರ ಕೋಟಿಯ ಬಂಡವಾಳ ವೆಚ್ಚದ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ದೂರಸಂಪರ್ಕ ಇಲಾಖೆ ಹೇಳಿದೆ.

ಕಳೆದ ವರ್ಷ 4ಜಿ ಮೊಬೈಲ್ ಸೇವೆಗಳನ್ನು ಒದಗಿಸಲು 1 ಲಕ್ಷ ಟವರ್ ಸ್ಥಾಪಿಸಲಾಗಿತ್ತು. ಇದಕ್ಕಾಗಿ ಬಿಎಸ್‌ಎನ್‌ಎಲ್ ₹25 ಸಾವಿರ ಕೋಟಿ ವ್ಯಯಿಸಿತ್ತು. ಈಗ ₹47 ಸಾವಿರ ಕೋಟಿ ಬಂಡವಾಳ ವೆಚ್ಚ ಮಾಡಲು ಯೋಜಿಸಲಾಗಿದೆ ಎಂದು ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಉಲ್ಲೇಖಿಸಿ ಇಲಾಖೆಯು 'ಎಕ್ಸ್' ಮೂಲಕ ತಿಳಿಸಿದೆ.

ಮುಂದಿನ ವರ್ಷದ ವೇಳೆಗೆ ಗ್ರಾಹಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಮೊಬೈಲ್ ಸೇವೆಗಳ ವಹಿವಾಟಿನಲ್ಲಿ ಶೇ 50ರಷ್ಟು ಬೆಳವಣಿಗೆ ಸಾಧಿಸಬೇಕು ಎಂದು ಬಿಎಸ್‌ಎನ್‌ಎಲ್‌ನ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ.

ಕಳೆದ ತಿಂಗಳು ಬಿಎಸ್‌ಎನ್‌ಎಲ್ ವಲಯ ಮತ್ತು ವ್ಯಾಪಾರ ಘಟಕದ ಮುಖ್ಯಸ್ಥರ ಜೊತೆ ಸಿಂಧಿಯಾ ಪರಿಶೀಲನಾ ಸಭೆ ನಡೆಸಿದ್ದರು.

ಬಿಎಸ್‌ಎನ್‌ಎಲ್ ಕಂಪನಿಯು ಪ್ರತಿ ಗ್ರಾಹಕನಿಂದ ತಿಂಗಳೊಂದರಲ್ಲಿ ಪಡೆಯುತ್ತಿರುವ ಸರಾಸರಿ ವರಮಾನವು (ಎಆರ್‌ಪಿಯು) ವಲಯದಿಂದ ವಲಯಕ್ಕೆ ಭಿನ್ನವಾಗಿದೆ. ಇದು ₹40ರಿಂದ ಆರಂಭವಾಗಿ ₹175ಕ್ಕಿಂತ ಹೆಚ್ಚಿನ ಮಟ್ಟದವರೆಗೆ ಇದೆ. ಗ್ರಾಹಕರಿಗೆ ಉತ್ತಮವಾದ ಸೇವೆ ನೀಡಿ, ಹೆಚ್ಚಿನ ಚಂದಾದಾರರನ್ನು ಸೇರ್ಪಡೆ ಮಾಡಿಕೊಂಡು ವರಮಾನ ಹೆಚ್ಚಿಸಬೇಕು ಎಂದು ಸೂಚಿಸಿದ್ದಾರೆ.

ಆದರೆ, ಜಿಯೊ ಕಂಪನಿಯ ಎಆರ್‌ಪಿಯು ₹208ರಷ್ಟು, ಏರ್‌ಟೆಲ್ ಕಂಪನಿಯ ಎಆರ್‌ಪಿಯು ₹250ರಷ್ಟು ಇದೆ.

ಅಗ್ನಿವೀರರಿಗೆ ವಿಶೇಷ ಸಾಲ ಯೋಜನೆ: ಎಸ್‌ಬಿಐ

ನವದೆಹಲಿ (ಪಿಟಿಐ): ದೇಶದ ರಕ್ಷಣೆಗಾಗಿ ಶ್ರಮಿಸುತ್ತಿರುವ ಅಗ್ನಿವೀರರಿಗೆ ವಿಶೇಷ ವೈಯಕ್ತಿಕ ಸಾಲದ ಯೋಜನೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಆರಂಭಿಸಿದೆ.

79ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಬ್ಯಾಂಕ್ ಈ ಹೊಸ ಯೋಜನೆ ಘೋಷಿಸಿದೆ.

ಎಸ್‌ಬಿಐನಲ್ಲಿ ವೇತನ ಖಾತೆ ಹೊಂದಿರುವ ಅಗ್ನಿವೀರರು ಈ ಯೋಜನೆಯ ಅಡಿ ₹4 ಲಕ್ಷದವರೆಗೆ ಅಡಮಾನ ಇಲ್ಲದೇ ಸಾಲ ಪಡೆಯಬಹುದು. ಜೊತೆಗೆ ಸಂಸ್ಕರಣಾ ಶುಲ್ಕವೂ ಇರುವುದಿಲ್ಲ.

ಸೆಪ್ಟೆಂಬರ್ 30ರವರೆಗೆ ಎಲ್ಲ ರಕ್ಷಣಾ ಸಿಬ್ಬಂದಿಗೆ ಶೇ 10.50 ಬಡ್ಡಿದರದಲ್ಲಿ ಸಾಲ ನೀಡಲಾಗುವುದು ಎಂದು ಬ್ಯಾಂಕ್ ತಿಳಿಸಿದೆ.

ಅಶೋಕ್ ಲೇಲ್ಯಾಂಡ್‌ಗೆ ₹657 ಕೋಟಿ ಲಾಭ

ನವದೆಹಲಿ (ಪಿಟಿಐ): ವಾಣಿಜ್ಯ ವಾಹನಗಳ ತಯಾರಿಕಾ ಕಂಪನಿ ಅಶೋಕ್ ಲೇಲ್ಯಾಂಡ್ ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹657 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹550 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 19ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

14-08-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1258 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1315)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,450 (99,700)
ಬೆಳ್ಳಿ ಕೆ.ಜಿಗೆ	1,14,600 (1,15,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಯುಪಿಐ ಬಳಸಿ ಹಣ ಕೇಳುವ ವಹಿವಾಟಿಗೆ ಅಂಕುಶ

ನವದೆಹಲಿ (ಪಿಟಿಐ): ಯುಪಿಐ ಆ್ಯಪ್ ಬಳಸಿ 'ಹಣ ಕೊಡಿ' ಎಂದು ಬೇರೊಬ್ಬರಿಗೆ ಕೋರಿಕೆ ಸಲ್ಲಿಸಲು ಅಕ್ಟೋಬರ್ 1ರಿಂದ ಅವಕಾಶ ಇರುವುದಿಲ್ಲ.

ಈ ಸೌಲಭ್ಯವನ್ನು ಅಕ್ಟೋಬರ್ 1ರಿಂದ ಸ್ಥಗಿತಗೊಳಿಸುವಂತೆ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಬ್ಯಾಂಕುಗಳು ಹಾಗೂ ಯುಪಿಐ ಪಾವತಿ ಸೇವೆ ಒದಗಿಸುವ ಆ್ಯಪ್‌ಗಳಿಗೆ ಸೂಚನೆ ನೀಡಿದೆ. ಹಣಕಾಸಿನ ವಂಚನೆಯನ್ನು ತಡೆಯುವ ಉದ್ದೇಶದಿಂದ ಎನ್‌ಪಿಸಿಐ ಈ ಕ್ರಮ ಕೈಗೊಂಡಿದೆ.

ಎನ್‌ಪಿಸಿಐ ಈ ಸೂಚನೆಯನ್ನು ಜುಲೈ 29ರಂದೇ ರವಾನಿಸಿದೆ. ಇದು ಜಾರಿಗೆ ಬಂದ ನಂತರದಲ್ಲಿ ಫೋನ್‌ಪೇ, ಗೂಗಲ್ ಪೇ, ಪೇಟಿಎಂ, ಭೀಮ್ ಸೇರಿದಂತೆ ಯಾವುದೇ ಯುಪಿಐ ಆ್ಯಪ್‌ಗಳು, ಯುಪಿಐ ಸದಸ್ಯ ಬ್ಯಾಂಕ್‌ಗಳು ಈ ಬಗೆಯಲ್ಲಿ ವ್ಯಕ್ತಿಗಳ ನಡುವೆ 'ಹಣ ಕೇಳುವ' ವಹಿವಾಟು ಸೇವೆ ಒದಗಿಸಲು ಅವಕಾಶ ಇರುವುದಿಲ್ಲ.

ಯುಪಿಐ ಆ್ಯಪ್‌ಗಳನ್ನು ಬಳಸಿ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯಿಂದ ಹಣವನ್ನು ಕೇಳಬಹುದು. ಹೀಗೆ ಒಬ್ಬ ವ್ಯಕ್ತಿಯು ಆ್ಯಪ್ ಮೂಲಕ ಹಣಕ್ಕೆ ಕೋರಿಕೆ ಸಲ್ಲಿಸಿದಾಗ, ಕೋರಿಕೆ ಸ್ವೀಕರಿಸಿದ ವ್ಯಕ್ತಿಯ ಸ್ಮಾರ್ಟ್‌ಫೋನ್‌ನಲ್ಲಿ ಅದರ ಬಗ್ಗೆ ಒಂದು ನೋಟಿಫಿಕೇಷನ್ ಬರುತ್ತದೆ. ಆ ನೋಟಿಫಿಕೇಷನ್‌ಗೆ ಸ್ಪಂದಿಸಿ, ಆತ ಯುಪಿಐ ಗುಪ್ತಸಂಖ್ಯೆ ನಮೂದಿಸಿದರೆ ಆತನಿಂದ ಹಣದ ಪಾವತಿ ಆಗುತ್ತದೆ. ಆದರೆ ಈ ಸೌಲಭ್ಯವನ್ನು ಬಳಸಿ ವಂಚನೆಗಳು ನಡೆದಿರುವ ಕಾರಣಕ್ಕೆ ಎನ್‌ಪಿಸಿಐ ಈ ಕ್ರಮ ಕೈಗೊಂಡಿದೆ.

ಈಗಿರುವ ನಿಯಮಗಳ ಅನ್ವಯ ಈ ಬಗೆಯ ಪ್ರತಿ ವಹಿವಾಟಿನಲ್ಲಿ ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯಿಂದ ಗರಿಷ್ಠ ₹2,000 ಪಡೆಯಬಹುದು. ದಿನವೊಂದಕ್ಕೆ ಇಂತಹ 50 ವಹಿವಾಟುಗಳನ್ನು ನಡೆಸಲು ಅವಕಾಶ ಇದೆ.

'ಈ ಸೌಲಭ್ಯವನ್ನು ಇನ್ನಿಲ್ಲವಾಗಿಸುವ ಮೂಲಕ ಯುಪಿಐ ವ್ಯವಸ್ಥೆಯು ತಾನು ಸುರಕ್ಷಿತ, ವಿಶ್ವಾಸಾರ್ಹ ಕೂಡ ಹೌದು ಎಂಬುದನ್ನು ಹೇಳುತ್ತಿದೆ. ಈ ಬದಲಾವಣೆಯು ವಂಚನೆಗಳನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ' ಎಂದು ಎನ್‌ಟಿಟಿ ಡೇಟಾ ಪೇಮೆಂಟ್ ಸರ್ವಿಸಸ್ ಇಂಡಿಯಾ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ರಾಹುಲ್ ಜೈನ್ ಹೇಳಿದ್ದಾರೆ.

ಸಗಟು ಹಣದುಬ್ಬರ ಎರಡು ವರ್ಷಗಳ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ದರವು ಜುಲೈ ತಿಂಗಳಲ್ಲಿ ಎರಡು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ (–)0.58ಕ್ಕೆ ಇಳಿಕೆ ಕಂಡಿದೆ. ಆಹಾರ ವಸ್ತುಗಳ ಬೆಲೆ ಇಳಿಕೆಯು ಸಗಟು ಹಣದುಬ್ಬರ ದರವು ಸತತ ಎರಡನೆಯ ತಿಂಗಳಲ್ಲಿಯೂ ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ಇರುವಂತೆ ಮಾಡಿದೆ.

ಆದರೆ, ಸಗಟು ಹಣದುಬ್ಬರ ಪ್ರಮಾಣವು ಆಗಸ್ಟ್ ತಿಂಗಳಲ್ಲಿ ಹೆಚ್ಚಳ ಕಾಣಲಿದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ. ಸಗಟು ಹಣದುಬ್ಬರವು ಜೂನ್ ತಿಂಗಳಲ್ಲಿ ಶೇ (–)0.13ರಷ್ಟು ಇತ್ತು, 2024ರ ಜುಲೈನಲ್ಲಿ ಇದು ಶೇ 2.10ರಷ್ಟು ದಾಖಲಾಗಿತ್ತು.

'ಜುಲೈನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೂನ್ಯಕ್ಕಿಂತ ಕೆಳಕ್ಕೆ ಇಳಿದಿರುವುದಕ್ಕೆ ಆಹಾರ ವಸ್ತುಗಳು, ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಮೂಲ ಲೋಹದ ತಯಾರಿಕೆಯ ಬೆಲೆಯಲ್ಲಿನ ಇಳಿಕೆ ಕಾರಣ' ಎಂದು ಕೇಂದ್ರ ಕೈಗಾರಿಕಾ ಸಚಿವಾಲಯವು ಪ್ರಕಟಣೆಯಲ್ಲಿ ಹೇಳಿದೆ.

ಮುಂಬೈ ಖಾದ್ಯ ತೈಲ

(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1390 (1390)
ಪಾಮೋಲಿನ್	₹1260 (1250)

ಅಡಿಕೆ ಧಾರಣೆ

ಕುಮಟಾ	
ಚಾಲಿ	36599-43019
ಚಿಪ್ಪು	16301-32919
ಕೋಕ	11001-31071
ಹೊಸಚಾಲಿ	33499-43019

ಶಿವಮೊಗ್ಗ	
ಬೆಟ್ಟೆ	55069-63500
ಗೊರಬಲು	17009-37112
ರಾಶಿ	47009-60299
ಸರಕು	56159-87200

ಸಾಗರ	
ಬಿಳಿಗೋಟು	9099-29299
ಚಾಲಿ	21899-38819
ಕೋಕ	5666-25599
ಕೆಂಪುಗೋಟು	21129-32299
ರಾಶಿ	26129-60669
ಸಿಪ್ಪೆಗೋಟು	8399-19899

ಸಿದ್ದಾಪುರ	
ಬಿಳಿಗೋಟು	24699-33389
ಚಾಲಿ	35099-42399
ಕೋಕ	16319-30319
ಕೆಂಪುಗೋಟು	18319-29019
ರಾಶಿ	45099-49959
ತಟ್ಟಿಬೆಟ್ಟೆ	29219-37099

ಶಿರಸಿ	
ಬೆಟ್ಟೆ	28199-40699
ಬಿಳಿಗೋಟು	22399-34712
ಚಾಲಿ	38218-43413
ಕೆಂಪುಗೋಟು	21010-28009
ರಾಶಿ	44159-50001

ಯಲ್ಲಾಪುರ	
ಅಪಿ	66379-66379
ಬಿಳಿಗೋಟು	16899-35299
ಚಾಲಿ	35912-43699
ಕೋಕ	11009-19810
ಕೆಂಪುಗೋಟು	18612-26399
ರಾಶಿ	40899-59115
ತಟ್ಟಿಬೆಟ್ಟೆ	28999-39601

ಸಂಕ್ಷಿಪ್ತ ಸುದ್ದಿ



ಗಾಲ್ಫ್: ಐದಾ ತಿಮ್ಮಯ್ಯಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಗಾಲ್ಫ್ ಆಟಗಾರ್ತಿ ಐದಾ ತಿಮ್ಮಯ್ಯ ಅವರು ನೋಯ್ಡಾದಲ್ಲಿ ನಡೆದ ಐಜಿಯು ಉತ್ತರ ಭಾರತ ಮಹಿಳಾ ಮತ್ತು ಜೂನಿಯರ್ ಬಾಲಕಿಯರ ಚಾಂಪಿಯನ್‌ಷಿಪ್‌ನ 'ಸಿ' ವಿಭಾಗದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಕೊಡಗಿನ 11 ವರ್ಷದ ಐದಾ ಗುರುವಾರ ನಡೆದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಉತ್ತಮ ಆರಂಭ ಪಡೆದು, ಆರು ಅಂಡರ್‌ಗಳಲ್ಲಿ 64 ಪಾಯಿಂಟ್ಸ್ ಕಲೆ ಹಾಕಿದರು. ಬುಧವಾರ ಐದು ಅಂಡರ್‌ಗಳಲ್ಲಿ 70 ಅಂಕ ಗಳಿಸಿದ್ದ ಅವರು ಒಟ್ಟಾರೆ 135 ಪಾಯಿಂಟ್ಸ್ ಗಳಿಸಿದರು.

ರಾಜಸ್ಥಾನದ ಓಜಸ್ವಿನಿ ಸಾರಸ್ವತ್ ಒಟ್ಟು 141 ಅಂಕಗಳೊಂದಿಗೆ (71-70) ಅಂಕಗಳೊಂದಿಗೆ ರನ್ನರ್ ಅಪ್ ಆದರು.

ಜಲಸಾಹಸ ಕ್ರೀಡೆಗಳ ಮ್ಯಾಸ್ಕಟ್ ಬಿಡುಗಡೆ

ಶ್ರೀನಗರ (ಪಿಟಿಐ): ಮೊದಲ ಬಾರಿ ನಡೆಯಲಿರುವ ಖೇಲೊ ಇಂಡಿಯಾ ಜಲ ಕ್ರೀಡಾ ಉತ್ಸವದ (ಕೆಐಡಬ್ಲ್ಯುಎಸ್‌ಎಫ್) ಮ್ಯಾಸ್ಕಟ್ ಅನ್ನು ಗುರುವಾರ ಬಿಡುಗಡೆ ಮಾಡಲಾಯಿತು. ಇಲ್ಲಿನ ಪ್ರಸಿದ್ಧ ದಲ್ ಸರೋವರದಲ್ಲಿ ಇದೇ 21 ರಿಂದ 23ರವರೆಗೆ ನಡೆಯಲಿರುವ ಈ ಕ್ರೀಡೆಗಳಲ್ಲಿ 400 ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

'ಹಿಮಾಲಯನ್ ಕಿಂಗ್‌ಫಿಷರ್' ಈ ಕೂಟದ ಮ್ಯಾಸ್ಕಟ್ ಆಗಿದೆ. ಅದರ ಕಿತ್ತಳೆ ಮತ್ತು ನೀಲಿ ಬಣ್ಣವು ಸಾಮರ್ಥ್ಯ ಮತ್ತು ಪ್ರಶಾಂತಚಿತ್ತವನ್ನು ಪ್ರತಿನಿಧಿಸುತ್ತದೆ' ಎಂದು ಭಾರತ ಕ್ರೀಡಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರ ಕ್ರೀಡಾ ಕೌನ್ಸಿಲ್, ಈ ಉತ್ಸವವನ್ನು ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಭಾರತ ಕ್ರೀಡಾ ಪ್ರಾಧಿಕಾರದ ಸಹಯೋಗದಲ್ಲಿ ನಡೆಸುತ್ತಿದೆ.

ಈ ಕೂಟದಲ್ಲಿ ಹುಟ್ಟುದೋಣಿ, ಹಾಯಿದೋಣಿ, ಕಯಾಕಿಂಗ್ ಸ್ಪರ್ಧೆಗಳಲ್ಲಿ ಪದಕಗಳನ್ನು ನೀಡಲಾಗುತ್ತದೆ. ವಾಟರ್ ಸ್ಕೀಯಿಂಗ್, ಶಿಕಾರ (ವಿಹಾರಕ್ಕೆ ಬಳಸುವ ದೋಣಿ) ರೇಸ್ , ಡ್ರ್ಯಾಗನ್ ಬೋಟ್ ಈ ಬಾರಿಯ ಪ್ರದರ್ಶನ ಕ್ರೀಡೆಗಳಾಗಿವೆ.

ಕ್ರೀಡೆಯ ಸಹೃದಯಿ ವೇಸ್ ಪೇಸ್

ಲಿಯಾಂಡರ್ ಪೇಸ್‌ಗೆ ಪಿತೃವಿಯೋಗ; ಒಲಿಂಪಿಕ್ ಪದಕವಿಜೇತ ಹಾಕಿಪಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪ್ಪಾ, ಈಗ ನಿಮ್ಮೊಂದಿಗೆ ಊಟಕ್ಕೆ ಕುಳಿತುಕೊಳ್ಳಲು ನಾನು ಅರ್ಹ..'

ಆಗಷ್ಟೇ ಅಟ್ಲಾಂಟಾ ಒಲಿಂಪಿಕ್ಸ್ (1996) ನಲ್ಲಿ ಕಂಚಿನ ಪದಕ ಜಯಿಸಿ ಬಂದಿದ್ದ ಟೆನಿಸ್ ಆಟಗಾರ ಲಿಯಾಂಡರ್ ಪೇಸ್ ತಮ್ಮ ತಂದೆ ಡಾ. ವೇಸ್ ಪೇಸ್ ಅವರ ಮುಂದೆ ಹೆಮ್ಮೆಯಿಂದ ನಿಂತಿದ್ದರು. ಒಲಿಂಪಿಯನ್ ಆದರಷ್ಟೇ ತಮ್ಮೊಂದಿಗೆ ಊಟದ ಮೇಜು ಹಂಚಿಕೊಳ್ಳಲು ಅರ್ಹನಾಗುತ್ತಿವೆ ಎಂದು ತಂದೆ ಹಾಕಿದ್ದ ಷರತ್ತು ಗೆದ್ದು ಬಂದಿದ್ದ ಖುಷಿ ಲಿಯಾಂಡರ್‌ಗೆ. ಆದರೆ ಅಷ್ಟಕ್ಕೇ ವೇಸ್ ಸುಮ್ಮನಾಗಲಿಲ್ಲ. 'ನೀನು ಇನ್ನೂ ಡಾಕ್ಟರ್ ಆಗಿಲ್ಲ. ಅದೊಂದು ಕೊರತೆ ಇದೆ' ಎಂದು ನಕ್ಕಿದ್ದರು.

ಆದರೆ ಅಪ್ಪನಿಗೆ ತಕ್ಕ ಮಗ ಲಿಯಾಂಡರ್ ಕೂಡ ಛಲಗಾರನೇ. ಡಿ.ವೈ ಪಾಟೀಲ ವಿಶ್ವವಿದ್ಯಾಲಯ ದಲ್ಲಿ ಹಲವು ಸ್ಫೂರ್ತಿಯುತ ಉಪನ್ಯಾಸಗಳನ್ನು ನೀಡುವ ಮೂಲಕ ಗೌರವ ಡಾಕ್ಟರೇಟ್ ಗಳಿಸುವಲ್ಲಿ ಲಿಯಾಂಡರ್ ಯಶಸ್ವಿಯಾದರು.

ಲಿಯಾಂಡರ್‌ಗೆ ಬುದ್ಧಿ ತಿಳಿದಾಗಿನಿಂದಲೂ ಅಪ್ಪ ಸ್ಫೂರ್ತಿ ಮಾತ್ರವಲ್ಲ. ಟೆನಿಸ್ ದಿಗ್ಗಜನ ಪಾಲಿಗೆ ಸರ್ವಸ್ವವೇ ಆಗಿಹೋಗಿದ್ದರು. ಗುರುವಾರ ಬೆಳಿಗ್ಗೆ ವೇಸ್ (80) ಜಗದ ವ್ಯವಹಾರ ಮುಗಿಸಿ ಹೊರಟಾಗ ಲಿಯಾಂಡರ್ ಕಂಗಳಲ್ಲಿ ದುಃಖ ಧಾರೆಯಾಗಿತ್ತು. ಅವರಷ್ಟೇ ಅಲ್ಲ. ವೇಸ್ ಪೇಸ್ ಅವರೊಂದಿಗೆ ಆಡಿದ, ಒಡನಾಡಿದ, ಪ್ರೇರಣೆಗೊಂಡವರೂ ವಿಷಣ್ಣರಾಗಿದ್ದರು. ವೇಸ್ ಅವರು ತಮ್ಮ ಮಗನಿಗೆ ಮಾತ್ರವಲ್ಲ; ಭಾರತದ ಕ್ರೀಡಾ ಕ್ಷೇತ್ರಕ್ಕೆ ಮತ್ತು ವೈದ್ಯಕೀಯ ರಂಗಕ್ಕೆ ಸ್ಫೂರ್ತಿತುಂಬಿದ 'ಸಂತ'ನೇ ಆಗಿದ್ದರು.

1972ರಲ್ಲಿ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿ ವೇಸ್ ಆಡಿದ್ದರು.

'ನನಗೆ ತುಂಬಾ ಆತ್ಮೀಯ ಸ್ನೇಹಿತ. ಕೌಶಲಪೂರ್ಣ, ಅಮೋಘ ಆಟಗಾರ. ಮೃದುಭಾಷಿ. ವಿಶ್ವಕಪ್ ಮತ್ತು ಒಲಿಂಪಿಕ್ ಕೂಟಗಳಲ್ಲಿ ಜೊತೆಯಾಗಿ ಆಡಿದ್ದೆವು. ಸಹೃದಯಿ ವ್ಯಕ್ತಿತ್ವ. ಅವರ ಅಗಲಿಕೆಯು ಹಾಕಿ ಆಟಕ್ಕೆ ಮಾತ್ರವಲ್ಲ. ಇಡೀ ಕ್ರೀಡಾರಂಗಕ್ಕೆ ದೊಡ್ಡ ನಷ್ಟ. ಕ್ರೀಡಾ ವೈದ್ಯನಾಗಿ ಅವರು ನೀಡಿದ ಕಾಣಿಕೆ ಕೂಡ ದೊಡ್ಡದು' ಎಂದು ಹಾಕಿ ದಂತಕತೆ ಎಂ.ಪಿ. ಗಣೇಶ್ ಅವರು ಪೇಸ್ ಜೊತೆ ತಮ್ಮ ಒಡನಾಟವನ್ನು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡರು.

ಸಾರ್ಥಕ ಜೀವನ ಪಯಣ: 1945ರಲ್ಲಿ ಗೋವಾದಲ್ಲಿ ಜನಿಸಿದ ವೆಸ್ ಪೇಸ್ ಅವರು ಓದಿನಲ್ಲಿಯೂ ಮುಂದಿದ್ದರು. ಹಾಕಿಯತ್ತ ಅವರ ಒಲವು ಕೂಡ ಕುತೂಹಲಕಾರಿ. ಮಿಡ್‌ಫೀಲ್ಡರ್ ಆಗಿ ಆಡಿದ ಅವರು, ಎಂಬಿಬಿಎಸ್ ಅಧ್ಯಯನ ಮಾಡುವ ಸಂದರ್ಭದಲ್ಲಿ 1971ರ ವಿಶ್ವಕಪ್ ಹಾಕಿ ಮತ್ತು 1972ರ ಒಲಿಂಪಿಕ್ ಕೂಟಗಳಲ್ಲಿ ಆಡಿದ್ದರು. ಅಷ್ಟೇ ಅಲ್ಲ. ಪದಕವಿಜೇತರೂ ಆಗಿದ್ದರು. ಹಾಕಿ ಆಟಕ್ಕೆ ವಿದಾಯ ಹೇಳಿದ ನಂತರ ಅವರು ಕ್ರೀಡಾ ವೈದ್ಯರಾದರು.

ಕ್ರೀಡಾಕ್ಷೇತ್ರದೊಂದಿಗೆ ಸತತ ನಂಟು ಉಳಿಸಿಕೊಳ್ಳುವ ಉದ್ದೇಶದಿಂದಲೇ ಅವರು ಈ ವೃತ್ತಿ ಆಯ್ಕೆ ಮಾಡಿಕೊಂಡಿದ್ದರು. ಕ್ರಿಕೆಟ್, ಟೆನಿಸ್, ಫುಟ್‌ಬಾಲ್ ಹಾಗೂ ರಗ್ಬಿ ಆಟದೊಂದಿಗೆ ಅವರದ್ದು ಬಿಡಿಸಲಾರದ ನಂಟು. 2018ರಲ್ಲಿ ಮುಂಬೈನಲ್ಲಿ ಬಿಸಿಸಿಐ ಕ್ರೀಡಾ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದರು. ಆರು ವರ್ಷಗಳ ಕಾಲ (1996–2002) ಭಾರತ ರಗ್ಬಿ ಒಕ್ಕೂಟದ ಅಧ್ಯಕ್ಷರಾಗಿದ್ದರು.

'ವೇಸ್ ಪೇಸ್ ಹಾಕಿ ಪ್ರೀತಿ ಆಸಾಧಾರಣವಾದದ್ದು. ಅಷ್ಟೇ ಅಲ್ಲ. ಬೇರೆಯವರ ಪ್ರತಿಭೆ ಗುರುತಿಸುವ ವಿಶಿಷ್ಟ ಗುಣ ಅವರಲ್ಲಿತ್ತು. ತಮ್ಮ ಮಗ ಟೆನಿಸ್ ಆಟಗಾರನಾಗಬಲ್ಲ ಎಂದು ಮೊದಲಿಗೆ ಗುರುತಿಸಿದವರು ಅವರೇ. ಲಿಯಾಂಡರ್ ಏಳೆಂಟು ವರ್ಷದ ಬಾಲಕನಾಗಿದ್ದಾಗ ಮೋಹನ್ ಬಾಗನ್ ಮೈದಾನದಲ್ಲಿ ಫುಟ್‌ಬಾಲ್ ಚೆನ್ನಾಗಿ ಆಡುತ್ತಿದ್ದರು. ಚುರುಕಾದ ಗೋಲ್‌ಕೀಪರ್ ಕೂಡ ಆಗಿದ್ದರು. ಆದರೆ ಟೆನಿಸ್‌ನಂತಹ ವೈಯಕ್ತಿಕ ಕ್ರೀಡೆಯಲ್ಲಿ ಆಡಲು ಮಗನನ್ನು ಪ್ರೋತ್ಸಾಹಿಸಿದರು. ಲಿಯಾಂಡರ್ ಒಲಿಂಪಿಕ್ ಕಂಚು ಗೆದ್ದರು' ಎಂದು ವೇಸ್ ಒಡನಾಡಿ, ಭಾರತ ಹಾಕಿ ತಂಡದ ಆಟಗಾರ ಗುರುಭಕ್ಷ್ ಸಿಂಗ್ ಕೊಹ್ಲಿ ನೆನಪಿಸಿಕೊಳ್ಳುತ್ತಾರೆ.

> **ನಿಧನ**
>
> ಕೋಲ್ಕತ್ತ (ಪಿಟಿಐ): 1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ವಿಜೇತ ಭಾರತ ಹಾಕಿ ತಂಡದ ಆಟಗಾರ ಹಾಗೂ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ಅವರ ತಂದೆ ಡಾ.ವೇಸ್ ಪೇಸ್ (80) ಅವರು ಅನಾರೋಗ್ಯದಿಂದ ಗುರುವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ನಿಧನರಾದರು.
>
> ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದ ಅವರನ್ನು ಮಂಗಳವಾರ ಇಲ್ಲಿನ ವುಡ್‌ಲ್ಯಾಂಡ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಪುತ್ರಿಯರು ವಿದೇಶದಲ್ಲಿ ನೆಲಸಿದ್ದು, ಅವರು ಬಂದ ನಂತರ ಸೋಮವಾರ ಅಥವಾ ಮಂಗಳವಾರ ಅವರ ಅಂತ್ಯಕ್ರಿಯೆ ನಡೆಯಲಿದೆ.



2004ರಲ್ಲಿ ನಡೆದ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ (ಎಡದಿಂದ) ಫಿಸಿಯೊ ಸಂಜಯ್ ಸಿಂಗ್, ಟೆನಿಸ್ ಆಟಗಾರ ಮಹೇಶ್ ಭೂಪತಿ, ಲಿಯಾಂಡರ್ ಪೇಸ್ ಅವರೊಂದಿಗೆ ವೇಸ್ ಪೇಸ್ ಪ್ರಜಾವಾಣಿ ಸಂಗ್ರಹ ಚಿತ್ರ: ಕೆ.ಎನ್. ಶಾಂತಕುಮಾರ್

ಕೆಎಸ್‌ಸಿಎ ಚುನಾವಣೆ: ವಿನಯ್ ಜೊತೆಗೂಡಿದ ಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನೆರಡು ತಿಂಗಳಲ್ಲಿ ನಡೆಯಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾವಣೆಯಲ್ಲಿ ಭಾರತ ತಂಡದ ಮಾಜಿ ಆಟಗಾರ ವೆಂಕಟೇಶ ಪ್ರಸಾದ್ ಹಾಗೂ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಅವರು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

'ಸ್ವಾತಂತ್ರ್ಯ ಕೇವಲ ಇತಿಹಾಸವಲ್ಲ. ಅದೊಂದು ಆಯ್ಕೆ. ಮುಂಬರುವ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದು ಕಾರ್ಯನಿರ್ವಹಿಸುವ ನಾಯಕರನ್ನು ಆಯ್ಕೆ ಮಾಡಿ' ಎಂಬ ಘೋಷಣೆಯೊಂದಿಗೆ ಪ್ರಸಾದ್ ಮತ್ತು ವಿನಯ್ ಅವರ ತಂಡವು ಕಣಕ್ಕಿಳಿಯಲಿದೆ ಎಂದು ಮೂಲಗಳು ತಿಳಿಸಿವೆ.

ವೆಂಕಟೇಶ ಪ್ರಸಾದ್ ಅವರು ಭಾರತ ತಂಡದಲ್ಲಿ ಮಧ್ಯಮ ವೇಗದ ಬೌಲರ್ ಆಗಿ 33 ಟೆಸ್ಟ್, 161 ಅಂತರ ರಾಷ್ಟ್ರೀಯ ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ 96 ಮತ್ತು ಏಕದಿನ ಮಾದರಿಯಲ್ಲಿ 196 ವಿಕೆಟ್‌ಗಳನ್ನು ಗಳಿಸಿದ್ದಾರೆ. 123 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ನಿವೃತ್ತಿ ನಂತರ ಭಾರತ ತಂಡದಲ್ಲಿ ಕೆಲಕಾಲ ಬೌಲಿಂಗ್ ಕೋಚ್ ಕೂಡ ಆಗಿದ್ದರು.



ಪ್ರಸಾದ್



ವಿನಯ್

2013 ರಿಂದ 2016 ಅವಧಿಯಲ್ಲಿ ಪ್ರಸಾದ್ ಅವರು ಕೆಎಸ್‌ಸಿಎ ಉಪಾಧ್ಯಕ್ಷರಾಗಿದ್ದರು. ಆಗ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರು ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿದ್ದರು.

56 ವರ್ಷ ವಯಸ್ಸಿನ ಪ್ರಸಾದ್ ಪ್ರಸ್ತುತ ಬ್ಯಾಂಕ್ ಅಧಿಕಾರಿಯಾಗಿದ್ದಾರೆ. ಟಿ.ವಿ. ವೀಕ್ಷಕ ವಿವರಣೆಗಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ವೃತ್ತಿಯಿಂದ ಚಾರ್ಟೆಡ್ ಅಕೌಂಟೆಂಟ್ ಆಗಿರುವ ವಿನಯ್ ಮೃತ್ಯುಂಜಯ್ ಅವರು 2019 ರಿಂದ 2022ರ ಅವಧಿಯಲ್ಲಿ ಕೆಎಸ್‌ಸಿಎ ಖಜಾಂಚಿಯಾಗಿದ್ದರು.

2022ರಲ್ಲಿ ರಘುರಾಮ್ ಭಟ್ ಅಧ್ಯಕ್ಷತೆಯ ತಂಡವು ಮಾಜಿ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಅವರ ಬೆಂಬಲದೊಂದಿಗೆ ಆಡಳಿತದ ಚುಕ್ಕಾಣಿ ಹಿಡಿಯಿತು. ಕಳೆದ ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. 11 ಮಂದಿ ದುರ್ಮರಣಕ್ಕೀಡಾಗಿದ್ದರು. ಹಲವರು ಗಾಯಗೊಂಡಿದ್ದರು. ಈ ಘಟನೆ ಹಿನ್ನೆಲೆಯಲ್ಲಿ ಪೊಲೀಸರು ಸಂಸ್ಥೆಯ ಪದಾಧಿಕಾರಿಗಳನ್ನು ವಿಚಾರಣೆಗೊಳಪಡಿಸಿದರು. ಕೆಎಸ್‌ಸಿಎ ಕಾರ್ಯದರ್ಶಿ ಎ. ಶಂಕರ್ ಮತ್ತು ಖಜಾಂಚಿ ಇ.ಎಸ್. ಜಯರಾಮ್ ಅವರು ರಾಜೀನಾಮೆ ನೀಡಿದ್ದರು.

ಸೆಪ್ಟೆಂಬರ್ ಕೊನೆಯ ವಾರ ಮತ್ತು ನವೆಂಬರ್‌ನಲ್ಲಿ ಕೆಎಸ್‌ಸಿಎ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ.

ಮಹಾರಾಜ ಟ್ರೋಫಿ: ಗುಲ್ಬರ್ಗ ಮಿಸ್ಟಿಕ್ಸ್‌ಗೆ ಸೋಲು

ಬೆಂಗಳೂರು ಬ್ಲಾಸ್ಟರ್ಸ್‌ಗೆ ಜಯ

• ಆರ್. ಜಿತೇಂದ್ರ

ಮೈಸೂರು: ಉತ್ತಮ ಬೌಲಿಂಗ್ ದಾಳಿ ಹಾಗೂ ಎಲ್.ಆರ್. ಚೇತನ್‌ರ ಅಜೇಯ ಅರ್ಧಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಗುರುವಾರ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ 5 ವಿಕೆಟ್ ಅಂತರದಿಂದ ಜಯಿಸಿ ಟೂರ್ನಿಯಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಶ್ರೀರಾಮ್ ಗ್ರೂಪ್ ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ನೀಡಿದ 113 ರನ್‌ಗಳ ಸಾಧಾರಣ ಗುರಿ ಬೆನ್ನು ಹತ್ತಿದ ಬೆಂಗಳೂರಿಗೆ ಎಲ್.ಆರ್. ಚೇತನ್ ಆಸರೆ ಆದರು. ಆರಂಭದಲ್ಲಿ ಅಬ್ಬರಿಸಿದ ಅವರು ವಿಕೆಟ್‌ಗಳು ಬೀಳುತ್ತಲೇ ರಕ್ಷಣಾತ್ಮಕ ಆಟಕ್ಕೆ ಮೊರೆ ಹೋದರು. 48 ಎಸೆತದಲ್ಲಿ 10 ಬೌಂಡರಿ, 3 ಸಿಕ್ಸರ್ ಸಹಿತ 75 ರನ್ ಗಳಿಸಿ ಅಜೇಯರಾಗಿ ಉಳಿದರು. ಗುಲ್ಬರ್ಗ ಪರ ನಾಯಕ ವೈಶಾಖ್ ವಿಜಯ್‌ಕುಮಾರ್ 19ಕ್ಕೆ 3 ವಿಕೆಟ್ ಉರುಳಿಸಿದರು.

ಲವೀಶ್ ಆಸರೆ: ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಬ್ಯಾಟರ್‌ಗಳ ವೈಫಲ್ಯದಿಂದಾಗಿ 112 ರನ್‌ಗಳ ಸಾಧಾರಣ ಮೊತ್ತಕ್ಕೆ ತೃಪ್ತಿ ಪಟ್ಟಿತು. ಲವೀಶ್ ಕೌಶಲ್ ಅಜೇಯ ಅರ್ಧಶತಕದ ಮೂಲಕ ತಂಡಕ್ಕೆ ಆಸರೆಯಾದರು.

ಮಳೆಯಿಂದಾಗಿ ತೇವಗೊಂಡಿದ್ದ ಮೈದಾನದಲ್ಲಿ ರನ್ ಗಳಿಸಲು ಗುಲ್ಬರ್ಗ ಬ್ಯಾಟರ್‌ಗಳು ತಿಣುಕಾಡಿದರು. ಆದರೆ, ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ಲವೀಶ್ ಕೌಶಲ್ ಬಿರುಸಿನ ಹೊಡೆತಗಳನ್ನು ಒಳಗೊಂಡ ಇನ್ನಿಂಗ್ಸ್ ಕಟ್ಟಿದರು. 30 ಎಸೆತದಲ್ಲಿ 2 ಬೌಂಡರಿ, 5 ಸಿಕ್ಸರ್ ಸಹಿತ ಔಟಾಗದೇ 54 ರನ್ ಹೊಡೆದರು.

ಕೊನೆಯ ವಿಕೆಟ್‌ಗೆ ಲವೀಶ್ ಹಾಗೂ ಇಂಪ್ಯಾಕ್ಟ್ ಆಟಗಾರ ಶಶಿಕುಮಾರ್ ಕಾಂಬ್ಳೆ ಸೇರಿ 21 ಎಸೆತದಲ್ಲಿ ಗಳಿಸಿದ 45 ರನ್‌ಗಳು ಇನ್ನಿಂಗ್ಸ್‌ನ ಗರಿಷ್ಠ ಜೊತೆಯಾಟವಾಯಿತು. ತಂಡದ ಮೊತ್ತ ನೂರು ದಾಟಿಸಲೂ ನೆರವಾಯಿತು.

ಇನ್ನಿಂಗ್ಸ್‌ನ ಮೊದಲ ಓವರ್‌ನಲ್ಲೇ ಸತತ 2 ಸಿಕ್ಸರ್‌ನೊಂದಿಗೆ ಭರವಸೆ ಮೂಡಿಸಿದ್ದ ಲವನೀತ್ ಸಿಸೋಡಿಯ (13) ಎರಡನೇ ಓವರ್‌ನಲ್ಲಿ ವಿದ್ಯಾಧರ ಪಾಟೀಲ ಎಸೆತದಲ್ಲಿ ಡೀಪ್ ಮಿಡ್ ವಿಕೆಟ್‌ನಲ್ಲಿ ಎಲ್.ಆರ್. ಚೇತನ್‌ಗೆ ಕ್ಯಾಚಿತ್ತರು. ಮರು ಓವರ್‌ನಲ್ಲೇ ನಿಕಿನ್ ಜೋಸ್ (1) ನಿರ್ಗಮಿಸಿದರು. ಉಳಿದವರು ಹೆಚ್ಚು ಹೊತ್ತು ನಿಲ್ಲಲಿಲ್ಲ.

ಬೆಂಗಳೂರು ಪರ ಮೊದಲ ಓವರ್‌ನಲ್ಲಿ 13 ರನ್ ನೀಡಿ ದುಬಾರಿ ಆಗಿದ್ದ ಮೊಹ್ಸಿನ್ ಖಾನ್ ಉಳಿದ ಮೂರು ಓವರ್‌ನಲ್ಲಿ ಕೇವಲ 5 ರನ್ ನೀಡಿ 2 ವಿಕೆಟ್ ಉರುಳಿಸಿದರು. ನಾಯಕ ಶುಭಾಂಗ್ ಹೆಗ್ಡೆ 10 ರನ್‌ಗೆ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 19.5 ಓವರ್‌ಗಳಲ್ಲಿ 112ಕ್ಕೆ ಆಲೌಟ್ (ಲವೀಶ್ ಕೌಶಲ್ ಔಟಾಗದೇ 54, ಲವನೀತ್ ಸಿಸೋಡಿಯ 13, ಸ್ಮರಣ್ ರವಿಚಂದ್ರನ್ 12, ಶುಭಾಂಗ್ ಹೆಗ್ಡೆ 10ಕ್ಕೆ 2, ವಿದ್ಯಾಧರ ಪಾಟೀಲ 13ಕ್ಕೆ 2, ಮೊಹ್ಸಿನ್ ಖಾನ್ 18ಕ್ಕೆ 2, ರೋಹನ್ ನವೀನ್ 19ಕ್ಕೆ 2)

ಬೆಂಗಳೂರು ಬ್ಲಾಸ್ಟರ್ಸ್: 14.2 ಓವರ್‌ಗಳಲ್ಲಿ 5 ವಿಕೆಟ್‌ಗೆ 113 (ಎಲ್.ಆರ್. ಚೇತನ್ ಔಟಾಗದೇ 75, ರೋಹನ್ ನವೀನ್ ಔಟಾಗದೇ 16, ವೈಶಾಖ್ ವಿಜಯ್‌ಕುಮಾರ್ 19ಕ್ಕೆ 3)

ಇಂದಿನ ಪಂದ್ಯಗಳು

ಶಿವಮೊಗ್ಗ ಲಯನ್ಸ್ - ಬೆಂಗಳೂರು ಬ್ಲಾಸ್ಟರ್ಸ್– ಮಧ್ಯಾಹ್ನ 3.15

ಹುಬ್ಬಳ್ಳಿ ಟೈಗರ್ಸ್- ಮಂಗಳೂರು ಡ್ರ್ಯಾಗನ್ಸ್–ರಾತ್ರಿ 7.15



ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಎಲ್. ಆರ್. ಚೇತನ್ ಬ್ಯಾಟಿಂಗ್ ವೈಖರಿ. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

> **ಮೈಸೂರು–ಮಂಗಳೂರು ಪಂದ್ಯ ರದ್ದು**
>
> ಗುರುವಾರ ಮೈಸೂರು ವಾರಿಯರ್ಸ್ ಹಾಗೂ ಮಂಗಳೂರು ಡ್ರ್ಯಾಗನ್ಸ್ ನಡುವಿನ ಪಂದ್ಯವು ಮಳೆಯಿಂದಾಗಿ ರದ್ದಾಗಿದ್ದು, ಉಭಯ ತಂಡಗಳು ತಲಾ ಒಂದು ಅಂಕ ಹಂಚಿಕೊಂಡವು.
>
> ಮಧ್ಯಾಹ್ನ ಮಳೆಯಾದ ಕಾರಣ ಪಂದ್ಯವು 3.15ಕ್ಕೆ ಬದಲಾಗಿ ಮಧ್ಯಾಹ್ನ 4ಕ್ಕೆ ಮರು ನಿಗದಿಯಾಯಿತು. ಟಾಸ್ ಗೆದ್ದ ಮಂಗಳೂರು ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಪಂದ್ಯ ಆರಂಭಕ್ಕೆ ಇನ್ನು 15 ನಿಮಿಷ ಇರುವಾಗ ಮತ್ತೆ ಮಳೆ ಆರಂಭಗೊಂಡಿದ್ದು, ಅರ್ಧಗಂಟೆಗೂ ಹೆಚ್ಚು ಕಾಲ ಸುರಿಯಿತು. ಕ್ರೀಡಾಂಗಣದ ಸಿಬ್ಬಂದಿ ಸಮರೋಪಾದಿಯಲ್ಲಿ ನೀರು ಹೊರಹಾಕಿದರು. ಸಂಜೆ 5.45ಕ್ಕೆ ಮೈದಾನದ ಸ್ಥಿತಿಗತಿ ಪರಿಶೀಲಿಸಿದ ಅಂಪೈರ್‌ಗಳು, ಔಟ್‌ಫೀಲ್ಡ್ ಒದ್ದೆಯಾಗಿದ್ದ ಕಾರಣ ಪಂದ್ಯ ರದ್ದುಗೊಳಿಸುವ ನಿರ್ಧಾರ ಪ್ರಕಟಿಸಿದರು.

ಮಹಿಳಾ ವಿಶ್ವಕಪ್: ಶಿಬಿರ ಪೂರೈಸಿದ ಭಾರತ ತಂಡ

ಬೆಂಗಳೂರು: ತವರಿನಲ್ಲಿ ನಡೆಯುವ ಏಕದಿನ ವಿಶ್ವಕಪ್ ಟೂರ್ನಿಗೆ ಪೂರ್ವಭಾವಿಯಾಗಿ ಭಾರತ ಮಹಿಳಾ ತಂಡ ಇಲ್ಲಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಹತ್ತು ದಿನಗಳ ಸಿದ್ಧತಾ ಶಿಬಿರವನ್ನು ಗುರುವಾರ ಮುಗಿಸಿತು. ಶಿಬಿರದಲ್ಲಿ ಫಿಟ್ನೆಸ್‌ಗೆ ಒತ್ತು ನೀಡಲಾಯಿತು ಮತ್ತು ಪಂದ್ಯ ಸನ್ನಿವೇಶ ಗಮನದಲ್ಲಿಟ್ಟುಕೊಂಡು ಅಭ್ಯಾಸ ನಡೆಸಲಾಯಿತು.

ಈ ಹಿಂದೆ ಭಾರತ ಎಂದೂ ಐಸಿಸಿ ಟ್ರೋಫಿ ಗೆದ್ದುಕೊಂಡಿಲ್ಲ. ಈ ಬಾರಿ ಪ್ರಮುಖ ಪ್ರಶಸ್ತಿ ಬರವನ್ನು ನೀಗಿಸುವ ನಿರೀಕ್ಷೆಯಲ್ಲಿದೆ. ಸೆಪ್ಟೆಂಬರ್ 30ರದು ವಿಶ್ವಕಪ್ ಆರಂಭವಾಗಲಿದೆ.

'ಶಿಬಿರದಲ್ಲಿ ಫಿಟ್ನೆಸ್‌ಗೆ ಗಮನಹರಿಸಲಾಯಿತು. ಕೌಶಲ ಸುಧಾರಿಸುವ ಮತ್ತು ಮುಂದಿನ ಸವಾಲುಗಳಿಗೆ ತಂಡವನ್ನು ಸಜ್ಜುಗೊಳಿಸಲು ಒತ್ತು ನೀಡಲಾಯಿತು' ಎಂದು ಬಿಸಿಸಿಐ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

ಭಾರತ ವಿಶ್ವಕಪ್‌ಗೆ ಮೊದಲು ಆಸ್ಟ್ರೇಲಿಯಾದಲ್ಲಿ ಮೂರು ಪಂದ್ಯಗಳ ಏಕದಿನ ಸರಣಿ ಆಡಲಿದೆ.

ಈ ಸರಣಿ ಸೆಪ್ಟೆಂಬರ್ 14ರಂದು ಶುರುವಾಗಲಿದೆ. ಭಾರತ ವಿಶ್ವಕಪ್‌ನ ಮೊದಲ ಪಂದ್ಯವನ್ನು ಸೆ. 30ರಂದು ಶ್ರೀಲಂಕಾ ವಿರುದ್ಧ ಆಡಲಿದೆ.

ಪ್ರಶಸ್ತಿ ಖಚಿತಪಡಿಸಿಕೊಂಡ ಕೀಮರ್

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿ: ಜಂಟಿ ಎರಡನೇ ಸ್ಥಾನದಲ್ಲಿ ಇರಿಗೇಶಿ

ಚೆನ್ನೈ (ಪಿಟಿಐ): ಇನ್ನೂ ಒಂದು ಸುತ್ತು ಬಾಕಿಯಿರುವಂತೆ ಗ್ರ್ಯಾಂಡ್ ಮಾಸ್ಟರ್ ವಿನ್ಸೆಂಟ್ ಕೀಮರ್ ಅವರು ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಅವರು ಗುರುವಾರ ನಡೆದ ಎಂಟನೇ ಸುತ್ತಿನ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಆಟಗಾರ ಜೋರ್ಡನ್ ವಾನ್ ಫೋರಿಸ್ಟ್ ಜೊತೆ ಡ್ರಾ ಮಾಡಿಕೊಂಡರು.

ಜರ್ಮನಿಯ ಆಟಗಾರ ಆರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಜಂಟಿ ಎರಡನೇ ಸ್ಥಾನದಲ್ಲಿರುವ ಅಗ್ರ ಶ್ರೇಯಾಂಕದ ಅರ್ಜುನ್ ಇರಿಗೇಶಿ ಮತ್ತು ಕಾರ್ತಿಕೇಯನ್ ಮುರಳಿ ಅವರು ತಲಾ 4.5 ಪಾಯಿಂಟ್ಸ್ ಗಳಿಸಿದ್ದಾರೆ. ಹೀಗಾಗಿ ಎರಡು ಮತ್ತು ಮೂರನೇ ಸ್ಥಾನಕ್ಕೆ ಪೈಪೋಟಿಯಿದೆ. ವಿಶೇಷ ಎಂದರೆ ಮಾಸ್ಟರ್ಸ್ ವಿಭಾಗದ ಎಂಟನೇ ಸುತ್ತಿನಲ್ಲಿ ಎಲ್ಲ ಐದೂ ಪಂದ್ಯಗಳು ಡ್ರಾ ಆದವು.

ಅರ್ಜುನ್ ಇರಿಗೇಶಿ, ಸ್ವದೇಶದ ವಿದಿತ್ ಎಸ್.ಗುಜರಾತಿ (3.5) ಜೊತೆ ಅಂಕ ಹಂಚಿಕೊಂಡರೆ, ಕಾರ್ತಿಕೇಯನ್ ಮುರಳಿ, ಸ್ವದೇಶದ ನಿಹಾಲ್ ಸರಿನ್ (3.5) ಜೊತೆ ಡ್ರಾ ಮಾಡಿಕೊಂಡರು.

> ಮೊದಲ ಕೆಲವು ಸುತ್ತುಗಳಲ್ಲಿ ಪಡೆದ ಗೆಲುವುಗಳು ನನಗೆ ಆತ್ಮವಿಶ್ವಾಸ ಹೆಚ್ಚಿಸಲು ಮತ್ತು ಏಕಾಗ್ರತೆ ಮೂಡಿಸಲು ನೆರವಾದವು
>
> **ವಿನ್ಸೆಂಟ್ ಕೀಮರ್**
> ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್



ಪ್ರಾಣೇಶ್ ಎಂ.

ನೆದರ್ಲೆಂಡ್ಸ್‌ನ ಅನಿಶ್ ಗಿರಿ (4) ಮತ್ತು ಅವಾಂಡರ್ ಲಿಯಾಂಗ್ (4) ಡುವಣ ಪಂದ್ಯವೂ ಇದೇ ಹಾದಿ ಹಿಡಿಯಿತು.



ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್ ವಿನ್ಸೆಂಟ್ ಕೀಮರ್

ವಿ.ಪ್ರಣವ್ (3) ಮತ್ತು ರೇ ರಾಬ್ಸನ್ (3) ಪಂದ್ಯದಲ್ಲೂ ನಿರ್ಣಾಯಕ ಫಲಿತಾಂಶ ಬರಲಿಲ್ಲ.

ಇಲ್ಲಿ ತೋರಿದ ಉತ್ತಮ ಪ್ರದರ್ಶನದ ಪರಿಣಾಮ ಕೀಮರ್ ಅವರು ಲೈವ್ ರೇಟಿಂಗ್‌ನಲ್ಲಿ ಮೊದಲ ಬಾರಿ ಅಗ್ರ 10ರೊಳಗೆ ಸ್ಥಾನ ಪಡೆದರು. ಇಲ್ಲಿ ವಿಜೇತರಾಗಿದ್ದಕ್ಕೆ ಅವರು ಟ್ರೋಫಿ ಜೊತೆ ₹25 ಲಕ್ಷ ಬಹುಮಾನ ಪಡೆಯಲಿದ್ದಾರೆ.

ಪ್ರಶಸ್ತಿಯತ್ತ ಪ್ರಾಣೇಶ್: ಚಾಲೆಂಜರ್ಸ್ ವಿಭಾಗದಲ್ಲಿ ತಮಿಳುನಾಡಿನ ಪ್ರಾಣೇಶ್ ಎಂ ಅವರು ದ್ರೋಣವಲ್ಲಿ ಹಾರಿಕಾ ಅವರನ್ನು ಸೋಲಿಸಿ 6.5 ಪಾಯಿಂಟ್‌ಗಳೊಡನೆ ಅಗ್ರಸ್ಥಾನಕ್ಕೇರಿದರು. ಇನ್ನೊಂದು ಸುತ್ತು ಬಾಕಿ ಉಳಿದಿದೆ.

ಅಭಿಮನ್ಯು ಪುರಾಣಿಕ್ ಮತ್ತು ಲಿಯಾನ್ ಲ್ಯೂಕ್ ಮೆಂಡೋನ್ಸಾ (ತಲಾ 6) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಅಧಿಬನ್ ಭಾಸ್ಕರನ್ (5) ನಾಲ್ಕನೇ ಸ್ಥಾನದಲ್ಲಿದ್ದಾರೆ.

ಪಿ.ಇನಿಯನ್ (4.5) ಐದನೇ ಸ್ಥಾನದಲ್ಲಿದ್ದಾರೆ. ಇಲ್ಲೂ 10 ಆಟಗಾರರು ಕಣದಲ್ಲಿದ್ದಾರೆ.

ಚೆಸ್‌ನಲ್ಲಿ ಸಾಧನೆ: ಮುರ್ಮು ಪ್ರಶಂಸೆ

ನವದೆಹಲಿ (ಪಿಟಿಐ): ಚೆಸ್ ಕ್ರೀಡೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಸಾಧಿಸಿದ ಅಭೂತಪೂರ್ವ ಪ್ರಾಬಲ್ಯವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶ್ಲಾಘಿಸಿದರು.

ಸ್ವಾತಂತ್ರ್ಯೋತ್ಸವದ ಮುನ್ನಾ ದಿನವಾದ ಗುರುವಾರ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಕ್ರೀಡಾ ಕ್ಷೇತ್ರದಲ್ಲಿ ಭಾರತ ಪರಿವರ್ತನೆಯ ಹಾದಿಯಲ್ಲಿ ಸಾಗಿದೆ ಎಂದರು. 'ನಮ್ಮ ಯುವ ಕ್ರೀಡಾಪಟುಗಳಲ್ಲಿ ಆತ್ಮವಿಶ್ವಾಸ ತುಳುಕಿದ್ದು, ಕ್ರೀಡೆಗಳಲ್ಲಿ ಮೈಲಿಗಲ್ಲುಗಳನ್ನು ಸಾಧಿಸುತ್ತಿದ್ದಾರೆ. ಉದಾಹರಣೆಗೆ ಚೆಸ್‌ನಲ್ಲಿ ಭಾರತದ ಯುವ ಆಟಗಾರರು ಹಿಂದೆಂದೂ ಕಾಣದಷ್ಟು ಪ್ರಾಬಲ್ಯ ತೋರಿದ್ದಾರೆ' ಎಂದರು.

ವಿಶ್ವ ಚಾಂಪಿಯನ್ ಗುಕೇಶ್, ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್, ಕೋನೇರು ಹಂಪಿ, ಯುವ ಆಟಗಾರ್ತಿಯರಾದ ವೈಶಾಲಿ, ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ ಮೊದಲಾದ ಚೆಸ್‌ಪಟುಗಳ ಹೆಸರನ್ನು ಉಲ್ಲೇಖಿಸಿದರು.

ಹೊಸ ಕ್ರೀಡಾ ಆಡಳಿತ ಕಾಯ್ದೆಯನ್ನೂ ಅವರು ಶ್ಲಾಘಿಸಿದರು.



ರ್‍ಯಾಪಿಡ್ ವಿಭಾಗ: ಗುಕೇಶ್‌ಗೆ 4ನೇ ಸ್ಥಾನ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಅಮೆರಿಕದ ಲೀನಿಯರ್ ಡೊಮಿಂಗೆಝ್ ಪೆರೆಝ್ ಎದುರು ಸೋಲನುಭವಿಸಿ ದಿನ ಆರಂಭಿಸಿದ ವಿಶ್ವ ಚಾಂಪಿಯನ್ ಡಿ.ಗುಕೇಶ್ ನಂತರ ಚೇತರಿಸಿಕೊಂಡು ಅದೇ ದೇಶದ ಇನ್ನಿಬ್ಬರು ಗ್ರ್ಯಾಂಡ್ ಮಾಸ್ಟರ್‌ಗಳಾದ ವೆಸ್ಲಿ ಸೊ ಮತ್ತು ಫ್ಯಾಬಿಯಾನೊ ಕರುವಾನಾ ಅವರನ್ನು ಸೋಲಿಸಿದರು.

ಆ ಮೂಲಕ ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯಲ್ಲಿ ಬುಧವಾರ ಒಂಬತ್ತು ಸುತ್ತುಗಳ ನಂತರ ನಾಲ್ಕನೇ ಸ್ಥಾನಕ್ಕೇರಿದರು.

10 ಆಟಗಾರರು ಕಣದಲ್ಲಿರುವ ಈ ಟೂರ್ನಿಯ ರ್‍ಯಾಪಿಡ್ ಸುತ್ತುಗಳು ಮುಗಿದಿವೆ. ಬ್ಲಿಟ್ಝ್ ಟೂರ್ನಿಯ ಡಬಲ್ ರೌಂಡ್‌ರಾಬಿನ್ ಮಾದರಿಯಲ್ಲಿ (18 ಸುತ್ತು) ನಡೆಯಲಿವೆ. ಟೂರ್ನಿಯು ₹1.53 ಕೋಟಿ ಬಹುಮಾನ ಮೊತ್ತ ಹೊಂದಿದೆ. ಕೊನೆಯ ಸುತ್ತಿನಲ್ಲಿ ಗುಕೇಶ್ ಎದುರು ಸೋತರೂ ಕರುವಾನಾ ಒಟ್ಟು 14 ಅಂಕ ಗಳಿಸಿ ರ್‍ಯಾಪಿಡ್ ಸುತ್ತನ್ನು ಅಗ್ರ ಸ್ಥಾನದಲ್ಲಿ ಮುಗಿಸಿದರು. ಅರ್ಮೇನಿಯಾ ಮೂಲದ ಅಮೆರಿಕನ್ ಗ್ರ್ಯಾಂಡ್ ಮಾಸ್ಟರ್ ಲೆವೊನ್ ಅರೋನಿಯನ್ (13 ಅಂಕ) ಎರಡನೇ ಸ್ಥಾನ ಪಡೆದಿದ್ದಾರೆ. ಫ್ರಾನ್ಸ್‌ನ ವೇಷಿಯಲ್ ಲಗ್ರಾವ್ (11) ಮೂರನೇ ಸ್ಥಾನ ಗಳಿಸಿದ್ದಾರೆ. ಟೂರ್ನಿಯಲ್ಲಿ ಇದುವರೆಗೆ ಮಿಶ್ರಫಲ ಅನುಭವಿಸಿರುವ ಗುಕೇಶ್ (10) ನಾಲ್ಕನೇ ಸ್ಥಾನದಲ್ಲಿದ್ದಾರೆ.

ಡೊಮಿಂಗೆಝ್, ವೆಸ್ಲಿ ಸೊ ಮತ್ತು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸ-ತ್ತಾರೋವ್ ತಲಾ 9 ಅಂಕ ಗಳಿಸಿದ್ದಾರೆ. ವಿಯೆಟ್ನಾಮಿನ ಲೀಮ್ ಲಿ ಕ್ವಾಂಗ್ (7) ಎಂಟನೇ, ಅಮೆರಿಕದ ಸ್ಯಾಮ್ ಶಂಕ್ಲಾಂಡ್ (5) ಮತ್ತು ಅಮೆರಿಕದ ಗ್ರಿಗೊರಿ ಒಪಾರಿನ್ (3) ಕ್ರಮವಾಗಿ 9 ಮತ್ತು ಕೊನೆಯ ಸ್ಥಾನ ಗಳಿಸಿದ್ದಾರೆ.


ವಿದ್ಯಾಶಿಲ್ಪ ಅಕಾಡೆಮಿ ಬಾಲಕರ ತಂಡವು 17 ವರ್ಷದೊಳಗಿನವರ ಅಂತರ ಶಾಲಾ ಹಾಕಿ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು (ಕುಳಿತವರು) ಎಡದಿಂದ: ನಮನ್ ನಾಯರ್, ದಾನೇಶ್, ನಿವೇದ್ ನಾಯರ್, ನಿರ್ಮಲ್ ಸಾಯಿ, ಇಶಾಂತ್, ಸಮೀರ್, ರಿಧನ್, ಚಯಾನ್ (ನಿಂತವರು)ಕವನ್, ಏಕಾಂಶ್, ಅಶೋಕ್, ಪ್ರಣೀತ್, ಸೋಹನ್, ಗೌರೀಶ್ ಮತ್ತು ಸಮರ್ಥ್. ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಯೋಗ ಚಾಂಪಿಯನ್‌ಷಿಪ್ 22ರಿಂದ

ಚಿತ್ರದುರ್ಗ: ನಗರದಲ್ಲಿ ಆಗಸ್ಟ್ 22ರಿಂದ ಮೂರು ದಿನಗಳವರೆಗೆ 6ನೇ ರಾಜ್ಯ ಮಟ್ಟದ ಯೋಗಾಸನ ಚಾಂಪಿಯನ್‌ಷಿಪ್ ನಡೆಯಲಿದೆ.

'ಇಲ್ಲಿನ ಮುರುಘಾ ಮಠದ ಅನುಭವ ಮಂಟಪದಲ್ಲಿ ನಮ್ಮ ಸಂಸ್ಥೆಯಿಂದ ಚಾಂಪಿಯನ್‌ಷಿಪ್ ಹಮ್ಮಿಕೊಂಡಿದ್ದೇವೆ' ಎಂದು ರಾಜ್ಯ ಯೋಗಾಸನ ಸಂಸ್ಥೆಯ ಕಾರ್ಯದರ್ಶಿ ಎಂ.ನಿರಂಜನಮೂರ್ತಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿಯ ಯೋಗಗುರು, ಆಯುರ್ವೇದ ಪಂಡಿತ ರಾಘವೇಂದ್ರ ಸ್ವಾಮೀಜಿ ಸ್ಮರಣಾರ್ಥ ಸ್ಪರ್ಧೆ ಆಯೋಜಿಸಲಾಗಿದೆ. ವಿವಿಧ ಜಿಲ್ಲೆಗಳ 800ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ' ಎಂದರು.

'8 ರಿಂದ 55 ವರ್ಷದೊಳಗಿನ ಸ್ಪರ್ಧಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ 8 ವಿಭಾಗಗಳಲ್ಲಿ 10 ವಿವಿಧ ಸ್ಪರ್ಧೆಗಳು ನಡೆಯಲಿವೆ. ಇಲ್ಲಿ ಗೆಲುವು ಸಾಧಿಸಿದವರು ಛತ್ತೀಸಗಢ ಮತ್ತು ತೆಲಂಗಾಣದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಹೇಳಿದರು.

'1995ರ ನಂತರ ಚಿತ್ರದುರ್ಗದಲ್ಲಿ ಮೊದಲ ಬಾರಿಗೆ ಯೋಗಾಸನ ಚಾಂಪಿಯನ್‌ಷಿಪ್ ನಡೆಯುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸಿರುವ 80 ತೀರ್ಪುಗಾರರು ಭಾಗವಹಿಸಲಿದ್ದಾರೆ.

ಚಿಟಿಕೆ ಸುದ್ದಿ

ಸ್ವಾತಂತ್ರ್ಯ ದಿನಾಚರಣೆ: ಕೊಕ್ಕೊ ವಿಶ್ವಕಪ್ ಗೆದ್ದ ತಂಡಕ್ಕೆ ಆಹ್ವಾನ

ನವದೆಹಲಿ: ಚೊಚ್ಚಲ ಕೊಕ್ಕೊ ವಿಶ್ವಕಪ್ ಗೆದ್ದ ಭಾರತದ ಪುರುಷ ಮತ್ತು ಮಹಿಳಾ ತಂಡಗಳ ಆಟಗಾರರನ್ನು ಶುಕ್ರವಾರ ಕೆಂಪುಕೋಟೆಯಲ್ಲಿ ನಡೆಯಲಿರುವ 79ನೇ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗಿದೆ.

2025ರ ಜನವರಿ 13ರಿಂದ 19ರವರೆಗೆ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್‌ನಲ್ಲಿ ಭಾರತದ ಎರಡೂ ತಂಡಗಳು ಪ್ರಶಸ್ತಿಗಳನ್ನು ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದವು. ಟೂರ್ನಿಯಲ್ಲಿ 23 ದೇಶಗಳ 39 ತಂಡಗಳು (20 ಪುರುಷರು ಮತ್ತು 19 ಮಹಿಳೆಯರು) ಪಾಲ್ಗೊಂಡಿದ್ದವು.

ಕೆಂಪುಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ. ಈ ವೇಳೆ ಕ್ರೀಡಾಪಟುಗಳು ಸೇರಿದಂತೆ 5000 ವಿಶೇಷ ಅತಿಥಿಗಳು ಭಾಗವಹಿಸಲಿದ್ದಾರೆ.

ಅಮೆರಿಕ ಓಪನ್ ವೀನಸ್‌ಗೆ ವೈಲ್ಡ್ ಕಾರ್ಡ್



ನ್ಯೂಯಾರ್ಕ್ (ಎಎಫ್‌ಪಿ): ಅನುಭವಿ ಆಟಗಾರ್ತಿ ವೀನಸ್ ವಿಲಿಯಮ್ಸ್ ಅವರಿಗೆ ಅಮೆರಿಕ ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ನೀಡಲಾಗಿದೆ.

45 ವರ್ಷದ ವೀನಸ್ ಅವರಿಗೆ ಇದು 25ನೇ ಅಮೆರಿಕ ಓಪನ್ ಟೂರ್ನಿಯಾಗಲಿದೆ. ಈ ಹಿಂದೆ ಅವರು ಈ ಟೂರ್ನಿಯಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದರು. ಅಮೆರಿಕದ ವೀನಸ್ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ವೀನಸ್ ಅವರು ಅನಾರೋಗ್ಯದಿಂದಾಗಿ 16 ತಿಂಗಳುಗಳಿಂದ ಟೆನಿಸ್ ಅಂಕಣದಿಂದ ದೂರವಿದ್ದರು. ಹೋದ ತಿಂಗಳು ಅವರು ಡಬ್ಲ್ಯುಟಿಎನಲ್ಲಿ ಆಡಿ ಒಂದು ಪಂದ್ಯ ಜಯಿಸಿದ್ದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದವರ ಪಟ್ಟಿಯಲ್ಲಿ ವೀನಸ್ ಇದ್ದಾರೆ. ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಅತಿ ಹಿರಿಯ ವಯಸ್ಸಿನ ಆಟಗಾರ್ತಿಯಾಗಿದ್ದಾರೆ. ಒಟ್ಟು ಏಳು ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದಾರೆ.

ಚಂಡೀಗಢ, ಉತ್ತರಾಖಂಡಕ್ಕೆ ಗೆಲುವು

ಜಲಂಧರ್ (ಪಿಟಿಐ): ಚಂಡೀಗಢ ಮತ್ತು ಉತ್ತರಾಖಂಡ ತಂಡಗಳು ಇಲ್ಲಿ ನಡೆಯುತ್ತಿರುವ ಹಾಕಿ ಇಂಡಿಯಾ ಜೂನಿಯರ್ ಬಾಲಕರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಡಿವಿಷನ್ 'ಬಿ' ವಿಭಾಗದ ಪಂದ್ಯದಲ್ಲಿ ಗೆಲುವು ಸಾಧಿಸಿದವು.

ಗುರುವಾರ ನಡೆದ ಪಂದ್ಯದಲ್ಲಿ ಚಂಡೀಗಢ 4–3 ಗೋಲುಗಳಿಂದ ಅರುಣಾಚಲ ವಿರುದ್ಧ; ಉತ್ತರಾಖಂಡ 8–1ರಿಂದ ಅಸ್ಸಾಂ ವಿರುದ್ಧ ಗೆಲುವು ಸಾಧಿಸಿತು. ಹಿಮಾಚಲ ತಂಡವು 5–5ರಿಂದ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಡ್ರಾ ಸಾಧಿಸಿತು.

ವಿದ್ಯಾಶಿಲ್ಪ ಅಕಾಡೆಮಿ ತಂಡಕ್ಕೆ 'ಪ್ರಶಸ್ತಿ ಡಬಲ್'

ಬೆಂಗಳೂರು: ವಿದ್ಯಾಶಿಲ್ಪ ಅಕಾಡೆಮಿ ತಂಡ, ಸೇಂಟ್ಸ್ ಜೋಸೆಫ್ಸ್ ಬಾಲಕರ ಹೈಸ್ಕೂಲ್ ಆಶ್ರಯದ ಅಂತರ ಶಾಲಾ ಹಾಕಿ ಟೂರ್ನಿಯಲ್ಲಿ ಗುರುವಾರ 17 ವರ್ಷದೊಳಗಿನವರ ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ವಿಜೇತರಾಗಿ 'ಪ್ರಶಸ್ತಿ ಡಬಲ್ಸ್' ಸಾಧಿಸಿತು.

14 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಆತಿಥೇಯ ಸೇಂಟ್ ಜೋಸೆಫ್ಸ್ ಬಾಲಕರ ಹೈಸ್ಕೂಲ್ ತಂಡವನ್ನು 1–0 ಗೋಲಿನಿಂದ ಮಣಿಸಿದ ವಿದ್ಯಾಶಿಲ್ಪ ಅಕಾಡೆಮಿ ತಂಡವು ಫಾ.ಎರಿಕ್ ವಾಝ್ ಸ್ಮರಣಾರ್ಥ ಪ್ರಶಸ್ತಿ ಗೆದ್ದುಕೊಂಡಿತು.

ನಂತರ 17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ 0–2 ಹಿನ್ನಡೆಯಿಂದ ಅಮೋಘ ರೀತಿಯಲ್ಲಿ ಚೇತರಿಸಿಕೊಂಡು 3–2 ಗೋಲುಗಳಿಂದ ಚಿನ್ಮಯ ವಿದ್ಯಾಲಯ ತಂಡವನ್ನು ಸೋಲಿಸಿತು.

ಶುಕ್ರವಾರ, ಆಗಸ್ಟ್ 15, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವೇಸ್ ಪೇಸ್ ಇನ್ನಿಲ್ಲ

ಒಲಿಂಪಿಕ್ಸ್ ಪದಕವಿಜೇತ ಭಾರತ ಹಾಕಿ ತಂಡದ ಮಾಜಿ ಆಟಗಾರ ಹಾಗೂ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ಅವರ ತಂದೆ ಡಾ. ವೇಸ್ ಪೇಸ್ (80) ಗುರುವಾರ ನಿಧನರಾದರು



ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..





ಅಂಕಿತ ಅಮರ್, ಶೈನ್ ಶೆಟ್ಟಿ

ನಿರ್ದೇಶನದ ಕನಸಿನಲ್ಲಿ ಪ್ರಿಯಾಂಕ

ಪ್ರಿಯಾಂಕ ಉಪೇಂದ್ರ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಕಮರೊ2' ಚಿತ್ರ ಮುಂದಿನ ವಾರ(ಆ.22) ತೆರೆ ಕಾಣುತ್ತಿದೆ. ಐವತ್ತು ಸಿನಿಮಾಗಳಲ್ಲಿ ನಟಿಸಿರುವ ಖುಷಿಯಲ್ಲಿರುವ ಅವರು ತಮ್ಮ ಸಿನಿಪಯಣ, ಭವಿಷ್ಯದ ಕನಸುಗಳ ಕುರಿತು ಮಾತನಾಡಿದ್ದಾರೆ.



ಪ್ರಿಯಾಂಕ ಉಪೇಂದ್ರ

• ವಿನಾಯಕ ಕೆ.ಎಸ್.

• ಚಿತ್ರದಲ್ಲಿ ನಿಮ್ಮ ಪಾತ್ರವೇನು?

'ಸಾರಾ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಪ್ಯಾರಾನಾರ್ಮಲ್ ಇನ್ವೆಸ್ಟಿಗೇಟರ್ ಪಾತ್ರವಿದು. ವಸ್ತುಗಳನ್ನು ಮುಟ್ಟಿದರೆ ಹಿನ್ನೆಲೆ ಪತ್ತೆ ಮಾಡುವುದು, ಏನಾದರೂ ನೋಡಿದರೆ ಪರೀಕ್ಷಾ ದೃಷ್ಟಿಯಿಂದ ಅವಲೋಕಿಸುವುದು ಮೊದಲಾದ ಗುಣಗಳನ್ನು ಹೊಂದಿರುತ್ತೇನೆ. ನನ್ನ ಲುಕ್ ಕೂಡ ಪಾಶ್ಚಾತ್ಯ ಶೈಲಿಯಲ್ಲಿದೆ. ಪಾತ್ರಕ್ಕಾಗಿ ಕೇಶವಿನ್ಯಾಸವನ್ನು ಸ್ವಲ್ಪ ಬದಲಿಸಿಕೊಂಡಿದ್ದೇನೆ. ಪಾತ್ರ ಪೋಷಣೆಯಲ್ಲಿ ನಿರ್ದೇಶಕರು ಕೂಡ ಸಾಕಷ್ಟು ಸಹಾಯ ಮಾಡಿದ್ದಾರೆ.

• ಪತ್ತೆದಾರಿ ಕಥಾವಸ್ತುವನ್ನು ಹೊಂದಿರುವ ಚಿತ್ರವೇ?

ಪತ್ತೆದಾರಿ ಕಥಾವಸ್ತುವಿನ ಜತೆಗೆ ಭಾವನಾತ್ಮಕ ಪಯಣವೂ ಇದೆ. ಎರಡು ಮಗ್ಗಲುಗಳಲ್ಲಿ ಕಥೆ ಸಾಗುತ್ತದೆ. ನನ್ನ ತಂಗಿಯನ್ನು ಕಳೆದುಕೊಂಡಿರುತ್ತೇನೆ. ಆಕೆಯನ್ನು ಹುಡುಕುವ ಕಥೆ ಬರುತ್ತದೆ. ಅದು ಪೂರ್ತಿ ಭಾವನಾತ್ಮಕವಾಗಿದೆ. ಜತೆಗೆ ಕೌಟುಂಬಿಕ ಅಂಶಗಳು ಇವೆ. ಇನ್ನೊಂದೆಡೆ ಪತ್ತೆದಾರಿ ಘಟನೆಗಳಿವೆ. ನಿರ್ದೇಶಕರ ಹಿಂದಿನ 'ಕಮರೊಟ್ಟು' ಚಿತ್ರದ ಕಥೆಯ ಎಳೆಗೂ ಸ್ವಲ್ಪ ಸಂಬಂಧವಿದೆ.

• ನಿಮ್ಮ ಮುಂದಿನ ಯೋಜನೆಗಳು...

'ಡಿಟೆಕ್ಟೀವ್ ತೀಕ್ಷ್ಣ' ಚಿತ್ರ ಬಿಡುಗಡೆಗೆ ಸಿದ್ಧವಿದೆ. ಇದು ನನ್ನ ವೃತ್ತಿ ಜೀವನದಲ್ಲಿ ನಟಿಯಾಗಿ 50ನೇ ಸಿನಿಮಾ. ಹೀಗಾಗಿ ತುಂಬ ಖುಷಿಯಿದೆ. 'ದಿ ವೈರಸ್' ಚಿತ್ರ ಕೂಡ ಬಿಡುಗಡೆಯಾಗಬೇಕಿದೆ. 'ಮಮ್ಮಿ' ನಿರ್ದೇಶಕ ಲೋಹಿತ್ ಜತೆ 'ಕ್ಯಾಪ್ಚರ್' ಚಿತ್ರ ಮಾಡಿರುವೆ. 'ವಿಶ್ವರೂಪಿಣಿ ಹುಲಿಗೆಮ್ಮ' ಚಿತ್ರದಲ್ಲಿ ಉತ್ತರ ಕರ್ನಾಟಕದ ಪ್ರಸಿದ್ಧ ಹುಲಿಗೆಮ್ಮ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಸಾಯಿಪ್ರಕಾಶ್ ನಿರ್ದೇಶನದ ಚಿತ್ರವಿದು. ಪೃಥ್ವಿ ಅಂಬಾರ್ ಜತೆ ನಟಿಸಿರುವ 'ಲೈಫ್ ಈಸ್ ಬ್ಯೂಟಿಫುಲ್' ಚಿತ್ರ ಈ ವರ್ಷದ ಪ್ರಾರಂಭದಲ್ಲಿಯೇ ಬಿಡುಗಡೆಯಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ವಿಳಂಬವಾಗುತ್ತಿದೆ. ಈ ಚಿತ್ರದಲ್ಲಿ ನನ್ನ ಪಾತ್ರ ವಿಭಿನ್ನವಾಗಿದೆ. ಕ್ರೈಸ್ತ ಮಹಿಳೆಯಾಗಿ, ಪೃಥ್ವಿಗೆ ಮಾರ್ಗದರ್ಶಕಿಯಾಗಿ ಕಾಣಿಸಿಕೊಂಡಿದ್ದೇನೆ. 'ಸೆಪ್ಟೆಂಬರ್ 21' ಎಂಬ ಹಿಂದಿ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಆಲ್ಝೈಮರ್ಸ್ ರೋಗಿ ಮತ್ತು ಆತನ ಆರೈಕೆ ಮಾಡುವ ದಾದಿಯೊಬ್ಬಳ ನಡುವಿನ ಕಥೆಯನ್ನು ಹೊಂದಿರುವ ಈ ಚಿತ್ರ ಕನ್ನಡದಲ್ಲಿಯೂ ಸಿದ್ಧಗೊಳ್ಳುತ್ತಿದೆ. ಆಲ್ಝೈಮರ್ಸ್ ರೋಗಿಯನ್ನು ಆರೈಕೆ ಮಾಡುವ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಒಟ್ಟಿನಲ್ಲಿ ಕೈತುಂಬ ಚಿತ್ರಗಳಿವೆ.

• ಕನ್ನಡದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದೀರಿ. ಈ ಸಿನಿಪಯಣ ಹೇಗೆ ಅನ್ನಿಸುತ್ತಿದೆ?

ಮದುವೆಗೆ ಮೊದಲು ನಾನು ಎರಡೇ ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದು. ಮದುವೆಯಾದ ನಂತರ ಸಾಕಷ್ಟು ಸಿನಿಮಾಗಳಲ್ಲಿ ನಟಿಸಿರುವ ಖುಷಿಯಿದೆ. ಸಾಕಷ್ಟು ಉತ್ತಮ ಪಾತ್ರಗಳು ಸಿಕ್ಕಿವೆ. ಸ್ಫೂರ್ತಿದಾಯಕ, ಜವಾಬ್ದಾರಿಯುತ ಪಾತ್ರಗಳು ಅರಸಿ ಬರುತ್ತಿವೆ. ಮಹಿಳೆಯರನ್ನು ಪ್ರತಿನಿಧಿಸುವ ಪಾತ್ರಗಳನ್ನು ಮಾಡುತ್ತಿದ್ದೇನೆ. ಈ ತಲೆಮಾರಿನ ನಿರ್ದೇಶಕರು ಕೂಡ ನನ್ನನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದೇ ಖುಷಿ. ಪ್ರತಿ ಪಾತ್ರವೂ ಒಂದು ಅನುಭವ. ಆ ಪಾತ್ರ ಮಾಡಿದ ನಾಲ್ಕೈದು ತಿಂಗಳು ಅದೇ ಗುಂಗಿನಲ್ಲಿ ಇರುತ್ತೇವೆ. ಹೀಗಾಗಿ ಈ ಪಾತ್ರಗಳು ಜೀವನದ ಜತೆ ತಳಕು ಹಾಕಿಕೊಳ್ಳುತ್ತವೆ. ಯಾವ ಪಾತ್ರವೂ ಪುನರಾವರ್ತನೆಯಾಗುತ್ತಿಲ್ಲ. ಭಿನ್ನ ಪಾತ್ರಗಳೇ ಬರುತ್ತಿವೆ. ಈಗ ಒಳ್ಳೊಳ್ಳೆ ವಿಷಯಗಳು ಸಿನಿಮಾಗಳಾಗುತ್ತಿವೆ. ಈ ಮೂಲಕ ಒಂದಷ್ಟು ಜನರಿಗೆ ಸ್ಫೂರ್ತಿಯಾಗುತ್ತಿದ್ದೇನೆ.

• ಭವಿಷ್ಯದ ಯೋಜನೆಗಳೇನು?

ಪ್ರತಿ ಸಿನಿಮಾ ಹೊಸ ಜಗತ್ತನ್ನು ಪರಿಚಯಿಸಿಕೊಡುತ್ತಿದೆ. ನಟಿಯಾದೆ, ನಿರ್ಮಾಪಕಿಯಾದೆ. ನಿರ್ದೇಶನದ ಜಗತ್ತನ್ನು ಅನ್ವೇಷಿಸುವ ಆಸೆಯಿದೆ. ಕೆಲವಷ್ಟು ಕಥೆಗಳು ಸಿದ್ಧ ಇವೆ. ಆದರೆ ಕಾಲ ಕೂಡಿಬರಬೇಕು. ಕಾಯುತ್ತಿದ್ದೇನೆ. ನಮ್ಮದೇ ಪ್ರತಿಷ್ಠಾನ ಮಾಡಿಕೊಂಡು ಒಂದಷ್ಟು ಜನಕ್ಕೆ ನೆರವಾಗುತ್ತಿದ್ದೇನೆ. ಅದನ್ನು ಇನ್ನಷ್ಟು ಹೆಚ್ಚಿಸಬೇಕೆಂಬ ಆಲೋಚನೆಯಿದೆ.

• ಈತನಕದ ಪಯಣದಲ್ಲಿ ನೀವು ಮಾಡದೆ ಬಾಕಿ ಉಳಿದ ಪಾತ್ರಗಳು?

ನನಗೆ ಖಳನಟಿಯಾಗಿ ನಟಿಸಬೇಕೆಂಬ ಆಸೆಯಿದೆ. ಸಣ್ಣ ಪ್ರಮಾಣದಲ್ಲಿ ಖಳನಟಿಯಾಗಿ ಕಾಣಿಸಿಕೊಂಡಿರುವೆ. ಆದರೆ ಪೂರ್ಣ ಪ್ರಮಾಣದ ಪಾತ್ರಕ್ಕಾಗಿ ಎದುರು ನೋಡುತ್ತಿರುವೆ. ಜೀವನಚರಿತ್ರೆ ಆಧಾರಿತ ಪಾತ್ರಗಳಲ್ಲಿ ನಟಿಸಿಲ್ಲ. ಪೌರಾಣಿಕ ಪಾತ್ರಗಳನ್ನೂ ಮಾಡಿಲ್ಲ.

• 50 ಸಿನಿಮಾಗಳಿಂದ ತಾವು ಏನಾದರೂ ಕಲಿತಿರುವೆ ಅನ್ನಿಸಿದೆಯಾ?

ಮೊದಲೆಲ್ಲ ಸಿನಿಮಾ ಯಶಸ್ಸಿನ ಬಗ್ಗೆ ತುಂಬ ತಲೆಕೆಡಿಸಿಕೊಳ್ಳುತ್ತಿದ್ದೆ. ಆಗ ಅವಕಾಶ ಬೇಕಿತ್ತು. ಹಾಗಾಗಿ ಯಶಸ್ಸು ಮಹತ್ವದ್ದಾಗಿತ್ತು. ಆಮೇಲೆ ಅನ್ನಿಸಿದ್ದು, ಸಿನಿಮಾ ಹಿಟ್ ಅಥವಾ ಫ್ಲಾಪ್ ಎಂಬುದು ನಮ್ಮ ಕೈಯಲ್ಲಿ ಇಲ್ಲ. ಒಳ್ಳೆಯ ಸಿನಿಮಾಗಳನ್ನು ಮಾಡುವುದು ನಮ್ಮ ಕೆಲಸ. ಇವತ್ತು ಸಾಮಾಜಿಕ ಮಾಧ್ಯಮ ಪ್ರಬಲವಾಗಿದೆ. ಅಭಿಮಾನಿಗಳು ಅಲ್ಲಿಯೇ ಯಾವ ಪಾತ್ರ ಇಷ್ಟವಾಯಿತು, ಯಾವುದು ಇಷ್ಟವಾಗಿಲ್ಲ ಎಂಬುದನ್ನು ಹೇಳುತ್ತಾರೆ. ಕೆಲಸ ಮಾಡಿದ ತಂಡಗಳು, ಅಲ್ಲಿ ಪರಿಚಯವಾಗುವ ವ್ಯಕ್ತಿಗಳು, ಒಡನಾಟ ಎಲ್ಲವೂ ಬದುಕಿನ ಮುಖ್ಯ ಭಾಗ ಎಂಬುದನ್ನು ಕಲಿತೆ. ಅಂತಿಮವಾಗಿ ಮನುಷ್ಯ ಸಂಬಂಧಗಳೇ ಬದುಕು. ಆ ನೆನಪುಗಳು ಸದಾ ಜೊತೆಗೆ ಉಳಿಯುತ್ತವೆ.

• ಮಗನನ್ನು ಚಿತ್ರರಂಗಕ್ಕೆ ಕರೆತಂದಿರುವಿರಿ. ಪತಿ ಕೂಡ ನಟರು. ಇಬ್ಬರಲ್ಲಿ ಯಾರಿಗೆ ನಿರ್ದೇಶನ ಮಾಡುವಿರಿ? ಅಥವಾ ಮಗಳನ್ನೂ ಚಿತ್ರರಂಗಕ್ಕೆ ಕರೆತರುವಿರಾ?

ಪ್ರಶ್ನೆ ಚೆನ್ನಾಗಿದೆ. ನಮ್ಮದು ಒಂದು ರೀತಿ ಸಿನಿಮಾ ಕುಟುಂಬ. ನಟ, ನಟಿ, ನಿರ್ದೇಶಕ, ನಿರ್ಮಾಪಕ ಎಲ್ಲರೂ ಇದ್ದಾರೆ. ಮಗಳು ಐಶ್ವರ್ಯಾ ಓದುತ್ತಿದ್ದಾಳೆ. ಆಕೆಯ ಭವಿಷ್ಯದ ಬಗ್ಗೆ ನಿರ್ಧಾರ ಮಾಡಿಲ್ಲ. ಪತಿ, ಮಗ ಇಬ್ಬರೂ ಪ್ರತಿಭಾವಂತರು. ಅವರದ್ದೇ ದಾರಿಯಲ್ಲಿ ಸಾಗುತ್ತಿದ್ದಾರೆ. ಇಬ್ಬರಿಗೂ ನಿರ್ದೇಶನ ಮಾಡಲಾರೆ. ನನ್ನದೇ ಪ್ರತ್ಯೇಕ ತಂಡ ಕಟ್ಟಿಕೊಂಡು ಸಿನಿಮಾ ಮಾಡುವೆ. ಕುಟುಂಬದವರ ಸಹಾಯ ಪಡೆಯುವೆ.

'ಜಸ್ಟ್ ಮ್ಯಾರೀಡ್' ಟ್ರೇಲರ್ ಬಿಡುಗಡೆ

ಶೈನ್ ಶೆಟ್ಟಿ, ಅಂಕಿತ ಅಮರ್ ಜೋಡಿಯಾಗಿ ನಟಿಸಿರುವ 'ಜಸ್ಟ್ ಮ್ಯಾರೀಡ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜನಪ್ರಿಯ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ನಿರ್ಮಿಸಿ, ಸಿ.ಆರ್.ಬಾಬಿ ನಿರ್ದೇಶಿಸಿರುವ ಚಿತ್ರ ಆ.22ರಂದು ತೆರೆ ಕಾಣಲಿದೆ. ಟ್ರೇಲರ್ ಬಿಡುಗಡೆ ಸಮಾರಂಭವನ್ನು ಮದುವೆ ಮನೆ ಪರಿಕಲ್ಪನೆಯಲ್ಲಿ ಆಯೋಜಿಸಿದ್ದು ವಿಶೇಷವಾಗಿತ್ತು. ನಟಿಯರಾದ ಶ್ರುತಿ, ಮಾಳವಿಕ ಅವಿನಾಶ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ನಾನು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಲು ನೆರವಾದ ಸಿ.ಆರ್. ಬಾಬಿ ಅವರಿಗೆ ಚಿತ್ರ ನಿರ್ದೇಶನ ಮಾಡಬೇಕೆಂಬ ಆಸೆ ಮೊದಲಿನಿಂದಲೂ ಇತ್ತು. ನಾನು ಕೂಡ ಚಿತ್ರ ನಿರ್ದೇಶನ ಮಾಡಿ ಎಂದು ಹೇಳುತ್ತಿದ್ದೆ. ಈಗ ಕಾಲ ಕೂಡಿ ಬಂದಿದೆ. ಚಿತ್ರ ಆರಂಭವಾದ ದಿನದಿಂದಲೂ ನನಗೆ ಚಿತ್ರತಂಡ ನೀಡುತ್ತಿರುವ ಸಹಕಾರ ಅಪಾರ. ಅದರ ಜತೆಗೆ ಶಿವರಾಜಕುಮಾರ್, ಉಪೇಂದ್ರ, ಸುದೀಪ್, ರಕ್ಷಿತ್ ಶೆಟ್ಟಿ, ರಾಜ್ ಬಿ. ಶೆಟ್ಟಿ, ರಿಷಬ್ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ನಮ್ಮ ಚಿತ್ರದ ಹಾಡುಗಳು, ಟೀಸರ್ ಹಾಗೂ ಟ್ರೇಲರ್ ಅನ್ನು ಬಿಡುಗಡೆ ಮಾಡಿ ಕೊಟ್ಟಿದ್ದಾರೆ. ಚಿತ್ರ ವೀಕ್ಷಣೆ ಮಾಡಿರುವ ನಿರ್ಮಾಪಕ ವಿಜಯ್ ಕಿರಗಂದೂರು ತಮ್ಮ ವಿ.ಕೆ. ಫಿಲ್ಮ್ಸ್ ಮೂಲಕ ನಮ್ಮ ಚಿತ್ರವನ್ನು ವಿತರಣೆ ಮಾಡುತ್ತಿದ್ದಾರೆ' ಎಂದರು ಅಜನೀಶ್ ಲೋಕನಾಥ್.

'ಬಹು ತಾರಾಬಳಗವಿರುವ ನಮ್ಮ ಚಿತ್ರದ ಚಿತ್ರೀಕರಣ ನಿಗದಿತ ಯೋಜನೆಗೂ ಮೂರು ದಿನಗಳ ಮೊದಲೇ ಪೂರ್ಣಗೊಂಡಿತ್ತು. ಅದಕ್ಕೆ ಕಾರಣ ಕಲಾವಿದರ ಹಾಗೂ ತಂತ್ರಜ್ಞರ ಸಹಕಾರ. ಚಿತ್ರದ ಹಾಡುಗಳು ಈಗಾಗಲೇ ಸದ್ದು ಮಾಡಿವೆ. ಇದೊಂದು ಸದಭಿರುಚಿಯ ಮನೋರಂಜನೆ ಹೊಂದಿರುವ ಚಿತ್ರ' ಎಂದರು ನಿರ್ದೇಶಕಿ ಸಿ.ಆರ್.ಬಾಬಿ.

'ಚಿಕ್ಕಂದಿನಿಂದಲೂ ನನಗೆ ನಟನೆಯಲ್ಲಿ ಆಸಕ್ತಿ. ಟಿ.ವಿ ಅಥವಾ ದೊಡ್ಡ ಪರದೆಯಲ್ಲಿ ತಾರೆಯರನ್ನು ನೋಡಿದಾಗ ಇವರೆಲ್ಲಾ ಇಷ್ಟು ಚೆನ್ನಾಗಿ ಹೇಗೆ ಅಭಿನಯಿಸುತ್ತಾರೆ ಎಂದುಕೊಳ್ಳುತ್ತಿದೆ. ಇಂದು ನನಗೂ ಆ ಅವಕಾಶ ಸಿಕ್ಕಿದೆ. ಇದು ನನ್ನ ಎರಡನೇ ಚಿತ್ರ. ಎರಡನೇ ಚಿತ್ರದಲ್ಲೇ ಇಂತಹ ಮಹಾನ್ ತಾರೆಗಳ ಜತೆಗೆ ನಟಿಸುವ ಅವಕಾಶ ಒದಗಿ ಬಂತು. ಈ ಅವಕಾಶ ನೀಡಿದ ಇಡೀ ಚಿತ್ರತಂಡಕ್ಕೆ ಋಣಿ' ಎಂದರು ನಾಯಕಿ ಅಂಕಿತ ಅಮರ್.

ದೇವರಾಜ್, ಶ್ರೀಮಾನ್, ವಾಣಿ ಹರಿಕೃಷ್ಣ, ಅಭಿನವ್, ವೇದಿಕಾ ಮುಂತಾದವರು ಚಿತ್ರದಲ್ಲಿದ್ದಾರೆ.

ಎರಡೇ ಪಾತ್ರಗಳ ಸಾರಂಗಿ



ಶ್ವೇತ ಅರಕೆರೆ

ಕನ್ನಡದಲ್ಲಿ ಆಗೀಗ ಪ್ರಯೋಗಾತ್ಮಕ ಚಿತ್ರಗಳು ಬರುತ್ತಿರುತ್ತವೆ. ಅದೇ ಸಾಲಿಗೆ ಸೇರುವ ಚಿತ್ರ ಸಾರಂಗಿ. ಕೇವಲ ಎರಡೇ ಪಾತ್ರಗಳನ್ನು ಹೊಂದಿರುವ ಚಿತ್ರಕ್ಕೆ ಜೆ.ಆಚಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮನುಷ್ಯ ದಿನ ಬೆಳಗಾದರೆ ಎಲ್ಲರ ಮುಂದೆ ಒಂದೊಂದು ತರಹದ ಮುಖವಾಡ ಧರಿಸಿ ಜೀವನ ನಡೆಸುತ್ತಿರುತ್ತಾನೆ. ಆದರೆ, ಒಂದು ಅನಿರೀಕ್ಷಿತ ಸನ್ನಿವೇಶ ಎದುರಾದಾಗ ನಾವು ನಮ್ಮ ಮೌಲ್ಯಗಳನ್ನು ಉಳಿಸಿಕೊಳ್ಳುತ್ತೇವಾ? ಅದರಿಂದ ಹೇಗೆ ಪಾರಾಗುತ್ತೇವೆ? ಎಂಬುದೇ ಚಿತ್ರದ ಕಥಾಸಾರಾಂಶ. ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು. ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಮೊದಲು ಅಮೆರಿಕದಲ್ಲಿ ಬಿಡುಗಡೆ ಮಾಡಿ, ಅಕ್ಟೋಬರ್ ವೇಳೆಗೆ ಕರ್ನಾಟಕದಲ್ಲಿ ತೆರೆಗೆ ತರುವ ಯೋಚನೆಯಿದೆ' ಎಂದರು ನಿರ್ದೇಶಕರು.

ಕಾರ್ತಿಕ್ ಚಂದರ್ ಹಾಗೂ ಶ್ವೇತ ಅರಕೆರೆ ಚಿತ್ರದಲ್ಲಿನ ಕಲಾವಿದರು. 'ನಾನು ರಂಗಭೂಮಿ ಕಲಾವಿದ. ಅಮೆರಿಕದಲ್ಲಿ ರಂಗ ತಂಡವನ್ನು ನಡೆಸುತ್ತಿದ್ದೆ. ಈಗ ಬೆಂಗಳೂರಿನಲ್ಲಿ ವಾಸವಿದ್ದೇನೆ. 'ಸಾರಂಗಿ' ಒಂದು ಬೆಟ್ಟದ ಹೆಸರು. ಬೆಟ್ಟದ ಸುತ್ತ ಏನೆಲ್ಲಾ ನಡೆಯುತ್ತದೆ ಎಂಬುದನ್ನು ನಿರ್ದೇಶಕರು ಇದರಲ್ಲಿ ತೋರಿಸಿದ್ದಾರೆ' ಎಂದು ಕಾರ್ತಿಕ್ ಹೇಳಿದರು.

ತೇಜೇಶ್ ಬಂಡವಾಳ ಹೂಡಿದ್ದಾರೆ. ನವಿ ನಂಜಪ್ಪ ಛಾಯಾಚಿತ್ರಗ್ರಹಣವಿದೆ.

ಪಿವಿಆರ್‌ನಲ್ಲಿ 'ಕಾಂತಾರ'ದ ಜ್ವಾಲೆ

ಹೊಂಬಾಳೆ ಫಿಲ್ಮ್ಸ್ ಮತ್ತು ಪಿವಿಆರ್ ಐನಾಕ್ಸ್ ಸಂಸ್ಥೆಗಳು ತಮ್ಮ ಲಾಂಛನಕ್ಕೆ ಕಾಂತಾರದ ಜ್ವಾಲೆಯನ್ನು ಸೇರಿಸಿ ಹೊಸ ರೀತಿಯ ಪ್ರಚಾರಕ್ಕೆ ಕಾರ್ಯಕ್ಕೆ ಚಾಲನೆ ನೀಡಿವೆ. ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ: ಚಾಪ್ಟರ್ 1' ಅ.2ರಂದು ತೆರೆಗೆ ಬರಲಿದೆ. ಅದಕ್ಕೂ ಮೊದಲು ಈ ವಾರ ತೆರೆ ಕಂಡಿರುವ 'ಕೂಲಿ' ಮತ್ತು 'ವಾರ್ 2' ಚಿತ್ರಗಳ ನಡುವೆ ಈ ಸಿನಿಮಾವನ್ನು ಪ್ರಚಾರ ಮಾಡಲು ನಿರ್ಮಾಣ ಸಂಸ್ಥೆ ಮುಂದಾಗಿದೆ.

'ಗುರುವಾರ ತೆರೆಕಂಡಿರುವ 'ಕೂಲಿ' ಮತ್ತು 'ವಾರ್ 2' ಚಿತ್ರಗಳನ್ನು ನೋಡಲು ಬರುವ ಪ್ರೇಕ್ಷಕರು ಎಲ್ಲಾ ಪಿವಿಆರ್ ಐನಾಕ್ಸ್ ಚಿತ್ರಮಂದಿರಗಳಲ್ಲಿ ಕಾಂತಾರದ ಜ್ವಾಲೆಯ ಅನಿಮೇಷನ್ ಹೊಂದಿರುವ ಲಾಂಛನವನ್ನು ನೋಡಲಿದ್ದಾರೆ. ಅತ್ಯಾಧುನಿಕ ಪ್ರೊಜೆಕ್ಷನ್ ವ್ಯವಸ್ಥೆ ಮತ್ತು ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ಈ ಲಾಂಛನವನ್ನು ವಿಶೇಷವಾಗಿ ರೂಪಿಸಲಾಗಿದೆ. ಇದು ಕಾಂತಾರ ಚಿತ್ರದ ಮೂಲ ಶಕ್ತಿ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ. ಪಿವಿಆರ್ ಐನಾಕ್ಸ್‌ನ ಎಲ್ಲಾ ಚಿತ್ರಮಂದಿರಗಳ ದೊಡ್ಡ ಪರದೆಗಳ ಮೇಲೆ ಈ ಲಾಂಛನ ಪ್ರದರ್ಶನಗೊಳ್ಳಲಿದೆ' ಎಂದು ಹೊಂಬಾಳೆ ಫಿಲ್ಮ್ಸ್ ಹೇಳಿದೆ.

ಚಿತ್ರದ ಲಾಂಛನ



'ಕಾಂತಾರ' ಚಿತ್ರದ ಬೃಹತ್ ಯಶಸ್ಸಿನಿಂದ ಅದರ ಹಿಂದಿನ ಕಥೆಯನ್ನು ಹೊಂದಿರುವ ಚಾಪ್ಟರ್–1 ಈಗಾಗಲೇ ಸಾಕಷ್ಟು ನಿರೀಕ್ಷೆ ಮೂಡಿಸಿದೆ. ಈ ಚಿತ್ರಕ್ಕಾಗಿ ನಾಯಕ ರಿಷಬ್ ಶೆಟ್ಟಿ ಸಾಕಷ್ಟು ಹೊಸ ಸಾಹಸಕಲೆಗಳನ್ನು ಅಭ್ಯಾಸ ಮಾಡಿದ್ದಾರೆ. ಗುಳಿಗ ತುಳುನಾಡಿಗೆ ಬಂದ ಹಿನ್ನೆಲೆಯ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ರಿಷಬ್‌ಗೆ ನಾಯಕಿಯಾಗಿ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ.

'ಕಾಂತಾರ' ಪ್ರೀಕ್ವೆಲ್‌ನ ಚಿತ್ರೀಕರಣದ ದೃಶ್ಯಗಳ ತುಣುಕುಗಳನ್ನು ಇತ್ತೀಚೆಗೆ ಹೊಂಬಾಳೆ ಫಿಲ್ಮ್ಸ್ ಬಿಡುಗಡೆಗೊಳಿಸಿತ್ತು. ಸಿನಿಮಾಗಾಗಿ ನೂರಾರು ಕೋಟಿ ರೂಪಾಯಿ ವ್ಯಯಿಸಿರುವ ಹೊಂಬಾಳೆ ಅದ್ದೂರಿಯಾದ ಹೊಸ ಲೋಕವನ್ನೇ ಈ ಸಿನಿಮಾಗಾಗಿ ಸೃಷ್ಟಿಸಿದೆ. ಕುಂದಾಪುರ ಬಳಿ 25 ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ. ಐತಿಹಾಸಿಕ ಕಥೆಯೊಂದಿಗೆ ಅದ್ದೂರಿಯಾಗಿ ಮೂಡಿ ಬಂದಿರುವ ಚಿತ್ರ ಅಭಿಮಾನಿಗಳ ನಿರೀಕ್ಷೆಯನ್ನು ಇನ್ನಷ್ಟು ಹೆಚ್ಚಿಸಿದೆ.



ರಿಷಬ್ ಶೆಟ್ಟಿ

'ಪಿಂಗಾಕ್ಷ'ದಲ್ಲಿ ಆಂಜನೇಯನ ಕಥೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಪಿಂಗಾಕ್ಷ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಬಿ.ಭರತ್ ವಾಸುದೇವ್ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ.

'ಆಂಜನೇಯನಿಗೆ ಬಜರಂಗಿ, ಹನುಮಾನ್ ಮುಂತಾದ ಹೆಸರುಗಳು ಇವೆ. ಅದೇ ರೀತಿ 'ಪಿಂಗಾಕ್ಷ' ಕೂಡ ಆತನ ಹೆಸರು. ಇದು ಸಂಸ್ಕೃತ ಪದ. ನಮ್ಮ ಕಥೆಗೆ ಹೊಂದಿಕೊಳ್ಳುವುದರಿಂದ ಈ ಶೀರ್ಷಿಕೆ ಆಯ್ದುಕೊಂಡಿದ್ದೇವೆ. ಇದೊಂದು ಹಾರರ್ ಜಾನರ್‌ನ ಚಿತ್ರ. ಮನೆ ಯಜಮಾನ ದುಷ್ಟಶಕ್ತಿಯಿಂದ ತನ್ನ ಕುಟುಂಬವನ್ನು ಕಾಪಾಡಿಕೊಳ್ಳಲು ಯಾವ ರೀತಿ ಹೋರಾಟ ನಡೆಸುತ್ತಾನೆ? ಇದಕ್ಕೆ ದೈವಶಕ್ತಿ ಹೇಗೆ ಬಲ ನೀಡುತ್ತದೆ ಎಂಬುದೇ ಮುಖ್ಯ ಕಥೆ. ಪ್ರೀತಿ, ಮದುವೆ, ಸಂಸಾರ ಮುಂತಾದ ವಿಷಯಗಳೊಂದಿಗೆ ಮನರಂಜನೀಯ ಅಂಶಗಳೂ ಇವೆ. ನಾಲ್ಕು ಹಾಡು, ಮೂರು ಫೈಟ್‌ಗಳಿವೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು, ಮಡಿಕೇರಿ, ಮುನ್ನಾರ್, ಕೊಚ್ಚಿ ಮುಂತಾದೆಡೆ ಚಿತ್ರೀಕರಣ ನಡೆಸುವ ಯೋಜನೆಯಿದೆ' ಎಂದರು ನಿರ್ದೇಶಕರು.

ಬಿ.ವಾಸುದೇವರಾವ್ ನಿರ್ಮಾಣ ಮಾಡುತ್ತಿದ್ದಾರೆ. ಸಂತೋಷ್ ಕುಮಾರ್ ನಾಯಕ. ರಿಷಾ ಗೌಡ, ಐರಾ ಮೆನನ್ ನಾಯಕಿಯರು. ಅವಿನಾಶ್, ರಂಗಾಯಣ ರಘು, ಕಿಟ್ಟಿ ತಾಳಿಕೋಟೆ, ಬಲ ರಾಜವಾಡಿ, ಮುಂತಾದವರು ಅಭಿನಯಿಸುತ್ತಿದ್ದಾರೆ. ಕ್ರಿಸ್ಟೋಫರ್ ಜಾನ್ಸನ್ ಸಂಗೀತ, ಜೆ.ಕೆ.ಗಣೇಶ್ ಛಾಯಾಚಿತ್ರಗ್ರಹಣವಿದೆ.




ರಿಷಾ ಗೌಡ, ಐರಾ ಮೆನನ್

ಯಾವುದೇ ಕನ್ನಡ ಚಿತ್ರ ತೆರೆಗಿಲ್ಲ!

'ಕೂಲಿ', 'ವಾರ್–2' ತೆರೆ ಕಂಡಿರುವುದು ಹಾಗೂ ಮೂರು ವಾರಗಳ ಬಳಿಕವೂ ಚಿತ್ರಮಂದಿರಗಳಿಗೆ ಜನರನ್ನು ಸೆಳೆಯುತ್ತಿರುವ 'ಸು ಫ್ರಂ ಸೋ' ಚಿತ್ರದ ಅಬ್ಬರದಿಂದಾಗಿ ಈ ವಾರ ಯಾವುದೇ ಕನ್ನಡ ಸಿನಿಮಾ ತೆರೆ ಕಂಡಿಲ್ಲ. ವರ್ಷದ ಪ್ರಾರಂಭದಲ್ಲಿ ವಾರಕ್ಕೆ 12 ಸಿನಿಮಾಗಳು ತೆರೆ ಕಂಡಿದ್ದವು. ನಂತರ ಚಿತ್ರ ಬಿಡುಗಡೆ ಪ್ರಮಾಣ ಕುಸಿದಿದ್ದರೂ, ಯಾವುದೇ ಸಿನಿಮಾವೂ ತೆರೆ ಕಾಣದ ವಾರ ಬಹಳ ಅಪರೂಪ.


ಜು.25ಕ್ಕೆ 'ಸು ಫ್ರಂ ಸೋ' ತೆರೆ ಕಂಡಿತ್ತು. ಅದಕ್ಕೆ ಜನರ ಪ್ರತಿಕ್ರಿಯೆ ನೋಡಿ ಆ.1ರಂದು ತೆರೆ ಕಾಣಬೇಕಿದ್ದ ಸಾಕಷ್ಟು ಸಿನಿಮಾಗಳು ಮುಂದಕ್ಕೆ ಹೋಗಿವೆ. ಆಗಸ್ಟ್ ಎರಡನೇ ವಾರ ಒಂದೆರಡು ಸಿನಿಮಾಗಳು ಮಾತ್ರ ತೆರೆಕಂಡಿವೆ. ಯಾವುದೇ ಪ್ರಚಾರವಿಲ್ಲದೆ ತೆರೆಗೆ ಬಂದಹೋದ ಚಿತ್ರಗಳವು. ಆ.15 ಸೇರಿದಂತೆ ಸರಣಿ ರಜೆಗಳಿದ್ದರೂ ಸಿನಿಮಾ ಬಿಡುಗಡೆಗೆ ನಿರ್ಮಾಪಕರು ಧೈರ್ಯ ತೋರಿಲ್ಲ.

ರಜನಿಕಾಂತ್ ನಟನೆಯ 'ಕೂಲಿ' ಗುರುವಾರ ರಾಜ್ಯದ ಬಹುತೇಕ ಚಿತ್ರಮಂದಿರಗಳನ್ನು ಆವರಿಸಿದೆ. ಅದರ ನಡುವೆ 'ಸು ಫ್ರಂ ಸೋ' ಚಿತ್ರದ ಶೋಗಳು ಕೂಡ ಬಹುತೇಕ ಹೌಸ್‌ಫುಲ್ ಆಗಿವೆ. ವಾರ್–2 ಚಿತ್ರಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.



ರಜನಿಕಾಂತ್

ಅಂತರರಾಷ್ಟ್ರೀಯ ಕಿರುಚಿತ್ರೋತ್ಸವ ಪ್ರಾರಂಭ



ರಜಾ ಕಿರುಚಿತ್ರದ ದೃಶ್ಯ

ಬೆಂಗಳೂರು ಅಂತರರಾಷ್ಟ್ರೀಯ ಕಿರುಚಿತ್ರೋತ್ಸವದ (ಬಿಐಎಸ್‌ಎಫ್‌ಎಫ್) 15ನೇ ಆವೃತ್ತಿಯು ಆರಂಭಗೊಂಡಿದ್ದು, ಆಗಸ್ಟ್ 17ರವರೆಗೆ ಚಿತ್ರೋತ್ಸವಕ್ಕೆ ಆಯ್ಕೆಯಾದ ಕಿರುಚಿತ್ರಗಳ ಪ್ರದರ್ಶನ ನಡೆಯಲಿದೆ.

ಈ ಬಾರಿಯ ಚಿತ್ರೋತ್ಸವವನ್ನು ಆನ್‌ಲೈನ್ ಮತ್ತು ವಿವಿಧ ಸ್ಥಳಗಳಲ್ಲಿ ಪ್ರದರ್ಶನ ಹೀಗೆ ಎರಡು ವಿಭಿನ್ನ ಮಾದರಿಯಲ್ಲಿ ಆಯೋಜಿಸಲಾಗಿದೆ. ಬೆಂಗಳೂರಿನ ಸುಚಿತ್ರಾ, ಗೋಥೆ ಇನ್‌ಸ್ಟಿಟ್ಯೂಟ್/ಮ್ಯಾಕ್ಸ್ ಮುಲ್ಲರ್ ಭವನ, ಅಲಯನ್ಸ್ ಫ್ರಾನ್ಸೆ ಡಿ ಬೆಂಗಳೂರು, ಆರ್‌ವಿ ವಿಶ್ವವಿದ್ಯಾಲಯ, ಕ್ಯೂರಿಯೋಸಿಟಿ ಸೈನ್ಸ್ ಸೆಂಟರ್‌ಗಳಲ್ಲಿ ಚಿತ್ರಗಳ ಪ್ರದರ್ಶನ ನಡೆಯಲಿದೆ.

ಚಿತ್ರೋತ್ಸವಕ್ಕೆ ಆಯ್ಕೆ ಮಾಡಿರುವ ಕಿರುಚಿತ್ರಗಳನ್ನು ಚಿತ್ರ ಪ್ರೇಮಿಗಳು ಅಂತರ್ಜಾಲ ತಾಣ https://www.bisff.in ನಲ್ಲಿ ವೀಕ್ಷಿಸಬಹುದು. ಚಿತ್ರೋತ್ಸವಕ್ಕೆ ಹೆಸರು ನೋಂದಾಯಿಸಿದ ವೀಕ್ಷಕರು ಆಗಸ್ಟ್ 17ರವರೆಗೆ ಚಿತ್ರಗಳನ್ನು ವೀಕ್ಷಿಸಬಹುದು.

'ಯುವ ಮತ್ತು ಉದಯೋನ್ಮುಖ ಸಿನಿ ಪ್ರತಿಭೆಗಳಿಗೆ ಪ್ರತಿಷ್ಠಿತ ವೇದಿಕೆ ಒದಗಿಸಲು, ಉದ್ಯಮದ ಪ್ರಮುಖರಿಂದ ಮಾರ್ಗದರ್ಶನ ನೀಡಲು ಮತ್ತು ಚಿತ್ರ ನಿರ್ಮಾಪಕರನ್ನು ಪ್ರೋಷಿಸಲು 'ಬಿಐಎಸ್‌ಎಫ್‌ಎಫ್' ಬದ್ಧವಾಗಿದೆ. 2020ರಲ್ಲಿ ಆಸ್ಕರ್ ಅಕಾಡೆಮಿ ಅರ್ಹತಾ ಸ್ಥಾನಮಾನ ಪಡೆದ ನಂತರ ಚಿತ್ರೋತ್ಸವಕ್ಕೆ ಬರುವ ಕಿರುಚಿತ್ರಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಈ ವರ್ಷ 3000 ಕಿರುಚಿತ್ರಗಳು ಸ್ಪರ್ಧೆಗೆ ಬಂದಿದ್ದವು. ಅಂತರರಾಷ್ಟ್ರೀಯ, ಭಾರತೀಯ ಹಾಗೂ ಅನಿಮೇಷನ್ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಮೈಕ್ ಹಾನ್, ತುಷಾರ್ ಹೀರಾನಂದಾನಿ ಸೇರಿದಂತೆ ಸಾಕಷ್ಟು ಹೆಸರಾಂತ ಸಿನಿ ತಜ್ಞರು ತೀರ್ಪುಗಾರರ ಮಂಡಳಿಯಲ್ಲಿದ್ದಾರೆ. ಮಹಿಳಾ ಚಿತ್ರಗಳಿಗೆ ಪ್ರೋತ್ಸಾಹ ನೀಡಲು ಪ್ರತ್ಯೇಕ ವಿಭಾಗವಿದೆ' ಎಂದು ಚಿತ್ರೋತ್ಸವದ ನಿರ್ದೇಶಕ ಆನಂದ್ ವರದರಾಜ್ ಹೇಳಿದ್ದಾರೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಚಹಾ ಕೂಟ ಬಹಿಷ್ಕಾರ

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಜ್ಯಪಾಲ ಆರ್.ಎನ್.ರವಿ ಅವರು ಆಯೋಜಿಸಿರುವ ಚಹಾ ಕೂಟದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭಾಗವಹಿಸುವುದಿಲ್ಲ ಎಂದು ತಮಿಳುನಾಡು ಸರ್ಕಾರ ಹೇಳಿದೆ



ವೀನಸ್‌ಗೆ ವೈಲ್ಡ್‌ಕಾರ್ಡ್

ಟೆನಿಸ್ ತಾರೆ ವೀನಸ್ ವಿಲಿಯಮ್ಸ್ ಇದೇ 19ರಿಂದ ಆರಂಭವಾಗುವ ಅಮೆರಿಕ ಓಪನ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ

65 ಲಕ್ಷ ಮಂದಿಯ ವಿವರ ಪ್ರಕಟಿಸಿ

ಬಿಹಾರ ಎಸ್‌ಐಆರ್: ಚುನಾವಣಾ ಆಯೋಗಕ್ಕೆ 'ಸುಪ್ರೀಂ' ನಿರ್ದೇಶನ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಪಟ್ಟಿಯಿಂದ ಕೈಬಿಟ್ಟಿರುವ 65 ಲಕ್ಷ ಮತದಾರರ ಹೆಸರು ಮತ್ತು ವಿವರಗಳನ್ನು ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಚುನಾವಣಾ ಆಯೋಗ ಬಿಹಾರದಲ್ಲಿ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಈ ಮಹತ್ವದ ಆದೇಶ ಹೊರಡಿಸಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಬಳಿಕ ಮತದಾರರ ಕರಡು ಪಟ್ಟಿಯನ್ನು ಆಗಸ್ಟ್ 1ರಂದು ಪ್ರಕಟಿಸಲಾಗಿದೆ. ಈ ಹಿಂದೆ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೂ, ಕರಡು ಪಟ್ಟಿಯಿಂದ 65 ಲಕ್ಷ ಮಂದಿಯನ್ನು ಕೈಬಿಡಲಾಗಿದೆ. ಆಯೋಗ ಕೈಬಿಟ್ಟಿರುವ ಅಷ್ಟೂ ಹೆಸರುಗಳನ್ನು, ಕೈಬಿಡಲು ಕಾರಣವಾಗಿರುವ ಅಂಶಗಳ ಸಮೇತ ಪ್ರಕಟಿಸುವಂತೆ ಪೀಠವು ಹೇಳಿದೆ.

> **ಸಂವಿಧಾನದ ತತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಬಿಹಾರದ ಎಸ್‌ಐಆರ್ ಕುರಿತು ನೀಡಿರುವ ನಿರ್ದೇಶನ ಭರವಸೆಯ ಬೆಳಕಾಗಿದೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

> **ಜನರ ಮತದಾನದ ಹಕ್ಕು ಕಸಿಯುವ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಕುತಂತ್ರವನ್ನು 'ಸುಪ್ರೀಂ'ನ ಮಧ್ಯಂತರ ಆದೇಶವು ಬಯಲಿಗೆಳೆದಿದೆ**
> **ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

ಮೃತಪಟ್ಟವರು, ಶಾಶ್ವತವಾಗಿ ವಲಸೆ ಹೋದವರು ಅಥವಾ ಬೇರೆ ಕ್ಷೇತ್ರಗಳಿಗೆ ವಾಸ ಬದಲಿಸಿದವರ ಹೆಸರುಗಳನ್ನು ಒಳಗೊಂಡಿರುವ ಪಟ್ಟಿಯನ್ನು ಪಂಚಾಯತ್ ಮಟ್ಟದ ಕಚೇರಿ ಮತ್ತು ಜಿಲ್ಲಾ ಮಟ್ಟದ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ಪ್ರದರ್ಶಿಸುವಂತೆ ಸೂಚಿಸಿದೆ.

ಕೈಬಿಟ್ಟಿರುವ 65 ಲಕ್ಷ ಮತದಾರರ ಪಟ್ಟಿ ಎಲ್ಲಿ ಲಭ್ಯವಿರಲಿದೆ ಎಂಬುದನ್ನು ಜನರಿಗೆ ತಿಳಿಸಲು ಸುದ್ದಿ ವಾಹಿನಿಗಳು, ರೇಡಿಯೊ ಮತ್ತು ಪತ್ರಿಕೆಗಳ ಮೂಲಕ ವ್ಯಾಪಕ ಪ್ರಚಾರ ಮಾಡಬೇಕು ಎಂಬುದನ್ನು ಪೀಠವು ಒತ್ತಿಹೇಳಿದೆ.



ಕರಡು ಪಟ್ಟಿಯಲ್ಲಿ ಹೆಸರು ಕೈಬಿಟ್ಟಿರುವುದರಿಂದ ಸಮಸ್ಯೆ ಎದುರಿಸುತ್ತಿರುವವರು ತಮ್ಮ ಆಧಾರ್ ಕಾರ್ಡ್‌ನೊಂದಿಗೆ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

ಮುಂದಿನ ವಿಚಾರಣೆಯನ್ನು ಆಗಸ್ಟ್ 22ಕ್ಕೆ ನಿಗದಿಪಡಿಸಿದ ಪೀಠ, ತನ್ನ ನಿರ್ದೇಶನದ ಪಾಲನೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸುವಂತೆ ಆಯೋಗಕ್ಕೆ ಸೂಚಿಸಿದೆ.

ಆ.1ರಂದು ಕರಡು ಪಟ್ಟಿ ಪ್ರಕಟಿಸುವ ಸಂದರ್ಭದಲ್ಲಿ ಆಯೋಗವು, '36.28 ಲಕ್ಷ ಮಂದಿ ಶಾಶ್ವತವಾಗಿ ವಲಸೆ ಹೋಗಿದ್ದಾರೆ. 22.34 ಲಕ್ಷ ಮಂದಿ ಮೃತಪಟ್ಟಿದ್ದಾರೆ ಮತ್ತು 7.01 ಲಕ್ಷ ಜನರು ಒಂದಕ್ಕಿಂತ ಹೆಚ್ಚು ಕಡೆ ಮತದಾರರಾಗಿ ಹೆಸರು ನೋಂದಾಯಿಸಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿತ್ತು. ಅವರನ್ನು ಕರಡು ಪಟ್ಟಿಯಿಂದ ಕೈಬಿಡಲಾಗಿದೆ ಎಂದಿತ್ತು.

ಚುನಾವಣಾ ಆಯೋಗದ ಪರ ಹಾಜರಾದ ಹಿರಿಯ ವಕೀಲ ರಾಕೇಶ್ ದ್ವಿವೇದಿ, ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಆಯೋಗಕ್ಕೆ ಇದೆ. ಆದರೆ, ಆಯೋಗವು 'ತೀವ್ರ ತೆರನಾದ ರಾಜಕೀಯ ಹಗೆತನದ ವಾತಾವರಣದಲ್ಲಿ' ಕಾರ್ಯನಿರ್ವಹಿಸುತ್ತಿದ್ದು, ಅದು ತೆಗೆದುಕೊಳ್ಳುವ ಹೆಚ್ಚಿನ ನಿರ್ಧಾರಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುತ್ತಿದೆ ಎಂದು ವಿಷಾದಿಸಿದರು.

'ಪ್ರಸ್ತುತ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ಹೋರಾಟದ ಮಧ್ಯೆ ಸಿಕ್ಕಿಹಾಕಿಕೊಂಡಿದೆ' ಎಂದರು. ಕೆಲವು ಪಕ್ಷದವರು ಚುನಾವಣೆಯಲ್ಲಿ ಸೋತಾಗ ಇವಿಎಂ ಅನ್ನು 'ಕೆಟ್ಟದು' ಎಂದು ಕರೆದರೆ, ಚುನಾವಣೆಯಲ್ಲಿ ಗೆದ್ದಾಗ 'ಒಳ್ಳೆಯದು' ಎಂದು ಕರೆಯುವರು' ಎಂದರು.

'2003ರಲ್ಲಿ ಪರಿಗಣಿಸಿದ್ದ ದಾಖಲೆಗಳ ಮಾಹಿತಿ ಕೊಡಿ'

ಬಿಹಾರದಲ್ಲಿ 2003ರಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಸಂದರ್ಭದಲ್ಲಿ ಪರಿಗಣಿಸಲಾಗಿದ್ದ ದಾಖಲೆಗಳ ಮಾಹಿತಿ ಒದಗಿಸುವಂತೆ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

'2003ರಲ್ಲಿ ಯಾವೆಲ್ಲಾ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು ಎಂಬ ಮಾಹಿತಿಯನ್ನು ಆಯೋಗವು ತಿಳಿಸಬೇಕೆಂದು ನಾವು ಬಯಸುತ್ತೇವೆ' ಎಂದು ಪೀಠ ಹೇಳಿದೆ.

'ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಮತ್ತು ಚುನಾವಣೆ ಸಂದರ್ಭದಲ್ಲಿ ಕಾಲಕಾಲಕ್ಕೆ ನಡೆಸುವ ಪರಿಷ್ಕರಣೆ ಪ್ರಕ್ರಿಯೆ ಒಂದೇ ಆಗಿದೆ. ಹಾಗಾದರೆ, ಕಾಲಕಾಲಕ್ಕೆ ಪರಿಷ್ಕರಣೆ ನಡೆಸಿದಾಗ ನೀಡಿರುವ ಮತದಾರರ ಗುರುತಿನ ಚೀಟಿಯನ್ನು ರದ್ದುಗೊಳಿಸಿರುವುದು ಏಕೆ' ಎಂದು ಅರ್ಜಿದಾರರೊಬ್ಬರ ಪರ ಹಾಜರಿದ್ದ ವಕೀಲ ನಿಜಾಮ್ ಪಾಶಾ ಅವರು ವಾದಿಸಿದರು.

'ಬಿಹಾರದಲ್ಲಿ ಮತದಾರರು ಈ ಬಾರಿ 11 ದಾಖಲೆಗಳ ಪೈಕಿ ಒಂದನ್ನು ಸಲ್ಲಿಸಬೇಕಿದೆ. ಹಿಂದಿನ ಪರಿಷ್ಕರಣೆ ವೇಳೆ ಅದು ಏಳು ದಾಖಲೆಗಳಿಗೆ ಸೀಮಿತವಾಗಿತ್ತು. ಹೀಗಾಗಿ ಎಸ್‌ಐಆರ್ ಪ್ರಕ್ರಿಯೆ ಮತದಾರರ ಸ್ನೇಹಿಯಂತೆ ಕಾಣುತ್ತಿದೆ' ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿತ್ತು.

ಗಜಪಡೆಯಲ್ಲೂ ತಿರಂಗ...

ಪ್ರಜಾವಾಣಿ ಚಿತ್ರ: **ಹಂಪಾ ನಾಗರಾಜ**



ಮೈಸೂರಿನಲ್ಲಿ ಗುರುವಾರ ಮಹಾನಗರಪಾಲಿಕೆಯಿಂದ 'ಹರ್‌ಘರ್ ತಿರಂಗ ಅಭಿಯಾನ'ದ ಪ್ರಯುಕ್ತ ಅಂಬಾರಿ ಆನೆ 'ಅಭಿಮನ್ಯು' ನೇತೃತ್ವದಲ್ಲಿ ಗಜಪಡೆಯ ಮಾವುತರು ಹಾಗೂ ಕಾವಾಡಿಗಳು ತ್ರಿವರ್ಣ ಧ್ವಜ ಹಿಡಿದು ತಾಲೀಮಿನಲ್ಲಿ ಪಾಲ್ಗೊಂಡರು

ವಿಶೇಷ ಸಂಪುಟ ಸಭೆ ಮುಂದಕ್ಕೆ

ಒಳ ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯ ಕುರಿತು ಚರ್ಚಿಸಲು ಇದೇ 16ರಂದು ನಿಗದಿಯಾಗಿದ್ದ ಸಚಿವ ಸಂಪುಟದ ವಿಶೇಷ ಸಭೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.

ಆಗಸ್ಟ್ 7ರಂದು ನಡೆದಿದ್ದ ಸಂಪುಟ ಸಭೆಯು ಈ ವರದಿಯನ್ನು ಸ್ವೀಕರಿಸಿದೆ. ಅಂದು ವರದಿಯ ಪ್ರತಿಗಳನ್ನು ಸಚಿವ ಸಂಪುಟದ ಎಲ್ಲ ಸದಸ್ಯರಿಗೂ ನೀಡಲಾಗಿದೆ. ಎಲ್ಲರೂ ಅಧ್ಯಯನ ಮಾಡಿಕೊಂಡು ಬಂದು ವಿಶೇಷ ಸಂಪುಟ ಸಭೆಯಲ್ಲಿ ಭಾಗವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಪರಮೇಶ್ವರ, 'ಆಯೋಗವು ವರದಿ ಸಲ್ಲಿಸುವ ಮೊದಲೇ ಸಭೆ ಸೇರಿ, ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ನಾವೆಲ್ಲರೂ ಒಟ್ಟಿಗೆ ಹೋಗಬೇಕೆಂದು ತೀರ್ಮಾನಿಸಿದ್ದೇವೆ. ವರದಿ ಸಲ್ಲಿಕೆಯಾದ ಬಳಿಕ ಮತ್ತೊಮ್ಮೆ ಸಭೆ ಸೇರುವ ಬಗ್ಗೆಯೂ ನಿರ್ಧರಿಸಿದ್ದೆವು. ಸಣ್ಣಪುಟ್ಟ ವ್ಯತ್ಯಾಸಗಳಿದ್ದರೆ ಅವನ್ನು ಸರಿಪಡಿಸಿಕೊಂಡು ಹೋಗಬೇಕೆಂದು ಬುಧವಾರದ ಸಭೆಯಲ್ಲಿಯೂ ತೀರ್ಮಾನಿಸಿದ್ದೇವೆ' ಎಂದರು.

ವರದಿ ಪರ– ವಿರುದ್ಧದ ಧ್ವನಿ

ನಾಗಮೋಹನದಾಸ್ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ಎಡಗೈ ಸಮುದಾಯದ ಸಂಘಟನೆಗಳು, ಸಾಹಿತಿ–ಹೋರಾಟಗಾರರು ಆಗ್ರಹಿಸಿದ್ದಾರೆ. ಅತ್ತ, ಬಲಗೈ ಸಮುದಾಯದ ಸ್ವಾಮೀಜಿ, ವಿವಿಧ ಸಂಘಟನೆಗಳು ಅದರ ವಿರುದ್ಧ ಬೀದಿಗಿಳಿದಿವೆ. ಛಲವಾದಿ ಮಹಾಸಭಾವೂ ವಿರೋಧಿಸಿದೆ.

ನಾಗಮೋಹನದಾಸ್ ವರದಿಯನ್ನು ತಕ್ಷಣವೇ ಅನುಷ್ಠಾನ ಮಾಡಲು ಪೂರಕ ವಾತಾವರಣ ನಿರ್ಮಿಸಲು ನಿರ್ಧಾರಗಳನ್ನು ಕೈಗೊಳ್ಳಬೇಕು' ಎಂದು ಲೇಖಕ ದೇವನೂರ ಮಹಾದೇವ ಅವರು ಮುಖ್ಯಮಂತ್ರಿಗೆ ಬಹಿರಂಗ ಪತ್ರ ಬರೆದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಕ್ರಮವಾಗಿ ಶೇ 18 ಮತ್ತು ಶೇ 7.5 ಮೀಸಲಾತಿ ಕಲ್ಪಿಸುವ ಆಶ್ವಾಸನೆ ನೀಡಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

'ನಾಗಮೋಹನದಾಸ್ ಆಯೋಗದ ವರದಿ ಸಂಪೂರ್ಣ ಅವೈಜ್ಞಾನಿಕವಾಗಿದ್ದು, ಅದನ್ನು ಸರ್ಕಾರ ತಿರಸ್ಕರಿಸಬೇಕು' ಎಂದು ಬಲಗೈ ಸಮುದಾಯಗಳ ಒಳಮೀಸಲಾತಿ ಹೋರಾಟ ಸಮಿತಿ ರಾಜ್ಯದ ವಿವಿಧೆಡೆ ಬೀದಿಗಿಳಿದಿದೆ. ಭೋವಿ ಸಮಾಜಕ್ಕೆ ಪ್ರತ್ಯೇಕ ಗುಂಪು ರಚಿಸಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಗ್ರಹಿಸಿದ್ದಾರೆ. ಆ ಬೆನ್ನಲ್ಲೆ, ಎಲ್ಲ ಸಚಿವರು ಮತ್ತು ಶಾಸಕರ ನಿವಾಸಗಳಿಗೆ ತೆರಳಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿದ ಪತ್ರಗಳನ್ನು 'ನಮ್ಮ ಕ್ರಾಂತಿಕಾರಿ ಪಾದಯಾತ್ರೆ ತಂಡ' ಹಂಚಿದೆ.

ಬೀದಿ ನಾಯಿಗಳ ಸಮಸ್ಯೆಗಳಿಗೆ ಸ್ಥಳೀಯ ಆಡಳಿತವೇ ಹೊಣೆ: ಸುಪ್ರೀಂ ಕೋರ್ಟ್



ನವದೆಹಲಿ (ಪಿಟಿಐ): 'ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಿಗೆ (ಎನ್‌ಆರ್‌ಸಿ) ಸಂಬಂಧಿಸಿದ ಬೀದಿ ನಾಯಿಗಳ ಎಲ್ಲ ಸಮಸ್ಯೆಗಳಿಗೂ ಸ್ಥಳೀಯ ಆಡಳಿತದ ನಿಷ್ಕ್ರಿಯತೆಯೇ ಕಾರಣ' ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

ದೆಹಲಿ ಮತ್ತು ಎನ್‌ಸಿಆರ್ ಪ್ರದೇಶಗಳಲ್ಲಿ ಇರುವ ಎಲ್ಲ ಬೀದಿ ನಾಯಿಗಳನ್ನು ಆಶ್ರಯತಾಣಗಳಿಗೆ ಸ್ಥಳಾಂತರಿಸಿ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರಿದ್ದ ಪೀಠವು ಆಗಸ್ಟ್ 11ರಂದು ನೀಡಿದ ನಿರ್ದೇಶನಕ್ಕೆ ಮಧ್ಯಂತರ ತಡೆ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಲಾಯಿತು.

ನ್ಯಾಯಮೂರ್ತಿ ವಿಕ್ರಮ್ ನಾಥ್ ನೇತೃತ್ವದಲ್ಲಿ ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಬೀದಿ ನಾಯಿಗಳನ್ನು ಸ್ಥಳಾಂತರಿಸುವ ಕುರಿತು ನೀಡಿದ ನಿರ್ದೇಶನಕ್ಕೆ ತಡೆ ನೀಡಬೇಕೆಂಬ ಕೋರಿಕೆಗೆ ಸಂಬಂಧಿಸಿದ ಆದೇಶವನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿತು.

'ಬೀದಿ ನಾಯಿಗಳ ಕುರಿತು ಪ್ರಾಣಿ ಅಭಿವೃದ್ಧಿ ಮಂಡಳಿ, ಸ್ಥಳೀಯ ಆಡಳಿತ ಮತ್ತು ಸರ್ಕಾರಗಳು ಏನನ್ನೂ ಮಾಡಲಿಲ್ಲ. ಎನ್‌ಜಿಒಗಳು ಮಾತನಾಡುತ್ತವೆಯಷ್ಟೆ. ಆದರೆ, ಅವುಗಳಿಗೆ ತಾವು ನಿಜವಾಗಿ ಏನನ್ನು ಮಾಡಬೇಕು ಎಂದೇ ತಿಳಿದಿಲ್ಲ. ಪ್ರಾಣಿಗಳ ಸಂತಾನ ಶಕ್ತಿ ಹರಣ ನಿಯಮಗಳನ್ನು ಜಾರಿ ಮಾಡುವಲ್ಲಿ ಇವರೇ ಮುಂದಾಗಿರಬೇಕಿತ್ತು. ಏನೂ ಆಗುತ್ತಿಲ್ಲ' ಎಂದು ಪೀಠ ಹೇಳಿತು.

ಜಲಾಲ್ಪುರ ಯಲ್ಲಮ್ಮ ದೇಗುಲ ಹೈಕೋರ್ಟ್ ಆದೇಶ ರದ್ದು

ನವದೆಹಲಿ: ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಜಲಾಲ್ಪುರ ಗ್ರಾಮದ ಐತಿಹಾಸಿಕ ಯಲ್ಲಮ್ಮ ದೇವಿ ದೇಗುಲವನ್ನು ಖಾಸಗಿ ಆಸ್ತಿ ಎಂದು ತೀರ್ಮಾನಿಸಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಎಂ.ಎಂ. ಸುಂದರೇಶ್ ಮತ್ತು ಕೋಟೇಶ್ವರ ಸಿಂಗ್ ಅವರ ಪೀಠವು, 'ಸಾರ್ವಜನಿಕರ ಪೂಜೆಗೆ ಮುಕ್ತವಾಗಿರುವ ಪ್ರಾಚೀನ ದೇವಾಲಯಗಳು ಸಾಮಾನ್ಯವಾಗಿ ಸಾರ್ವಜನಿಕ ದೇಗುಲಗಳು ಎಂಬ ಭಾವನೆಯಿದೆ. ಇದನ್ನು ನಿರಾಕರಿಸಲು ಬಲವಾದ ಪುರಾವೆಗಳ ಅಗತ್ಯವಿದೆ' ಎಂದು ಹೇಳಿತು. ಈ ಕುರಿತು ದಾಖಲೆಗಳು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಹೊಸದಾಗಿ ನಿರ್ಧರಿಸುವಂತೆ ಪೀಠವು ಹೈಕೋರ್ಟ್‌ಗೆ ನಿರ್ದೇಶಿಸಿ, ಅರ್ಜಿಯನ್ನು ಹಿಂದಿರುಗಿಸಿತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕತ್ತಲೆಯೆರಿತದಲಿ ಕೈದೀವಿಗೆಯ ಹಂಗೇಕೆ ದಿನಮಣಿಗೆ?

–ಕುಮಾರವ್ಯಾಸ

ಸಂಪಾದಕೀಯ

ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆ ಅವಸರ ಬೇಡ, ಸತ್ಯ ಹೊರಬರಲಿ

ಧರ್ಮಸ್ಥಳದ ಪರಿಸರದಲ್ಲಿ ಅತ್ಯಾಚಾರ, ಕೊಲೆ ಮತ್ತು ಶವಗಳನ್ನು ಸಾಮೂಹಿಕವಾಗಿ ಹೂತಿರುವ ಕೃತ್ಯಗಳು ನಡೆದಿದ್ದು, ಅವುಗಳ ಹಿಂದೆ ಆ ಭಾಗದ 'ಪ್ರಭಾವಿ ವ್ಯಕ್ತಿಗಳ' ಕೈವಾಡ ಇದೆ ಎಂದು ವ್ಯಕ್ತಿಯೊಬ್ಬ ನೀಡಿದ ದೂರು ಆಧರಿಸಿ ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿರುವುದು ದೇಶದ ಗಮನ ಸೆಳೆದಿದೆ. ಆದರೆ, ತನಿಖಾ ಪ್ರಕ್ರಿಯೆಯ ಬಗ್ಗೆ ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಬೇಕು ಎಂದು ಕೆಲವು ಶಾಸಕರು ಆಗ್ರಹಿಸಿರುವುದು ಈ ಸಂದರ್ಭದಲ್ಲಿ ಸರಿಯಲ್ಲ; ಅಂಥದ್ದೊಂದು ವರದಿಯನ್ನು ಈ ಸಂದರ್ಭದಲ್ಲಿ ಪಡೆದುಕೊಳ್ಳುವುದು ಉಪಯುಕ್ತವಾಗಲಾರದು. ಆರೋಪದ ಸ್ವರೂಪವು ಗಂಭೀರವಾಗಿರುವಾಗ, ಅಪರಾಧದ ಕೃತ್ಯಗಳು ಬಹಳ ದೀರ್ಘ ಅವಧಿಯವರೆಗೆ ನಡೆದಿವೆ ಎಂಬ ಆರೋಪ ಇರುವಾಗ, ಇಲ್ಲಿ ಭಾವನಾತ್ಮಕ ಸಂಗತಿಗಳೂ ಮಿಳಿತವಾಗಿರುವಾಗ, ಆರೋಪಗಳ ಕುರಿತ ತನಿಖೆಯು ಬಹಳ ಸೂಕ್ಷ್ಮವಾಗಿ ಅವಸರವಿಲ್ಲದೆ ನಡೆಯಬೇಕು. ಸತ್ಯವನ್ನು ಹೊರಗೆ ಎಳೆಯಲು ಅಥವಾ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಎಸ್‌ಐಟಿ ಸ್ವತಂತ್ರವಾಗಿ ಕೆಲಸ ಮಾಡಬೇಕು, ಅದು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿ ಇರಬೇಕು. ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನದ ಆಡಳಿತವನ್ನು ನಿರ್ವಹಿಸುತ್ತಿರುವ ಹೆಗ್ಗಡೆ ಕುಟುಂಬವನ್ನು ಗುರಿಯಾಗಿಸಿಕೊಂಡ ಗುಸುಗುಸು ಮಾತುಗಳು ದಶಕಗಳಿಂದ ಇವೆ. ಒಂದು ದಶಕದ ಹಿಂದೆ ನಡೆದ 17 ವರ್ಷ ವಯಸ್ಸಿನ ಸೌಜನ್ಯಾ ಎನ್ನುವ ಯುವತಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣವು, ಹೆಗ್ಗಡೆ ಕುಟುಂಬದ ಬಗ್ಗೆ ಗುಟ್ಟಾಗಿ ಆಡುತ್ತಿದ್ದ ಮಾತುಗಳು ದೊಡ್ಡ ದನಿಯನ್ನು ಪಡೆಯುವಂತೆ ಮಾಡಿತು. ಸೌಜನ್ಯಾ ಹತ್ಯೆ ಪ್ರಕರಣದಲ್ಲಿ ಪೊಲೀಸರು ನಡೆಸಿದ ತನಿಖೆಯು ಅದೆಷ್ಟು ಅದಕ್ಷತೆಯಿಂದ ಕೂಡಿತ್ತೆಂದರೆ, ಅಧಿಕಾರಿಗಳನ್ನು ಹೈಕೋರ್ಟ್ ಕಟುವಾಗಿ ತರಾಟೆಗೆ ತೆಗೆದುಕೊಂಡಿತ್ತು. ತನಿಖೆಯ ಹೊಣೆಯನ್ನು ಸಿಬಿಐ ವಹಿಸಿಕೊಂಡ ನಂತರವೂ ಈ ಪ್ರಕರಣದ ಅಪರಾಧಿಗಳನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ವೈದ್ಯಕೀಯ ವಿದ್ಯಾರ್ಥಿನಿ ಅನನ್ಯಾ ಭಟ್ ಅವರ ನಾಪತ್ತೆ ಪ್ರಕರಣದ ಸಂದರ್ಭದಲ್ಲಿಯೂ ಸಾರ್ವಜನಿಕರಲ್ಲಿ ಆತಂಕವು ಹೆಚ್ಚಾಗಿತ್ತು. ಈ ಪ್ರಕರಣಗಳು ಉತ್ತರವಿಲ್ಲದ ಪ್ರಶ್ನೆಗಳನ್ನು ಉಳಿಸಿಬಿಟ್ಟಿವೆ.



ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ದುಷ್ಕೃತ್ಯಗಳ ತನಿಖೆಯನ್ನು ಎಸ್‌ಐಟಿ ಎಲ್ಲ ಆಯಾಮಗಳಿಂದ ನಡೆಸಬೇಕು; ಅನುಮಾನಕ್ಕೆ ಆಸ್ಪದ ಇಲ್ಲದಂತೆ ಸತ್ಯ ಸಾಬೀತು ಮಾಡಬೇಕು.

ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕ ಆಗಿ ಕೆಲಸ ಮಾಡಿರುವುದಾಗಿ ಹೇಳಿಕೊಂಡಿರುವ ವ್ಯಕ್ತಿಯೊಬ್ಬರು, ನೂರಾರು ಮೃತದೇಹಗಳನ್ನು ಹೂತುಹಾಕುವ ಕೆಲಸವನ್ನು 1995ರಿಂದ 2014ರ ನಡುವೆ ತಮ್ಮಿಂದ ಒತ್ತಾಯಪೂರ್ವಕವಾಗಿ ಮಾಡಿಸಲಾಗಿದೆ ಎಂದು ಈಗ ದೂರಿದ್ದಾರೆ. ಹೂತು ಹಾಕಿದ ಹಲವು ಮೃತದೇಹಗಳ ಮೇಲೆ ಲೈಂಗಿಕ ಹಲ್ಲೆ ನಡೆದ ಗುರುತುಗಳು ಇದ್ದವು ಎಂದೂ ಹೇಳಿದ್ದಾರೆ. ಇಂತಹ ಪ್ರಕರಣದಲ್ಲಿ, ಅಸ್ಥಿಪಂಜರದ ತುಂಡುಗಳನ್ನು ಇಟ್ಟುಕೊಂಡು ನಿರ್ಣಯವೊಂದಕ್ಕೆ ಬರುವುದು ಕಷ್ಟದ ಕೆಲಸ. ಆದರೆ, ಎಸ್‌ಐಟಿ ಹೊಣೆಯು ಇಷ್ಟಕ್ಕೇ ಸೀಮಿತ ಆಗಬಾರದು. ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಇರುವ ಇತರ ಹಲವು ಆರೋಪಗಳನ್ನು ಕೂಡ ಅದು ತನಿಖೆಗೆ ಒಳಪಡಿಸಬೇಕು. ದಶಕವೊಂದರ ಹಿಂದೆ ಟಿ.ವಿ. ವಾಹಿನಿಯೊಂದು ಆ ಭಾಗದಲ್ಲಿ ಯುವತಿಯರು ನಾಪತ್ತೆಯಾಗಿರುವ ಬಗ್ಗೆ ಸರಣಿ ವರದಿಯನ್ನು ಬಿತ್ತರಿಸಿತ್ತು. ಯುವತಿಯರ ನಾಪತ್ತೆ ಆರೋಪವನ್ನು ಮತ್ತೆ ಮತ್ತೆ ಮಾಡಲಾಗಿದೆ ಎಂಬುದು ಗಮನಾರ್ಹ. ಪೊಲೀಸ್ ದಾಖಲೆಗಳನ್ನು ಪರಿಶೀಲಿಸಿ, ಈ ಆರೋಪದ ಬಗ್ಗೆ ಎಸ್‌ಐಟಿ ತನಿಖೆ ನಡೆಸಬಹುದು. ಸಾಕ್ಷ್ಯ ಎಂಬುದಾಗಿ ಹೇಳಿಕೊಂಡು 8,000ಕ್ಕೂ ಹೆಚ್ಚಿನ ವೆಬ್ ಕೊಂಡಿಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿರುವ ವಿವಿಧ ಯೂಟ್ಯೂಬರ್‌ಗಳು ಹಾಗೂ ಸ್ಥಳೀಯ ಸಾಮಾಜಿಕ ಕಾರ್ಯಕರ್ತರನ್ನು ಕೂಡ ಎಸ್‌ಐಟಿ ಕರೆಸಿ, ಮಾಹಿತಿ ಪಡೆಯಬೇಕು.

ಇಲ್ಲಿನ ಆರೋಪಗಳಿಗೆ ಸಂಬಂಧಿಸಿದ ಚಿತ್ರಣವು ಗೋಜಲು ಗೋಜಲಾಗಿದೆ. ಪ್ರಶ್ನಾರ್ಹವಾದ ಆಸ್ತಿ ವಹಿವಾಟುಗಳು, ಕಿರುಸಾಲಕ್ಕೆ ಸಂಬಂಧಿಸಿದ ಕೆಲವು ವಿವಾದಗಳು ಕೂಡ ಈಗ ಮುನ್ನೆಲೆಗೆ ಬಂದಿವೆ. ದೇವಸ್ಥಾನವನ್ನು ಜೈನ ಸಮುದಾಯಕ್ಕೆ ಸೇರಿದ ಕುಟುಂಬವೊಂದು ನಿರ್ವಹಿಸುತ್ತಿದೆ ಎನ್ನುವುದು ಕೂಡ ಕೆಲವರಿಗೆ ಅಪಥ್ಯವಾಗಿರಬಹುದು. ಆದರೆ, ಇದಕ್ಕೆ ಸುಪ್ರೀಂ ಕೋರ್ಟ್ 1976ರಲ್ಲೇ ಸ್ಪಷ್ಟವಾಗಿ ಉತ್ತರ ನೀಡಿದೆ. ದೇವಸ್ಥಾನವು ಹೆಗ್ಗಡೆ ಕುಟುಂಬದ್ದು, ಅದರ ಆಡಳಿತ ನಿರ್ವಹಣೆಯು ವಂಶಪಾರಂಪರ್ಯವಾಗಿ ಧರ್ಮಾಧಿಕಾರಿಯ ಕೈಯಲ್ಲಿ ಇರುತ್ತದೆ ಎಂದು ಕೋರ್ಟ್ ಹೇಳಿದೆ. ಈಗ ಬಂದಿರುವ ಆರೋಪಗಳ ಹರವು ಗಮನಿಸಿದಾಗ, ಆರೋಪಗಳ ಬಗ್ಗೆ ಎಸ್‌ಐಟಿ ಸಮಗ್ರ ತನಿಖೆ ನಡೆಸುವುದು ಅಗತ್ಯ. ಇದು ರೋಚಕವಾಗಿ ಕಾಣುವಂತಹ ಒಂದು ಆರೋಪಕ್ಕೆ ಸಂಬಂಧಿಸಿದ ವಿಚಾರ ಅಲ್ಲ; ಬದಲಿಗೆ, ಇದೇ ಬಗೆಯ ಇನ್ನೂ ಕೆಲವು ಆರೋಪಗಳ ಇತಿಹಾಸ ಇರುವುದರ ಕುರಿತಾದದ್ದು. ಇಂತಹ ಆರೋಪಗಳನ್ನು ಉಪೇಕ್ಷಿಸಿದರೆ ವಿಶ್ವಾಸಕ್ಕೆ ಚ್ಯುತಿ ಬರುತ್ತದೆ. ಇಲ್ಲಿ ನಡೆದಿರುವುದು ದುರುದ್ದೇಶದ, ಕೆಟ್ಟ ಹೆಸರು ತರುವ ಅಭಿಯಾನವೋ ಅಥವಾ ಸತ್ಯವನ್ನು ಮುಚ್ಚಿಹಾಕುವ ಪ್ರಯತ್ನವೋ ಎಂಬುದು ತನಿಖೆಯಿಂದ ಬಯಲಾಗಬೇಕು. ಎಸ್‌ಐಟಿಯು ಅಗತ್ಯವಿರುವ ಎಲ್ಲ ಆಯಾಮಗಳಿಂದ ತನಿಖೆ ನಡೆಸಬೇಕು. ಸತ್ಯವನ್ನು ಅನುಮಾನಗಳಿಗೆ ಎಡೆಯಿಲ್ಲದಂತೆ ಸಾಬೀತು ಮಾಡುವ ಗುರಿಯನ್ನು ಎಸ್‌ಐಟಿ ಇರಿಸಿಕೊಳ್ಳಬೇಕು.

ಲಕ್ಷ್ಮಣರೇಖೆ ಮತ್ತು ಸ್ತ್ರೀ ಸ್ವಾತಂತ್ರ್ಯ



ವಿಶ್ಲೇಷಣೆ

ಜ್ಯೋತಿ

ಸ್ವಾತಂತ್ರ್ಯ ಎಲ್ಲಿ ಸಿಗುತ್ತದೆ? ಅದು ಮನೆಯ ಒಳಗಿದೆಯೋ ಅಥವಾ ಹೊರಗಿದೆಯೋ? ಸ್ವತಂತ್ರ ಭಾರತದಲ್ಲಿ ಸ್ವಅರಿವು ಕಂಡುಕೊಳ್ಳುತ್ತಿರುವ ಭಾರತೀಯ ಮಹಿಳೆಯ ಎದುರಿಗಿರುವ ಪ್ರಶ್ನೆಗಳಿವು.

ವರ್ತಮಾನ ಭಾರತದ ಮಹಿಳೆಯರ ಸ್ಥಿತಿಗತಿಯನ್ನು ಕೂಲಂಕಷವಾಗಿ ಗಮನಿಸಿದಾಗ, ಗಾಂಧಿ ಮತ್ತು ಇತರ ದೇಶಭಕ್ತರು ಸ್ವಾತಂತ್ರ್ಯ ಪಡೆಯಲಿಕ್ಕಾಗಿ ದೇಶದಲ್ಲಿ ಬೃಹತ್ ಜನಾಂದೋಲನ ರೂಪಿಸಿದಂತೆ, ಮಹಿಳಾ ಶೋಷಕರ ಮೈಚಳಿ ಬಿಡಿಸಿ, ಅವರನ್ನು ಮಹಿಳಾ ಸಮಾನತೆಯ ಮೇಲ್ದರ್ಜೆಗೆ ಏರಿಸುವಂತಹ, ಮಹಿಳಾ ಸ್ವಅರಿವಿನ ದೇಶವ್ಯಾಪಿ ಜಾಗೃತಿ ಅಭಿಯಾನದ ಅಗತ್ಯ ರೂಪುಗೊಳ್ಳಬೇಕಿದೆ. ಗಾಂಧಿ ಮತ್ತು ಅಂಬೇಡ್ಕರ್, ಮಹಿಳೆಯರಿಗೆ ಸಮಾನ ಅವಕಾಶಗಳ ಮೂಲಕ ಅವರ ಸಬಲೀಕರಣದಲ್ಲಿ ಬಲವಾದ ನಂಬಿಕೆಯಿಟ್ಟಿದ್ದರು. ಆದರೆ, ಅವರ ಆಶಯಗಳು ನೆರವೇರಲು ಸಾಧ್ಯವಾಗದಂತೆ ನಮ್ಮ ವ್ಯವಸ್ಥೆ ತುಕ್ಕು ಹಿಡಿದಿದೆ. ಹಾಗಾಗಿ, ಜನಾಂದೋಲನದ ಮೂಲಕ ನಮ್ಮ ನಾಗರಿಕ ಪ್ರಜ್ಞೆಯನ್ನು ಸದೃಢಗೊಳಿಸುವ ಅಗತ್ಯವಿದೆ.

ರಾಮಾಯಣದಲ್ಲಿ, ಕುಟುಂಬದ ಗಂಡಸರ ಅನುಪಸ್ಥಿತಿಯಲ್ಲಿ ಸಾಧುವಿಗೆ ಆತಿಥ್ಯ ನೀಡಬೇಕಾದಾಗ ಕರ್ತವ್ಯ ಪ್ರಜ್ಞೆ ಮತ್ತು ಮುಗ್ಧತೆಯಿಂದಾಗಿ, ಲಕ್ಷ್ಮಣರೇಖೆಯಿಂದ ಹೊರಗೆ ಕಾಲಿಡುವ ನಿರ್ಧಾರವು ಸ್ವತಃ ಸೀತೆಯದ್ದೇ. ಅದಕ್ಕಾಗಿ, ಅವಳು ಭಾರೀ ಬೆಲೆತೆತ್ತು, ರಾಮ–ರಾವಣರ ಯುದ್ಧಕ್ಕೆ ಕಾರಣಳಾದಳು. ಹೆಣ್ಣು ಯಾವತ್ತೂ ಲಕ್ಷ್ಮಣರೇಖೆಯನ್ನು ಮೀರದೇ ತೆಪ್ಪಗೆ ಮನೆಯೊಳಗೆ ಇರಬೇಕೆನ್ನುವ ಲೋಕರೂಢಿಯನ್ನು ರಾಮಾಯಣದ ಕಥೆ ಹೇಳುತ್ತದೆ.

ಹೊಸ್ತಿಲಿನಿಂದ ಹೊರಗೆ ಕಾಲಿಟ್ಟ ಹೆಣ್ಣುಮಕ್ಕಳ ಚಾರಿತ್ರ್ಯದ ವಧೆ ಮಾಡುತ್ತಾ, ಅವರ ಸ್ವಾತಂತ್ರ್ಯ ಕಿತ್ತುಕೊಳ್ಳಲಾಗಿದೆ ಎಂದು ಇತಿಹಾಸ ಹೇಳುತ್ತದೆ. ಪರಪುರುಷ ಸಾಧುವಿನಂತೆ ಕಂಡರೂ, ಅವನೊಳಗೆ ಒಬ್ಬ ರಾವಣ ಅಡಗಿರುತ್ತಾನೆ; ಹಾಗಾಗಿ, ಸದಾ ಎಚ್ಚರಿಕೆಯಿಂದ ಇರಬೇಕೆನ್ನುವ ಕಿವಿಮಾತನ್ನು ಹೆಣ್ಣುಮಕ್ಕಳಿಗೆ ಹೇಳುತ್ತಾ ಬೆಳೆಸುತ್ತೇವೆ. ಆದರೆ, ಈ ಪರಪುರುಷರು ಕೂಡ, ತಂತಮ್ಮ ಮನೆಗಳಲ್ಲಿ ಸಭ್ಯ ಗೃಹಸ್ಥರಂತೆ ಪೋಸು ಕೊಡುತ್ತಾರೆ. ಅವರನ್ನು ಅವರ ಮನೆಯ ಹೆಂಗಸರು ಹದ್ದುಬಸ್ತಿನಲ್ಲಿಟ್ಟರೆ, ಮಹಿಳಾ ಶೋಷಣೆ ಒಂದು ಸಾಮಾಜಿಕ ಪೀಡೆಯಾಗಿ ಬೆಳೆಯುತ್ತಿರಲಿಲ್ಲ ಎನ್ನುವ ಸಾಮಾನ್ಯ ಪ್ರಜ್ಞೆ ಕುರಿತು ನಾವು ಹೆಚ್ಚು ಮಾತನಾಡುವುದಿಲ್ಲ. ಏಕೆಂದರೆ, ಒಂದೇ ಹೆಣ್ಣಿಗೆ ಬದ್ಧನಾಗದೇ, ಬಾಹ್ಯ ಅವಕಾಶಗಳಿಗೆ ಸದಾ ಮುಕ್ತನಾಗಿರುವುದು, ಬಹುತೇಕ ಗಂಡಸರು ಕಂಡುಕೊಂಡಂತಹ ಸ್ವಯಂ ಸ್ವಾತಂತ್ರ್ಯ.

ಲಕ್ಷ್ಮಣರೇಖೆಯನ್ನು ದಾಟಿ ಸಾರ್ವಜನಿಕ ಬದುಕಿನಲ್ಲಿ ಗುರುತಿಸಿಕೊಂಡ ಬಹುತೇಕ ಹೆಣ್ಣುಮಕ್ಕಳು ಸಂಪ್ರದಾಯಸ್ಥ ಕುಟುಂಬದವರಲ್ಲ, ಉತ್ತಮ ಆರ್ಥಿಕ ಹಿನ್ನೆಲೆಯವರಲ್ಲ, ಮೇಲ್ಜಾತಿಯವರಲ್ಲ, ಎನ್ನುವ ಇತಿಹಾಸದಲ್ಲಿನ ಅಂಶ ಗಮನಾರ್ಹ. ತಮ್ಮ ಸಂಸಾರವನ್ನು ಆರ್ಥಿಕವಾಗಿ ಸಂಭಾಳಿಸಬೇಕಾದ ಅನಿವಾರ್ಯತೆಯಲ್ಲಿ, ವೈಯಕ್ತಿಕ ಹಿತದೊಂದಿಗೆ ರಾಜಿ ಮಾಡಿಕೊಂಡ ಹೆಣ್ಣುಮಕ್ಕಳನ್ನೇ ನಾವು ಹೆಚ್ಚಾಗಿ ಕಾಣುತ್ತೇವೆ. ಅವರೆಲ್ಲರೂ ಧ್ವನಿ ಸತ್ತ ಮಹಿಳೆಯರಾಗಿಯೇ ಉಳಿದು ಅಳಿದದ್ದು ವಿಷಾದನೀಯ. ಇಂದಿಗೂ ನಮ್ಮ ಹೆಣ್ಣುಮಕ್ಕಳು ಪ್ರತಿದಿನವೂ, ದೈನಂದಿನ ಬದುಕಿನಲ್ಲಿ ಎದುರಾಗುವ ಕೆಲವು ಗಂಡಸರಿಂದ ಒಂದಲ್ಲಾ ಒಂದು ರೀತಿಯ ದೈಹಿಕ, ಮಾನಸಿಕ, ಭಾಷಿಕ ದೌರ್ಜನ್ಯವನ್ನು ಅನುಭವಿಸಿಯೂ ಅದನ್ನು ದಾಖಲಿಸುವುದಿಲ್ಲ. ಪ್ರಶ್ನಿಸುವ ಹೆಣ್ಣುಮಕ್ಕಳನ್ನೇ ಸಂಶಯದಿಂದ ನೋಡುವಷ್ಟು ನಾವು ನಿರ್ಲಿಪ್ತರು.

ನಮ್ಮ ಅಮ್ಮಂದಿರು, ಅಜ್ಜಿಯಂದಿರು ಅನುಭವಿಸಿದ ಸಂಕಟಗಳಿಗೆ ಹೋಲಿಸಿದರೆ, ಇಂದು ಪರಿಸ್ಥಿತಿ ಸುಧಾರಿಸಿದೆ ಎನ್ನಬಹುದು. ಪ್ರಸಕ್ತ, ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ

> ಲಕ್ಷ್ಮಣರೇಖೆಯ ಒಳಗಿದ್ದಾಗ ಹೆಣ್ಣು ಸುರಕ್ಷಿತಳು ಎನ್ನುವ ನಂಬಿಕೆ ರಾಮಾಯಣ ಕಾಲದಿಂದಲೂ ಇದೆ. ಆದರೆ, ಸುರಕ್ಷಿತ ರೇಖೆಯಿಂದ ಹೊರಬರದೆ ಹಾಗೂ ಸ್ವಅರಿವು ಪಡೆಯದೆ ಹೆಣ್ಣಿಗೆ ಸ್ವಾತಂತ್ರ್ಯ ದೊರೆಯುವುದಿಲ್ಲ. ದೇಹದ ಮೇಲಿನ ಧ್ಯಾನಕ್ಕಿಂತಲೂ ಬೌದ್ಧಿಕ ಚಿಂತನೆ ಮಹಿಳೆಯನ್ನು ಸಬಲಗೊಳಿಸಬಲ್ಲದು.

ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿವೆ; ಆ ಮಟ್ಟಿಗಿನ ಧೈರ್ಯವನ್ನು ಹೆಣ್ಣು ತೋರುತ್ತಿದ್ದಾಳೆ. ಈ ಬದಲಾವಣೆಗೆ, ಧೀಮಂತ ಮಹಿಳೆಯರು ಹಾಗೂ ಸ್ವಸ್ಥ ಮನಸ್ಸಿನ ಪುರುಷರೂ ಕಾರಣವೆನ್ನಬಹುದು.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರ ಸ್ವವಿಕಸನಕ್ಕೆ ಅವಕಾಶಗಳು ಮುಕ್ತವಾಗಿವೆ. ಆದರೆ, ಅದನ್ನು ಪಡೆಯಲು ಅಡ್ಡವಾಗಿರುವುದು ಅವಳ ದೇಹ. ಇಂದು, ಹೆಣ್ಣು ತನ್ನ ಎಲ್ಲಾ ಸಾಧನೆಯ ನಡುವೆಯೂ ಒಂದು 'ದೈಹಿಕ' ವಸ್ತುವಾಗಿಯೇ ಉಳಿದಿದ್ದಾಳೆ. ಅವಳು ಸುಂದರವಾಗಿ, ಪ್ರಚೋದನಕಾರಿಯಾಗಿ ಕಾಣಿಸುವುದು ಬಹಳ ಮುಖ್ಯವಾಗಿಯೇ ಉಳಿದಿದೆ. ಅದಕ್ಕಾಗಿಯೇ, ಅವಳೆಲ್ಲಾ ಶ್ರಮ, ಸಮಯ ವ್ಯರ್ಥವಾಗುತ್ತದೆ. ಲಿಯೊ ಟಾಲ್‌ಸ್ಟಾಯ್ ಬಹಳ ಸರಿಯಾಗಿ ಗುರುತಿಸಿರುವಂತೆ, ಮಾರುಕಟ್ಟೆಯಲ್ಲಿ ಸಿಗುವ ಬಹುತೇಕ ವಸ್ತುಗಳು ಹೆಣ್ಣಿನ ಸೌಂದರ್ಯವರ್ಧನೆಗಾಗಿಯೇ ಇವೆ. ಅವುಗಳು ಅವಳನ್ನು ನಿರಂತರ ಗ್ರಾಹಕಳನ್ನಾಗಿಯೇ ಉಳಿಸುತ್ತವೆ ಮತ್ತು ಬೌದ್ಧಿಕ ಪ್ರಪಂಚಕ್ಕೆ ತೆರೆದುಕೊಳ್ಳದಂತೆ ತಡೆಯುತ್ತವೆ. ಸಾಮಾನ್ಯವಾಗಿ ನಮ್ಮ ಹೆಣ್ಣುಮಕ್ಕಳು ಒಟ್ಟುಗೂಡಿದಾಗ ವಸ್ತುಗಳ ಬಗ್ಗೆಯೇ ಮಾತಿನಲ್ಲಿ ಕಳೆದು ಹೋಗುತ್ತಾರೆಯೇ ಹೊರತು ಬೌದ್ಧಿಕ ಚರ್ಚೆಯಾಗುವುದು ವಿರಳ. ವಸ್ತುಗಳ ಪ್ರಪಂಚದಲ್ಲಿಯೇ ಉಳಿದು, ತಾನೂ ಒಂದು ಖರೀದಿಯ ವಸ್ತುವಾಗಿ, ಹೆಣ್ಣು ತನ್ನ ಸ್ವಾತಂತ್ರ್ಯ ಕಳೆದುಕೊಂಡಿದ್ದಾಳೆ.

ಹೆಣ್ಣು ತನ್ನ ದೇಹದ ಸೌಂದರ್ಯಕ್ಕಾಗಿ ಕಳೆಯುವ ಸಮಯ, ಮಾಡುವ ಖರ್ಚು ಮತ್ತು ಪಡುವ ಶ್ರಮದ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ. ತನ್ನ ದೇಹದ ಕುರಿತಂತೆ ಸದಾ ಧ್ಯಾನಸ್ಥಳಾಗುವ ಹೆಣ್ಣು, ಬೌದ್ಧಿಕ ವಿಕಸನದತ್ತ ಗಮನಹರಿಸಿದರೆ, ಅದು ಅವಳನ್ನು ನಿಜವಾದ ಸ್ವಾತಂತ್ರ್ಯದತ್ತ ಕೊಂಡೊಯ್ಯುತ್ತದೆ. ಅಲಂಕಾರ ತನಗಾಗಿಯೋ ಅಥವಾ ಎಲ್ಲರ ಕಣ್ಮನ ತಣಿಸಲೋ ಎನ್ನುವ ಸ್ಪಷ್ಟತೆ ಬಹಳ ಮುಖ್ಯ.

ಹೆಣ್ಣಿನ ಉಡುಗೆ ತೊಡುಗೆ ಅವಳ ಆತ್ಮವಿಶ್ವಾಸ, ಆತ್ಮತೃಪ್ತಿ, ಮತ್ತು ತನ್ನನ್ನು ತಾನು ಸಂಭಾಳಿಸಿಕೊಳ್ಳುವ ಧೈರ್ಯವನ್ನು ಅಭಿವ್ಯಕ್ತಗೊಳಿಸಬೇಕೇ ಹೊರತು, ಉಳಿದವರಿಗೆ ಪುಕ್ಕಟೆ ಮನೋರಂಜನೆಗಾಗಿ ಅಲ್ಲ ಎನ್ನುವ ಸೂಕ್ಷ್ಮವು ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ. ಸಿನಿಮಾಗಳು, ಧಾರಾವಾಹಿಗಳು, ಹೆಣ್ಣಿನ ಅಂಗಪ್ರದರ್ಶನದ ಆಧಾರದ ಮೇಲೆ ಹಣಗಳಿಸಲು ಪ್ರಯತ್ನಿಸುತ್ತಿವೆ. ಈ ಮೂಲಕ, ಹೆಣ್ಣಿನ ದೇಹ ನಿರ್ಮಾಪಕನ ಬಂಡವಾಳವಾಗುತ್ತದೆ. ಹಾಗಿದ್ದಲ್ಲಿ, ಇದು ನಿಜವಾಗಿಯೂ ಯಾರ ಸ್ವಾತಂತ್ರ್ಯ–ನೋಡುವವನದ್ದೋ? ವಸ್ತು ಆಗುವವಳದ್ದೋ?

ಪ್ರಸ್ತುತ, ಹೆಣ್ಣುಮಕ್ಕಳ ಸಬಲೀಕರಣಕ್ಕೆ ಹೆತ್ತವರು ಆದ್ಯತೆ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೂ, ಹೆಣ್ಣುಮಕ್ಕಳು ಸ್ವಶ್ರಮದಿಂದ ಬದುಕು ರೂಪಿಸಿಕೊಂಡರೂ, ಹೆತ್ತವರನ್ನು ಎಷ್ಟೇ ಚೆನ್ನಾಗಿ ನೋಡಿಕೊಂಡರೂ, ಅದು ತಮಗೆ ಅವಮಾನವೆಂದು ಭಾವಿಸುವ ಮತ್ತು ಇಲ್ಲದ ಗಂಡುಮಕ್ಕಳಿಗಾಗಿ ಪರಿತಪಿಸುವ ಪೋಷಕರು ಇನ್ನೂ ಇದ್ದಾರೆ ಎನ್ನುವುದು ವಾಸ್ತವದ ಸತ್ಯದರ್ಶನ.

ಹತಾಶೆಗಳ ನಡುವೆಯೂ, ಹೆಣ್ಣಿನ ದೇಹದ ಸ್ವಾತಂತ್ರ್ಯ ಎನ್ನುವುದು ಲಕ್ಷ್ಮಣರೇಖೆಯ ಒಳಗಿದೆಯೇ ಅಥವಾ ಹೊರಗಿದೆಯೇ ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರವೆಂದರೆ, ಎರಡೂ ಕಡೆ ಇಲ್ಲ ಎನ್ನುವುದು. ಆ ಸ್ವಾತಂತ್ರ್ಯವನ್ನು ಅವಳೇ ಸ್ವಅರಿವಿನ ಮೂಲಕ ಕಂಡುಕೊಳ್ಳಬೇಕಾಗಿದೆ. ಮನೆಯೊಳಗೆ ನಡೆಯುವ ಅತ್ಯಾಚಾರ, ಅನಾಚಾರಗಳು ಹೆಚ್ಚಾಗಿ ಹೊರಜಗತ್ತಿಗೆ ಬಯಲಾಗದಂತೆ ನಮ್ಮ ಸಂಪ್ರದಾಯಗಳು, ವಿಶೇಷವಾಗಿ ಹೆಣ್ಣುಮಕ್ಕಳ ಆರ್ಥಿಕ ಅವಲಂಬನೆಗಳು ಅವರನ್ನು ಬಾಯಿ ಕಟ್ಟಿಸುತ್ತವೆ. ಲಕ್ಷ್ಮಣರೇಖೆಯ ಹೊರಗಂತೂ, ಶಾಲಾ–ಕಾಲೇಜುಗಳು, ಕಚೇರಿಗಳು, ಬಹುತೇಕ ಸಾರ್ವಜನಿಕ ಸ್ಥಳಗಳು ಇನ್ನೂ ಸುರಕ್ಷಿತವಾಗಿಲ್ಲ. ಅಲ್ಲೆಲ್ಲಾ ಹೆಣ್ಣು ಏನು ಸಾಧಿಸಿದ್ದಾಳೆ, ಏನನ್ನೂ ಸಾಧಿಸಲಿದ್ದಾಳೆ ಎನ್ನುವುದು ಮುಖ್ಯವಾಗದೆ, ಅವಳ ದೇಹ ಹೇಗೆ ಕಾಣಿಸುತ್ತದೆ, ಪುರುಷನ ಅತೃಪ್ತ ಕಾಮನೆಗಳಿಗೆ ಅವಳು ಎಷ್ಟು ಲಭ್ಯವಾಗುತ್ತಾಳೆ (ಅವನ ಸಾಂಸಾರಿಕ ಜೀವನದ ನೆಮ್ಮದಿಗೆ ಅಡ್ಡಿಯಾಗದಂತೆ) ಎನ್ನುವುದಷ್ಟೇ ಮುಖ್ಯವೆನ್ನಿಸುತ್ತದೆ ಎನ್ನುವುದು ಬಹುತೇಕ ಹೆಣ್ಣುಮಕ್ಕಳು ಕಂಡುಕೊಂಡ ಸತ್ಯ. ಇದನ್ನು ಇನ್ನೊಂದು ಆಯಾಮದಿಂದ ಸ್ಪಷ್ಟಪಡಿಸುವುದಾದರೆ, ಹೆಚ್ಚಿನ ಗಂಡಸರು ಅವರ ಹೆಂಡತಿಯರಿಗೆ ಹೆದರಿಕೊಂಡೇ ಜೀವಿಸುತ್ತಾರೆ. ಬದುಕು ಪಾರದರ್ಶಕವಾಗಿದ್ದಲ್ಲಿ, ಹೆದರಿಕೆಯ ಅಗತ್ಯವಿದೆಯೇ? 'ಸಭ್ಯ' ಗಂಡಸರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಗಂಡಿನ ಆಮಿಷಗಳಿಗೆ ರಾಜಿಯಾಗುವ ಹೆಣ್ಣುಮಕ್ಕಳು ತನ್ನತನ ಕಳೆದುಕೊಂಡಾದರೂ, ಪ್ರಾಪಂಚಿಕ ಯಶಸ್ಸು ಗಳಿಸಬಹುದು. ಆಮಿಷಗಳಿಗೆ ಬಲಿಯಾಗದೆ, ತನಗೆ ತಾನೇ ದಾರಿದೀಪವೆಂದು ಬದುಕುವ ಹೆಣ್ಣುಮಕ್ಕಳು ಸ್ವಾತಂತ್ರ್ಯಕ್ಕಾಗಿ ದಿನವೂ ಹೋರಾಡಬೇಕಾಗುತ್ತದೆ. ಸ್ವಾತಂತ್ರ್ಯ ಪಡೆಯುವ ಹೋರಾಟದ ದಾರಿಯಲ್ಲಿ ಕೆಲವೇ ಹೆಣ್ಣುಮಕ್ಕಳು ನಡೆಯುತ್ತಾರೆ. ಇದು, ಸಾಹಸಮಯ ಮತ್ತು ಒಂಟಿತನ ಮಾರ್ಗವಾದರೂ, ಹೆಣ್ಣನ್ನು ಆಂತರಿಕವಾಗಿ ಗಟ್ಟಿಗೊಳಿಸುವ ನಿಜಾರ್ಥದ ಸ್ವತಂತ್ರ ಮಾರ್ಗ.

ಸ್ವಾತಂತ್ರ್ಯ ಕಂಡುಕೊಂಡ ಹೆಣ್ಣುಮಕ್ಕಳು, ತಮ್ಮ ಸುತ್ತಲಿನ ಪ್ರಪಂಚದಲ್ಲಿ ಇನ್ನೂ ಧ್ವನಿಯಿಲ್ಲದೇ ಬದುಕುತ್ತಿರುವ ಹೆಣ್ಣುಮಕ್ಕಳಿಗೆ ಧ್ವನಿಯಾಗಬೇಕಾಗಿದೆ. ಈ ಮಾದರಿಯಲ್ಲಿ, ತನ್ನ ದೇಹವನ್ನು ಅನುಮತಿಯಿಲ್ಲದೆ ಸ್ಪರ್ಶಿಸುವ ಗಂಡನ್ನು ಸಾರ್ವಜನಿಕವಾಗಿ ಛೀಮಾರಿ ಹಾಕುವುದು, ಶಿಕ್ಷೆಗೆ ಗುರಿಪಡಿಸುವ ದಿಟ್ಟತನ ತೋರುವುದು, ದೇಶ ವ್ಯಾಪಿ ಮಹಿಳಾ ಸ್ವಾತಂತ್ರ್ಯ ಚಳವಳಿಯಾಗಿ ರೂಪುಗೊಳ್ಳಬೇಕಾಗಿದೆ. ಮಹಿಳಾ ಸ್ವಾತಂತ್ರ್ಯವೆಂದರೆ, ಪ್ರೇರಣಾತ್ಮಕ ಜೀವನಶೈಲಿ ಬೆಳೆಸಿಕೊಳ್ಳದ ಗಂಡಿನ ದುರಭ್ಯಾಸಗಳನ್ನು ತಾನೂ ಮೈಗೂಡಿಸಿಕೊಳ್ಳುವುದಲ್ಲ; ತನ್ನ ಶಕ್ತಿಯನ್ನು ಅರಿತುಕೊಂಡು ಧೈರ್ಯವಾಗಿ ಬದುಕು ಕಟ್ಟಿಕೊಳ್ಳುವುದು.



ವಾಚಕರ ವಾಣಿ

ಅತಿಥಿ ಉಪನ್ಯಾಸಕರ ವಜಾ

ರಾಜ್ಯದ 430 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸುಮಾರು 10 ಸಾವಿರ ಅತಿಥಿ ಉಪನ್ಯಾಸಕರನ್ನು, ಆಗಸ್ಟ್ 2ರಂದು ಏಕಕಾಲಕ್ಕೆ ಕೆಲಸದಿಂದ ವಜಾಗೊಳಿಸಲಾಗಿದೆ. ಕಳೆದ ಒಂದು ತಿಂಗಳಿನಿಂದ ಕಾಲೇಜುಗಳು ಆರಂಭವಾಗಿದ್ದು, ವಿದ್ಯಾರ್ಥಿಗಳಿಗೆ ಪಾಠಗಳು ಸರಿಯಾಗಿ ನಡೆಯುತ್ತಿಲ್ಲ. ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಲ್ಲಿನ ಅರ್ಹತೆ, ಅನರ್ಹತೆಯ ಪ್ರಶ್ನೆಯು ನ್ಯಾಯಾಲಯದ ಕಟಕಟೆಯಲ್ಲಿದೆ. 10–15 ವರ್ಷಗಳಿಂದ ಕಾರ್ಯ ನಿರ್ವಹಿಸುವಾಗ ಇಲ್ಲದ ಈ ಪ್ರಶ್ನೆ ಈಗೇಕೆ?

ಪ್ರಕರಣದ ವಿಚಾರಣೆಯನ್ನು ಆಗಸ್ಟ್ 23ಕ್ಕೆ ಮುಂದೂಡಿದ್ದು, ಉನ್ನತ ಶಿಕ್ಷಣ ಇಲಾಖೆಯು ನ್ಯಾಯಾಲಯದ ಆದೇಶವನ್ನು ಎದುರು ನೋಡುತ್ತಿದೆ. ಈ ಮಧ್ಯೆ ಅತಿಥಿ ಉಪನ್ಯಾಸಕರಿಗೆ ಕೆಲಸವೂ ಇಲ್ಲ, ಸಂಬಳವೂ ಇಲ್ಲದೆ ಬೇರೆ ಕೆಲಸ ನಿರ್ವಹಿಸಲಾಗದೆ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಉನ್ನತ ಶಿಕ್ಷಣ ಸಚಿವರು ಕಾನೂನು ತಜ್ಞರ ಸಲಹೆ ಪಡೆದು ಅತಿಥಿ ಉಪನ್ಯಾಸಕರ ನೇಮಕಕ್ಕೆ ತಕ್ಷಣ ಮುಂದಾಗಲಿ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಹಿಂದಿ ಶಬ್ದ ಬಳಕೆ ಎಷ್ಟು ಸರಿ?

ಕೇಂದ್ರ ಸರ್ಕಾರ ಬಲವಂತವಾಗಿ 'ಹಿಂದಿ' ಹೇರಿಕೆ ಮಾಡುತ್ತಿದೆ ಎಂಬ ಕೂಗು ಆಗಾಗ ಕನ್ನಡಪರ ಸಂಘಟನೆಗಳು, ರಾಜಕೀಯ ನಾಯಕರಿಂದ ಕೇಳಿ ಬರುತ್ತಿರುತ್ತದೆ. ಆದರೆ, ದಿಲ್ಲಿ ಚಲೊ, ರಾಸ್ತಾ–ರೋಕೊ, ರೇಲ್ ರೋಕೊ, ಸಜಾ ಬಂದಿ, ಅಠಾರಾ ಕಚೇರಿ, ದವಾಖಾನೆ, ಸಬ್ಜಿ ಮಾರ್ಕೆಟ್, ಬೈಠಕ್, ಹಮಾರಿ ಮಾಂಗೇ ಪೂರಾ ಕರೋ, ಇತ್ಯಾದಿ ಹಲವಾರು ಹಿಂದಿ ಶಬ್ದಗಳನ್ನು ಬಳಸುತ್ತಿದ್ದೇವೆ. ಇದು ನಮಗರಿವಿಲ್ಲದೇ ಮಾಡಿಕೊಂಡಿರುವ ಹಿಂದೆ ಹೇರಿಕೆಯಲ್ಲವೆ?

ವೆಂಕಟೇಶ ಮುದಗಲ್, ಕಲಬುರಗಿ

ಹೊಸ ನೇಮಕಾತಿಗೆ ವಿಳಂಬ ಬೇಡ

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಸಂಬಂಧಿಸಿದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಆಯೋಗ ರಚನೆಯಾದ ದಿನದಿಂದ ಯಾವುದೇ ಹೊಸ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿಲ್ಲ. ಇದರಿಂದ ಉದ್ಯೋಗಾಕಾಂಕ್ಷಿಗಳು ಅಡಕತ್ತರಿಗೆ ಸಿಲುಕಿದ್ದಾರೆ. ಈಗ ಆಯೋಗವೂ ವರದಿ ಸಲ್ಲಿಸಿದೆ. ಒಳಮೀಸಲಾತಿ ಜಾರಿಗೊಳಿಸುವ ಜೊತೆಗೆ ಅಭ್ಯರ್ಥಿಗಳ ವಯೋಮಿತಿಯನ್ನು ಸಡಿಲಗೊಳಿಸಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಪ್ರಕಟಿಸಬೇಕಿದೆ.

ಪವನ್ ಜಯರಾಂ, ಚಾಮರಾಜನಗರ

> **ನೀತಿ**
>
> ನಮ್ಮ ಪ್ರಜಾಪ್ರಭುತ್ವದಲ್ಲಿ,
> ಆಳುವವರು ಎಂದಿಗೂ
> ನಿಜ ನುಡಿಯಬಾರದು
> ನುಡಿದರೆ
> ಅಧಿಕಾರದಲ್ಲಿರಬಾರದು
> ಇದು ರಾಜನೀತಿ!
> ರಾಜಣ್ಣಗೆ ಆದ ರೀತಿ
>
> **ಎಚ್. ಆನಂದರಾಮ ಶಾಸ್ತ್ರೀ**

ಹೊಣೆಗಾರಿಕೆ ಮರೆತ ಆಯೋಗ

'**ಮತ ಕಳವು**' ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ ಮಾಡಿರುವುದು ಸರಿಯಷ್ಟೇ. ರಾಹುಲ್ ಅವರ ದಾಖಲೆಯನ್ನು ಬೆನ್ನುಹತ್ತಿ ಹೊರಟ 'ಪ್ರಜಾವಾಣಿ'ಯು ಮಹದೇವಪುರ ವಿಧಾನಸಭಾ ಕ್ಷೇತ್ರದ ಮುನಿರೆಡ್ಡಿ ಗಾರ್ಡನ್‌ನಲ್ಲಿ ಸತ್ಯಾಸತ್ಯತೆ ಪರಿಶೀಲಿಸಿದಾಗ ಹಲವು ಅಕ್ರಮಗಳು ಬಯಲಾಗಿವೆ. 'ಪ್ರಜಾವಾಣಿ' ಮಾಡಿರುವ ಕೆಲಸವನ್ನು ಚುನಾವಣಾ ಆಯೋಗವೂ ಮಾಡಿ ರಾಹುಲ್ ಎತ್ತಿರುವ ಪ್ರಶ್ನೆಗಳಿಗೆ ಉತ್ತರ ನೀಡಬೇಕಿತ್ತಲ್ಲವೇ?

ಪ್ರಸ್ತುತ ಭಾರತದ ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಪ್ರಧಾನಿ, ಲೋಕಸಭಾ ವಿರೋಧ ಪಕ್ಷದ ನಾಯಕ ಹಾಗೂ ಕೇಂದ್ರ ಸಚಿವರು ಇದ್ದಾರೆ. ಈ ಮೊದಲು ಸಚಿವರ ಸ್ಥಾನದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಇದ್ದರು. ಎನ್‌ಡಿಎ ಸರ್ಕಾರವು ಸಿಜೆಐ ಅವರನ್ನು ಆಯ್ಕೆ ಸಮಿತಿಯಿಂದ ಹೊರಗಿಟ್ಟಿತು. ವಿರೋಧ ಪಕ್ಷಗಳು ಇದಕ್ಕೆ ತೀವ್ರವಾಗಿ ಆಕ್ಷೇಪಿಸಿದರೂ ಪ್ರಧಾನಿ ನರೇಂದ್ರ ಮೋದಿ ಅವರು ಮನ್ನಣೆ ನೀಡಲಿಲ್ಲ.

ಕೆ.ಎಂ. ಜಯರಾಮಯ್ಯ, ಮೈಸೂರು

ಮಕ್ಕಳು ಮತ್ತು ದೇವರ ಕೆಲಸ

ಬೆಂಗಳೂರಿನ ಉದ್ಯಮಿಯೊಬ್ಬರು ತಿರುಪತಿ ವೆಂಕಟೇಶ್ವರ ಅನ್ನ ಪ್ರಸಾದಂ ಟ್ರಸ್ಟ್‌ಗೆ ₹1 ಕೋಟಿ ದೇಣಿಗೆ ನೀಡಿರುವುದು ವರದಿಯಾಗಿದೆ. ತಿರುಪತಿ ತಿಮ್ಮಪ್ಪನಿಗೆ ಕಾಣಿಕೆ ನೀಡುವ ಸಾಕಷ್ಟು ದಾನಿಗಳು ಇದ್ದಾರೆ. ಈ ದಾನಿಗಳು ನಡೆಸುವ ಉದ್ಯಮಗಳಲ್ಲಿ ದುಡಿಯುವವರಲ್ಲಿ ಬಡವರು ಮತ್ತು ಮಧ್ಯಮ ವರ್ಗದವರು ಇರುತ್ತಾರೆ. ಅವರ ಮಕ್ಕಳ ಶಿಕ್ಷಣಕ್ಕೆ ದೇಣಿಗೆಯ ಹಣ ವಿನಿಯೋಗಿಸಿದರೆ ಆ ಕೆಲಸವೂ ದೇವರ ಕೆಲಸವೇ ಆಗುತ್ತದಲ್ಲವೇ?

ಸಂತೋಷ ಡಿ. ವಾಲಿ, ರಾಮದುರ್ಗ

ಮಾನವನ ದುರಾಸೆಗೆ ಕೊನೆ ಎಲ್ಲಿದೆ?

ಚಂದ್ರನಲ್ಲಿ ಪರಮಾಣು ಪೈಪೋಟಿ ಲೇಖನ (ಲೇ: ನಾಗೇಶ ಹೆಗಡೆ, ಪ್ರ.ವಾ., ಆಗಸ್ಟ್ 14) ಓದುತ್ತಿದ್ದಂತೆ ಮಾನವನ ದುರಾಸೆಗೆ ಮುಂಬರುವ ದಿನಗಳಲ್ಲಿ ಎಲ್ಲಿ ಭೂತಾಯಿ ಸರ್ವನಾಶವಾಗುವಳೋ ಎಂಬ ಚಿಂತೆ ಆವರಿಸಿತು. ಬುವಿಯ ಮೇಲೆ ಮಾನವ ಸೃಷ್ಟಿಯ ತ್ಯಾಜ್ಯದಿಂದ ಮಲಿನ ಮಾಡಿಯಾಯಿತು; ನಂತರದಲ್ಲಿ ಬಾಹ್ಯಾಕಾಶದಲ್ಲಿ ತ್ಯಾಜ್ಯಗಳ ಸುರಿಮಳೆಯಾಯಿತು, ಈಗ ಚಂದಿರನ ಸರದಿ. ಪೈಪೋಟಿಗೆ ಬಿದ್ದವರಂತೆ ಪರಮಾಣು ಸ್ಥಾವರಗಳನ್ನು ಚಂದಿರನ ಮೇಲೆ ಸ್ಥಾಪಿಸಬೇಕೆಂಬ ಜಿಜ್ಞಾಸೆ ಹುಟ್ಟಿದ್ದಾದರೂ ಏಕೆ? ಅದೆಷ್ಟೋ ಬಡರಾಷ್ಟ್ರಗಳು ಇನ್ನೂ ಅನ್ನ, ಅರಿವೆ, ವಸತಿ ಸೌಲಭ್ಯದಿಂದ ವಂಚಿತವಾಗಿವೆ. ಅವುಗಳ ಅಭಿವೃದ್ಧಿಯ ಚಿಂತನೆಯು ಮುಂದುವರಿದ ದೇಶಗಳ ನಾಯಕರಿಗೆ ಬಾರದಿರುವುದು ಸೋಜಿಗ.

ಪರಮೇಶ್ವರ ಜೆ.ಎಂ., ಸಂಡೂರು

ಕಾನೂನು ಕೈಗೆತ್ತಿಕೊಳ್ಳಬೇಡಿ



ನ್ಯಾಯಯುತ ಪ್ರಕ್ರಿಯೆ ಅನುಸರಿಸಿ. ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇರಲಿ. ನ್ಯಾಯ ಸಿಗುವ ಪ್ರಕ್ರಿಯೆ ದೀರ್ಘ ಹಾಗೂ ಕಠಿಣ ಹಾದಿಯಾದರೂ, ಕತ್ತಲ ಕಿಂಡಿಯ ಕೊನೆಯಲ್ಲಿ ಬೆಳಕು ಇರುತ್ತದೆ. ಕಾನೂನನ್ನು ನಿಮ್ಮ ಕೈಗೆತ್ತಿಕೊಳ್ಳಬೇಡಿ. ಎಲ್ಲಕ್ಕಿಂತ ಮುಖ್ಯವಾಗಿ ಸತ್ಯವಂತರಾಗಿರಿ.

ರಮ್ಯಾ, ನಟಿ, 'ಇನ್‌ಸ್ಟಾಗ್ರಾಮ್'ನಿಂದ

ಕಿಡಿನುಡಿ



ವೋಟಿಗೋಸ್ಕರ ನಮ್ಮ ದೇಶ, ಧರ್ಮ, ಸಂಸ್ಕೃತಿ, ಆತ್ಮಸಾಕ್ಷಿ ಏನನ್ನಾದರೂ ಮಾರಿಕೊಳ್ಳುವ ಕಾಂಗ್ರೆಸ್ ಪಕ್ಷಕ್ಕೆ ನಿಜಕ್ಕೂ ನಾಚಿಕೆಯಾಗಬೇಕಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 15-8-2000

- **ಹೆಚ್ಚುತ್ತಿರುವ ಅಪರಾಧ: ರಾಷ್ಟ್ರಪತಿ ಕಳವಳ**

ನವದೆಹಲಿ, ಆಗಸ್ಟ್ 14– ಅಪರಾಧಿಗಳು, ರಾಜಕಾರಣಿಗಳು ಮತ್ತು ಸಮಾಜದಲ್ಲಿ ಗಣ್ಯರೆನಿಸಿಕೊಂಡ ವ್ಯಕ್ತಿಗಳ ನಡುವೆ ಬೆಳೆಯುತ್ತಿರುವ 'ಅಪವಿತ್ರ ಮೈತ್ರಿ' ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ರಾಷ್ಟ್ರಪತಿ ಕೆ.ಆರ್. ನಾರಾಯಣನ್, ಅಪರಾಧ ಜಗತ್ತಿನ ದೊರೆಗಳನ್ನು ಹತ್ತಿಕ್ಕಲು ಸರ್ಕಾರ ತನ್ನ ಅಧಿಕಾರ ದಂಡವನ್ನು ಸಮರ್ಥ ರೀತಿಯಲ್ಲಿ ಪ್ರಯೋಗಿಸಬೇಕು ಎಂದು ಕರೆ ನೀಡಿದರು.

ಅಪರಾಧ ಜಗತ್ತಿನ ವಿರುದ್ಧ ನಾಗರಿಕ ಸಮಾಜ ಮತ್ತು ಸರ್ಕಾರ ಒಗ್ಗೂಡಿ ಹೋರಾಟ ನಡೆಸಬೇಕು. ಸಮಾಜದಲ್ಲಿ ದುಷ್ಟಶಕ್ತಿಗಳು ಆಧಿಪತ್ಯ ನಡೆಸಲು ಅವಕಾಶ ನೀಡಬಾರದು ಎಂದರು.

- **ಟಾಡಾ ಕೈದಿಗಳ ಬಿಡುಗಡೆಗೆ ವಿರೋಧ: ವಿಚಾರಣೆ ಮುಂದಕ್ಕೆ**

ಮೈಸೂರು, ಆಗಸ್ಟ್ 14– ಟಾಡಾ ಕೈದಿಗಳ ಬಿಡುಗಡೆ ಮಾಡುವ ಸರ್ಕಾರದ ನಿಲುವನ್ನು ಪ್ರಶ್ನಿಸಿ ವೀರಪ್ಪನ್‌ನಿಂದ ಹತ್ಯೆಯಾದ ಸಬ್‌ಇನ್‌ಸ್ಪೆಕ್ಟರ್ ಎಂ. ಶಕೀಲ್ ಅಹಮ್ಮದ್ ಅವರ ತಂದೆ ಅಬ್ದುಲ್ ಕರೀಮ್ ಅವರು, ಟಾಡಾ ಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದರಿಂದ ಇಂದು ನಡೆಯಬೇಕಾಗಿದ್ದ ಟಾಡಾ ಆರೋಪಗಳ ವಿಚಾರಣೆಯನ್ನು ನ್ಯಾಯಾಧೀಶರು ಮುಂದೂಡಿದ್ದಾರೆ.

75 ವರ್ಷಗಳ ಹಿಂದೆ


ಮಂಗಳವಾರ, 15-8-1950

- **ಸಕ್ಕರೆ ಕಾರ್ಖಾನೆ ಕೆಲಸ ಮತ್ತೆ ನಿಂತಿದೆ**

ಬೆಂಗಳೂರು, ಆಗಸ್ಟ್ 14– ಕಬ್ಬಿನ ಸರಬರಾಜು ಇಲ್ಲವಾಗಿ ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆ ಮತ್ತೆ ಕೆಲಸ ನಿಲ್ಲಿಸಿದೆ. ಕಳೆದ ತಿಂಗಳ ಮಧ್ಯ ಭಾಗದಲ್ಲಿ ಕಾರ್ಖಾನೆ ಕೆಲಸ ಪ್ರಾರಂಭಿಸಿದಾಗ 1948ರ ಕಬ್ಬಿನ ಬೆಳೆ ಸರಬರಾಜಾಗುತ್ತಿತ್ತು. ಕಾರ್ಖಾನೆಯು ಈ ಬೆಳೆಯನ್ನು, 1949ರ ಕೊಂಚ ಬೆಳೆಯನ್ನೂ ಮೂರು ವಾರಗಳಲ್ಲಿ ಅರೆದು ಮುಗಿಸಿತು.

ಗೌರಿಬಿದನೂರು ಮತ್ತು ಕುಣಿಗಲ್ ಮುಂತಾದ ಸಂಸ್ಥಾನದ ಇತರೆ ಪ್ರದೇಶಗಳಿಂದ ಕಬ್ಬನ್ನು ತರಿಸುವ ಯೋಚನೆ ಮಾಡಲಾಗುತ್ತಿದೆ.

ಚುರುಮುರಿ



ನಾಯಿಗಳ ಕತೆ!

• ಬಿ.ಎನ್. ಮಲ್ಲೇಶ್

'ಮದುವಿ ಆಗದೇ ಇರೋ ಎಲ್ರಿಗೂ ಸ್ವಾತಂತ್ರ್ಯ ದಿನದ ಶುಭಾಶಯಗಳು' ಎಂದ ತೆಪರೇಸಿ.

'ಅದು ಹಳೇ ಜೋಕು, ಹೊಸದೇನರೆ ಇದ್ರೆ ಹೇಳು' ಎಂದ ದುಬ್ಬೀರ.

'ಅಲೆ ಇವ್ನ, ನಂಗೆ ಗೊತ್ತಿದ್ದನ್ನ ಹೇಳಿದ್ನಪ, ಏನೀಗ?'

'ಗೊತ್ತಿದ್ದನ್ನ ಹೇಳಿದ್ರೆ ಒಂದೋ ಉಚ್ಚಾಟನೆ ಆಗ್ತೀಯ, ಇಲ್ಲ ಸಂಪುಟದಿಂದ ವಜಾ ಆಗ್ತೀಯ. ಯಾರಿಗೂ ಗೊತ್ತಿಲ್ಲದ್ದನ್ನ ಗುಟ್ಟಾಗಿ ಹೇಳಬೇಕು...' ಗುಡ್ಡೆ ಒಗಟಿನ ಮಾತಾಡಿದ.

'ಅಂದ್ರೇ ಮೊನ್ನೆ ಡಿಕೆಶಿ ಕಿವಿಯಲ್ಲಿ ಮೋದಿ ಸಾಹೇಬ್ರು ಏನೋ ಗುಟ್ಟಾಗಿ ಹೇಳ್ತಿದ್ರಲ್ಲ ಹಂಗಾ?' ಕೊಟ್ರೇಶಿ ಕೊಕ್ಕೆ.

'ಹೌದೂ... ಡಿಕೆಶಿ-ಮೋದಿ ಸಾಹೇಬ್ರು ಗುಟ್ಟಾಗಿ ಏನ್ ಮಾತಾಡಿರಬೋದು?' ಮಂಜಮ್ಮಗೆ ಕುತೂಹಲ.

'ಅದಾ... 'ಏನಪ್ಪ ಡಿ.ಕೆ, ನೀನು ಸಿ.ಎಂ ಆಗೋದು ಗ್ಯಾರಂಟಿನಾ' ಅಂತ ಮೋದಿ ಕೇಳ್ತಿರ್ತಾರೆ, 'ಪ್ರಾರ್ಥನೆ, ಪ್ರಯತ್ನ ಎರಡೂ ಮಾಡ್ತಿದೀನಿ ಸಾ, ನೋಡಬೇಕು' ಅಂತ ಡಿ.ಕೆ ಹೇಳ್ತಿರ್ತಾರೆ...'

'ಅಷ್ಟೇನಾ?'

'ನಿನ್ನ ಸಿ.ಎಂ ಮಾಡದಿದ್ರೆ ನಮ್ ಪಕ್ಷಕ್ಕೆ ಬಾ' ಅಂತ ಮೋದಿ ಕರೆದಿರ್ತಾರೆ, 'ಬ್ಯಾಡ ಸಾ, ಇಲ್ಲೇ ಅರ್ಧ ಗುಂಡಿ ತೋಡಿದೀನಿ, ಇನ್ನೇನ್ ನೀರು ಬರಬೋದು...' ಅಂತ ಡಿ.ಕೆ ಅಂದಿರ್ತಾರೆ...'

'ನೋ ಯೂಸ್, ಆ ವಿಷ್ಯ ಬಿಟ್ಟಾಕು. ಈಗ ಈ ನಾಯಿಗಳ ಕತೆ ಏನು? ಅವನ್ನಾಕೆ ಶೆಡ್‌ಗೆ ಕಳಿಸ್ಬೇಕು? ಬೊಗಳೋದು ನಾಯಿಗಳ ವಾಕ್ ಸ್ವಾತಂತ್ರ್ಯ ಅಲ್ವಾ?' ಗುಡ್ಡೆ ಕೇಳಿದ.

'ಬರೀ ಬೊಗಳಿದ್ರೆ ಓಕೆ, ಕಚ್ಚೋದು ಯಾಕೆ? ಅದ್ಕೇ ಈ ಶಿಕ್ಷೆ...'

'ಒಂದ್ ಐಡಿಯಾ ಮಾಡಬೋದಿತ್ತು. ನಾಯಿಗಳನ್ನ ಶೆಡ್‌ಗೆ ಹಾಕೋ ಬದ್ಲು ಎಸ್.ಐ.ಟಿ.ಯೋರಿಗೆ ಕೊಡಬೋದಿತ್ತು...'

'ಎಸ್.ಐ.ಟಿ. ಅವರಿಗಾ? ಯಾಕೆ?'

'ನಾಯಿಗಳು ಮೂಳೆ, ಬುರುಡೆ, ಅಸ್ಥಿಪಂಜರ ಹುಡುಕೋದ್ರಲ್ಲಿ ಎಕ್ಸ್‌ಪರ್ಟ್ ಅಲ್ವಾ? ಜೆಸಿಬಿಯಲ್ಲಿ ಆ ಪಾಯಿಂಟು, ಈ ಪಾಯಿಂಟು ಅಂತ ಕಂಡಕಂಡಲ್ಲಿ ಗುಂಡಿ ತೋಡೋದು ತಪ್ತಿತ್ತು!'

ತೆಪರೇಸಿ ಮಾತಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಖಾದಿ ರಾಷ್ಟ್ರಧ್ವಜ ಬೇಡವಾಯಿತೆ?

'ಖಾದಿ ರಾಷ್ಟ್ರಧ್ವಜ' ಸ್ವಾತಂತ್ರ್ಯ ಚಳವಳಿಯ ಕಥನದ ಹಿರಿಮೆಯನ್ನು ಸಾರುವ ಸಂಕೇತವಾಗಿತ್ತು. ಈಗ ಖಾದಿ ಧ್ವಜ ಅಸ್ತಿತ್ವ ಕಳೆದುಕೊಳ್ಳುವ ಆತಂಕದಲ್ಲಿದೆ.

• ರಾಹುಲ ಬೆಳಗಲಿ

ರಸ್ತೆಬದಿ ಬೈಕ್ ನಿಲ್ಲಿಸಿ, ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿರುವ ಯುವಕನ ಬಳಿ ಬಡ ವೃದ್ಧನೊಬ್ಬ ಬಂದು ಪುಟ್ಟದಾದ ರಾಷ್ಟ್ರಧ್ವಜ ಕೊಡಲು ಮುಂದಾಗುತ್ತಾನೆ. ಯುವಕ ನಿರಾಕರಿಸುತ್ತಾನೆ. ಕಿರಾಣಿ ಅಂಗಡಿಯೊಂದರಲ್ಲಿ ವಿವಿಧ ಆಕಾರದ ರಾಶಿಗಟ್ಟಲೆ ರಾಷ್ಟ್ರಧ್ವಜಗಳನ್ನು ಮಾರಾಟಕ್ಕೆ ಇಟ್ಟಿರುವುದು ಕಾಣಿಸುತ್ತದೆ. ಮನಸ್ಸು ಹಂಬಲಿಸಿದರೂ ಆತ ಅವುಗಳನ್ನು ಖರೀದಿಸುವುದಿಲ್ಲ. ಆತ ನೇರವಾಗಿ ಬೃಹತ್ ಸಮಾರಂಭವೊಂದು ಸಮಾರೋಪಗೊಂಡ ಸ್ಥಳಕ್ಕೆ ಬರುತ್ತಾನೆ. ಅಲ್ಲಿ ಮೈದಾನದ ಮೇಲೆ, ಮಣ್ಣಿನಡಿ ಅಲ್ಲಲ್ಲಿ ಬಿದ್ದ ಪುಟ್ಟ ರಾಷ್ಟ್ರಧ್ವಜಗಳನ್ನು ಕೈಗೆತ್ತಿಕೊಳ್ಳುತ್ತಾನೆ. ತನ್ನ ಬೆನ್ನ ಹಿಂದಿನ ಬ್ಯಾಗಿನಲ್ಲಿ ಜೋಪಾನವಾಗಿ ಇಟ್ಟುಕೊಳ್ಳುತ್ತಾನೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಈ ಜಾಹೀರಾತು, ಟಿ.ವಿ ವಾಹಿನಿಗಳಲ್ಲಿ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಆಗುತ್ತಿದೆ. ಇಡೀ ವಿಡಿಯೊದಲ್ಲಿ ಕಾಣಸಿಗುವುದು ಪ್ಲಾಸ್ಟಿಕ್ ರಾಷ್ಟ್ರಧ್ವಜ. ವಿಶಿಷ್ಟವಾದ ದಿನದ ಸಂದರ್ಭದಲ್ಲಿ ಪ್ಲಾಸ್ಟಿಕ್ ಹಾವಳಿ ಕಾಡದಿರಲಿ ಎಂಬ ಸಂದೇಶ ಜಾಹೀರಾತಿನಲ್ಲಿದೆ. ಪ್ಲಾಸ್ಟಿಕ್ ಧ್ವಜಗಳನ್ನು ಬಳಸಬೇಡಿ ಮತ್ತು ಪರಿಸರಕ್ಕೆ ಹಾನಿ ಉಂಟು ಮಾಡಬೇಡಿ ಎಂಬುದನ್ನು ಅದರಲ್ಲಿ ಬಹು ಸೂಕ್ಷ್ಮವಾಗಿ ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಬಹುತೇಕ ಕಾರ್ಯಕ್ರಮಗಳಲ್ಲಿ ವಿವಿಧ ಆಕಾರಗಳ ಮತ್ತು ಬಗೆಬಗೆಯ ಗುಣಮಟ್ಟದ ರಾಷ್ಟ್ರಧ್ವಜಗಳು ಬಳಕೆ ಆಗುತ್ತವೆ. ಹೆಚ್ಚಿನ ಧ್ವಜಗಳು ಪ್ಲಾಸ್ಟಿಕ್‌ನವು. ತೆಳುವಾದ ಬಟ್ಟೆ ಅಥವಾ ಕಾಗದದ ಧ್ವಜಗಳೂ ಇರುತ್ತವೆ. ಕೆಲವು ಕಡೆಯಂತೂ ಉದ್ದನೆಯ ತ್ರಿವರ್ಣ ಧ್ವಜವನ್ನು ತಲೆಯ ಮೇಲೆ ಇಟ್ಟುಕೊಂಡು, ಮನಸೋಇಚ್ಛೆ ಕೈಯಲ್ಲಿ ಹಿಡಿದು ಮೆರವಣಿಗೆ ಮಾಡಲಾಗುತ್ತದೆ. ಕಾರ್ಯಕ್ರಮದಲ್ಲಿ ಭಾವನಾತ್ಮಕವಾಗಿ ಪಾಲ್ಗೊಂಡರೂ ಮತ್ತು ಮನದುಂಬಿ ಸಂಭ್ರಮಿಸಿದರೂ ರಾಷ್ಟ್ರಧ್ವಜವನ್ನು ಸಮರ್ಪಕವಾಗಿ ಗೌರವಿಸದಿದ್ದರೆ, ಅದು ಧ್ವಜಸಂಹಿತೆಯ ಉಲ್ಲಂಘನೆ ಆಗುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳ ನಂತರವಾದರೂ ರಾಷ್ಟ್ರಧ್ವಜದ ಸಂಹಿತೆ ಮತ್ತು ಬಳಕೆ ಬಗ್ಗೆ ನಾವು ಇನ್ನಷ್ಟು ಜಾಗ್ರತೆ ವಹಿಸಬೇಕಿತ್ತು. 2002ರ ರಾಷ್ಟ್ರಧ್ವಜ ಸಂಹಿತೆಯಂತೆ, ಖಾದಿಯಿಂದ ಸಿದ್ಧವಾದ ರಾಷ್ಟ್ರಧ್ವಜಗಳ ಬಳಕೆಗೆ ಆದ್ಯತೆ ನೀಡಬೇಕಿತ್ತು. ಆದರೆ, 2022ರಲ್ಲಿ ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಭಾಗವಾಗಿ 'ಹರ್ ಘರ್ ತಿರಂಗಾ' ಅಭಿಯಾನದಡಿ ಕೇಂದ್ರ ಸರ್ಕಾರವು ಧ್ವಜ ಸಂಹಿತೆಗೆ ಮಾಡಿದ ತಿದ್ದುಪಡಿ ಹಲವು ಬದಲಾವಣೆಗೆ ಕಾರಣವಾಯಿತು. ರಾಷ್ಟ್ರಧ್ವಜ ಈಗ ಖಾದಿಯದ್ದೇ ಆಗಿರಬೇಕಿಲ್ಲ. ಯಂತ್ರದಿಂದ ಸಿದ್ಧವಾದ ಹತ್ತಿ, ಪಾಲಿಸ್ಟರ್, ಉಣ್ಣೆ ಅಥವಾ ರೇಷ್ಮೆ ಬಟ್ಟೆಯ ರಾಷ್ಟ್ರಧ್ವಜಗಳನ್ನು ಹಾರಿಸಬಹುದು ಎಂಬ ನಿಯಮ ತಂದಿತು. 'ಪ್ರತಿಯೊಂದು ಮನೆಯ ಮೇಲೂ ರಾಷ್ಟ್ರಧ್ವಜ ಹಾರಿಸಬೇಕು' ಎಂಬುದನ್ನು ಸಾರಿ ಹೇಳಿತು.



ಇದರ ನಂತರದಲ್ಲಿ ನಡೆದ ಬೆಳವಣಿಗೆಗಳು ಮತ್ತು ಆದ ಪರಿಣಾಮಗಳು ಅಷ್ಟಿಷ್ಟಲ್ಲ. 'ರಾಷ್ಟ್ರಧ್ವಜ ಖರೀದಿಸಬೇಕು, ಪ್ರದರ್ಶಿಸಬೇಕು ಮತ್ತು ಹಾರಿಸಬೇಕು ಅಷ್ಟೇ' ಎಂಬ ಮನೋಭಾವ ಗಾಢವಾಗಿ ಬೇರೂರಿತು. ಧ್ವಜವು ಗುಣಮಟ್ಟದಿಂದ ಕೂಡಿದೆಯೇ ಇಲ್ಲವೇ ಎಂಬುದನ್ನು ಅರಿಯದೇ, ಹಟಕ್ಕೆ ಬಿದ್ದಂತೆ ದೇಶಭಕ್ತಿ ಪ್ರದರ್ಶಿಸುವುದು ಆದ್ಯತೆ ಪಡೆಯಿತು. ಕಡಿಮೆ ದರದಲ್ಲಿ ಸಿಗುವ ಧ್ವಜವನ್ನು ಪ್ರದರ್ಶಿಸಿ ಅಥವಾ ಹಾರಿಸಿ ಸ್ವಾತಂತ್ರ್ಯ ದಿನ ಆಚರಿಸಿದರೆ ಸಾಕು ಎಂಬ ಭಾವನೆ ಮೂಡಿತು.


ನಾವೆಲ್ಲ ಗೌರವಿಸಬೇಕಾದ ರಾಷ್ಟ್ರಧ್ವಜಕ್ಕೆ ಒದಗಿರುವ ಸ್ಥಿತಿ ಎಂತಹದ್ದು ಎಂಬುದಕ್ಕೆ ಧಾರವಾಡ ಜಿಲ್ಲೆಯ ಗರಗ ಕ್ಷೇತ್ರೀಯ ಸೇವಾ ಸಂಘ ಮತ್ತು ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘಕ್ಕೆ ಭೇಟಿ ನೀಡಿದರೆ ಸ್ಪಷ್ಟವಾಗುತ್ತದೆ. ಇಡೀ ದೇಶಕ್ಕೆ ರಾಷ್ಟ್ರಧ್ವಜಗಳನ್ನು ಪೂರೈಸುವ ಈ ಎರಡೂ ಸಂಘಗಳಲ್ಲಿ ನಿರಾಸೆಯ ನೆರಳು ಆವರಿಸಿದೆ. ಶುದ್ಧವಾದ ಖಾದಿಯಿಂದ ಮತ್ತು ಭಾರತೀಯ ಪ್ರಮಾಣೀಕರಣ ಸಂಸ್ಥೆಯಿಂದ (ಬಿಐಎಸ್) ಪ್ರಮಾಣೀಕೃತಗೊಂಡು ತಯಾರಿಸಲಾಗುವ ಖಾದಿ ರಾಷ್ಟ್ರಧ್ವಜಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಆದರೆ, ಮೂರು ವರ್ಷಗಳಿಂದ ಅವುಗಳನ್ನು ಕೇಳುವವರೇ ಇಲ್ಲ.

ಜೂನ್, ಜುಲೈ ವೇಳೆಗೆ ಸಿದ್ಧಗೊಂಡು, ಆಗಸ್ಟ್ ತಿಂಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಾಷ್ಟ್ರಧ್ವಜಗಳು ನವದೆಹಲಿ ಸೇರಿದಂತೆ ವಿವಿಧ ರಾಜ್ಯಗಳಿಗೆ ರವಾನೆ ಆಗುತ್ತಿದ್ದವು. ವಿವಿಧ ರಾಜ್ಯಗಳ ಸರ್ಕಾರದಿಂದ ಮತ್ತು ಇಲಾಖೆಗಳಿಂದ ಅಲ್ಲದೇ, ವಿವಿಧ ಖಾಸಗಿ ಸಂಸ್ಥೆಗಳಿಂದಲೂ ಬೇಡಿಕೆ ವ್ಯಕ್ತವಾಗುತಿತ್ತು. ವರ್ಷಪೂರ್ತಿ ಕೆಲಸ ಮಾಡಿ, ರಾಷ್ಟ್ರಧ್ವಜಗಳನ್ನು ಸಿದ್ಧಪಡಿಸಿದರೂ ಬೇಡಿಕೆ ನೀಗಿಸಲು ಹರಸಾಹಸ ಪಡಬೇಕಿತ್ತು. ಆದರೆ, ಮೂರು ವರ್ಷಗಳಿಂದ ಖಾದಿ ರಾಷ್ಟ್ರಧ್ವಜಗಳಿಗೆ ಬೇಡಿಕೆ ಕುಸಿದಿದೆ.

ವಿವಿಧ ಆಕಾರಗಳ ರಾಷ್ಟ್ರಧ್ವಜಗಳ ಟನ್‌ಗಟ್ಟಲೆ ಸಂಗ್ರಹವಿದೆ. ಆದರೆ, ಅವುಗಳ ಬಳಕೆಗೆ ಯಾರೂ ಆಸಕ್ತಿ ತೋರುತ್ತಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ, ಖಾದಿ ರಾಷ್ಟ್ರಧ್ವಜ ತನ್ನ ಗರಿಮೆ, ಮಹತ್ವ ಮತ್ತು ಮೌಲ್ಯ ಕಳೆದುಕೊಳ್ಳುವುದಂತೂ ನಿಶ್ಚಿತ ಎಂಬ ಆತಂಕ ಸಂಘದ ಸದಸ್ಯರದು.

ಖಾದಿ ಸ್ವಾತಂತ್ರ್ಯ ಹೋರಾಟದ ಅಂತರ್ಜಲವಾಗಿತ್ತು. ಖಾದಿ ಬಟ್ಟೆ ಉತ್ಪನ್ನ ಮತ್ತು ಬಳಕೆ ಹೆಮ್ಮೆಯ ವಿಷಯ ಆಗಿತ್ತು. ದಶಕಗಳು ಕಳೆದಂತೆ ಖಾದಿಯ ರಾಷ್ಟ್ರಧ್ವಜವು ಅಭಿಮಾನದ ಪ್ರತೀಕ ಆಗಬೇಕಿತ್ತು. ಆದರೆ...

ಉಕ್ರೇನ್ ಯುದ್ಧ ಪ್ರಮುಖ ವಿಷಯ; ಶಸ್ತ್ರಾಸ್ತ್ರ ಖರೀದಿ, ಆರ್ಥಿಕ ವಿಚಾರಗಳ ಬಗ್ಗೆಯೂ ಚರ್ಚೆ ಸಾಧ್ಯತೆ



ಬೆದರಿಕೆ, ನಿರೀಕ್ಷೆ ನಡುವೆ ಪುಟಿನ್–ಟ್ರಂಪ್ ಮಾತುಕತೆ




ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಅಮೆರಿಕದ ಅಲಾಸ್ಕದಲ್ಲಿ ಶುಕ್ರವಾರ ಭೇಟಿಯಾಗುತ್ತಿದ್ದಾರೆ. ಉಕ್ರೇನ್–ರಷ್ಯಾ ಯುದ್ಧವೇ ಮಾತುಕತೆಯ ಮುಖ್ಯ ವಿಷಯವಾಗಿದ್ದು, ಪ್ರಸ್ತುತ ಇಬ್ಬರೂ ನಾಯಕರು ಈ ಬಗ್ಗೆ ಪರಸ್ಪರ ವಿರುದ್ಧ ದಿಕ್ಕಿನಲ್ಲಿದ್ದಾರೆ. ತಮ್ಮ ಬೇಡಿಕೆಗಳನ್ನು ಒಪ್ಪದಿದ್ದರೆ ಉಕ್ರೇನ್ ಮೇಲೆ ಜಯ ಸಾಧಿಸಿಯೇ ತೀರುವ ಪಣವನ್ನು ಪುಟಿನ್ ತೊಟ್ಟಿದ್ದರೆ, ಯುದ್ಧವನ್ನು ನಿಲ್ಲಿಸಿ ತನ್ನ 'ಜಾಗತಿಕ ನಾಯಕ'ನ ಪ್ರಭಾವ ಹೆಚ್ಚಿಸಿಕೊಳ್ಳುವ ಉಮೇದು ಡೊನಾಲ್ಡ್ ಟ್ರಂಪ್ ಅವರದ್ದಾಗಿದೆ

ಪ್ರಜಾವಾಣಿ ವಾರ್ತೆ

ಜಾಗತಿಕ ಮಟ್ಟದಲ್ಲಿ ಮಾತುಕತೆಗಳನ್ನು ನಡೆಸುವುದರಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅವರದ್ದೇ ಆದ ವಿಶಿಷ್ಟ ಶೈಲಿ ಇದೆ. ಕಾರ್ಯಸಾಧನೆಗಾಗಿ ಅವರು ಇತರೆ ರಾಷ್ಟ್ರಗಳಿಗೆ ಬೆದರಿಕೆಯನ್ನೂ ಹಾಕಬಲ್ಲರು, ಅಗತ್ಯವೆನಿಸಿದರೆ ಕೊಂಡಾಡಲೂ ಬಲ್ಲರು. ಉಕ್ರೇನ್ ವಿರುದ್ಧದ ಯುದ್ಧವನ್ನು ಕೊನೆಗೊಳಿಸದಿದ್ದರೆ, ರಷ್ಯಾ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಒಡ್ಡುವ ಮೂಲಕ ಟ್ರಂಪ್ ಅವರು ಈಗಾಗಲೇ ಮಾತುಕತೆಗೆ 'ವೇದಿಕೆ'ಯನ್ನೂ ಸಜ್ಜುಗೊಳಿಸಿದ್ದಾರೆ.

ಉಕ್ರೇನ್ ಜತೆಗೆ ಯುದ್ಧ ಆರಂಭಿಸಿದ ದಿನದಿಂದ ಪುಟಿನ್ ಅವರನ್ನು ಏಕಾಂಗಿಯನ್ನಾಗಿಸಲು ಪಶ್ಚಿಮದ ರಾಷ್ಟ್ರಗಳು ಪ್ರಯತ್ನಿಸುತ್ತಲೇ ಇವೆ. ಆದರೂ ಯಶಸ್ಸು ಸಿಕ್ಕಿಲ್ಲ. ಅಲಾಸ್ಕಾದಲ್ಲಿ ಸಭೆ ನಡೆಸಿದ ನಂತರ ಜಂಟಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಇಬ್ಬರೂ ನಾಯಕರು ಮಾತನಾಡಲಿದ್ದಾರೆ. 'ವಿಶ್ವದ ದೊಡ್ಡಣ್ಣ'ನೊಂದಿಗೆ ವೇದಿಕೆ ಹಂಚಿಕೊಳ್ಳುವ ಮೂಲಕ ರಷ್ಯಾವನ್ನು ಮತ್ತೆ ಜಾಗತಿಕ ಮಟ್ಟದಲ್ಲಿ ಮುನ್ನೆಲೆಗೆ ತರುವುದು ಪುಟಿನ್ ಲೆಕ್ಕಾಚಾರ. ಈ ಮಾತುಕತೆಯ ಮೂಲಕ ರಷ್ಯಾ ಮತ್ತೆ ಜಾಗತಿಕ ರಾಜಕಾರಣದಲ್ಲಿ ಮಹತ್ವದ ಸ್ಥಾನ ಪಡೆಯಬಹುದು ಎನ್ನುವ ನಿರೀಕ್ಷೆ ಅವರಲ್ಲಿದೆ.

ಅಲಾಸ್ಕಗೆ ಇದೆ ಮಹತ್ವ: ಸಭೆ ನಡೆಯುತ್ತಿರುವ ಸ್ಥಳವೂ ಮಹತ್ವ ಪಡೆದಿದೆ. ಸಭೆಯು ಅಲಾಸ್ಕದ ಆಂಕರೇಜ್ ನಗರದ ಎಲ್ಮೆನ್‌ಡೋರ್ಫ್–ರಿಚರ್ಡ್‌ಸನ್ ಜಂಟಿ ಸೇನಾ ನೆಲೆಯಲ್ಲಿ ನಡೆಯಲಿದೆ. ಅದು ರಷ್ಯಾದ ಚುಕೊಟ್ಕಾದಿಂದ ಕೇವಲ 90 ಕಿ.ಮೀ. ದೂರ ಇದ್ದು, ತನ್ನ ವಿರೋಧಿ ರಾಷ್ಟ್ರಗಳ ವ್ಯಾಪ್ತಿಯಲ್ಲಿ ಹಾರದೆಯೇ ಪುಟಿನ್ ಅಲ್ಲಿಗೆ ತಲುಪಬಹುದಾಗಿದೆ. ಜತೆಗೆ, ಅದು ಉಕ್ರೇನ್ ಮತ್ತು ಯುರೋಪ್‌ನಿಂದ ಬಹಳ ದೂರ ಇದೆ. ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಮತ್ತು ಐರೋಪ್ಯ ಒಕ್ಕೂಟದ ಮುಖಂಡರನ್ನು ದೂರವಿಟ್ಟು, ಅಮೆರಿಕದೊಂದಿಗೆ ನೇರವಾಗಿ ಮಾತುಕತೆ ನಡೆಸುವ ರಷ್ಯಾದ ಬಯಕೆಗೆ ತಕ್ಕಂತೆ ಸ್ಥಳವನ್ನು ಆಯ್ಕೆ ಮಾಡಲಾಗಿದೆ.



ಅಲಾಸ್ಕವು 19ನೇ ಶತಮಾನದ ಮಧ್ಯದವರೆಗೂ ರಷ್ಯಾಕ್ಕೆ ಸೇರಿತ್ತು. 1867ರಲ್ಲಿ ಅದನ್ನು ಅಮೆರಿಕಕ್ಕೆ ಮಾರಾಟ ಮಾಡಲಾಗಿತ್ತು; ಅದು ಕೂಡ ಅತ್ಯಂತ ಕಡಿಮೆ ಬೆಲೆಯಲ್ಲಿ. ಆ ಕಾಲಕ್ಕೆ 72 ಲಕ್ಷ ಡಾಲರ್ (ಈಗಿನ ಮೌಲ್ಯ 16 ಕೋಟಿ ಡಾಲರ್ ಅಂದರೆ ₹1,400 ಕೋಟಿ) ನೀಡಿ ಅಮೆರಿಕ ಖರೀದಿ ಮಾಡಿತ್ತು. ಅದೀಗ ಅಮೆರಿಕದ ಅತಿ ದೊಡ್ಡ ರಾಜ್ಯ. ಅಮೆರಿಕಕ್ಕೆ ಮಾರಾಟ ಮಾಡಿದ ಬಳಿಕ ಅಲಾಸ್ಕಕ್ಕೆ ಭೇಟಿ ನೀಡುತ್ತಿರುವ ರಷ್ಯಾದ ಮೊದಲ ಅಧ್ಯಕ್ಷ ಪುಟಿನ್.

ಒಂದು ದೇಶದ ಒಂದು ಭಾಗವು ಕಾಲಾಂತರದಲ್ಲಿ ಇನ್ನೊಂದು ದೇಶಕ್ಕೆ ಸೇರಬಹುದು ಎನ್ನುವುದನ್ನು ಅಲಾಸ್ಕ ಸಂಕೇತಿಸುತ್ತದೆ. ಇದೇ ರೀತಿ, ಉಕ್ರೇನ್‌ನ ನಾಲ್ಕು ಪ್ರಾಂತ್ಯಗಳನ್ನು ವಶಕ್ಕೆ ಪಡೆದಿರುವ ರಷ್ಯಾ, ಆ ಪ್ರಾಂತ್ಯಗಳು ತನಗೇ ಬೇಕು ಎಂದು ಪಟ್ಟು ಹಿಡಿದಿದೆ. ಆದರೆ, ಉಕ್ರೇನ್ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ. ಈ ವಿಚಾರದ ಬಗ್ಗೆಯೂ ಮಾತುಕತೆ ನಡೆಯಲಿದೆ.

ಈ ವಿಚಾರದಲ್ಲಿ ಟ್ರಂಪ್ ಅವರ ಬೆಂಬಲ ಪಡೆಯುವಲ್ಲಿ ರಷ್ಯಾ ಒಂದು ವೇಳೆ ಯಶಸ್ವಿಯಾದರೂ ಉಕ್ರೇನ್ ಅದಕ್ಕೆ ಸಮ್ಮತಿಸುವುದು ಅನುಮಾನ. ಆಗ ಅಮೆರಿಕವು ಉಕ್ರೇನ್ ಅನ್ನು ಬೆಂಬಲಿಸುವುದರಿಂದ ಹಿಂದೆ ಸರಿಯುತ್ತದೆ. ನಂತರ ರಷ್ಯಾ ಅಮೆರಿಕದೊಂದಿಗೆ ಆರ್ಥಿಕ ಸಹಕಾರವೂ ಸೇರಿದಂತೆ ಸಂಬಂಧ ವೃದ್ಧಿಗೆ ಪ್ರಯತ್ನಿಸಬಹುದು ಎನ್ನುವುದು ಪುಟಿನ್ ಲೆಕ್ಕಾಚಾರ ಎನ್ನಲಾಗಿದೆ.

ಯುದ್ಧ ನಿಲ್ಲಿಸುವುದೇ ರಷ್ಯಾ?: ಇನ್ನೊಂದು ಸಾಧ್ಯತೆಯ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಪ್ರಸ್ತುತ, ರಷ್ಯಾದ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಬಜೆಟ್‌ನ ಕೊರತೆ ಹೆಚ್ಚಾಗುತ್ತಿದ್ದು, ಇಂಧನ ಮತ್ತು ಅನಿಲದ ರಫ್ತಿನ ಆದಾಯವೂ ಕುಸಿಯುತ್ತಿದೆ. ಈ ದಿಸೆಯಲ್ಲಿ ಪುಟಿನ್ ಅವರು ಯುದ್ಧ ಅಂತ್ಯ ಮಾಡುವುದಕ್ಕೆ ಸಮ್ಮತಿಸಲೂಬಹುದು. ಆದರೆ, ಇದು ಅತ್ಯಂತ ಕ್ಷೀಣ ಸಾಧ್ಯತೆ ಎನ್ನಲಾಗುತ್ತಿದೆ.

ಈ ಮಾತುಕತೆಯಿಂದ ಉಕ್ರೇನ್ ದೂರ ಉಳಿದಿದೆ. ಪುಟಿನ್ ಜತೆಗಿನ ಮಾತುಕತೆ ಯಶಸ್ವಿಯಾದರೆ, ಅದರ ಹಿಂದೆಯೇ ಝೆಲೆನ್‌ಸ್ಕಿ ಅವರನ್ನೂ ಕೂರಿಸಿಕೊಂಡು ಮಾತುಕತೆ ನಡೆಸಲಾಗುವುದು ಎಂದು ಟ್ರಂಪ್ ಹೇಳಿದ್ದರು. ನಂತರ ತಮ್ಮ ಮಾತನ್ನು ಬದಲಾಯಿಸಿರುವ ಅವರು, ಎರಡನೇ ಸುತ್ತಿನ ಮಾತುಕತೆ ಇರುವುದಿಲ್ಲ ಎಂದಿದ್ದಾರೆ.

ರಷ್ಯಾ ಮತ್ತು ಅಮೆರಿಕ ವಿರುದ್ಧ ಧ್ರುವಗಳಲ್ಲಿರುವ ರಾಷ್ಟ್ರಗಳು. ಇಷ್ಟಾದರೂ ಪುಟಿನ್ ಅವರ ಬಗ್ಗೆ ಟ್ರಂಪ್ ಅವರಿಗೆ ಮೊದಲಿನಿಂದಲೂ ಮೃದು ಧೋರಣೆ ಇದೆ. ರಷ್ಯಾ–ಉಕ್ರೇನ್ ಯುದ್ಧದ ಜತೆಗೆ ಶಸ್ತ್ರಾಸ್ತ್ರ ಖರೀದಿಯ ಬಗ್ಗೆಯೂ ಮಾತುಕತೆ ನಡೆಯಲಿದೆ ಎನ್ನುವ ಸುದ್ದಿ ಇದೆ.


ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್

ರಷ್ಯಾ ಬೇಡಿಕೆಗಳೇನು?

ಉಕ್ರೇನ್ ಜೊತೆ ಗಡಿ ಹಂಚಿಕೊಂಡಿರುವ ರಷ್ಯಾವು ಉಕ್ರೇನ್‌ನ ಪೂರ್ವಕ್ಕಿರುವ ಹಲವು ಪ್ರದೇಶಗಳನ್ನು ತನ್ನದೆಂದು ವಾದಿಸುತ್ತಿದೆ. ಪ್ರಸ್ತುತ ಅದು ಉಕ್ರೇನ್‌ನ ಶೇ 19ರಷ್ಟು ಭೂಮಿಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದೆ. ಕ್ರಿಮಿಯಾ, ಲುಹಾನ್‌ಸ್ಕ್ ಪ್ರಾಂತ್ಯಗಳ ಮೇಲೆ ಸಂಪೂರ್ಣ ಹಿಡಿತ ಹೊಂದಿದೆ. ಡೊನೆಟ್‌ಸ್ಕ್, ಝಪೊರಿಝ್ಯಾ ಮತ್ತು ಖೆರ್ಸನ್ ಪ್ರಾಂತ್ಯಗಳ ಶೇ 70ರಷ್ಟು ಭೂಭಾಗವನ್ನು ಆಕ್ರಮಿಸಿಕೊಂಡಿದೆ. ಹಾರ್ಕಿವ್, ಸುಮಿ, ಮೈಕೊಲೈವ್ ಮತ್ತು ನಿಪ್ರೊಪೆಟ್ರೊವ್‌ಸ್ಕ್ ಪ್ರಾಂತ್ಯಗಳ ಕೆಲವು ಭೂಭಾಗಗಳ ಮೇಲೆ ನಿಯಂತ್ರಣ ಸಾಧಿಸಿದೆ. ಈಗ ನಡೆಯುತ್ತಿರುವ ಯುದ್ಧದ ಸಂದರ್ಭದಲ್ಲೂ ರಷ್ಯಾ ಪಡೆಗಳು ಹಂತ ಹಂತವಾಗಿ ಉಕ್ರೇನ್‌ನ ವಿವಿಧ ಜನ ವಸತಿ ಹಾಗೂ ಇತರ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸುತ್ತಾ ಬಂದಿವೆ.

ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಮಾತುಕತೆ, ಕದನ ವಿರಾಮದ ಪ್ರಸ್ತಾಪವಾದಗಲ್ಲೆಲ್ಲಾ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ನಾಲ್ಕು ಬೇಡಿಕೆಗಳನ್ನು ಮುಂದಿಡುತ್ತಾ ಬಂದಿದ್ದಾರೆ.

1. ರಷ್ಯಾ ನಿಯಂತ್ರಣದಲ್ಲಿರುವ ಪ್ರದೇಶಗಳು ಮತ್ತು ಅದು ತನ್ನದೆಂದು ಹೇಳಿಕೊಳ್ಳುವ ಉಕ್ರೇನ್‌ನ ಭೂಭಾಗವನ್ನು ತನಗೆ ನೀಡಬೇಕು
2. ಉಕ್ರೇನ್‌ಗೆ ಪಶ್ಚಿಮದ ರಾಷ್ಟ್ರಗಳು ನೀಡುತ್ತಿರುವ ನೆರವನ್ನು ನಿಲ್ಲಿಸಬೇಕು
3. ಉಕ್ರೇನ್ ಯಾವುದೇ ಕಾರಣಕ್ಕೂ ನ್ಯಾಟೊ ರಾಷ್ಟ್ರಗಳ ಗುಂಪಿಗೆ ಸೇರಬಾರದು. ನ್ಯಾಟೊ ಕೂಡ ಉಕ್ರೇನ್‌ಗೆ ಆಹ್ವಾನ ನೀಡಬಾರದು
4. ಉಕ್ರೇನ್‌ನಲ್ಲಿ ನಾಯಕತ್ವ ಬದಲಾವಣೆಯಾಗಬೇಕು



ಭಾರತದ ಮೇಲೆ ಪರಿಣಾಮ

ಈ ಮಾತುಕತೆಯಿಂದ ಭಾರತದ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗಬಹುದು ಎನ್ನುವ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಭಾರತದ ವಸ್ತುಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸಿದೆ. ರಷ್ಯಾದಿಂದ ತೈಲ ಮತ್ತು ಶಸ್ತ್ರಾಸ್ತ್ರ ಖರೀದಿ ಮಾಡುತ್ತಿರುವುದರಿಂದ ಇತ್ತೀಚೆಗಷ್ಟೇ ಅಮೆರಿಕ ಭಾರತದ ಮೇಲಿನ ಸುಂಕ ಹೆಚ್ಚಿಸಿತ್ತು. ಟ್ರಂಪ್–ಪುಟಿನ್ ಮಾತುಕತೆ ಏನಾದರೂ ವಿಫಲವಾದರೆ, ಅಮೆರಿಕವು ಭಾರತದ ಮೇಲೆ ಮತ್ತಷ್ಟು ಸುಂಕ ಹೇರಲಿದೆ ಎಂದು ಅಮೆರಿಕ ಹೇಳಿದೆ.

ವಿಫಲವಾದರೆ ಟ್ರಂಪ್‌ಗೆ ಮುಖಭಂಗ

ಮೇನಲ್ಲಿ ನಡೆದಿದ್ದ ಭಾರತ ಮತ್ತು ಪಾಕಿಸ್ತಾನದ ನಡುವಿನ ಸೇನಾ ಸಂಘರ್ಷವೂ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ನಡುವಿನ ಯುದ್ಧಗಳನ್ನು ನಿಲ್ಲಿಸಿದ್ದೇನೆ ಎಂದು ಹೇಳಿಕೊಳ್ಳುತ್ತಿರುವ ಡೊನಾಲ್ಡ್ ಟ್ರಂಪ್ ಚುನಾವಣೆಗೂ ಮುನ್ನವೇ, ರಷ್ಯಾ–ಉಕ್ರೇನ್ ಯುದ್ಧವನ್ನು ನಿಲ್ಲಿಸುವುದಾಗಿ ಹೇಳುತ್ತಾ ಬಂದಿದ್ದರು. ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರವೂ ಎರಡೂ ರಾಷ್ಟ್ರಗಳ ನಡುವೆ ಕದನ ವಿರಾಮ ಒಪ್ಪಂದಕ್ಕೆ ಇನ್ನಿಲ್ಲದ ಪ್ರಯತ್ನ ಪಟ್ಟಿದ್ದರು. ಆದರೆ, ರಷ್ಯಾ ಒಪ್ಪದೇ ಇದ್ದುದರಿಂದ ಆ ಪ್ರಯತ್ನಗಳು ವಿಫಲವಾಗಿದ್ದವು. ಇದು ಟ್ರಂಪ್ ಅವರನ್ನು ಕೆರಳಿಸಿತ್ತು. ರಷ್ಯಾದ ಮೇಲೆ ಮತ್ತಷ್ಟು ನಿರ್ಬಂಧಗಳನ್ನು ಅವರು ಹೇರಿದ್ದರು. ಆರಂಭದಿಂದಲೂ ಉಕ್ರೇನ್‌ಗೆ ಸೇನಾ ನೆರವು ನೀಡುತ್ತಾ ಬಂದಿರುವ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಿಗೂ ಯುದ್ಧ ನಿಲ್ಲುವುದು ಬೇಕಾಗಿದೆ. ಆದರೆ, ರಷ್ಯಾ ಒಪ್ಪದಿರುವುದರಿಂದ ಯುದ್ಧ ನಿಲ್ಲುತ್ತಿಲ್ಲ. ಈಗ ಮತ್ತೆ ಟ್ರಂಪ್ ಅವರು ನೇರವಾಗಿ ರಷ್ಯಾದೊಂದಿಗೆ ಮಾತುಕತೆ ನಡೆಸುವ ಮೂಲಕ ಯುದ್ಧವನ್ನು ನಿಲ್ಲಿಸುವ ಪ್ರಯತ್ನ ನಡೆಸಲಿದ್ದಾರೆ. ನೊಬೆಲ್ ಶಾಂತಿ ಪುರಸ್ಕಾರದ ಮೇಲೆ ಕಣ್ಣಿಟ್ಟಿರುವ ಟ್ರಂಪ್ ಅವರೇ ಮಾತುಕತೆಗೆ ವೇದಿಕೆ ಸಿದ್ಧಪಡಿಸಿದ್ದು, ಒಂದು ವೇಳೆ ಮುರಿದು ಬಿದ್ದರೆ ಜಾಗತಿಕ ಮಟ್ಟದಲ್ಲಿ ಅವರಿಗೆ ಮುಖಭಂಗವಾಗಲಿದೆ ಎಂದು ಹೇಳಲಾಗುತ್ತಿದೆ.

ಉಕ್ರೇನ್ ನಿಲುವೇನು?

ಮೂರೂವರೆ ವರ್ಷಗಳಿಂದ ಯುದ್ಧ ನಡೆಯುತ್ತಿದ್ದರೂ ಪುಟ್ಟ ರಾಷ್ಟ್ರ ಉಕ್ರೇನ್, ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ನೆರವಿನಿಂದ ರಷ್ಯಾ ದಾಳಿಯನ್ನು ಸಮರ್ಥವಾಗಿ ಎದುರಿಸುತ್ತಿದೆ. ರಷ್ಯಾದೊಂದಿಗೆ ಶಾಂತಿ ಮಾತುಕತೆ ಮತ್ತು ಕದನ ವಿರಾಮಕ್ಕೆ ಸಿದ್ಧವಿರುವುದಾಗಿ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದರೂ, ರಷ್ಯಾ ಬೇಡಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ. ಉಕ್ರೇನ್‌ಗೆ ಸೇರಿದ ಭೂಭಾಗವನ್ನು ರಷ್ಯಾಕ್ಕೆ ಯಾವುದೇ ಕಾರಣಕ್ಕೂ ಬಿಟ್ಟುಕೊಡಲಾರೆವು ಎಂದು ಖಂಡತುಂಡವಾಗಿ ಹೇಳಿದ್ದಾರೆ. ಕದನ ವಿರಾಮ ಒಪ್ಪಂದ ನಡೆಯಬೇಕಾದರೆ ಉಕ್ರೇನ್ ಹಿಡಿತದಲ್ಲಿರುವ ಡೊನೆಟ್‌ಸ್ಕ್ ಪ್ರಾಂತ್ಯದ ಶೇ 30ರಷ್ಟು ಭೂಪ್ರದೇಶವನ್ನು ರಷ್ಯಾಕ್ಕೆ ನೀಡಬೇಕು ಎಂದು ಪುಟಿನ್ ಹಾಕಿರುವ ಷರತ್ತನ್ನು ಝೆಲೆನ್‌ಸ್ಕಿ ತಳ್ಳಿಹಾಕಿದ್ದಾರೆ. ಅಲ್ಲದೇ, ಯಾವುದೇ ಶಾಂತಿ ಅಥವಾ ಕದನ ವಿರಾಮ ಮಾತುಕತೆಯಲ್ಲಿ ಉಕ್ರೇನ್ ಭಾಗವಾಗದಿದ್ದರೆ, ಅಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಅವರು ಈ ಹಿಂದೆಯೇ ಹೇಳಿದ್ದರು.



ಝೆಲೆನ್‌ಸ್ಕಿ

ರಾಷ್ಟ್ರೀಯ

'ಶುಭಾಂಶು ಶುಕ್ಲಾ ವಾರಾಂತ್ಯದಲ್ಲಿ ಭಾರತಕ್ಕೆ'

ನವದೆಹಲಿ (ಪಿಟಿಐ): ಗಗನಯಾನಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಈ ವಾರಾಂತ್ಯದಲ್ಲಿ ಭಾರತಕ್ಕೆ ಮರಳುವ ನಿರೀಕ್ಷೆಯಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗುರುವಾರ ತಿಳಿಸಿದ್ದಾರೆ.

ಶುಕ್ಲಾ ಅವರು ಬಾಹ್ಯಾಕಾಶಕ್ಕೆ ಪ್ರಯಾಣ ಬೆಳೆಸಿದ ಎರಡನೇ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಭೇಟಿ ನೀಡಿದ ಮೊದಲ ಭಾರತೀಯರಾಗಿದ್ದಾರೆ.

ತಮ್ಮ ಕುಟುಂಬದ ಭೇಟಿಗಾಗಿ ಹುಟ್ಟೂರು ಲಖನೌಗೆ ತೆರಳುವುದಕ್ಕೂ ಮೊದಲು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡುವ ಸಾಧ್ಯತೆಯಿದೆ. ಆಗಸ್ಟ್ 23ರಂದು ದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಜೂನ್ 25ರಂದು ಫ್ಲಾರಿಡಾದಿಂದ ಉಡಾವಣೆಗೊಂಡು ಜೂನ್ 26ರಂದು ಐಎಸ್‌ಎಸ್‌ಗೆ ತಲುಪಿದ ಆ್ಯಕ್ಸಿಯಂ 4 ಬಾಹ್ಯಾಕಾಶ ಕಾರ್ಯಾಚರಣೆಯಲ್ಲಿ ಶುಕ್ಲಾ ಇದ್ದರು. 18 ದಿನ ಅಲ್ಲಿದ್ದ ಅವರು 60ಕ್ಕೂ ಹೆಚ್ಚು ಪ್ರಯೋಗಗಳನ್ನು ಕೈಗೊಂಡಿದ್ದರು.



ಶುಭಾಂಶು ಶುಕ್ಲಾ

ಛತ್ತೀಸಗಢ: ನಕ್ಸಲ್ ಪೀಡಿತ 14 ಗ್ರಾಮಗಳಲ್ಲಿ ಧ್ವಜಾರೋಹಣ



ರಾಯಪುರ (ಪಿಟಿಐ): ಛತ್ತೀಸಗಢದ ನಕ್ಸಲ್ ಪೀಡಿತ ಬಸ್ತರ್ ವಲಯದ 14 ಕುಗ್ರಾಮಗಳಲ್ಲಿ ಇದೇ ಮೊದಲ ಬಾರಿಗೆ ಶುಕ್ರವಾರ ಧ್ವಜಾರೋಹಣ ನಡೆಯಲಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಇದೇ ಮೊದಲ ಬಾರಿಗೆ ಈ ಗ್ರಾಮಗಳ ಜನರು ತ್ರಿವರ್ಣ ಧ್ವಜಾರೋಹಣವನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಈ ಭಾಗದಲ್ಲಿ ಮಾವೋವಾದಿಗಳ ಬಂಡಾಯವನ್ನು ಬಹುತೇಕ ಶಮನಗೊಳಿಸಲಾಗಿದೆ. ಹೀಗಾಗಿ ಸ್ವಾತಂತ್ರ್ಯ ದಿನಾಚರಣೆ ಮತ್ತು ತ್ರಿವರ್ಣ ಧ್ವಜಾರೋಹಣಕ್ಕೆ ಸಾಕ್ಷಿಯಾಗಲು ಈ ಗ್ರಾಮಗಳ ಜನರು ಅತ್ಯುತ್ಸಾಹದಿಂದ ಕಾಯುತ್ತಿದ್ದಾರೆ. ರಾಷ್ಟ್ರೀಯ ಹಬ್ಬಕ್ಕಾಗಿ ಈಗಾಗಲೇ ಬಹುತೇಕ ಸಿದ್ಧತಾ ಕಾರ್ಯಗಳು ಪೂರ್ಣಗೊಂಡಿವೆ.

ಈ ಹಳ್ಳಿಗಳ ಸಮೀಪವೇ ಭದ್ರತಾ ಪಡೆಗಳ ಹೊಸ ಶಿಬಿರಗಳು ಕಾರ್ಯನಿರ್ವಹಿಸುತ್ತಿವೆ. ಇದು ಗ್ರಾಮಸ್ಥರಲ್ಲಿ ಸುರಕ್ಷತೆಯ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಿದೆ.

ಬಿಜಾಪುರ ಜಿಲ್ಲೆಯ ಗುಂಜೆಪರತಿ, ಪೂಜಾರಿಕಂಕೇರ್, ಭೀಮಾರಾಮ್, ಕೊರಚೋಲಿ, ಕೊತಪಲ್ಲಿ ಗ್ರಾಮಗಳು, ನಾರಾಯಣಪುರ ಜಿಲ್ಲೆಯ ಕುತುಲ್, ಬೆಡಮಾಕೋಟಿ, ಪದಾಮ್‌ಕೋಟ್, ಕಂದುಲನಾರ್, ನೆಲಂಗೂರ್, ಪಂಗೂರ್, ರೈನಾರ್ ಹಾಗೂ ಸುಕ್ಮಾ ಜಿಲ್ಲೆಯ ಉಸ್ಕವಾಯಾ, ನುಲ್ಕತಾಂಗ್ ಗ್ರಾಮಗಳಲ್ಲಿ ತ್ರಿವರ್ಣ ಧ್ವಜಾರೋಹಣ ನಡೆಯಲಿದೆ ಎಂದು ಬಸ್ತಾರ್ ವಲಯದ ಐಜಿಪಿ ಪಿ. ಸುಂದರರಾಜ್ ಮಾಹಿತಿ ನೀಡಿದರು.

ಇದೇ ಅಲ್ಲದೆ, ಈ ವರ್ಷ ಗಣರಾಜ್ಯೋತ್ಸವದ ವೇಳೆ ತ್ರಿವರ್ಣ ಧ್ವಜ ಹಾರಿಸಲಾದ ಈ ಮೂರು ಜಿಲ್ಲೆಗಳ ಇತರ 15 ಗ್ರಾಮಗಳಲ್ಲಿಯೂ ಇದೇ ಮೊದಲ ಬಾರಿಗೆ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುವುದು ಎಂದು ಅವರು ವಿವರಿಸಿದರು.

ಕೇಂದ್ರ, ರಾಜ್ಯ ಪೊಲೀಸ್ ಪಡೆಗಳ 1,090 ಮಂದಿಗೆ ರಾಷ್ಟ್ರಪತಿ ಪದಕ

ನವದೆಹಲಿ (ಪಿಟಿಐ): ಕೇಂದ್ರ ಹಾಗೂ ರಾಜ್ಯದ ಪೊಲೀಸ್ ಪಡೆಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ 1,090 ಪೊಲೀಸರಿಗೆ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನವಾದ ಗುರುವಾರ ಸೇವಾ ಪದಕ ಘೋಷಿಸಲಾಗಿದೆ.

'233 ಮಂದಿಗೆ ಶೌರ್ಯ ಪದಕ, 99 ಮಂದಿಗೆ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ಹಾಗೂ 758 ಮಂದಿಗೆ ಶ್ಲಾಘನೀಯ ಸೇವಾ ಪದಕ ಘೋಷಿಸಲಾಗಿದೆ' ಎಂದು ಕೇಂದ್ರ ಗೃಹ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಪದಕಗಳ ಪಟ್ಟಿಯಲ್ಲಿ ಅಗ್ನಿಶಾಮಕ, ಗೃಹ ರಕ್ಷಕದಳ ಹಾಗೂ ನಾಗರಿಕ ರಕ್ಷಣೆ, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಗಳ ಸಿಬ್ಬಂದಿಯೂ ಒಳಗೊಂಡಿದ್ದಾರೆ.



ಸಾಂದರ್ಭಿಕ ಚಿತ್ರ

ಕೊಟ್ಟು ಸೈ ಎನಿಸಿಕೊಳ್ಳಬಹುದೇ?

ನುಡಿ ಬೆಳಗು



ದಯಾ ಗಂಗನಘಟ್ಟ

ಗಲ್ಲಿಯ ತುಂಬಾ ಜನವೋ ಜನ. ಜನರೆಲ್ಲ ಗಾಬರಿಯಿಂದ ಕುತೂಹಲದಿಂದ ಗುಸುಗುಸು ಪಿಸುಪಿಸು, ಹಾಗಂತೆ ಹೀಗಂತೆ ಮಾತಾಡುತ್ತಿದ್ದರಿಂದ ಗದ್ದಲವೋ ಗದ್ದಲ. ಒಬ್ಬ ಹಟಮಾರಿ ವ್ಯಕ್ತಿ ಎತ್ತರವಾದ ಕಟ್ಟಡದ ಮೇಲೆ ನಿಂತು ಕೆಳಗೆ ಹಾರುತ್ತೇನೆಂದು ಕೂಗುತ್ತಿದ್ದ. ಹತ್ತಿರದ ಪೊಲೀಸ್ ಠಾಣೆಯಿಂದ ಅಧಿಕಾರಿಗಳು ಅಲ್ಲಿಗೆ ಬಂದರು. ಅಗ್ನಿಶಾಮಕದಳದವರೂ ಬಂದರು. 'ದಯಮಾಡಿ ಕೆಳಗೆ ಬಾರಪ್ಪಾ' ಎಂದು ಆ ಹಟಮಾರಿಯ ತಾಯಿ ಅಂಗಲಾಚುತ್ತಿದ್ದರೂ ಆತ ಕಿವಿಗೊಡದೆ, ತನ್ನನ್ನು ಜಿಲ್ಲಾಧಿಕಾರಿಯಾಗಿ ಮಾಡದಿದ್ದರೆ ಕೆಳಗೆ ಬಿದ್ದು ಸಾಯುವುದಾಗಿ ಕೂಗುತ್ತಿದ್ದ. ಅವನು ಬಿದ್ದರೇನು ಗತಿ ಎಂದು ಪೊಲೀಸರು ಸರಸರನೆ ಬೆವರು ಸುರಿಸುತ್ತಾ ಕಟ್ಟಡದ ನಾಲ್ಕೂ ಬದಿಗೆ ಬಲೆ ಕಟ್ಟಿದರು. ಪೊಲೀಸ್ ಅಧಿಕಾರಿ ಮೈಕಿನಲ್ಲಿ, 'ಏ ಸುಮ್ಮನೇ ಕೆಳಗಿಳಿದು ಬಾರಯ್ಯ' ಅಂದ. ಇವ 'ನೀನೇ ಮೇಲೆ ಬಾರಯ್ಯ' ಅಂದ. ಯಾರೋ ನಿಂತಿದ್ದವ, 'ಜಿಲ್ಲಾಧಿಕಾರಿ ಮಾಡುತ್ತೇವೆ ಅನ್ನೋಣ. ಬರಬಹುದು' ಅಂದ. ಕೆಲವರು 'ಛೆ ಛೆ... ಹುಚ್ಚನನ್ನು ಜಿಲ್ಲಾಧಿಕಾರಿ ಮಾಡುವುದೇ' ಅಂದರು. ಇನ್ನೂ ಕೆಲವರು 'ನಿಜವಾಗಿಯೂ ಏನು ಮಾಡುವುದಿಲ್ಲವಲ್ಲ, ಸುಮ್ಮನೆ ಹೇಳೋಣ ಇಳಿದರೆ ಸಾಕಲ್ವಾ' ಎಂದು ಹೇಳಿದರು.

ಆದರೆ, ಅಲ್ಲಿ ನಿಂತಿದ್ದ ಬಿಳಿ ತಲೆಯ, ಸೊಂಟ ಬಗ್ಗಿದ ಮುದುಕನೊಬ್ಬ, 'ಇಲ್ಲ. ಎಂದೆಂದಿಗೂ ಇಲ್ಲ. ಇಂಥ ಎಷ್ಟೋ ಜನರನ್ನು ನಾನು ನೋಡಿದ್ದೇನೆ. ಒಮ್ಮೆ ಮೇಲೇರಿದರೆಂದರೆ ಅವರು ಕೆಳಗಿಳಿಯುವ ಯೋಚನೆಯನ್ನೇ ಮಾಡುವುದಿಲ್ಲ' ಎಂದು ಅವರ ಮಾತನ್ನು ವಿರೋಧಿಸಿದ. ಅಷ್ಟರಲ್ಲಿ ಜನಜಂಗುಳಿಯಿಂದ ಯಾರೋ ಒಬ್ಬ 'ಆಗಲಿ, ನಾವೆಲ್ಲ ನಿನ್ನನ್ನು ಜಿಲ್ಲಾಧಿಕಾರಿಯನ್ನಾಗಿ ಮಾಡಿದ್ದೇವೆ. ಇನ್ನಾದರೂ ಕೆಳಗೆ ಬಾ' ಎಂದು ಕೂಗೇ ಬಿಟ್ಟ.

ಇದನ್ನು ಕೇಳಿದ್ದೇ ತಡ, ಆ ಹಟಮಾರಿ ಖುಷಿಯಿಂದ ಕಟ್ಟಡದ ಛಾವಣಿಯ ಮೇಲೆಯೇ ಕುಣಿಯತೊಡಗಿದ. ಸ್ವಲ್ಪ ಹೊತ್ತು ಕುಣಿದು ಮತ್ತೆ ಕೂಗಿದ: 'ಊಹುಂ, ನಾನು ಕೆಳಗೆ ಬರುವುದಿಲ್ಲ. ನೀವು ನನ್ನನ್ನು ನಗರಸಭೆಯ ಸದಸ್ಯನನ್ನಾಗಿ ಮಾಡಿದರೆ ಮಾತ್ರ ಬರುತ್ತೇನೆ'. 'ಆತ ಎಂದಿಗೂ ಕೆಳಗೆ ಬರುವುದಿಲ್ಲ ಎಂದು ನಾನು ಹೇಳಲಿಲ್ಲವೇ? ನೀವು ಏನು ಮಾಡಿದರೂ ಆತ ಕೆಳಗೆ ಬರುವುದಿಲ್ಲ' ಎಂದ ಮುದುಕ. ಅವನ ಮಾತನ್ನು ಯಾರೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಪೊಲೀಸ್ ಕೂಗಿದ: 'ಆಗಲಿ ನಿನ್ನನ್ನು ನಗರಸಭೆಯ ಸದಸ್ಯನನ್ನಾಗಿ ಮಾಡಿದ್ದೇವೆ. ಕೆಳಗಿಳಿದು ಬಾ' ಎಂದ. 'ನನ್ನನ್ನು ಮೇಯರ್ ಮಾಡಿರಿ' ಎಂದು ಆ ಹಟಮಾರಿ ಕುಣಿಯುತ್ತಲೇ ಕೂಗಿ ಹೇಳಿದ. ಅಗ್ನಿಶಾಮಕದಳದ ಅಧಿಕಾರಿಯೊಬ್ಬ, 'ಆಗಲಿ ನೀನೀಗ ಮೇಯರ್' ಎಂದ. ಅಷ್ಟರಲ್ಲಿ ಹಟಮಾರಿ ಉನ್ಮತ್ತನಾಗಿ, 'ನೀವು ನನ್ನನ್ನು ಪ್ರಧಾನಿಯಾಗಿ ಮಾಡದಿದ್ದರೆ ನಾನು ಕೆಳಗೆ ಜಿಗಿದೇ ಬಿಡುತ್ತೇನೆ', ಜನರಲ್ಲೀಗ ಅವನ ಬಗ್ಗೆ ಗೊಂದಲ ಮೂಡತೊಡಗಿತು. ಆದರೂ 'ನಾವು ನಿನ್ನನ್ನು ಪ್ರಧಾನಿ ಮಾಡಿದ್ದೇವೆ' ಎಂದಿತು ಜನಸಮೂಹ.

'ನೀವು ನನ್ನನ್ನು ರಾಷ್ಟ್ರಪತಿಯನ್ನಾಗಿ ಮಾಡದ ಹೊರತು ನಾನು ಕೆಳಗೆ ಬರುವುದಿಲ್ಲ' ಎಂದು ಹಟಮಾರಿ ಕೂಗಿ ಹೇಳಿದ. ಮುದುಕನ ಮಾತು ನಿಜವೆಂಬುದು ಜನರಿಗೆ ಮನವರಿಕೆಯಾಗಿ ಅವನ ಕಡೆ ನೋಡಿದರು. 'ನೀವು ಈಗಾಗಲೇ ಹಲವು ಬಾರಿ ಅವನು ಹೇಳಿದಂತೆ ಕೇಳಿ ಆಗಿದೆ ಆದ್ದರಿಂದ ಕಾಲ ಮಿಂಚಿಹೋಯಿತು. ಹಟಮಾರಿ ಹೇಳಿದ ಮಾತಿಗೆ ತಥಾಸ್ತು ಎಂದು ಹೇಳುವುದೊಂದೇ ಈಗ ಉಳಿದಿರುವ ದಾರಿ' ಎಂದು ಮುದುಕ ಉತ್ತರಿಸಿದ. ಅಸಹಾಯಕರಾದ ಜನ ಮುದುಕನಿಗೆ ಏನಾದರೂ ಮಾಡಲು ಕೋರಿದರು. 'ಅವನನ್ನು ನಾನು ಇಳಿಸುತ್ತೇನೆ. ಈ ವಿಷಯವನ್ನು ನನಗೆ ಬಿಡಿ' ಎಂದು ಮುದುಕ ಮುಂದೆ ಹೊರಟ.

'ಮಹಾರಾಜಾಧಿರಾಜರೇ, ತಮ್ಮಿಂದ ಆರನೇ ಅಂತಸ್ತಿಗೆ ದಯವಿಟ್ಟು ಬರಲು ಸಾಧ್ಯವೇ' ಎಂದು ಏಳನೆಯ ಅಂತಸ್ತಿನ ಮೇಲಿದ್ದ ಹಟಮಾರಿಯನ್ನು ಮುದುಕ ಕೇಳಿದ. ಹಟಮಾರಿ ಗಂಭೀರನಾಗಿ, 'ಯಾಕೆ ಸಾಧ್ಯವಿಲ್ಲ ಹಾಗೇ ಆಗಲಿ' ಎಂದು ಹೇಳಿ ಆರನೆಯ ಅಂತಸ್ತಿಗೆ ಜಿಗಿದು ಬಂದು ಕಿಟಕಿಯ ಮೂಲಕ ಜನಜಂಗುಳಿಯನ್ನು ನೋಡತೊಡಗಿದ. ಜನ ಮುದುಕ ಹೇಳಿಕೊಟ್ಟಂತೆ ಭಲೇ ರಾಜ ಭಲೇ ಎಂದರು. 'ಪ್ರಭುಗಳೇ, ಐದನೇ ಅಂತಸ್ತಿನ ಮೇಲೆ ಬರಬೇಕೆಂಬ ನನ್ನ ವಿನಂತಿಯನ್ನು ಮನ್ನಿಸುತ್ತೀರಾ' ಎಂದು ಮುದುಕ ಕೇಳಿದಾಗ ಹಟಮಾರಿ ಹಾಗೇ ಮಾಡಿದ. ಮುದುಕ ಅವನನ್ನು ನಾಲ್ಕನೇ ಅಂತಸ್ತಿಗೆ ಬರಲು ಕೇಳಿಕೊಂಡ. ಆತ ಇಳಿದು ಬಂದ. 'ಪೂಜ್ಯರೇ, ಮೊದಲನೆಯ ಅಂತಸ್ತಿನವರೆಗೆ ಬರಲು ತಮಗೆ ಒಪ್ಪಿಗೆಯಿದೆಯೇ' ಮುದುಕ ವಿನಯದಿಂದ ಬೇಡಿದ. ಹೀಗೆ ಹಟಮಾರಿ ಒಂದನೆಯ ಅಂತಸ್ತಿನಿಂದ ಜಿಗಿದು ಕೆಳಗೆ ಬಂದು ಜನಸಮೂಹವನ್ನು ಕೂಡಿಕೊಂಡ.

ಈಗ ಅಲ್ಲಿ ಸೇರಿದ್ದ ಜನ, ಈ ಉಪಾಯ ನಿನಗೆ ಹೇಗೆ ಹೊಳೆಯಿತು ಎಂದು ಆ ಮುದುಕನನ್ನು ಕೇಳಿದರು. ಮುದುಕ ತಲೆಯಲ್ಲಾಡಿಸುತ್ತ ಹೇಳಿದ, 'ನಲ್ವತ್ತು ವರ್ಷಗಳವರೆಗೆ ನಾನು ರಾಜಕಾರಣದಲ್ಲಿ ರಾಜಕೀಯ ವ್ಯಕ್ತಿಗಳಿಗೆ ಸಲಹೆಗಾರನಾಗಿ ಕೆಲಸ ಮಾಡಿದ್ದು ಉಪಯೋಗಕ್ಕೆ ಬಂತು. ಒಬ್ಬ ಹಟಮಾರಿಯ ಜೊತೆ ಹೇಗೆ ವ್ಯವಹರಿಸಬೇಕು ಎಂಬುದನ್ನು ನೀವು ಇವತ್ತು ಕಲಿತಿರಲ್ವಾ' ಎಂದು ನಗುತ್ತಾ ಹೇಳಿದ.

ಟರ್ಕಿ ಮೂಲದ ಈ ಕತೆಯು ಅಹಂಕಾರ ನೆತ್ತಿಗೆ ಏರಿದವರು, ತಾವು ಮಾಡಿದ್ದೇ ಸರಿ ಎಂಬ ಮನೋಭಾವದವರು, ಮೂರ್ಖರು ಇತರರ ಮಾತನ್ನು ಕೇಳುವಂತೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ, ಅಹಂಕಾರದ ನಡವಳಿಕೆಗಳು ಯಾವತ್ತಿಗೂ ಮೂರ್ಖತನದವಾಗಿರುತ್ತವೆ ಮತ್ತು ಯಾರದ್ದಾದರೂ ಬೇಡಿಕೆಯನ್ನು ಹಿಂದೆ ಮುಂದೆ ಯೋಚಿಸದೇ ಪೂರೈಸುತ್ತಾ ಹೋದಷ್ಟೂ ಅವರ ಆಸೆಗಳು, ಬೇಡಿಕೆಗಳು ಹೆಚ್ಚುತ್ತಲೇ ಹೋಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ, ಕೊಟ್ಟು ಯಾರನ್ನೂ ತೃಪ್ತಿಪಡಿಸುವುದು ಅಸಾಧ್ಯ ಎಂಬುದನ್ನು ಬಹಳ ಮನಮುಟ್ಟುವಂತೆ ತಿಳಿಸಿಕೊಡುತ್ತದೆ. ❖

ಪದಬಂಧ 6135


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ರಾಜಸಭೆಗೆ ಸಂಬಂಧಿಸಿದ ವ್ಯಕ್ತಿ (4)
3. ಕಾಡಿನ ಮಧ್ಯಭಾಗವಿದು (4)
5. ವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು (3)
6. ವಾರದಲ್ಲಿ ಧರಿಸಿರುವ ಯಜ್ಞೋಪವೀತ (4)
8. ದೊಡ್ಡ ಗಾತ್ರದ ಜಲಚರ (4)
10. ಮಧುರವಾದ ಧ್ವನಿ (4)
12. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
13. ಮುಂಗುಸಿ ಇಲ್ಲಿದೆ (3)
16. ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
17. ಇಂದ್ರಿಯಗಳನ್ನು ಜಯಿಸಿದವನು (4)

ಮೇಲಿಂದ ಕೆಳಕ್ಕೆ

1. ಆ ರಸ್ತೆಯಲ್ಲಿಯೇ ಮೂಡಿದ ಪ್ರೀತಿಯನ್ನು ಹುಡುಕಿ! (2)
2. ಕರಲ್ಲಿರುವ ಚಿನ್ನ (4)
3. ಉಗುರಿನಿಂದಾದ ಗಾಯ (4)
4. ವಿಷಯದಲ್ಲಿರುವ ನಂಜು (2)
7. ಉಪಯೋಗಕ್ಕೆ ಬಾರದುದು (3)
9. ಒಣಗಿದ ಕೊಬ್ಬರಿ (3)
11. ವರವನ್ನು ಪಡೆದಿರುವ ಬೇಡ (4)
12. ಗಂಜಿಯಿರುವ ಒಂದು ಬೀಜ (4)
14. ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
15. ಸಂಗೀತ ಹಾಗೂ ನೃತ್ಯಗಳಲ್ಲಿಯ ಗತಿ (2)



6134ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಧನಸಹಾಯ 3.ಕೈಲಾಸ 5.ನಿರಪರಾಧಿ 8.ಅವ್ಯಯ 9.ಹೊಸಜೀವನ 12.ಅಗುಳು 13.ಜನನಾಯಕ 16.ನಿಕ್ಷೇಪ 17.ಏಕೀಕರಣ

ಮೇಲಿಂದ ಕೆಳಕ್ಕೆ: 1.ಧಮನಿ 2.ಸಲ್ಲಾಪ 4.ಸಮಯ 6.ರತಿ 7.ರಾಕ್ಷಸ 8.ಅಶನ 9.ಹೊಕ್ಕುಳು 10.ವದನ 11.ಭಯ 12.ಅವನಿ 14.ನಾಸಿಕ 15.ಕಲ್ಯಾಣ

ಸುಡೊಕು 6519

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3					5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

6518 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಆಗಸ್ಟ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಸಪ್ತಮಿ ಗಂ.23-50 **ನಕ್ಷತ್ರ:** ಅಶ್ವಿನಿ ಗಂ. 7-36, **ಯೋಗ:** ಗಂಡ ಗಂ. 10-17 ಕರಣ: ವಿಷ್ಟಿ ಗಂ. 12-59 ಕರ್ಕಾಟಕ ಮಾಸದ 30 ನೇ ದಿನ. **ಮಳೆ ನಕ್ಷತ್ರ:** ಆಶ್ಲೇಷ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00, **ಸೂರ್ಯೋದಯ:** 06-21, **ಸೂರ್ಯಾಸ್ತ:** 06-49, **ಮುಸ್ಲಿಂ ದಿನಾಂಕ:** 20 ಸಫರ್, **ದಿನ ವಿಶೇಷ:** ಸ್ವಾತಂತ್ರ್ಯ ದಿನಾಚರಣೆ, ಹೊಸ ವರ್ಷ (ಪಾರ್ಸಿ), **ಅದೃಷ್ಟ ಸಂಖ್ಯೆ:** 7, 10

ಮೇಷ: ಪೊಲೀಸ್ ವಿಭಾಗದಲ್ಲಿದ್ದು, ಮಾಹಿತಿ ಕಲೆ ಹಾಕುವಲ್ಲಿ ನೀವು ವಹಿಸಿದ ಮುಂಜಾಗ್ರತಾ ಕ್ರಮ ಕಡಿಮೆಯಾಗಬಹುದು. ನಿಮ್ಮ ಕೆಲಸದ ಗುಣಮಟ್ಟ ಕಡಿಮೆ ಆಗುತ್ತಿರುವುದಕ್ಕೆ ಕಾರಣ ನಿಮ್ಮ ನಿರಾಸಕ್ತಿಯೇ ಆಗಿರುತ್ತದೆ.

ವೃಷಭ: ವಾದ-ವಿವಾದಗಳನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿದಲ್ಲಿ ಜಯ ನಿಮ್ಮದಾಗುವುದು. ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸುವಿರಿ.

ಮಿಥುನ: ಕೆಲಸಗಾರರು ನಿಮ್ಮ ಮಾತಿಗೆ ಬೆಲೆ ಕೊಡುವುದಿಲ್ಲ. ಬುದ್ಧಿವಂತಿಕೆಯಿಂದ ಕೆಲಸ ಮಾಡಿಸಿಕೊಳ್ಳುವ ರೀತಿಯಲ್ಲಿ ನಿಮ್ಮ ನಡವಳಿಕೆ ಇರಲಿ. ನೆಲೆ ನಿಂತ ಮಗನ ನೋಡಿ ಮನಸ್ಸಿಗೆ ನಿರಾಳವೆನಿಸುವುದು.

ಕರ್ಕಾಟಕ: ಅಧ್ಯಾಪಕರು ವಿದ್ಯಾರ್ಥಿಗಳೊಂದಿಗೆ ಸ್ನೇಹದಿಂದ ವರ್ತಿಸಿ. ಕೆಲಸದ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ಬಿಡುವು ದೊರೆಯುವುದು. ಕ್ರೀಡಾಪಟುಗಳಿಗೆ ಉತ್ತಮ ಪ್ರೋತ್ಸಾಹ ದೊರೆಯುವುದು.

ಸಿಂಹ: ವ್ಯಾವಹಾರಿಕ ವಿಷಯದಲ್ಲಿ ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ ಮತ್ತು ಲಾಭದಾಯಕ.

ಕನ್ಯಾ: ರಾಜಕೀಯ ತಿಕ್ಕಾಟಗಳಲ್ಲಿ ಭಾಗವಹಿಸಿ ಅಪರಾಧಿ ಸ್ಥಾನಕ್ಕೆ ತಲುಪದೆ ಇರುವುದು ಸೂಕ್ತ. ತೋಟದ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳಿಂದ ಅಧಿಕ ಲಾಭ ಸಿಗುವುದು. ವಸ್ತ್ರ ವ್ಯಾಪಾರದಲ್ಲಿ ಹಿನ್ನಡೆಯಾಗಬಹುದು.

ತುಲಾ: ನೆಂಟರ ಸಹಾಯ ಕೇಳಬೇಕಾಗುತ್ತದೆ. ಆರ್ಥಿಕ ವಿಚಾರದಲ್ಲಿ ಅಲ್ಪತೃಪ್ತರಿಗೆ ಸಂಸಾರದಲ್ಲಿ ನೆಮ್ಮದಿ. ನಿಮ್ಮ ಯೋಚನೆಯ ಸರಣಿಗೆ ಮಡದಿಯಿಂದ ಅಥವಾ ಮನೆಯವರಿಂದ ವಿರೋಧ ವ್ಯಕ್ತವಾಗುವುದು.

ವೃಶ್ಚಿಕ: ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಮಾಡುವ ನಿಸ್ವಾರ್ಥ ಸೇವೆಗೆ ಜನರಿಂದ ಉತ್ತಮ ಸ್ಪಂದನೆ ದೊರೆಯುತ್ತದೆ. ಓಡಾಟ ಹೆಚ್ಚಿದ ಕಾರಣ ಶಿರೋವೇದನದ ಜೊತೆ ದೇಹಾಯಾಸವು ಅತ್ಯಂತವಾಗಿ ಬಾಧಿಸಬಹುದು.

ಧನು: ಕೆಲವು ವಸ್ತುಗಳ ಸಂಪಾದನೆಗಾಗಿ ನೀವು ಶ್ರಮಿಸಿದ ರೀತಿಯನ್ನು ಕಂಡು ಅನೇಕರು ಗೇಲಿ ಮಾಡಬಹುದು. ಕಳೆದು ಹೋದ ದ್ರವ್ಯದ ಲಭ್ಯವು ಹರ್ಷವನ್ನುಂಟು ಮಾಡಲಿದೆ. ಕುಟುಂಬದ ಸಂತೋಷವು ಹರ್ಷ ತರುವುದು.

ಮಕರ: ವಿವಾಹ ಸಂಬಂಧಿ ವಿಷಯಗಳಿಗೆ ನಿರಾಕರಣೆಯನ್ನು ಮಾಡದೆ ಒಪ್ಪಿಕೊಳ್ಳುವುದು ಉತ್ತಮ. ಪೋಷಕರ ಜೊತೆ ಮುಖ ಕಪ್ಪಾಗುವಂತಹ ಪರಿಸ್ಥಿತಿಗಳನ್ನು ನೀವೇ ತಂದೊಡ್ಡಿಕೊಳ್ಳಬೇಡಿ.

ಕುಂಭ: ನಿಮ್ಮ ಕಲಾ ಸೇವೆ ಗುರುತಿಸಿ ಪ್ರಶಂಸೆ ಸಿಗಲಿದೆ. ಭವಿಷ್ಯಕ್ಕೆ ನೆರವಾಗುವಂತಹ ಯಾವುದಾದರೂ ವಿಷಯಗಳ ಕುರಿತು ಅಧ್ಯಯನವನ್ನು ಆರಂಭಿಸಿ. ರಾಸಾಯನಿಕ ವಸ್ತುಗಳ ಮಾರಾಟದಿಂದ ಹೇರಳ ಲಾಭವಿದೆ.

ಮೀನ: ಆಗಿ ಹೋಗಿರುವ ಘಟನೆಗಳನ್ನು ನೆನೆದು ಶೋಕಿಸುವುದನ್ನು ಬಿಡುವುದು ಸೂಕ್ತ. ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ನಿಮ್ಮ ಸ್ವಂತ ಕೆಲಸಗಳು ನಿಲ್ಲಬಹುದು ಅಥವಾ ನಿಧಾನ ಗತಿಯಲ್ಲಿ ಸಾಗಲಿದೆ.

ಗುಂಡಣ್ಣ




ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ
ಬೃಹತ್ ಮಾರಾಟ
CELEBRATE THIS FREEDOM FESTIVAL
@ LOWEST DOWNPAYMENT
FRONT LOAD WASHING MACHINES
EMI | ₹ 1999/- ONWARDS
REFRIGERATORS
NEW MODEL 2023
EMI | ₹ 1499/- ONWARDS
TOP LOAD WASHING MACHINES
EMI | ₹ 999/- ONWARDS
LG Life's Good
Haier
Whirlpool CORPORATION
SAMSUNG
Godrej
BPL Happy Little Things
BOSCH
IFB
ENJOY THE FREEDOM SHOPPING WITH
Attractive
KITCHEN APPLIANCES OFFERS
Pigeon
MIXER GRINDER
750 WATTS
SPECIAL PRICE ₹2,490/-
Pigeon Preethi Butterfly FABER
LPG GAS STOVE
3 BURNER | ₹3,490/-
4 BURNER | ₹4,290/-
Haier
AIR FRYER
50% DISCOUNT
MRP ₹9,990/-
SPECIAL PRICE ₹4,990/-
Pigeon
CHIMNEY COMBO
55% DISCOUNT
NEBULA CHIMNEY 60 CM + AYUSH 4 BR
MRP ₹22,089/-
SPECIAL PRICE ₹9,990/-
EUREKA FORBES AO Smith HAVELLS
LG pureit
RO WATER PURIFIER
SPECIAL PRICE ₹12,990/- ONWARDS
Haier AO Smith
HAVELLS V-GUARD
WATER HEATER
FREE INSTALLATION
3 LITRES ₹3,290/-
15 LITRES ₹6,990/-
25 LITRES ₹7,790/-
ಬೆಂಗಳೂರು
ನೂತನ ಉಲ್ಲಾಳ್ ಮುಖ್ಯ ರಸ್ತೆ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್ Ph : 9686680760 / 9686680842
ನೂತನ ಬಾಗಲೂರು ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕಾಲೇಜ್ ಹತ್ತಿರ Ph : 080-35712968 /35712969 9731306702
ಬಿಡದಿ ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು-ಮೈಸೂರು ಹೆದ್ದಾರಿ 7702203254
ಕೋಣನಕುಂಟೆ ಸೌಧಾಮಣಿ ಚೌಲ್ಟ್ರಿ ಹತ್ತಿರ ಪೊಲೀಸ್ ಸ್ಟೇಷನ್ ಪಕ್ಕ Ph :9731306531
ಬೇಗೂರು ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604
ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು 9731307264 080-23559977
ಹೊಸಕೋಟೆ ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767
ಹೆಣ್ಣೂರು ಮುಖ್ಯ ರಸ್ತೆ. ಡಿಮಾರ್ಟ್ ಎದುರು 080-48651500/48505043 9731306571
ಮಹದೇವಪುರ ವೈಟ್‌ಫೀಲ್ಡ್ ಮೈನ್ ರೋಡ್ ಬ್ರಾಂಡ್ ಫ್ಯಾಕ್ಟರಿ ಹತ್ತಿರ 080-48148975, 9148151731
ಉತ್ತರಹಳ್ಳಿ ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575
ವೈಟ್ ಫೀಲ್ಡ್ ಉಡುಪಿ ಡೆಲಿಕೆಸಿ ಹೋಟೆಲ್ ಸಮೀಪ ರಾಮಗೊಂಡನಹಳ್ಳಿ. 080-40984677 9513499851
ಯಲಹಂಕ ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702
ಹೆಬ್ಬಗೋಡಿ ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯೋಕಾನ್ ಎದುರು. 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ ಕೇಕ್ ಪ್ಯಾಲೆಸ್ ಹತ್ತಿರ 41610910, 9731306537
ತನಿಸಂದ್ರ ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747
ವಿಜಯನಗರ ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631
ಪೀಣ್ಯ ಟಿ-ದಾಸರಹಳ್ಳಿ ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306572 28393199/4199
ಮತ್ತಿಕೆರೆ ಬಾಂಬೆ ಡೈಯಿಂಗ್ ರಸ್ತೆ. 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ 1ನೇ ಸೆಕ್ಟಾರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550
ಬನಶಂಕರಿ ಬಿಗ್ ಬಜಾರ್ ಎದುರು Ph :9731306606 080-26691262/63
ಜಯನಗರ 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306617
ಚಂದ್ರ ಲೇಔಟ್ ವಾಟರ್ ಟ್ಯಾಂಕ್ ಹತ್ತಿರ 9731306558, 080 41503359
ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616
ಮಾರತಹಳ್ಳಿ ಪಾರ್ಕ್ ಪ್ಲಾಜಾ ಎದುರು 080-42200050 9731306703
ಕೆಂಗೇರಿ, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634
ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766
ಸುಂಕದಕಟ್ಟೆ ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ, 9686680764 23288940/942
ರಾಜಾಜಿನಗರ ಡಯಾಕಾನ್ ಹಾಸ್ಪಿಟಲ್ ಎದುರು. Ph :9731306570 080-23134692
ವಿದ್ಯಾರಣ್ಯಪುರ ಬಿಡಬ್ಲ್ಯೂಎಸ್‌ಎಸ್‌ಬಿ ಎದುರು. 41721897/1861 9731306614
ಹೆಗ್ಗನಹಳ್ಳಿ ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ ಸೂರ್ಯ ಪ್ಲಾಜಾ, ಜಾಯಲುಕ್ಕಾಸ್ ಎದುರು ಕಮ್ಮನಹಳ್ಳಿ ಮುಖ್ಯ ರಸ್ತೆ 41687449, 9731306596 25450871
ರಾಮಮೂರ್ತಿನಗರ ಮೋರ್ ಎದುರು 41638612/13 8861007307
ಪುಟ್ಟೇನಹಳ್ಳಿ ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080-40954615/16
ಹುಳಿಮಾವು ಶಿವ ಸಾಗರ ಹೋಟೇಲ್ ಸಮೀಪ. 080-26483425 9731306625
LG SHOPPE ಮಾರತಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &



ಆದೀಶ್ವರ್®
ಎಲೆಕ್ಟ್ರೋ ವರ್ಲ್ಡ್
gadget for every budget!
79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ
ಬೃಹತ್ ಮಾರಾಟ
CELEBRATE THIS FREEDOM FESTIVAL
@ LOWEST EMI
QLED TV
OLED TV
MiniLED
QNED TV
EMI ₹ 1999/- ONWARDS
EMI ₹ 2999/- ONWARDS
EMI ₹ 2499/- ONWARDS
EMI ₹ 3490/- ONWARDS
LG Life's Good
Haier
SONY
SAMSUNG
Panasonic
BPL Happy Little Things
INSTANT CASH BACK UPTO ₹ 25,000/- ON CREDIT & DEBIT CARD EMI
GET UPTO ₹ 10,000/- UPI MONEY BACK ON BAJAJ FINSERV PURCHASE PAY BANK TRANSFER
AVAIL UPTO 36 MONTHS LONG TENURE EMI
1 EMI FREE ON LG SONY Haier UPTO ₹ 25,000/-
Attractive FINANCE OFFERS
BRING BAJAJ EMI CARD & GET GIFT VOUCHER UPTO 3,500/-*
EMI CARD EASY FINANCE
• Pre-approved Loan up to 4 Lakhs • Repay easily • No documentation • Pre-approved offers • Nil foreclosure charges
0% INTEREST FREE FINANCE
FIXED EMI PAY EMI AS PER THE SCREEN SIZE
Anything on EMI Club Multiple Small Products and take them Home on EMI only
LOWEST DOWNPAYMENT
LOWEST EMI
LONG TERM TENURE
ಚನ್ನಪಟ್ಟಣ PH : 9036593446 / 9036593447
ಶಿರಸಿ PH : 9591997260, 9731306569
ಕೋಲಾರ 9731306635/9731306574 08152-467397
ಬೆಳಗಾವಿ 0831 4215241 / 42, 9731306717 / 9731306713
ಬಳ್ಳಾರಿ Ph : 08392-242330 / 337, 9731306742 / 9731331684
ಚಿತ್ರದುರ್ಗ 08194-224224, 9686446883
ದಾವಣಗೆರೆ 08192-233626/27, 9731306633 / 6712
ತಿಪಟೂರು Ph : 08134-250104/304, 9686680758 / 9731306552
ತುಮಕೂರು Ph : 0816-4021031, 9731306549 / 9591997270
ಯಾದಗಿರಿ Ph : 08173/251779/759 8861002260
ಗೋಣಿಕೊಪ್ಪ 7702770314/7702770353
ಕೊಪ್ಪಳ 08539 221931/32 9731306645
ಬೀದರ್ 08482 226800/01 9513499863
ಕಲಬುರ್ಗಿ Ph 08472 227556 9108023816
ಕೆ.ಆರ್. ನಗರ 08223295855/66 9731306715
ಚನ್ನರಾಯಪಟ್ಟಣ 08176253312 / 295256, 9513499855
ವಿಜಯಪುರ 9353907691 / 9606865996
ಸಿಂಧನೂರ್ 08535-222254, 9731306673 / 9731306672
ಕುಶಾಲನಗರ 9591997262/9591997263
ಮಂಡ್ಯ 08232406100/08232406200 9513599861 / 7349609274
ಚಿಕ್ಕಮಗಳೂರು Ph : 08262 - 239944 / 45, 9963998358, 9963998365
ಶಹಾಪೂರ 9513499858 08479-240565,244565
ತೊಕ್ಕೊಟ್ಟು 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಚಿಟಿಕೆ ಸುದ್ದಿ

14 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಜಮಗಿ–ಸೊರಳ್ಳಿ ಮಾರ್ಗದಲ್ಲಿ ಬೈಕ್ ಮೇಲೆ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದು, ಆತನಿಂದ ₹14 ಲಕ್ಷ ಮೌಲ್ಯದ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ.

ಸಂಗಾರೆಡ್ಡಿ ಜಿಲ್ಲೆಯ ನಾರಾಯಣಖೇಡ್ ತಾಲ್ಲೂಕಿನ ಖರಸಗುತ್ತಿ ಗ್ರಾಮದ ಸುನೀಲ್ ರಾಠೋಡ್ ಬಂಧಿತ ಆರೋಪಿ. ಈತನಿಂದ 14.87 ಕೆ.ಜಿ ಗಾಂಜಾ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ.

ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯಿಂದ ಕಡಿಮೆ ಬೆಲೆಗೆ ಗಾಂಜಾ ತಂದು ಮುಂಬೈಗೆ ತೆಗೆದುಕೊಂಡು ಹೋಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ಆರೋಪಿಯು ವಿಚಾರಣೆ ವೇಳೆ ಮಾಹಿತಿ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಸಂತಪೂರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಅತ್ಯಾಚಾರ, ಕೊಲೆ: ಅಪರಾಧಿಗೆ ಗಲ್ಲು ಶಿಕ್ಷೆ

ಹೈದರಾಬಾದ್ (ಪಿಟಿಐ): 11 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಅಪರಾಧಿಗೆ ತೆಲಂಗಾಣದ ನಲ್ಗೊಂಡ ಜಿಲ್ಲಾ ನ್ಯಾಯಾಲಯ ಮರಣದಂಡನೆ ವಿಧಿಸಿದೆ.

24 ವರ್ಷದ ಆರೋಪಿ ವಿರುದ್ಧ 2013ರ ಏಪ್ರಿಲ್‌ನಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿತ್ತು. 12 ವರ್ಷಗಳ ಬಳಿಕ ನ್ಯಾಯಾಲಯದ ತೀರ್ಮಾನ ಪ್ರಕಟವಾಗಿದೆ. ಅಪರಾಧಿಯು ಕಿವುಡನಾಗಿದ್ದರಿಂದ ವಿಚಾರಣೆ ವೇಳೆ ದುಭಾಷಿ ನೆರವು ಒದಗಿಸಲಾಗಿತ್ತು.

ಅಪರಾಧಿಯು, ಸಂತ್ರಸ್ತೆ ಬಾಲಕಿ ವಾಸವಿದ್ದ ಕಾಲೊನಿಯಲ್ಲೇ ನೆಲಸಿದ್ದ. ಕೃತ್ಯದ ಬಳಿಕ ಮೃತದೇಹವನ್ನು ಚರಂಡಿಗೆ ಎಸೆದಿದ್ದ.

ಯಥಾವತ್ ಜಾರಿ ಮಾಡಿ: ದೇವನೂರ

ನ್ಯಾ.ನಾಗಮೋಹನದಾಸ್ ಒಳ ಮೀಸಲಾತಿ ವರದಿ: ಸಿ.ಎಂಗೆ ಬಹಿರಂಗ ಪತ್ರ

ಪ್ರಜಾವಾಣಿ ವಾರ್ತೆ



ವರದಿ ಇಷ್ಟವಾಗಲಿಲ್ಲ ಎಂದರೆ ಅವೈಜ್ಞಾನಿಕ ಎನ್ನುವ ಪ್ರವೃತ್ತಿ ಸರಿಯಲ್ಲ
ದೇವನೂರ ಮಹಾದೇವ, ಲೇಖಕ

ಮೈಸೂರು: 'ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ನೀಡುವ ಸಂಬಂಧ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೀಡಿರುವ ವರದಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು' ಎಂದು ಲೇಖಕ ದೇವನೂರ ಮಹಾದೇವ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಪತ್ರ ಬರೆದಿದ್ದು, 'ಒಳಮೀಸಲಾತಿ ವರದಿ ವಿವಾದಕ್ಕೊಳಗಾಗಿ, ಎಲ್ಲಿ ಮುಂದೂಡಲ್ಪಡುತ್ತದೊ ಎಂಬುದು ನನ್ನನ್ನು ತುಂಬಾ ಕಾಡುತ್ತಿದೆ. ಜೊತೆಗೆ, ಖಾಲಿ ಇರುವ ಉದ್ಯೋಗಗಳಿಗೂ ನೇಮಕಾತಿ ಇಲ್ಲದೆ ಏಗುತ್ತಿರುವ ತರುಣರು, ತಮ್ಮ ತಾರುಣ್ಯ ಕಳೆದುಕೊಂಡು ಮಧ್ಯ ವಯಸ್ಕರಾಗುತ್ತಿದ್ದಾರೆ. ಇದು ತುಂಬಾ ದಯನೀಯ ಪರಿಸ್ಥಿತಿ. ನಾನು ಗೊಂದಲ, ಆತಂಕಗಳ ನಡುವೆ ತಮಗೆ ಈ ಪತ್ರ ಬರೆಯುತ್ತಿರುವೆ' ಎಂದಿದ್ದಾರೆ.

'ಇಂತ ಪರಿಸ್ಥಿತಿಯಲ್ಲಿ ನನಗೆ ತೋರುತ್ತಿರುವ ಪರಿಹಾರ ಇದು. ಒಂದು, ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕು. ಇದರ ಜೊತೆಯಲ್ಲೇ, ಇಂದು ದಲಿತ ಸಮುದಾಯವೂ ದಿನದಿನಕ್ಕೂ ಚಲನಶೀಲತೆ ಪಡೆದುಕೊಂಡು ಬದಲಾವಣೆಯಾಗುತ್ತಿದ್ದು, ಅದಕ್ಕೆ ತಕ್ಕಂತೆ ಮೀಸಲಾತಿ ಪ್ರಾತಿನಿಧ್ಯವನ್ನು ಸಮತೋಲನ ಮಾಡುವುದಕ್ಕಾಗಿ ಹಾಗೂ ಕಾಲಕಾಲಕ್ಕೆ ಹೊಸ ದತ್ತಾಂಶಗಳಿಂದ ಒಳ ಮೀಸಲಾತಿಯ ಪ್ರಮಾಣವನ್ನು ಪರಿಷ್ಕರಿಸಲು, ಹಿಂದುಳಿದ ವರ್ಗಗಳಿಗೆ ಇರುವಂತೆಯೇ, ಪರಿಶಿಷ್ಟ ಜಾತಿಗಳ ಆಯೋಗಕ್ಕೂ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಒದಗಿಸಬೇಕು ಎಂಬುದು ನನ್ನ ಭಾವನೆ. ಈ ರೀತಿಯಾದರೆ ಆ ಆಯೋಗದ ಮುಂದೆ, ನಾಗಮೋಹನದಾಸ್ ಅವರ ವರದಿಯ ಬಗ್ಗೆ ಇರಬಹುದಾದ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಲು ಹಾಗೂ ಪರಿಹಾರ ಕಂಡುಕೊಳ್ಳಲು ಸಾಧ್ಯತೆ ಹೆಚ್ಚುತ್ತದೆ' ಎಂದು ತಿಳಿಸಿದ್ದಾರೆ.

'ಈ ಹಿಂದೆ ಮೀಸಲಾತಿ ಹೆಚ್ಚಳ ಆಯೋಗದ ಅಧ್ಯಕ್ಷರಾಗಿ ನಾಗಮೋಹನ ದಾಸ್ ಅವರು ಸಲ್ಲಿಸಿದ ವರದಿಯಲ್ಲಿ 'ಪರಿಶಿಷ್ಟ ಜಾತಿ ಸಮುದಾಯವು ಶೇ 17.98, ಪರಿಶಿಷ್ಟ ಪಂಗಡವು ಶೇ 7.41 ಜನಸಂಖ್ಯೆ ಇರುವುದರಿಂದ ಎಸ್.ಸಿಗೆ ಶೇ 18 ಹಾಗೂ ಎಸ್.ಟಿಗೆ ಶೇ 7.50 ನೀಡುವುದು ಸೂಕ್ತ' ಎಂದಿದ್ದರು. (ಆದರೆ, ಅಂದು ಆ ಆಯೋಗದ ಮುಂದೆ ಶೇ 17ಕ್ಕೆ ಏರಿಸುವ ವಿಚಾರವಷ್ಟೇ ಇದ್ದುದರಿಂದ, ಶಿಫಾರಸು ಅಷ್ಟಕ್ಕೆ ಸೀಮಿತವಾಗಿತ್ತು). ತಾವು ಶೇ 1ರಷ್ಟು ಹೆಚ್ಚಳದ ನಿರ್ಧಾರ ಕೈಗೊಂಡರೆ ಹೆಚ್ಚುವರಿಯಾಗಿ ಸಿಗುವ ಶೇ 1ರಿಂದ ಇಂದಿನ ಗೊಂದಲಗಳನ್ನು ಪರಿಹರಿಸಿಕೊಳ್ಳಬಹುದಾದ ಸಾಧ್ಯತೆ ಇದೆ. ಇದು ಸರ್ಕಾರದ ಕೈಯಲ್ಲೇ ಇದೆ ಎಂದುಕೊಂಡಿದ್ದೇನೆ. ನೀವು ಈ ಕುರಿತು ಆಶ್ವಾಸನೆ ನೀಡಿದರೂ ದಲಿತ ಸಮುದಾಯ ನಂಬುತ್ತದೆ' ಎಂದು ಸಲಹೆ ನೀಡಿದ್ದಾರೆ.

'ಆ.1, 2024ರ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಪರಿಶಿಷ್ಟ ಜಾತಿಗಳು ವೈವಿಧ್ಯಮಯ ಭಿನ್ನರೂಪತೆಯ (Heterogeneous) ಗುಂಪುಗಳಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ವರ್ಗೀಕರಣ ನಿರ್ಧರಿಸುವಾಗ ಸರ್ವಾಂಗೀಣ ಹಿಂದುಳಿದಿರುವಿಕೆಯನ್ನೂ ಪರಿಗಣಿಸಿ ನಿರ್ಧರಿಸಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾಗಮೋಹನ್‌ದಾಸ್ ಅವರ ವರದಿಯನ್ನು ಗಮನಿಸಿದರೆ ಅದು ಸುಪ್ರೀಂ ಕೋರ್ಟ್ ಆಶಯಕ್ಕೆ ತಕ್ಕಂತೆಯೇ ಇರುವಂತೆ ಕಾಣಿಸುತ್ತದೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ಇದಲ್ಲದೆ, ಜಸ್ಟೀಸ್ ನಾಗಮೋಹನದಾಸ್ ವರದಿಯು ಸಮಗ್ರ ಸಮೀಕ್ಷೆ ಮಾಡುವ ಮೂಲಕವೇ ಅಂಕಿ-ಅಂಶಗಳನ್ನು ಸಂಗ್ರಹಿಸಿದೆ. ವಿಸ್ತಾರವಾದ ಸಮೀಕ್ಷೆ ಮಾಡಿ ಶೇ 94ರಷ್ಟು ಜನರ ಮಾಹಿತಿ ಸಂಗ್ರಹಿಸಿದೆ. ಮನೆ ಮನೆ ಸರ್ವೆ, ನಿಗದಿತ ಕೇಂದ್ರಗಳಲ್ಲಿ ಸರ್ವೆ, ಆನ್‌ಲೈನ್ ಸರ್ವೆ ಅವಕಾಶ.. ಹೀಗೆ ಸಮಗ್ರ ಪ್ರಯತ್ನ ಮಾಡಿದೆ. ಈ ರೀತಿ ಸಮೀಕ್ಷೆ ಅಪರೂಪ. ಮೊದಲು ಇದನ್ನು ಎಲ್ಲರೂ ಗೌರವಿಸಬೇಕಾಗಿದೆ. ಹಾಗೆಂದು ಈಗ ಎದ್ದಿರುವ ಆಕ್ಷೇಪಣೆಗಳನ್ನು ತಳ್ಳಿ ಹಾಕಬೇಕಿಲ್ಲ. ಅವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಶ್ವತ ಆಯೋಗಕ್ಕೆ ಹೆಚ್ಚಿನ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ತಾವು ಘೋಷಣೆ ಮಾಡುವುದಾದರೆ, ಅದು ಮುಂದಿನ ದಿನಗಳಲ್ಲಿ ಕಾಲಕಾಲಕ್ಕೆ ಲಭ್ಯವಾಗುವ ಜಾತಿ– ಜನಗಣತಿಯ ದತ್ತಾಂಶಗಳ ಮೂಲಕ ಪರಿಷ್ಕರಣೆಯ ಮೂಲಕ ಸಮತೋಲನ ಮಾಡಲು ಅವಕಾಶವಾಗುತ್ತದೆ' ಎಂದಿದ್ದಾರೆ.

ಕೊನೆಯದಾಗಿ,

- ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಶೇ 18 ಮತ್ತು ಶೇ 7.5 ಮಾಡುವ ಬಗ್ಗೆ ಆಶ್ವಾಸನೆ ನೀಡಬೇಕು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಶ್ವತ ಆಯೋಗಕ್ಕೆ ಹೆಚ್ಚಿನ ಕಾರ್ಯವ್ಯಾಪ್ತಿ ಹಾಗೂ ಅಧಿಕಾರದ ಘೋಷಣೆ ಮಾಡಬೇಕು
- ಮೀಸಲಾತಿಯನ್ನು ನೀಡದಿರುವುದಕ್ಕಾಗಿಯೇ ಹುಟ್ಟಿಕೊಂಡಿದೆಯೇನೋ ಎಂಬಂತಿರುವ 'ಗುತ್ತಿಗೆ ಕೆಲಸ'ಗಳಲ್ಲು ಮೀಸಲಾತಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಬೇಕು
- ಪರಿಶಿಷ್ಟ ಜಾತಿ/ಪಂಗಡಗಳ ಹೆಸರಿನಲ್ಲಿ ಸುಳ್ಳು ಪ್ರಮಾಣ ಪತ್ರ ಪಡೆದುಕೊಂಡಿರುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಅಗತ್ಯವಿರುವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ನಿರ್ಧಾರ ಪ್ರಕಟಿಸಬೇಕು

'ಇಂಥಹ ನಿಲುವುಗಳು ನಾಗಮೋಹನ ದಾಸ್ ವರದಿಯನ್ನು ತಕ್ಷಣವೇ ಅನುಷ್ಠಾನ ಮಾಡಲು ಪೂರಕ ವಾತಾವರಣ ಉಂಟು ಮಾಡಬಹುದು ಎಂದು ಭಾವಿಸುತ್ತೇನೆ' ಎಂದು ಮಹಾದೇವ ಹೇಳಿದ್ದಾರೆ.

'ವರದಿ ಪರಿಷ್ಕರಿಸಿ, ಜಾರಿಗೊಳಿಸಿ'



ಮಾವಳ್ಳಿ ಶಂಕರ್

ಬೆಂಗಳೂರು: 'ಹೊಲಯ ಮತ್ತು ಮಾದಿಗ ಸಮುದಾಯಗಳ ನಡುವೆ ಒಡಕು ಬರದಂತೆ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿಯನ್ನು ಪರಿಷ್ಕರಿಸಿ, ಒಳ ಮೀಸಲಾತಿ ಜಾರಿಗೊಳಿಸಬೇಕು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಆಗ್ರಹಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾಗಮೋಹನದಾಸ್ ಆಯೋಗದ ವರದಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿಗೊಳಿಸಲು ಐದು ಪ್ರವರ್ಗಗಳನ್ನಾಗಿ ವರ್ಗೀಕರಿಸಲಾಗಿದೆ. 'ಸಿ' ಪ್ರವರ್ಗದಲ್ಲಿ ಇರಬೇಕಾದ ಹೊಲಯ ಸಂಬಂಧಿತ ಜಾತಿಗಳನ್ನು 'ಎ' ಹಾಗೂ 'ಬಿ' ಪ್ರವರ್ಗದಲ್ಲಿ ಸೇರಿಸುವ ಮೂಲಕ ಹೊಲಯ ಸಂಬಂಧಿತ ಜಾತಿಗಳ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಇದು ಹೊಲಯ ಮತ್ತು ಮಾದಿಗ ಸಮುದಾಯಗಳ ಅಸಮಾಧಾನಕ್ಕೆ ಕಾರಣವಾಗಿದೆ' ಎಂದು ದೂರಿದರು.

'ನಾಗಮೋಹನದಾಸ್ ಆಯೋಗವು ಪ್ರವರ್ಗಗಳನ್ನು ವಿಂಗಡಿಸುವಾಗ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಅತ್ಯಂತ, ಅತಿ ಸೂಕ್ಷ್ಮ ಹಾಗೂ ಸೂಕ್ಷ್ಮ ಸಣ್ಣ–ಸಣ್ಣ ಜಾತಿಗಳನ್ನು (ಹಿಂದುಳಿದಿರುವಿಕೆಯನ್ನು ಗಮನದಲ್ಲಿಟ್ಟುಕೊಂಡು) ಪ್ರವರ್ಗ 'ಎ'ನಲ್ಲಿ ಉಳಿಸಿಕೊಳ್ಳಬೇಕಿತ್ತು. ಪ್ರವರ್ಗ 'ಬಿ'ನಲ್ಲಿ ಮಾದಿಗ ಸಂಬಂಧಿತ ಮತ್ತು ಪ್ರವರ್ಗ 'ಸಿ'ನಲ್ಲಿ ಹೊಲಯ ಸಂಬಂಧಿತ ಜಾತಿಗಳನ್ನು ವಿಭಾಗಿಸಿದ್ದರೆ, ಈ ಗೊಂದಲ ಸೃಷ್ಟಿ ಆಗುತ್ತಿರಲಿಲ್ಲ. ಆಗ ಸುಪ್ರೀಂ ಕೋರ್ಟ್ ಆಶಯದಂತೆ ಹಿಂದುಳಿದಿರುವಿಕೆಯ ಆಧಾರದ ಮೇಲೆಯೇ ಒಳ ಮೀಸಲಾತಿ ಹಂಚಿಕೆ ಮಾಡಲು ಅನುಕೂಲವಾಗುತ್ತಿತ್ತು' ಎಂದರು.

'ಇ' ಪ್ರವರ್ಗದಲ್ಲಿರುವ ಆದಿ ಕರ್ನಾಟಕ, ಆದಿ ಆಂಧ್ರ ಹಾಗೂ ಆದಿ ದ್ರಾವಿಡ ಎಂದು ಸಮೀಕ್ಷೆಯಲ್ಲಿ ಗುರುತಿಸಿಕೊಂಡಿರುವ 4,74,954 ಜನಸಂಖ್ಯೆಯನ್ನು ಪುನರ್ ಪರಿಶೀಲಿಸಿ, ಪ್ರವರ್ಗ 'ಬಿ' ಮತ್ತು 'ಸಿ'ಗೆ ವರ್ಗಾವಣೆ ಮಾಡಬೇಕು. ರಾಜ್ಯ ಸರ್ಕಾರ ನಾಗಮೋಹನದಾಸ್ ಆಯೋಗದ ವರದಿಯನ್ನು ಸಮಗ್ರವಾಗಿ ಪರಿಷ್ಕರಿಸಿ, ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಕಾರಳ್ಳಿ ಶ್ರೀನಿವಾಸ್, ಸಮಿತಿಯ ಮಹಿಳಾ ಘಟಕದ ರಾಜ್ಯ ಸಂಚಾಲಕಿ ನಿರ್ಮಲಾ, ವಿಭಾಗೀಯ ಸಂಚಾಲಕ ಮಣಿಪಾಲ್ ರಾಜಪ್ಪ ಸುದ್ದಿಗೋಷ್ಠಿಯಲ್ಲಿದ್ದರು.



ಭೋವಿ ಸಮಾಜಕ್ಕೆ ಒಳಮೀಸಲಾತಿಯಲ್ಲಿ ಪ್ರತ್ಯೇಕ ಗುಂಪು ಸೃಜಿಸಲು ಆಗ್ರಹಿಸಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರು ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು

'ಭೋವಿ: ಪ್ರತ್ಯೇಕ ಗುಂಪು ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ನೀಡುವ ಸಮಯದಲ್ಲಿ ನಿಖರ ಮತ್ತು ವೈಜ್ಞಾನಿಕ ಅಂಕಿಅಂಶಗಳನ್ನು ಪಡೆದು ಭೋವಿ ಸಮಾಜವನ್ನು ಪ್ರತ್ಯೇಕ ಗುಂಪಾಗಿ ಸೃಜಿಸಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಮನವಿ ಸಲ್ಲಿಸಿರುವ ಸ್ವಾಮೀಜಿ, 'ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ. ನಾಗಮೋಹನದಾಸ್ ವರದಿಯಲ್ಲಿರುವ ಲೋಪವನ್ನು ಸರಿಪಡಿಸಬೇಕು. ಜನಸಂಖ್ಯಾವಾರು ಮೀಸಲಾತಿ ಕಲ್ಪಿಸಬೇಕು' ಎಂದು ಆಗ್ರಹಿಸಿದ್ದಾರೆ.

ನ್ಯಾ. ನಾಗಮೋಹನದಾಸ್ ವರದಿಯ ಪುಟ 24ರಲ್ಲಿ ತಿಳಿಸಿರುವಂತೆ 2001–11ರ ಜನಸಂಖ್ಯೆ ದಶಕವಾರು ಬೆಳವಣಿಗೆಯು ಶೇ 22.31ರಷ್ಟಿದೆ. ಈ ಮಾನದಂಡದ ಪ್ರಕಾರ ಪರಿಶಿಷ್ಟ ಜನಾಂಗದ ಜನಸಂಖ್ಯೆ 2025ಕ್ಕೆ 1.35 ಕೋಟಿ ಆಗಬೇಕಿತ್ತು. ಆದರೆ, 1.7 ಕೋಟಿ ಎಂದು ವರದಿಯಲ್ಲಿ ತೋರಿಸಲಾಗಿದೆ. 2011ರಲ್ಲಿ 11.19 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದ ಭೋವಿ ಸಮುದಾಯ ಈಗ 15 ಲಕ್ಷಕ್ಕೆ ಏರಬೇಕಿತ್ತು. ಆದರೆ, ವರದಿಯಲ್ಲಿ 11.29 ಲಕ್ಷ ಎಂಬುದಾಗಿ ಉಲ್ಲೇಖಿಸಲಾಗಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

2011ರ ಜನಗಣತಿ ಮತ್ತು ನ್ಯಾ. ಸದಾಶಿವ ಆಯೋಗದ ಸಮೀಕ್ಷೆ ಏಕಕಾಲದಲ್ಲಿ ನಡೆದಿದ್ದರೂ ದತ್ತಾಂಶದಲ್ಲಿ ಬಹಳಷ್ಟು ವ್ಯತ್ಯಾಸ ಕಂಡುಬಂದಿತ್ತು ಎಂಬುದನ್ನು ಪುಟ ಸಂಖ್ಯೆ 51ರಲ್ಲಿ ವಿವರಿಸಲಾಗಿದೆ. ಹಾಗಾಗಿ ಪ್ರಸ್ತುತ ವರದಿಯ ದೋಷಗಳನ್ನು ಸರಿಪಡಿಸಲು ಕೇಂದ್ರ ಸರ್ಕಾರದ 2026ರ ಜನಗಣತಿಯ ವರದಿ ಬರುವವರೆಗೆ ಕಾಯಬೇಕು ಎಂದು ಒತ್ತಾಯಿಸಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ ಪರಿಶಿಷ್ಟ ಜಾತಿಗಳನ್ನು ವರ್ಗೀಕರಿಸಿ ಶೈಕ್ಷಣಿಕ ಹಿಂದುಳಿದಿರುವಿಕೆ, ಸರ್ಕಾರಿ ಉದ್ಯೋಗ ಅಥವಾ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ, ಆರ್ಥಿಕ, ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಅನುಸರಿಸಬೇಕು. ಭೋವಿ ಸಮುದಾಯ ಅತ್ಯಂತ ಕಡಿಮೆ ಅಬಿವೃದ್ಧಿ ಹೊಂದಿದ್ದರೂ ವರದಿಯಲ್ಲಿ ಮುಂದುವರಿದ ಗುಂಪಿಗೆ ಸೇರಿಸಲಾಗಿದೆ. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಉದ್ಯೋಗ ಸೂಚಕಗಳಿಗೂ ಮೀಸಲಾಗಿರುವ ಶೇಕಡವಾರು ಪ್ರಮಾಣಕ್ಕೂ ತಾಳೆ ಇಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಯ ಸುಮಾರು 7 ಲಕ್ಷ ಕುಟುಂಬಗಳು ಪಡಿತರ ಚೀಟಿಯನ್ನೇ ಹೊಂದಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ. ಆದರೂ ಸಮೀಕ್ಷೆಗೆ ಪಡಿತರ ಚೀಟಿಯನ್ನೇ ಗುರುತಾಗಿ ಬಳಸಲಾಗಿದೆ. ಇದರಿಂದಾಗಿ ಪರಿಶಿಷ್ಟ ಜಾತಿಯ 30 ಲಕ್ಷ ಜನರು ಸಮೀಕ್ಷೆಯಿಂದ ಹೊರಗುಳಿದಿದ್ದಾರೆ. ಅದರಲ್ಲಿ 3.5 ಲಕ್ಷ ಜನರು ಭೋವಿ ಸಮಾಜದವರು ಎಂದು ವಿವರಿಸಿದ್ದಾರೆ.

'ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ಸಂತಾನ ಶಕ್ತಿ ಹರಣ ಚಿಕಿತ್ಸೆಗೆ ಇಲ್ಲ ಅನುದಾನ

ಬೆಂಗಳೂರು: ಬೀದಿ ನಾಯಿಗಳ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಮತ್ತು ಚುಚ್ಚುಮದ್ದು ನೀಡುವ ಸಲುವಾಗಿ ಪ್ರಾಣಿ ಅಭಿವೃದ್ಧಿ ಮಂಡಳಿಯು ನೀಡುತ್ತಿರುವ ಅನುದಾನವು ಕಳೆದ ಐದು ವರ್ಷಗಳಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ಕಾಗಿ ನೀಡಲಾಗುತ್ತಿದ್ದ ಅನುದಾನವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ.

ರಾಜ್ಯಸಭೆಯಲ್ಲಿ ಸತ್ನಾಮ್ ಸಿಂಗ್ ಸಂಧು ಅವರು ಇದೇ ಮಾರ್ಚ್‌ನಲ್ಲಿ ಕೇಳಿದ ಪ್ರಶ್ನೆಗೆ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ನೀಡಿದ ಉತ್ತರದಲ್ಲಿ ಈ ಮಾಹಿತಿಗಳಿವೆ. 'ಬೀದಿ ನಾಯಿಗಳಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೆ ಸ್ಥಳೀಯ ಆಡಳಿತ ಮತ್ತು ಪ್ರಾಣಿ ಅಭಿವೃದ್ಧಿ ಮಂಡಳಿಯೇ ಕಾರಣ' ಎಂದು ಗುರುವಾರ ಸುಪ್ರೀಂ ಕೋರ್ಟ್ ಹೇಳಿತ್ತು. ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ ಎಂದೂ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತ್ತು.

ಪ್ರಾಣಿ ಸಂರಕ್ಷಣೆ ಕುರಿತ ವಿವಿಧ ಯೋಜನೆಗಳನ್ನು ಜಾರಿ ಮಾಡುವುದು, ಅನುದಾನ ನೀಡುವುದು ಸೇರಿ ಎಲ್ಲ ಕಾರ್ಯಚಟುವಟಿಕೆಗಳನ್ನು ಮಂಡಳಿಯು ನಿರ್ವಹಿಸುತ್ತದೆ.





37.17 ಲಕ್ಷ ನಾಯಿ ಕಚ್ಚಿದ ಪ್ರಕರಣಗಳ ಸಂಖ್ಯೆ

54 ರೇಬಿಸ್‌ನಿಂದ ಮೃತಪಟ್ಟವರ ಸಂಖ್ಯೆ

'ರಾಜ್ಯ ಸರ್ಕಾರದ ಜವಾಬ್ದಾರಿ'

ದೇಶದಲ್ಲಿ ಕೇಂದ್ರ ಸರ್ಕಾರ ಬೆಂಬಲಿತವಾದ ಬೀದಿ ನಾಯಿಗಳ ಎಷ್ಟು ಆಶ್ರಯತಾಣಗಳಿವೆ ಎಂದು ಸಂಸದ ಸಂಧು ಅವರು ಕೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವಾಲಯವು, 'ಇದು ರಾಜ್ಯ ಸರ್ಕಾರಗಳ ಜವಾಬ್ದಾರಿ' ಎಂದಿದೆ.

ಇ.ಡಿ: ಸೈಲ್ ಮನೆಯಿಂದ ದಾಖಲೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಶಾಸಕ ಸತೀಶ ಸೈಲ್ ನಿವಾಸದಲ್ಲಿ ಗುರುವಾರ ನಸುಕಿನ 4 ಗಂಟೆಯವರೆಗೂ ಪರಿಶೀಲನೆ ನಡೆಸಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ತಂಡವು ಹಲವು ದಾಖಲೆಗಳನ್ನು ವಶಕ್ಕೆ ಪಡೆಯಿತು.

'24 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿ, ಶಾಸಕರ ಮನೆಯಿಂದ ಗುರುವಾರ ನಸುಕಿನವರೆಗೆ ಹಂತಹಂತವಾಗಿ ನಿರ್ಗಮಿಸಿದರು. ದಾಖಲೆಗಳನ್ನು 4 ಪೆಟ್ಟಿಗೆಗಳಲ್ಲಿ ಒಯ್ದರು' ಎಂದು ಮೂಲಗಳು ತಿಳಿಸಿವೆ.

'ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರು ನಾಪತ್ತೆ ಪ್ರಕರಣದಲ್ಲಿ ಅಪರಾಧಿ ಆಗಿರುವ ಶಾಸಕ ಸತೀಶ ಸೈಲ್ ಈ ಹಿಂದೆ ನಡೆಸಿದ ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಪರಿಶೀಲಿಸಿರಬಹುದು. ಸೈಲ್ ಮನೆಯಲ್ಲಿ ಇರದ ಕಾರಣಕ್ಕೆ ಅವರನ್ನು ಕರೆಯಿಸಲು ಅಧಿಕಾರಿಗಳು ಸಾಕಷ್ಟು ಪ್ರಯತ್ನ ನಡೆಸಿದರು. ಇದಕ್ಕಾಗಿ ಅವರ ಅಂಗರಕ್ಷಕ, ಆಪ್ತ ವಲಯದ ಒಂದಿಬ್ಬರನ್ನು ವಿಚಾರಣೆ ನಡೆಸಿದರು' ಎಂದೂ ಮೂಲಗಳು ತಿಳಿಸಿವೆ.



ಕಾರವಾರದಲ್ಲಿ ಶಾಸಕ ಸತೀಶ ಸೈಲ್ ಮನೆಯಿಂದ ದಾಖಲೆಗಳಿದ್ದ ಪೆಟ್ಟಿಗೆಯನ್ನು ಇ.ಡಿ ಅಧಿಕಾರಿಗಳು ಹೊರತಂದಿರುವುದು

ಬೀದಿ ನಾಯಿ ಉಪಟಳಕ್ಕೆ ಕಡಿವಾಣ • ಸುಪ್ರೀಂ ಕೋರ್ಟ್ ತ್ರಿಸದಸ್ಯ ನ್ಯಾಯಪೀಠ

'ಎಲ್ಲರೂ ಹೊಣೆ ನಿಭಾಯಿಸಬೇಕು'

ನವದೆಹಲಿ(ಪಿಟಿಐ): ಬೀದಿ ನಾಯಿಗಳ ಸ್ಥಳಾಂತರ ವಿರೋಧಿಸಿ ಕೆಲವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇವುಗಳ ಹಾವಳಿ ತಡೆಯುವ ನಿಟ್ಟಿನಲ್ಲಿ ರೂಪಿಸಿರುವ ನಿಯಮಗಳ ಅನುಷ್ಠಾನದಲ್ಲಿ ಎನ್‌ಜಿಒಗಳು ಸೇರಿ ಎಲ್ಲರೂ ಹೊಣೆಗಾರಿಕೆ ನಿಭಾಯಿಸಬೇಕು' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಲ್ಲಿನ (ದೆಹಲಿ–ಎನ್‌ಸಿಆರ್) ಬೀದಿ ನಾಯಿಗಳನ್ನು ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಆಗಸ್ಟ್ 11ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂದೀಪ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ನ್ಯಾಯಪೀಠ, ಈ ಕುರಿತ ಅರ್ಜಿಗಳ ವಿಚಾರಣೆ ನಡೆಸಿತು.

'ಬೀದಿ ನಾಯಿಗಳ ದಾಳಿಯಿಂದಾಗಿ ಒಂದೆಡೆ ಜನರು ಸಂಕಷ್ಟ ಅನುಭವಿಸುತ್ತಿದ್ದರೆ, ಮತ್ತೊಂದೆಡೆ, ಅವುಗಳನ್ನು ಘನತೆಯಿಂದ ನೋಡಿಕೊಳ್ಳಬೇಕು ಎಂದು ಪ್ರಾಣಿಪ್ರಿಯರು ಪ್ರತಿಪಾದಿಸುತ್ತಿದ್ದಾರೆ. ಈ ವಿಚಾರದಲ್ಲಿ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ, ಸ್ಥಳೀಯ



ಸಂಸ್ಥೆಗಳು ಹಾಗೂ ಸರ್ಕಾರಗಳು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ' ಎಂದು ನ್ಯಾಯಪೀಠ ಹೇಳಿತು.

'ಸಂಸತ್ ಕಾಯ್ದೆ ರೂಪಿಸುತ್ತದೆ. ಸರ್ಕಾರಗಳು ನಿಯಮಗಳನ್ನು ರೂಪಿಸುತ್ತವೆ. ಆದರೆ, ಅವುಗಳ ಅನುಷ್ಠಾನ ಮಾತ್ರ ಆಗುವುದಿಲ್ಲ. ಇಂತಹ ಧೋರಣೆಯೇ ಈಗ ಉದ್ಭವಿಸಿರುವ ಬೀದಿ ನಾಯಿಗಳ ಸಮಸ್ಯೆಗೆ ಕಾರಣ' ಎಂದು ಪೀಠ ಹೇಳಿದೆ.

'ಎನ್‌ಜಿಒಗಳು ಈ ವಿಚಾರವಾಗಿ ದೊಡ್ಡ ದನಿಯಲ್ಲಿ ಮಾತನಾಡುತ್ತವೆ. ಆದರೆ, ಈ ವಿಷಯದಲ್ಲಿ ತಮ್ಮ ಕರ್ತವ್ಯಗಳೇನು ಎಂಬುದರ ಕುರಿತು ಅವುಗಳಿಗೆ ಅರಿವು ಇಲ್ಲ. ಪ್ರಾಣಿ ಜನನ ನಿಯಂತ್ರಣ ನಿಯಮಗಳ ಅನುಷ್ಠಾನದಲ್ಲಿ ಎನ್‌ಜಿಒಗಳೇ ಮುಂಚೂಣಿಯಲ್ಲಿ ಇದ್ದು ಕಾರ್ಯನಿರ್ವಹಿಸಬೇಕು. ಅದು ಆಗುತ್ತಿಲ್ಲ' ಎಂದು ಪೀಠ ಚಾಟಿ ಬೀಸಿತು.

ವಿಚಾರಣೆ ವೇಳೆ, ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ,'ಬೀದಿ ನಾಯಿಗಳ ಕಡಿತದಿಂದ ದೇಶದಾದ್ಯಂತ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. ಬೀದಿ ನಾಯಿಗಳ ಉಪಟಳ ನಿಯಂತ್ರಣದ ವಿಷಯವನ್ನು ಇತ್ಯರ್ಥಪಡಿಸಬೇಕೇ ವಿನಃ ಇದನ್ನು ವಿವಾದ ಮಾಡುವುದು ಸರಿಯಲ್ಲ' ಎಂದು ಪೀಠಕ್ಕೆ ತಿಳಿಸಿದರು.

'ಬೀದಿ ನಾಯಿಗಳು ಕಚ್ಚಿ ಮಕ್ಕಳು ಮೃತಪಡುತ್ತಿರುವ ಪ್ರಕರಣಗಳು ಹೆಚ್ಚುತ್ತಲೇ ಇವೆ. ಬೀದಿ ನಾಯಿಗಳ ಕುರಿತು ದೊಡ್ಡ ದನಿಯಲ್ಲಿ ಮಾತನಾಡುವವರು ಕಡಿಮೆ ಸಂಖ್ಯೆಯಲ್ಲಿದ್ದು, ಅವುಗಳಿಂದಾಗಿ ಮೌನವಾಗಿಯೇ ನೋವು ಅನುಭವಿಸುತ್ತಿರುವವರ ಸಂಖ್ಯೆ ದೊಡ್ಡದಿದೆ. ಇದನ್ನು ಗಮನಿಸಬೇಕು' ಎಂದ ಅವರು, 'ಬೀದಿ ನಾಯಿಗಳಿಂದ ಎದುರಾಗುತ್ತಿರುವ ಅಪಾಯಕ್ಕೆ ಸುಪ್ರೀಂ ಕೋರ್ಟ್ ಪರಿಹಾರ ನೀಡಬೇಕು' ಎಂದು ಮನವಿ ಮಾಡಿದರು.

ವಾದ...ಪ್ರತಿವಾದ

ಯಾರೂ ಪ್ರಾಣಿಗಳನ್ನು ದ್ವೇಷಿಸುತ್ತಿಲ್ಲ. ಹಾವುಗಳಲ್ಲಿ 100ಕ್ಕೂ ಹೆಚ್ಚು ಪ್ರಬೇಧಗಳಿದ್ದು, ಈ ಪೈಕಿ ನಾಲ್ಕು ಪ್ರಭೇದದ ಹಾವುಗಳು ಮಾತ್ರ ವಿಷಕಾರಿ. ಹಾಗಂತ, ಹಾವುಗಳನ್ನು ಯಾರೂ ಮನೆಯಲ್ಲಿ ಸಾಕುವುದಿಲ್ಲ. ಅದೇ ರೀತಿ ನಾಯಿಗಳನ್ನು ಕೊಲ್ಲುವಂತೆಯೂ ಯಾರೂ ಹೇಳುವುದಿಲ್ಲ. ಅವುಗಳನ್ನು ಮಾನವ ವಾಸಸ್ಥಾನದಿಂದ ಬೇರ್ಪಡಿಸಬೇಕು ಎಂಬುದೇ ಜನರ ಬೇಡಿಕೆಯಾಗಿದೆ
ತುಷಾರ್ ಮೆಹ್ತಾ, ಸಾಲಿಸಿಟರ್ ಜನರಲ್


ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಏಕೆ ನೆರವೇರಿಸಿಲ್ಲ? ಅವುಗಳಿಗೆ ಸಾಕಷ್ಟು ಆಶ್ರಯತಾಣಗಳನ್ನು ಏಕೆ ನಿರ್ಮಿಸಿಲ್ಲ? ಈ ವಿಚಾರ ಗಂಭೀರವಾಗಿದ್ದು, ವಿಸ್ತೃತವಾದ ವಾದ ಮಂಡನೆಗೆ ಅವಕಾಶ ನೀಡಬೇಕು. ದೆಹಲಿಯಲ್ಲಿ ಈಗಾಗಲೇ 700ರಷ್ಟು ಬೀದಿ ನಾಯಿಗಳನ್ನು ಸ್ಥಳಾಂತರ ಮಾಡಲಾಗಿದೆ. ಅವು ಎಲ್ಲಿವೆ ಎಂಬುದು ದೇವರಿಗೇ ಗೊತ್ತು.
ಕಪಿಲ್ ಸಿಬಲ್, ಅರ್ಜಿದಾರರ ಪರ ವಕೀಲ

ಬೀದಿ ನಾಯಿಗಳ ಹಾವಳಿ ನಿಯಂತ್ರಿಸಬೇಕು ಎಂಬ ಉದ್ದೇಶವೇನೋ ಸರಿ. ಆದರೆ, ಈ ವಿಚಾರದಲ್ಲಿ ಸಂಬಂಧಪಟ್ಟವರು ತಪ್ಪಾದ ಕ್ರಮಗಳನ್ನೇ ಕೈಗೊಳ್ಳುತ್ತಿದ್ದಾರೆ. ರೇಬೀಸ್‌ನಿಂದ ಜನರು ಸಾಯುತ್ತಿದ್ದಾರೆ ಎಂದು ಹುಯಿಲೆಬ್ಬಿಸಲಾಗುತ್ತಿದೆ. ಆದರೆ, ಸಚಿವರು ಸದನದಲ್ಲಿ ನೀಡಿರುವ ಮಾಹಿತಿ ಪ್ರಕಾರ, 2022ರಿಂದ 2025ರ ನಡುವೆ ದೆಹಲಿಯಲ್ಲಿ ರೇಬೀಸ್‌ನಿಂದಾಗಿ ಯಾರೂ ಮೃತಪಟ್ಟಿಲ್ಲ
ಅಭಿಷೇಕ್ ಮನು ಸಿಂಘ್ವಿ, ಅರ್ಜಿದಾರರ ಪರ ವಕೀಲ

ಅರಣ್ಯ ಹಕ್ಕು ದಾಖಲೆ ನಾಪತ್ತೆ ಹಿಂದೆ ಪಿತೂರಿ

'ಬಿಜೆಪಿ ಬುಡಕಟ್ಟು ಜನರ ಹಕ್ಕು ಕಸಿಯುತ್ತಿದೆ'

ನವದೆಹಲಿ (ಪಿಟಿಐ): 'ಬುಡಕಟ್ಟು ಜನರ ಹಕ್ಕುಗಳನ್ನು ಅರಣ್ಯ ಹಕ್ಕು ಕಾಯ್ದೆಯನ್ನು ದುರ್ಬಲಗೊಳಿಸುವ ಮೂಲಕ ಕೇಂದ್ರ ಸರ್ಕಾರ ಕಸಿದುಕೊಳ್ಳುತ್ತಿದೆ. ಯಾವುದೇ ಬೆಲೆ ತೆತ್ತಾದರೂ ಕಾಂಗ್ರೆಸ್ ಪಕ್ಷ ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಣೆ ಮಾಡಲಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ತಿಳಿಸಿದ್ದಾರೆ.



ರಾಹುಲ್ ಗಾಂಧಿ

ಮುಖ್ಯಾಂಶಗಳು

- ಬಹುಜನರಿಗೆ ಅನ್ಯಾಯ ಮಾಡಲೆಂದೇ ದಾಖಲೆಗಳ ನಾಶ
- ಹಕ್ಕು ಕಸಿದುಕೊಳ್ಳುತ್ತಿರುವ ಬಿಜೆಪಿ– ಆರೋಪ

ಬಹುಜನರಿಗೆ ಅನ್ಯಾಯ ಮಾಡಲೆಂದೇ 'ದಾಖಲೆ ಅಳಿಸು, ಹಕ್ಕುಗಳನ್ನು ಕಸಿದುಕೋ' ಎಂಬ ಹೊಸ ಅಸ್ತ್ರವನ್ನು ಬಿಜೆಪಿ ಪ್ರಯೋಗಿಸುತ್ತಿದೆ. ಮತದಾರರ ಪಟ್ಟಿಯಿಂದ ದಲಿತರು, ಹಿಂದುಳಿದ ವರ್ಗಗಳ ಜನರ ಹೆಸರುಗಳನ್ನು ತಗೆದು ಹಾಕುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಬುಡಕಟ್ಟು ಜನರ ಅರಣ್ಯ ಜಮೀನಿಗೆ ಸಂಬಂಧಿಸಿದ ಹಕ್ಕು ದಾಖಲೆಗಳನ್ನೇ ನಾಪತ್ತೆ ಮಾಡಲಾಗುತ್ತಿದೆ' ಎಂದು 'ಎಕ್ಸ್'ನಲ್ಲಿ ರಾಹುಲ್ ಗಾಂಧಿ ಆರೋಪ ಮಾಡಿದ್ದಾರೆ.

ಬಸ್ತಾರ್, ರಾಜನಂದಗಾಂವ್ ಸೇರಿದಂತೆ ಛತ್ತೀಸಗಢದ ಅರ್ಧಕ್ಕೂ ಹೆಚ್ಚು ಬುಡಕಟ್ಟು ಜನರ ಸಾವಿರಾರು ಅರಣ್ಯ ಜಮೀನು ಹಕ್ಕು ದಾಖಲೆಗಳು ಇದ್ದಕ್ಕಿದ್ದಂತೆ ನಾಪತ್ತೆಯಾಗಿವೆ ಎಂಬ ಮಾಧ್ಯಮಗಳ ವರದಿ ಕುರಿತು ರಾಹುಲ್ ಪ್ರತಿಕ್ರಿಯಿಸಿದ್ದಾರೆ.

'ಬುಡಕಟ್ಟು ಜನರ ನೀರು, ಅರಣ್ಯ ಮತ್ತು ಜಮೀನನ್ನು ರಕ್ಷಿಸಲೆಂದೇ ಕಾಂಗ್ರೆಸ್ ಅರಣ್ಯ ಹಕ್ಕು ಕಾಯ್ದೆ ಜಾರಿಗೆ ತಂದಿತ್ತು. ಆದರೆ ಬಿಜೆಪಿ ಈ ಸಮುದಾಯದ ಪ್ರಾಥಮಿಕ ಹಕ್ಕನ್ನೇ ಕಸಿದುಕೊಳ್ಳುತ್ತಿದೆ' ಎಂದು ಹೇಳಿದ್ದಾರೆ.